ಎಚ್ಚೆಸ್ಕೆ

# ಎತ್ತರದ ವ್ಯಕ್ತಿಗಳು

VEC,Library
001096

ಕತೆಗಳು

ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು

## ನಮ್ಮ ಕೆಲವು ಹೊಸ ಪ್ರಕಟನೆಗಳು

**ಕವಿತೆ.**

ಚಿಂತನ–ವಿನಾಯಕ ೪.೦೦ ೨.೦೦

**ನಾಟಕ**

ಮೂರು ಪ್ರಹಸನಗಳು
–ಎಚ್. ಕೆ. ರಂಗನಾಥ್ ೧.೦೦

ಕನ್ನಡ ನಾಗಾನಂದ
–ಸಿ. ಪಿ. ಕೆ. ೫.೦೦ ೩.೦೦

**ಪ್ರಬಂಧ**

ಕನ್ನಡ ಚತುರ್ಮುಖ
–ಸಿ. ಪಿ. ಕೆ. ೫.೦೦ ೩.೦೦

**ಸಂಕೀರ್ಣ**

ತರಕಾರಿಯ ಬೆಳೆ
ಉ. ಕಾ. ಸುಬ್ಬರಾಯಾಚಾರ್ ೦.೭೫

ಸಂಕೀರ್ಣ
–ಹಾ. ಮಾ. ನಾಯಕ ೬.೦೦ ೪.೦೦

A. Look Back
—*Annaiah Gowda* 1.50

(5)

VEC,Library
001096

VIJAYA EVENING COLLEGE.
LIBRARY
BANGALORE-4.
ACCN. NO. 1096
SECTION Kan
COST 3-00
Date 21·11·68 Librarian.

ಪ್ರಬಂಧ

# ಎತ್ತರದ ವ್ಯಕ್ತಿಗಳು

VIJAYA EVENING COLLEGE.
LIBRARY
BANGALORE-4.
ACCN. NO.........................
SECTION.........................
COST .........................
Date......................... Librarian.

# ಎತ್ತರದ ವ್ಯಕ್ತಿಗಳು

ಎಚ್ಚೆಸ್ಕೆ

ಸುರುಚಿ ಪ್ರಕಾಶನ
ಸರಸ್ವತೀಪುರಂ, ಮೈಸೂರು ೯

ಮೊದಲನೆಯ ಆವೃತ್ತಿ : ೧೯೬೬

ಎಲ್ಲ ಹಕ್ಕುಗಳೂ ಲೇಖಕರ ವಶ.

ರೇಖಾಚಿತ್ರಗಳು : ಶುದ್ಧೋಧನ

ಬೆಲೆ :
ಸಾಧಾರಣ ಪ್ರತಿ : ರೂ. ೩
ಕ್ಯಾಲಿಕೋಪ್ರತಿ : ರೂ. ೫

ಪ್ರಕಾಶಕರು :
ಎಚ್. ವಿಜಯಲಕ್ಷ್ಮಿ, ಬಿ.ಎ.

ಮುದ್ರಕರು
ಜಿ. ಎಚ್. ಕೃಷ್ಣಮೂರ್ತಿ
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

## ಸಹೃದಯರಿಗೆ

ಎಲ್ಲಕ್ಕೂ ಕಾಲ ಬರಬೇಕು—ಎಂಬುದು ಅದೃಷ್ಟವಾದಿಗಳ ನಂಬಿಕೆ.

ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಆಗಿಂದಾಗ್ಗೆ ನನ್ನ ದೃಷ್ಟಿಪಥದಲ್ಲಿ ಸುಳಿದ ವ್ಯಕ್ತಿಗಳನ್ನು ಕುರಿತು ಬರೆದ ಲೇಖನಗಳಲ್ಲಿ ಕೆಲವನ್ನು ಆಯ್ದು ಪುಸ್ತಕರೂಪದಲ್ಲಿ ಪ್ರಕಟಿಸುವ ಕಾಲ ಈಗ ಬಂದಿದೆ.

ಆ ಕಾಲದಿಂದ ಈ ಕಾಲದವರೆಗೆ ಈ ವ್ಯಕ್ತಿಗಳು ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದ ಚಿತ್ರಗಳನ್ನು ನೆನಸಿಕೊಳ್ಳುವುದು ಬಹಳ ಚೆನ್ನ.

(ನಾನೇ ಇವನ್ನೆಲ್ಲಾ ಕಂಡೆನೇ ? —ಎಂಬುದಾಗಿ ಆಶ್ಚರ್ಯ.)

ಇಪ್ಪತ್ತೈದು ವರ್ಷಗಳಲ್ಲಿ ನನ್ನ ಮೇಲೂ ನಾಡಿನ ಮೇಲೂ ಪ್ರಪಂಚದ ಮೇಲೂ ಪ್ರಭಾವ ಬೀರಿದ ಈ ವ್ಯಕ್ತಿಗಳ ಪರಿಚಯದ ಜತೆಗೆ, ಈ ಕಾಲದಲ್ಲಿ ನನ್ನ ತಲೆಮಾರಿನ ಜನರು ಪಡೆದ ಅನುಭವಗಳ ಪರಿಚಯವೂ ವಾತಾವರಣದ ಅವಲೋಕನವೂ ಸ್ವಲ್ಪಮಟ್ಟಿಗಾದರೂ ಇವುಗಳಿಂದ ಸಾಧ್ಯವಾದೀತು.

ನಾನು ಕಂಡಂತೆ ನನ್ನ ತಲೆಮಾರಿನ ಈ ಅನುಭವವನ್ನು ಓದುಗರೊಡನೆ ಹಂಚಿಕೊಳ್ಳುವ ಅವಕಾಶವನ್ನು ದೊರಕಿಸಿಕೊಟ್ಟವರು ಮುಖ್ಯವಾಗಿ ನಾಡಿನ ನಾನಾ ಪತ್ರಿಕೆಗಳ ಸಂಪಾದಕರು ; ಈಗ ಈ ಪುಸ್ತಕವನ್ನು ಪ್ರಕಟಿಸುತ್ತಿರುವ 'ಸುರುಚಿ ಪ್ರಕಾಶನ'ದವರು. ಈ ಲೇಖನಗಳಿಗೆ ಅಲಂಕಾರಪ್ರಾಯವಾಗಿ ರೇಖಾ ಚಿತ್ರಗಳನ್ನು ರಚಿಸಿಕೊಟ್ಟವರು ಕಲಾವಿದರಾದ ಶ್ರೀ ಶುದ್ಧೋಧನ ಅವರು. ಇವರಿಗೆ ವಂದನೆಗಳು.

'ಕವಿ ಏನನ್ನು ಹೇಳಿತಾನೇ ಏನು ಪ್ರಯೋಜನ ? ಅವನೇನು ಮಾಡಬಲ್ಲ ? ಅವನು ಬರೆದದ್ದನ್ನು ಹೆಸರಿಟ್ಟು ಮೆಚ್ಚಬಲ್ಲವನನ್ನು ಹುಡುಕಬೇಕು,' ಎಂಬುದಾಗಿ ಹಿಂದೆ—ಏಳೂವರೆ ಶತಮಾನಗಳ ಹಿಂದೆ—ಜನ್ನನೆಂಬ ಕನ್ನಡ ಕವಿ ಹಂಬಲಿಸಿದ. ಅವನ ಈ ಪದ್ಯಕ್ಕೆ ಈಗ ಇನ್ನೊಂದು ಸಾಲನ್ನು ಸೇರಿಸಬೇಕಾದ್ದು ಅವಶ್ಯವಾಗಿದೆ. ಬರೆದದ್ದನ್ನು ಮೆಚ್ಚಬಲ್ಲವನ ಜತೆಗೆ, ಅದನ್ನು ಅಚ್ಚೊತ್ತಬಲ್ಲವರನ್ನೂ ಅರಸಬೇಕಾಗಿದೆ. ಅಚ್ಚಿನ ಮನೆಗೆ ಹೋದ ಹೊತ್ತಗೆಗಳು ದೀರ್ಘಕಾಲದ ಬೇನೆಯನ್ನನುಭವಿಸಬೇಕಾಗುತ್ತದೆ.

ಮಿತ್ರರಾದ ಶ್ರೀ ಜಿ. ಎಚ್. ಕೃಷ್ಣಮೂರ್ತಿ ಅವರು ಈ ಬೇನೆಯ ಸಂಕಟ ವಾಗದ ಹಾಗೆ ನೋಡಿಕೊಂಡಿದಾರೆ. ಅಲ್ಪಕಾಲದಲ್ಲಿ ಅಚ್ಚುಕಟ್ಟಾಗಿ ಅಚ್ಚೊತ್ತಿ ಕೊಟ್ಟಿದಾರೆ. ಇವರ ಸಹಕಾರಕ್ಕಾಗಿ ಶ್ಲಾಘನೆಯ ವಂದನೆಯನ್ನಷ್ಟೇ ನಾನು ಇಲ್ಲಿ ಸಲ್ಲಿಸಬಲ್ಲೆ.

ಇಲ್ಲಿ ಪ್ರಕಟವಾಗಿರುವ ಲೇಖನಗಳಲ್ಲಿ ಆ ವ್ಯಕ್ತಿಗಳ ಸಮಗ್ರಚಿತ್ರವನ್ನೇನೂ ನಾನು ಕೊಡಲು ಯತ್ನಿಸಿಲ್ಲ. ಅದು ಸಾಧ್ಯವೂ ಇಲ್ಲ. ಆಯಾ ಕಾಲದಲ್ಲಿ ಅವರನ್ನು ಕುರಿತೂ ಅವರ ಕೃತಿಗಳನ್ನು ಕುರಿತೂ ನನ್ನ ಮನಸ್ಸಿನಲ್ಲಿ ಹರಿದ ವಿಚಾರಗಳಷ್ಟೇ ಇಲ್ಲಿ ಅಕ್ಷರರೂಪದಲ್ಲಿ ಅವತರಿಸಿವೆ. ನನ್ನ ಹೃದಯದ ಕೆಸರು ಅಂಟಿ ಬಂದ ಈ ಚಿತ್ರಗಳು ಆ ಕಾರಣಕ್ಕಾಗಿಯೇ ಸ್ವಲ್ಪಮಟ್ಟಿಗಾದರೂ ಸಹೃದಯರ ಮೆಚ್ಚುಗೆ ಗಳಿಸಿದ್ದೇ ಆದರೆ ನಾನು ಇವುಗಳನ್ನು ಬರೆದದ್ದು ಸಾರ್ಥಕ.

—ಎಚ್ಚೆಸ್ಕೆ

# ಪರಿವಿಡಿ


| | |
|---|---|
| ಅನಂತ ಪದ್ಮನಾಭ ಸೋಗಾಲ .... .... .... | ೧ |
| ಬೆಳ್ಳಾವೆ ವೆಂಕಟನಾರಾಯಣಪ್ಪ .... .... .... | ೮ |
| ಕನ್ನಡಕ್ಕೊಬ್ಬನೇ ಕೈಲಾಸಂ .... .... .... | ೧೩ |
| ಕತೆಗಾರ ಆನಂದ .... .... .... | ೧೬ |
| ಕನ್ನಡ ಕುಲಗುರು ಬಿ.ಎಂ.ಶ್ರೀ .... .... .... | ೨೩ |
| ಸಜ್ಜನಿಕೆಯ ಕವಿ ಪು.ತಿ.ನ. .... .... .... | ೨೮ |
| ಶ್ರೀರಂಗ .... .... .... | ೩೭ |
| ರನ್ನ .... .... .... | ೪೪ |
| ಕುವೆಂಪು .... .... .... | ೫೧ |
| ಕ್ರಿಸ್ತಸೇವಕ ಕೈಥಾನ್ .... .... .... | ೫೬ |
| ಬೆಂಜಮಿನ್ ಗೈ ಹಾರ್ನಿಮನ್ .... .... .... | ೬೨ |
| ಸರದಾರ್ ಪಟೇಲ್ .... .... .... | ೭೧ |
| ವಿಜಯಲಕ್ಷ್ಮಿ ಪಂಡಿತ್ .... .... .... | ೭೫ |
| ಶರತ್ ಚಂದ್ರ ಬೋಸ್ .... .... .... | ೭೮ |
| ಮುಹಮ್ಮದಾಲಿ ಜಿನ್ನಾ .... .... .... | ೮೩ |
| ಸರ್ ವಿನ್‌ಸ್ಟನ್ ಚರ್ಚಿಲ್ .... .... .... | ೮೯ |
| ಹೆರೊಲ್ಡ್ ಜೆ. ಲಾಸ್ಕಿ .... .... .... | ೯೮ |
| ಡೇವಿಡ್ ಲೋ .... .... .... | ೧೦೬ |
| ಚಾರ್ಲಿ ಚಾಪ್ಲಿನ್ .... .... .... | ೧೧೨ |
| ಜಾರ್ಜ್ ಬರ್ನಾರ್ಡ್ ಷಾ .... .... .... | ೧೧೮ |
| ಬೋರಿಸ್ ಪಾಸ್ತರ್‌ನಾಕ್ .... .... .... | ೧೨೪ |
| ಡಾ॥ ಆಲ್ಬರ್ಟ್ ಷ್ವೀಟ್ಜರ್ .... .... .... | ೧೩೧ |

# ಅನಂತಪದ್ಮನಾಭ ಸೋಗಾಲ

೧೯೪೭ರ ಡಿಸೆಂಬರ್ ತಿಂಗಳ ಒಂದು ಸಂಜೆ.

ಮಿತ್ರರೊಬ್ಬರು ಹೇಳಿದರು : ಸೋಗಾಲರು ತೀರಿಹೋದರಂತೆ.

ನಂಬಿಕೆಗೆ ನಿಲುಕದ ಮಾತು. ತುಂಬಾ ಅನಿರೀಕ್ಷಿತ. ಈ ಘಟನೆಯ ಸುದ್ದಿ ನನ್ನ ಮನಸ್ಸಿನ ಮೇಲೆ ತನ್ನ ಕಪ್ಪು ಮುದ್ರೆ ಒತ್ತಲೊಲ್ಲದು.

ಆಮೇಲೆ ತಿಳಿದು ಬಂತು : ಈ ಸುದ್ದಿ ನಿಜ.

ಕೇವಲ ಇಪ್ಪತ್ತೈದು ವರ್ಷ. ಕಪ್ಪು ಛಾಯೆ. ತೆಳು ಮೈ. ತೀಕ್ಷ್ಣ ಕಣ್ಣು. ಇಷ್ಟವಿತ್ತೋ—ಮಕ್ಕಳ ಹಾಗೆ ಬಾಚಿಕೊಂಡ ಕಪ್ಪು ಕೂದಲು. ಇಲ್ಲವೋ—ಕೆದರಿದ ತಲೆ. ಮನಸ್ಸಿತ್ತೋ—ಶುಭ್ರವಾಗಿ ಒಗೆದು ಗರಿಮುರಿಯಾಗಿ ಇಸ್ತ್ರಿ ಮಾಡಿದ ಬಟ್ಟೆ. ಇಲ್ಲವೋ—ಅದು ಎಷ್ಟು ಮಲಿನವಾಗಿದ್ದರೂ ಆ ಕಡೆ ಗಮನವಿಲ್ಲ. ಪೈಜಾಮ, ಷರಟು, ನೆಹರೂ ಜಾಕೆಟ್ ; ಇಲ್ಲವೇ —ಒಂದು ಕಪ್ಪು ಉಣ್ಣೆಯ ಕೋಟು, ಷರಾಯಿ. ಇದು ವೇಷ.

ಸೋಗಾಲ ನನ್ನ ನಲ್ಮೆಯ ಗೆಳೆಯ. ಸಾಹಿತ್ಯ ಪ್ರಿಯರಿಗೆ, ಅವನ ಇತರ ಗೆಳೆಯರಿಗೆ ಅವನು ಸೋಗಾಲ. ವ್ಯವಹಾರ ಜಗತ್ತಿಗೆ ಅನಂತ ಪದ್ಮನಾಭ. ಆದರೆ ನನಗೆ ಮಾತ್ರ ಅನಂತ—ಅಣ್ಣ ಅನಂತ : ಬೇರೆ ಯಾರಿಗೂ ಇಲ್ಲದ ಸ್ನೇಹದ ಸ್ವಾತಂತ್ರ್ಯ, ಸಲಿಗೆ.

ಅನಂತ ವಯಸ್ಸಿನಲ್ಲಿ ನನಗೇನೂ ಹಿರಿಯನಲ್ಲ. ಆದರೆ ಅದು ಹೇಗೋ ಸಲಿಗೆ ಬೆಳೆದು ಬಂದು ನಾನು ಆತನನ್ನು ಹಾಸ್ಯವಾಗಿ 'ಅಣ್ಣ ಅನಂತ' ಎಂದು ಕರೆಯುತ್ತಿದ್ದೆ. ಇದು ಹೇಗೆ ಮೊದಲಿಟ್ಟಿತೋ ನನಗೆ ಗೊತ್ತಿಲ್ಲ.

ಅಂದಿಗೆ ಆರು ವರ್ಷದ ಹಿಂದೆ ಬೆಂಗಳೂರಿನ ವಿದ್ಯಾರ್ಥಿನಿಲಯವೊಂದರಲ್ಲಿ ನನಗೆ ಅನಂತನ ದರ್ಶನ ಆದದ್ದು. ನಾವಿಬ್ಬರೂ ಒಂದೇ ವರ್ಷ ಆ ನಿಲಯ ಸೇರಿದೆವು. ಆಗ ತಾನೇ ನಾನೂ ನನ್ನ ಬರಹ ಪ್ರಾರಂಭಿಸಿದ್ದೆ. ನಾಲ್ಕಾರು ಲೇಖನ ಆಗಲೇ ಅಲ್ಲಿ ಇಲ್ಲಿ ಪತ್ರಿಕೆಯಲ್ಲಿ ಅಚ್ಚಾಗಿ ಬಂದು ನನಗೆ ಏನೋ ಒಂದು ರೀತಿಯ ಬಿಗುಮಾನ. ಆದರೂ ಒಂದು ಬಗೆಯ ಸಂಕೋಚ. ಜೀವನದಲ್ಲಿ ಅದೂ ಒಂದು ಘಟ್ಟ. ಆಗ ಅನಂತನಿಗೆ ಇನ್ನೂ ಅಚ್ಚಿನ ಪರಿಚಯ ಆಗಿರಲಿಲ್ಲ. ಅದರ ಮೋಹದ ಹಿಡಿತಕ್ಕೆ ಒಳಗಾಗಿರಲಿಲ್ಲ. ಅವನು ಅದರ ಒಳಹೊಕ್ಕು ನೋಡಿರಲಿಲ್ಲ. ಅಭಿಮನ್ಯುವಿನಂತೆ ಚಕ್ರಬಿಂಬನ ಕೋಟೆಯ ಬಂದಿಯಾಗಿರಲಿಲ್ಲ. ಆದ್ದರಿಂದ ಸಹಜವಾಗಿ ನನ್ನನ್ನು ಹೊಗಳಿದ.

ಒಮ್ಮೆ ಒಂದು ಸಂಗತಿ ನಡೆಯಿತು. ಕವಿ ರವೀಂದ್ರರು ತೀರಿಕೊಂಡಿದ್ದರು. ಮೊದಮೊದಲು, ಸಾಹಿತ್ಯದ ಹುಮ್ಮಸ್ಸಿನಲ್ಲಿ, ಸಂದರ್ಭ ದೊರೆತಾಗಲೆಲ್ಲಾ ಕವನವನ್ನೋ ಲೇಖನವನ್ನೋ ಬರೆಯುವುದು ತರುಣ ಲೇಖಕರ ಒಂದು ಚಟ. ಅಂತೆಯೇ ರವೀಂದ್ರರ ವಿಚಾರವಾಗಿ ನಾನೂ ಮೂರು ಅಷ್ಟ ಷಟ್ಪದಿಗಳ ಕವನ ಕಟ್ಟಿದೆ. ಯಥಾವತ್ತಾಗಿ ಸೋಗಾಲನಿಗೆ ಓದಿ ತೋರಿಸಿದೆ. ಸೋಗಾಲ ನನ್ನಿಂದ ಅದನ್ನು ತೆಗೆದಿಟ್ಟುಕೊಂಡ.

ಅಂದು ಸಂಜೆ ಸಂಘವೊಂದರಲ್ಲಿ ರವೀಂದ್ರರ ನಿಧನದ ಬಗ್ಗೆ ಸಂತಾಪಸೂಚಕ ಸಭೆ ಏರ್ಪಟ್ಟಿತ್ತು. ಅಲ್ಲಿ ಅವನ್ನು ಓದಬೇಕೆಂದು ನನಗೆ ಹೇಳಿದ. ರವೀಂದ್ರಲೋಕದ ಒಳಹೊಕ್ಕು ನೋಡಿರುವೆನೆಂಬುದಾಗಿ ಪದ್ಯ ಬರೆದಾಗ ಇದ್ದ ಆತ್ಮವಿಶ್ವಾಸ ಈಗ ಕರಗಿ ಹೋಗಿತ್ತು. ಲೇಖಕರನ್ನು ಪದೇ ಪದೇ ಕಾಡಿಸುವ ಹತಾಶೆ ನನ್ನನ್ನು ಆವರಿಸಿತ್ತು. ಅದನ್ನು ಮುಚ್ಚಿಕೊಂಡೆ. ಹಿರಿಮೆಯ ಸೋಗು ಹಾಕಿಕೊಂಡೆ. ನಾನು ಓದುವುದಿಲ್ಲ—ಎಂದೆ. ಅವನು ಸುಮ್ಮನೆ ಹೊರಟು ಹೋದ ; ತಾನೇ ನನ್ನ ಪರವಾಗಿ ಓದಿದನಂತೆ. ಆಮೇಲೆ ತಿಳಿಯಿತು.

ಇದು ನನಗೆ ಸರಿಬೀಳಲಿಲ್ಲ. ಅಂದು ರಾತ್ರಿ ಊಟಕ್ಕೆ ಕುಳಿತಾಗ ಒಂದು ಸಣ್ಣ ಜಗಳವನ್ನೇ ಆಡಿದೆವು. ಆದರೆ ಸೋಗಾಲ ಮಾತ್ರ ಜಗ್ಗಲಿಲ್ಲ. ಮುಂದೆ

ನುಗ್ಗಬೇಕು. ಹಿಂದೆ ಕೂತರೆ ಯಾರು ಕೇಳುತ್ತಾರೆ? ಹಾಗಿದ್ದರೆ ನಿನಗೂ ಪ್ರಯೋಜನವಿಲ್ಲ; ಜಗತ್ತಿಗೂ ಪ್ರಯೋಜನವಿಲ್ಲ—ಎಂದ.

ಈ ರೀತಿ ಮೊದಲಿಟ್ಟ ನನ್ನ ಸಾಹಿತ್ಯದ ಗೆಳೆತನ ಕೊನೆತನಕ ಇದೇ ರೀತಿ ಬೆಳೆಯಿತು. ಆತ ಈ ನೀತಿ ಅನುಸರಿಸಿ ಮುಂದೆ ನುಗ್ಗಿದ. ಸಾಹಿತ್ಯಾಭ್ಯಾಸ, ಕಾರ್ಯಚಟುವಟಿಕೆ ಮುಂದುವರಿಸಿ ನಾಲ್ಕು ಜನರೊಡನೆ ಕಲೆತು ಮಹೋತ್ಸಾಹ ದಿಂದ ಕೆಲಸ ಮಾಡಿದ.

ನಾನು ಮಾತ್ರ ನನ್ನ ಸಂಕೋಚದ ರೇಷ್ಮೆ ಗೂಡಿನಲ್ಲಿ ಕುಳಿತು ಎಂದಿನಂತೆ ಸಾಗಿದೆ.

ನನ್ನ ಓದು ಸಧ್ಯಕ್ಕೆ ಮುಗಿದು ನಾನು ಅಲ್ಲಿ ಇಲ್ಲಿ ಕೆಲಸ ಮಾಡಿ ಬೇಸರ ಗೊಂಡು ವಾಣಿಜ್ಯ ಸಂಸ್ಥೆಯೊಂದರಲ್ಲಿ ವೃತ್ತಿ ಹಿಡಿದಿದ್ದೆ. ಪತ್ರಿಕೋದ್ಯಮದ ಪರಿಚಯವನ್ನೂ ಪಡೆದಿದ್ದೆ. ಸೋಗಾಲ ಇನ್ನೂ ವಿದ್ಯಾರ್ಥಿಯಾಗೇ ಇದ್ದ. ಇಂಜಿನಿಯರಿಂಗ್ ಶಿಕ್ಷಣ. ಆಗ ಯುದ್ಧದ ಬಿರುಸು ಇನ್ನೂ ಅಡಗಿರಲಿಲ್ಲ. ಬೆಂಗಳೂರಿನಲ್ಲೂ ವಿದೇಶದ ಸಿಪಾಯಿಗಳು ಅಸಂಖ್ಯಾತರಾಗಿದ್ದರು. ಇದರಿಂದ ಇನ್ನೇನೂ ಪ್ರಯೋಜನವಾಗದಿದ್ದರೂ ದೇಶ ವಿದೇಶಗಳ ಪರಿಸ್ಥಿತಿಯ ಪರಿಚಯ ಮಾಡಿಕೊಂಡು ಪರಸ್ಪರ ವಿಚಾರವಿನಿಮಯಕ್ಕೆ ಒಂದು ಸುಯೋಗ ಏರ್ಪಟ್ಟಿತ್ತು.

ಸೋಗಾಲ ಈ ಸಂದರ್ಭವನ್ನು ಬಹು ಚೆನ್ನಾಗಿ ಉಪಯೋಗಿಸಿಕೊಂಡ. ಈ ಸಿಪಾಯಿಗಳೊಡನೆ ಸರಳವಾಗಿ ನಡೆದು ಕೆಲವರ ಸ್ನೇಹ ಸಂಪಾದಿಸಿಕೊಂಡಿದ್ದ.

ಆಗ ಈ ಪರದೇಶಿ ಸೈನಿಕರಿಗೂ ಸ್ವದೇಶದ ಜನಕ್ಕೂ ನಡುವೆ ಬಳಕೆ ಹೆಚ್ಚಾಗ ಲೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಪ್ರತಿ ಭಾನುವಾರವೂ ಒಂದು ಸತ್ಕಾರ ಕೂಟ ಏರ್ಪಡುತ್ತಿತ್ತು. ಅದರಲ್ಲಿ ಈ ಸಿಪಾಯಿಗಳೂ ಬೆಂಗಳೂರಿನ ನಾಗರಿಕರೂ ಕಲೆತು ಪರಸ್ಪರ ಸ್ನೇಹ ಬೆಳಸಲು ಅವಕಾಶವಿತ್ತು. ಆ 'ನಾಗರಿಕರ' ಪೈಕಿ ಪ್ರತಿವಾರವೂ ಸೋಗಾಲ ಇರುತ್ತಿದ್ದ. ಕೊನೆಗೆ ನನ್ನನ್ನೂ ಎಳೆದೊಯ್ದ. ಫಲಹಾರ ಮಾಡುತ್ತ ಮಾಡುತ್ತಾ ಪಕ್ಕದಲ್ಲಿದ್ದ ಪರಂಗಿ ಸಿಪಾಯಿಯೊಡನೆ ಮಾತು ಪ್ರಾರಂಭಿಸಿದನೋ, ಆಯಿತು. ಆದರೆ ನಿಲುಗಡೆ ಎಲ್ಲೆಂದು ಹೇಳಲು ಬರುವಂತಿಲ್ಲ; ಭಾರತದ ಸ್ಥಿತಿ, ಬ್ರಿಟಿಷರ ದಬ್ಬಾಳಿಕೆ—ಇವನ್ನೆಲ್ಲ ಹೇಳಿ ಆ ಸಿಪಾಯಿಯ ಕಣ್ಣು ತೆರೆಯಿಸುತ್ತಿದ್ದ.

ಈ ಸಿಪಾಯಿಗಳೂ ನಾಗರಿಕರೂ ಏನು ಮಾಡುವರೆಂಬುದನ್ನೇ ನಿರೀಕ್ಷಿಸು

ತ್ತಿದ್ದ ಸತ್ಕಾರ ಕೂಟದ ವ್ಯವಸ್ಥಾಪಕರು ನಮ್ಮ ಈ ಸಂಭಾಷಣೆ ಕೇಳಿ ಹತ್ತಿರ ಬಂದು, 'ರಾಜಕೀಯಕ್ಕೆ ಮಾತ್ರ ಬಾಯಿ ಹಾಕಬೇಡಿ,' ಎಂದು ಎಚ್ಚರಿಸುತ್ತಿದ್ದರು. ಆ ವ್ಯವಸ್ಥಾಪಕರು ಅತ್ತ ಹೋದರೆ ಮತ್ತೆ ಅದೇ ಮಾತು ಪ್ರಾರಂಭ. ಆಗಿನ ಸಂಭಾಷಣೆಯಂಥ ಸಂಭಾಷಣೆಯು ವಿಚಾರದೂಟ ಜೀವಮಾನದಲ್ಲಿ ದೊರಕುವುದು ಬಹು ಅಪೂರ್ವ.

ಒಮ್ಮೆ ಹೀಗಾಯಿತು: ಅಲ್ಲಿನ ವಿಶ್ವವಿದ್ಯಾನಿಲಯ ಸಂಘ ಭವನದಲ್ಲಿ ಸೋವಿಯತ್ ಮಿತ್ರಮಂಡಲಿಯವರು ಯಾವುದೋ ಒಂದು ಭಾಷಣ ಏರ್ಪಡಿಸಿದ್ದರು. ಅದನ್ನು ಕೇಳಲು ಕೆಲವರು ವಿದೇಶೀ ಸಿಪಾಯಿಗಳು ಬಂದಿದ್ದರು. ಭಾಷಣ ಮುಗಿದು ಹೊರಬರುವಾಗ ಸೋಗಾಲರ ಜತೆಗೆ ಆಗಲೇ ಒಬ್ಬ ಸಿಪಾಯಿ ಗಂಟುಬಿದ್ದಿದ್ದ. ಆತನ ಹೆಸರಿನ ನೆನಪು ನನ್ನ ತಲೆಯಲ್ಲಿ ಉಳಿದಿಲ್ಲ. ಆತ ಒಬ್ಬ ಆಂಗ್ಲ ಸಿಪಾಯಿ. ಯುದ್ಧಕ್ಕೆ ಮೊದಲು ಯಾವುದೋ ಕಾರ್ಖಾನೆಯಲ್ಲಿ ಇಂಜನಿಯರಾಗಿದ್ದನಂತೆ. ಸ್ಪೇಯ್ನ್ ಅಂತರ್ಯುದ್ಧವಾದಾಗ, ಪ್ರಜೆಗಳ ಪರವಾಗಿ ಫ್ಯಾಸಿಸ್ಟ್ ಸೇನೆಯ ವಿರುದ್ಧ ಕಾದಾಡಲು ಅವನೂ ಹೋಗಿದ್ದನಂತೆ. ಈಗ ಮಹಾ ಯುದ್ಧದ ಫಲವಾಗಿ ಸೈನಿಕನಾಗಿ ಭಾರತಕ್ಕೆ ಬಂದಿದ್ದ. ಕರಾಚಿಗೆ ಬಂದೊಡನೆಯೇ ಪುಸ್ತಕದ ಅಂಗಡಿಗೆ ನುಗ್ಗಿ, ಇಂಡಿಯಾದ ಆರ್ಥಿಕ ವಿಚಾರವಾಗಿ ಸಿಕ್ಕಿದ ಪುಸ್ತಕಗಳನ್ನೆಲ್ಲ ಕೊಂಡು ಓದಿದ್ದ. ಆದರೆ ಏನೊಂದೂ ಸರಿಯಾಗಿ ತಿಳಿದು ಬಂದಿರಲಿಲ್ಲವಂತೆ. ಹಾಗೆಂದು ಪೇಚಾಡುತ್ತಿದ್ದ. ದೂರದಲ್ಲಿ ಕಂಡೊಡನೆಯೇ ಸೋಗಾಲ ನನ್ನನ್ನು ಕರೆದು ಆ ಸಿಪಾಯಿಗೆ ಪರಿಚಯ ಮಾಡಿಕೊಟ್ಟ. 'ಇವರು ಇಂಥ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆರ್ಥಿಕ ವಿಚಾರವೆಲ್ಲ ಇವರಿಗೆ ಚೆನ್ನಾಗಿ ಗೊತ್ತು. ಇವರನ್ನು ಹಿಡಿದರೆ ನಿಮ್ಮ ಸಂದೇಹವೆಲ್ಲ ಪರಿಹಾರವಾಗುತ್ತದೆ,' ಎಂದು ಸಿಕ್ಕಿಸಿಯೇ ಬಿಟ್ಟ. ನನಗೆ ತುಂಬಾ ಕಸಿವಿಸಿ ಆಯಿತು. ಆಗಲಿ, ಇನ್ನೊಮ್ಮೆ ಬರುತ್ತೇನೆ—ಎಂದು ಹೇಳಿ ಜಾರಿಕೊಂಡೆ.

ಆ ಸಿಪಾಯಿಯೇನೋ ವಿಳಾಸ ಕೊಟ್ಟಿದ್ದ. ಪ್ರತಿ ಭಾನುವಾರವೂ ನಾನು ಇಲ್ಲಿಗೆ ಬರುತ್ತೇನೆ—ಎಂದು ಹೇಳಿದ್ದ. ಆದರೆ ನಾನು ಮಾತ್ರ ಮತ್ತೆ ಅವನನ್ನು ನೋಡುವ ಹವ್ಯಾಸಕ್ಕೆ ಹೋಗಲಿಲ್ಲ.

ಆಮೇಲೆ ಸೋಗಾಲನಿಗೆ ಗ್ರಹಚಾರ ಬಿಡಿಸಿದೆ. ಒಳ್ಳೆ ಸಂದಿಗ್ಧಕ್ಕೆ ತಂದೆ—ಎಂದು ಹೀಯಾಳಿಸಿದೆ. ನನಗೆ ಏನು ಗೊತ್ತಿದೆಯೆಂದು ಅವನ ಮುಂದೆ ನನ್ನನ್ನು

ಹೊಗಳಿದೆ ?—ಎಂದೆ. ಸೋಗಾಲ ಮಾತ್ರ ಇನಿಸೂ ಕುಂದಲಿಲ್ಲ. 'ನೀನು ಇನ್ನೂ ನಿನ್ನ ಸಂಕೋಚ ಬಿಡಲಿಲ್ಲ. ನಿನ್ನ ವಿಕಾಸಕ್ಕೆ ಅದೇ ದೊಡ್ಡ ಶತ್ರು'—ಎಂದು ಮತ್ತೊಮ್ಮೆ ಎಚ್ಚರಿಸಿದ. ನನಗೆ ಮಾತ್ರ ಇದನ್ನು ಬಿಟ್ಟುಕೊಡುವುದು ಹೇಗೆಂಬುದು ಸಮಸ್ಯೆಯಾಗಿಯೇ ಉಳಿಯಿತು. ಆದರೆ ಪದೇ ಪದೇ ಆ ರೀತಿ ಎಚ್ಚರಿಸಲು ಸೋಗಾಲ ಮಾತ್ರ ಇನ್ನಿಲ್ಲ.

ಸೋಗಾಲನ ಸಾಹಿತ್ಯ ಬೆಳವಣಿಗೆಗೆ ಅಮೋಘವಾದದ್ದು. ನನಗೆ ಪರಿಚಯವಾದಾಗ ಆತ ಒಂದು ಸಾಲು ಕೂಡ ಸಾಹಿತ್ಯ ಬರೆದಿರಲಿಲ್ಲ; ಕತೆ ಬರೆದಿರಲಿಲ್ಲ; ಕವನ ಕಟ್ಟಿರಲಿಲ್ಲ. ಮೊದಲು ಆತ ಬರೆದ ಕವನ ನೋಡಿ ನನಗೇನೋ ಅಂಥ ತೃಪ್ತಿ ಎನಿಸಿರಲಿಲ್ಲ. ಆದರೆ ಬಹು ಅಲ್ಪ ಕಾಲದಲ್ಲಿ ಅಮೋಘವಾದ ಬೆಳವಣಿಗೆ ಮಾಡಿಕೊಂಡ. ಅವನ ಹಾಸಿಗೆಯ ಪಕ್ಕದಲ್ಲಿ ಅಂಗೈ ಅಗಲದ ಒಂದು ಪುಸ್ತಕ ಬಿದ್ದಿರುತ್ತಿತ್ತು. ಅದರಲ್ಲಿ ದಿನೇ ದಿನೇ ಒಂದೆರಡು ಕವನ ಹೊಸಹೊಸದಾಗಿ ಸೇರಿಸುತ್ತಿದ್ದ. ಸೋಗಾಲ ಸೊಗಸಾದ ಕತೆಗಾರ. ಅವನದು ಸಮಾಜದ ನಿಜಸ್ಥಿತಿಗೆ ಕಣ್ಣು ತೆರೆಯಿಸುವ ಯಥಾರ್ಥ ಸಾಹಿತ್ಯ. ಆತನ 'ಚಿರುಜೀವ,' 'ಮುನಿಸಾಮಿಯ ಮಾಲಗ,' 'ತಾಯಿ ಮೊಗವಿ' ಇವು ನಿಜವಾಗಿಯೂ ಪ್ರಗತಿಶೀಲ ಸಾಹಿತ್ಯಕ್ಕೆ—ನಿಜವಾದ ಪ್ರಗತಿಶೀಲ ಸಾಹಿತ್ಯಕ್ಕೆ—ಕೀರ್ತಿ ತರತಕ್ಕ ಕೃತಿಗಳು.

'ಪ್ರಗತಿಶೀಲ' ಎಂದಾಗ ನೆನಪಿಗೆ ಬಂತು. ಬೆಂಗಳೂರಿನ ಪ್ರಗತಿಶೀಲ ಚಳವಳಿ ಪ್ರಾರಂಭಿಸಿದವರಲ್ಲಿ ಸೋಗಾಲನೂ ಒಬ್ಬ. ಅದು ಸ್ಥಾಪನೆಯಾದ ದಿನದ ಸಭೆಯಲ್ಲಿ ನನ್ನನ್ನೂ ಎಳೆದುಕೊಂಡು ಹೋಗಿ ಕೂರಿಸಿದ್ದ. ಅನಂತರ ಅದರ ಕಾರ್ಯ ಕೆಲಕಾಲ ಬಿರುಸಾಗಿ ನಡೆಯಿತು. ಅದಕ್ಕೆ ಸೋಗಾಲನ ಕಾರ್ಯಶ್ರದ್ಧೆಯೂ ಕಾರಣ. ಆಗ ಪ್ರಕಟವಾದ ಒಂದೆರಡು ಪುಸ್ತಕಗಳಲ್ಲಿ ಸೋಗಾಲನ 'ಕೈವಾಡ' ವನ್ನೂ ಕಾಣಬಹುದು.

ಕಾರ್ಯಶ್ರದ್ಧೆಯೆಂದರೆ ಸೋಗಾಲನ ಹೆಸರು ಹೇಳಬೇಕು. ಸಂಘಟನೆಯ ಕಾರ್ಯದಲ್ಲಿ ಆತ ಪ್ರಚಂಡ. ಬೊಂಬಾಯಿಯಲ್ಲೊಮ್ಮೆ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸಭೆ ನಡೆದಾಗ ಮೈಸೂರಿನ ಪರವಾಗಿ ಅಲ್ಲಿ ಹೋಗಿ ಮೈಸೂರಿನ ವಿದ್ಯಾರ್ಥಿಗಳಿಗೆ ಕೀರ್ತಿ ತಂದ ಸಾಸಿಗ. ಅಂತೆಯೇ ಕಾರ್ಯಕಲಾಪಗಳನ್ನು ಅವನಂತೆ ಸಜೀವವಾಗಿ ವರದಿ ಮಾಡಬಲ್ಲ ಕಲೆ ಬಹುಜನರಿಗೆ ಸಿದ್ಧಿಸಲಾರದು. ಕೆಲ ಕಾಲ ಪತ್ರಿಕಾವೃತ್ತಿ ಮಾಡಿದಾಗ ಆತನ ಈ 'ಸಿದ್ಧಿ' ಬೆಳಕಿಗೆ ಬಂತು.

ಸೋಗಾಲನ ಕನ್ನಡ ಪ್ರೇಮ ಎಲ್ಲರಿಗೂ ಇದ್ದಿದ್ದರೆ ಕನ್ನಡ ನಾಡು ಇಷ್ಟು ಹಿಂದುಳಿದಿರುತ್ತಿರಲಿಲ್ಲ. ಅವನು ಕನ್ನಡ ನಾಡನ್ನು ಬಿಟ್ಟು ದೂರದ ಮಹಾರಾಷ್ಟ್ರದಲ್ಲಿ ನೆಲಸಬೇಕಾಗಿ ಬಂದಾಗ, ಅಲ್ಲಿಯ ಜನದ ಕಾರ್ಯತತ್ಪರತೆಯನ್ನು ಕಂಡು, ನಮ್ಮ ಜನದ ಆಲಸ್ಯಕ್ಕಾಗಿ ಎಷ್ಟೋ ಬಾರಿ ಮರುಗುತ್ತಿದ್ದ. ಬೇರೆಯವರ ಹುಚ್ಚುಮೋಹವನ್ನೂ ಡಾಂಭಿಕ ಮನೋಭಾವವನ್ನೂ ಕಂಡು ಎಷ್ಟೋ ಬಾರಿ ಕನಲುತ್ತಿದ್ದ.

ಆತನ ಕನ್ನಡ ಪ್ರೇಮಕ್ಕೆ ಉದಾಹರಣೆಯಾಗಿ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಒಮ್ಮೆ ಬೆಂಗಳೂರಿನಲ್ಲಿ ಅಖಿಲ ಭಾರತ ವಿಜ್ಞಾನ ಪರಿಷತ್ತು ಸೇರಿತ್ತು. ಆಗ ಒಂದು ಪತ್ರಿಕೆಯ ಪ್ರತಿನಿಧಿಯಾಗಿ ಅವನು ಅಲ್ಲಿಗೆ ಹೋಗಿದ್ದ. ನಾನಾ ಪ್ರಾಂತಗಳಿಂದ ಬಂದಿದ್ದ ಪ್ರತಿನಿಧಿಗಳ ಪೈಕಿ ಬಂಗಾಳಿ ಪ್ರತಿನಿಧಿಗಳೂ ಅಲ್ಲಿದ್ದರು. ಈ ಬಂಗಾಳಿಗಳಿಗೆ ತುಂಬಾ ಸ್ವಭಾಷಾ ಪ್ರೇಮ. ಬೆಂಗಳೂರಿನಲ್ಲಿದ್ದರೂ ಬಹು ದೂರದ ಬಂಗಾಳದಿಂದ ಬಂಗಾಳಿ ಪತ್ರಿಕೆಯನ್ನೇ ತರಿಸಿಕೊಂಡು—ಅದು ಇಲ್ಲಿಗೆ ಬರುವ ವೇಳೆಗೆ ಹಳಸಿ ಹೋಗಿರುವುದೆಂಬುದನ್ನೂ ಲೆಕ್ಕಿಸದೆ—ಅದನ್ನೇ ಓದುತ್ತಿದ್ದರು. ಅವರ ಬಿಡಾರಕ್ಕೆ ಹೋದಾಗಲೆಲ್ಲ ಅವರು ತಮ್ಮ ಮುಖಕ್ಕೆ ಅಡ್ಡಲಾಗಿ ಈ ಬಂಗಾಳಿ ಪತ್ರಿಕೆ ಹಿಡಿದು ಕೂತಿರುತ್ತಿದ್ದರಂತೆ. ಅಲ್ಲಿ ಕನ್ನಡಿಗ ಪ್ರತಿನಿಧಿಗಳಿದ್ದರೂ ಒಂದಾದರೂ ಕನ್ನಡ ಪತ್ರಿಕೆ ಇರುತ್ತಿರಲಿಲ್ಲವಂತೆ. ಸೋಗಾಲನಿಗೆ ತುಂಬಾ ರೋಸಿಹೋಯಿತು. ತನ್ನ ಜೇಬಿನಲ್ಲಿ ತುರುಕಿದ್ದ ಕನ್ನಡ ಪತ್ರಿಕೆ ತೆಗೆದ. ಅದನ್ನು ಹಿರಿದು ತಾನೂ ಅವರ ಹಾಗೆಯೇ ಸೋಫಾದ ಮೇಲೆ ಒರಗಿ ಮೂತಿಗೆ ಅಡ್ಡಲಾಗಿ ಅದನ್ನು ಹಿಡಿದು ಕೂತ. ಅವರು ಕೂತೂಹಲದಿಂದ, 'ಇದು ಯಾವ ಭಾಷೆಯ ಪತ್ರಿಕೆ?' ಎಂದು ಕೇಳಿದರು. ಅವರು ಅಷ್ಟು ಕೇಳಿದ್ದೇ ಸಾಕು, ಅವನು ಕನ್ನಡದ ವಿಚಾರವಾಗಿಯೂ ಕನ್ನಡ ಸಾಹಿತ್ಯದ ವಿಚಾರವಾಗಿಯೂ ಒಂದು ಪುಟ್ಟ ಉಪನ್ಯಾಸವನ್ನೇ ಕೊಟ್ಟ. ಕನ್ನಡ ಪ್ರೇಮಿಗಳೆನಿಕೊಂಡವರಿಗೆಲ್ಲ ಕನ್ನಡದಲ್ಲಿ ಈ 'ಆಸ್ಥೆ' ಇದ್ದಿದ್ದರೆ ಹೇಗಿರುತ್ತಿತ್ತು!

ಆದರೆ ಸೋಗಾಲನ ವಿಚಾರವಾಗಿ ನನಗೆ ಒಂದು ಕೊರತೆ ಕಾಣುತ್ತಿತ್ತು. ತನ್ನ ಕೃತಿಯ ವಿಚಾರವಾಗಿ ಅವನಿಗೆ ತೀರ ಅಸಡ್ಡೆ. ಬರೆದದ್ದನ್ನೆಲ್ಲ ಒಂದು ಕಡೆ ಇಡುತ್ತ ಕೂಡ ಇರುತ್ತಿರಲಿಲ್ಲ. ಹೀಗಾಗಿ ಅವನ ಕೃತಿಯೆಲ್ಲ ಅಲ್ಲಿ ಇಲ್ಲಿ ಚದುರಿ ಹೋಯಿತು. ಅದೆಲ್ಲಾ ಒಂದುಗೂಡಿ ಪ್ರಕಟವಾಗಲಿಲ್ಲ.

ಹೊಸ ಭಾಷೆ ಕಲಿಯುವುದರಲ್ಲೂ ಸೋಗಾಲನಿಗೆ ಬಲು ಆಸೆ. ಒಮ್ಮೆ ಉರ್ದು ವಿನ ವಿಚಾರ ಬಂತು. ಮರುದಿನವೇ ಉರ್ದು-ಇಂಗ್ಲಿಷ್ ನಿಘಂಟನ್ನೂ ಕೆಲವು, ಉರ್ದು ಪುಸ್ತಕಗಳನ್ನೂ ತಂದ. ಉರ್ದು ಅಕ್ಷರ ಕಲಿತು, ಭಾಷೆ ಕಲಿತು ಸಾಹಿತ್ಯಾಭ್ಯಾಸ ಮಾಡಿಯೇ ಮಾಡಿದ. ಹಿಂದಿಯನ್ನೂ ಹಾಗೇ ಕಲಿತ.

ಮಹಾರಾಷ್ಟ್ರಕ್ಕೆ ಹೋದಾಗ ಅಲ್ಪಕಾಲದಲ್ಲೇ ಮರಾಠಿಯನ್ನೂ ಕಲಿತ. ಗುಜರಾಥಿಯನ್ನು ತಕ್ಕಮಟ್ಟಿಗೆ ಆಗಲೇ ಕಲಿತಿದ್ದ. ಇಂಥ ಅದ್ಭುತ ಚೈತನ್ಯ ಅವನಲ್ಲಿತ್ತು. ಅವನೇನಾದರೂ ಒಂದು ಸ್ಥಳದಲ್ಲಿ ಕೂತು ಕೆಲಸ ಮಾಡಿದ್ದಿದ್ದರೆ ಕನ್ನಡಕ್ಕೆ ಇನ್ನೂ ಎಷ್ಟೋ ಕೆಲಸ ಆಗುತ್ತಿತ್ತು.

ಸೋಗಾಲನ ಮನಸ್ಸು ತುಂಬಾ ಸರಳ—ಮಗುವಿನ ಹಾಗೆ. ಅವರಿವರಿಂದ ತಂದ ಪುಸ್ತಕವೇ ಆಗಲಿ, ತನ್ನ ಪುಸ್ತಕವೇ ಆಗಲಿ, ಕೇಳಿದವರಿಗೆ ಓದಲು ಕೊಟ್ಟುಬಿಡುತ್ತಿದ್ದ. ಎಷ್ಟೋ ಬಾರಿ ಅವು ಹಿಂದಕ್ಕೆ ಬರುತ್ತಲೇ ಇರಲಿಲ್ಲ. ಆದರೂ ಆ ವಿಚಾರ ಚಿಂತಿಸುತ್ತಿರಲಿಲ್ಲ. ಹಣದ ವಿಚಾರದಲ್ಲೂ ಹಾಗೆಯೇ. ಒಮ್ಮೆ ದಾರಿಯಲ್ಲಿ ಹೋಗುತ್ತಿದ್ದಾಗ ಯಾರೋ ಒಬ್ಬ ಹೊಟ್ಟೆಗಿಲ್ಲವೆಂದು ಕಾಸು ಬೇಡಿದ. ಜೇಬಿನಲ್ಲಿ ಒಂದೇ ಒಂದು ರೂಪಾಯಿ ನೋಟಿತ್ತು. [ಆಗಿನ ಕಾಲದ ರೂಪಾಯಿಗೆ ಹೆಚ್ಚು ಬೆಲೆ.] ಅದನ್ನು ತೆಗೆದು ಅವನ ಕೈಲಿಟ್ಟು, 'ನಾಲ್ಕಾಣೆ ತೆಗೆದು ಕೊಂಡು ಉಳಿದ ಹಣ ಕೊಡು,' ಎಂದು ಹೇಳಿದ. ಅವನ ಬಳಿ ಚಿಲ್ಲರೆ ಎಲ್ಲಿ ಬರಬೇಕು? 'ಹೋಗಲಿ, ನಾನಿಲ್ಲೇ ಇರುತ್ತೇನೆ. ಚಿಲ್ಲರೆ ತಂದುಕೊಡು' ಎಂದು ಹೇಳಿ ಕಳುಹಿಸಿದ. ಆ ಆಸಾಮಿ ಪುನಃ ಬರಲೇ ಇಲ್ಲ. ಆ ದಾರಿಯಲ್ಲೇ ನಾನು ಎದುರಿಗೆ ಸಂಧಿಸಿದಾಗ ನನ್ನೊಡನೆ ಈ ವಿಚಾರ ಹೇಳಿದ. 'ಅಲ್ಲಯ್ಯ, ನೀನು ಅವನನ್ನು ಹೇಗೆ ನಂಬಿದೆ?' ಎಂದು ಕೇಳಿದೆ. 'ಹೋದರೆ ಹೋಯಿತು. ದುಡ್ಡು ಅವನಿಗೆ ಬೇಕಾಯಿತು. ಇಟ್ಟುಕೊಂಡ,' ಎಂದು ಹೇಳಿ ಆ ಮಾತನ್ನು ಆಗಲೇ ಮರೆತುಬಿಟ್ಟ.

ಕೇವಲ ಇಪ್ಪತ್ತೈದು ವರ್ಷ. ಮದುವೆಯಾಗಿ ಆರು ತಿಂಗಳು. ಒಳ್ಳೆಯ ಕತೆಗಾರ, ವಿಮರ್ಶಕ, ವಿಚಾರಪ್ರಿಯ, ಅಮೂಲ್ಯ ಕೆಲಸಗಾರ. ಕಣ್ಮರೆಯಾದ.*

* ೧೯೪೭.



# ಬೆಳ್ಳಾವೆ ವೆಂಕಟನಾರಾಯಣಪ್ಪ

ಎತ್ತರವಾದ ನಿಲವು. ಅಗಲವಾದ ಹಣೆ. ತೀಕ್ಷ್ಣವಾದ ಕಣ್ಣುಗಳು. ಕಂಕುಳಲ್ಲೊಂದು ಬೆಳ್ಗೊಡೆ. ಮೇಲಂಗಿಯ ಮೇಲೆ ಅಚ್ಚುಕಟ್ಟಾಗಿ ಮಡಿಸಿದ ವಲ್ಲಿ. ವಿನಯದ ಪ್ರತೀಕವೋ ಎಂಬಂತೆ ಸ್ವಲ್ಪ ಬಾಗಿದ ದೇಹ. ಇವಿಷ್ಟು ವಿವರಗಳಿಂದ ಯಾರು ಬೇಕಾದರೂ ಅವರನ್ನು ರಾಜಸೇವಾಸಕ್ತ ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪನವರೆಂದು ಗುರುತಿಸಬಹುದಿತ್ತು. ನಾವು ಒಮ್ಮೆ ಅಳುಕಿನಿಂದ ನಮಸ್ಕರಿಸಿದ್ದೇ ತಡ, ಫಲಿತ ಕದಳಿಯ ಗೊನೆಯ ಬಿಣ್ಪಿನಿಂದ ಬಾಗಿದ ಬಾಳೆಯ ಗಿಡದಂತೆ ಬಾಗಿಬಿಡುತ್ತಿತ್ತು ಅವರ ದೇಹ.

ನನ್ನ ಸ್ವಭಾವ ಹೀಗೆ: ಯಾರಾದರೂ ಒಬ್ಬರ ವಿಷಯದಲ್ಲಿ ಗೌರವ ಹುಟ್ಟಿದರೆ ಅವರನ್ನು ನೋಡಬೇಕು. ನನ್ನ ಕಲ್ಪನೆಯ ಚಿತ್ರಕ್ಕೂ ಅವರು ಇರುವುದಕ್ಕೂ ಎಷ್ಟರ ಮಟ್ಟಿನ ಸಾಮ್ಯ ಇದೆಯೆಂದು ಲೆಕ್ಕ ಹಾಕುತ್ತಾ ನಿಲ್ಲಬೇಕು. ಮಾತಿಲ್ಲ, ಕತೆಯಿಲ್ಲ. ಅವರು ಒಂದು ವೇಳೆ ಮಾತಾಡಿಸಿದರೂ ಮಾತೇ ಬಾರದು.

ವೆಂಕಟನಾರಣಪ್ಪನವರನ್ನು ನೋಡಬೇಕೆಂಬ ಹುಚ್ಚು ನನ್ನಲ್ಲಿ ಹುಟ್ಟಿದ್ದು,

ಅವರು ಬರೆದ ಕನ್ನಡ ಏಳನೆಯ ಪುಸ್ತಕ ಓದಿದಾಗ. ಅದರಲ್ಲಿ, 'ವಿಚಾರಪರ ರಾಯರು ಮತ್ತು ವಿದ್ಯುದ್ರಾಕ್ಷಸನ ಅದ್ಭುತ ಕಾರ್ಯಗಳು' ಎಂಬ ಪಾಠ ನೆನಪಿಗೆ ಬಂದಾಗಲೆಲ್ಲಾ ಅವರನ್ನು ಒಮ್ಮೆ ನೋಡಬೇಕೆಂಬ ಆಸೆ ಮಿಂಚಿ ಮಿಂಚಿ ಮಾಯ ವಾಗುತ್ತಿತ್ತು. (ವಿಜ್ಞಾನವನ್ನು ಕುರಿತು ಬರೆಯಬೇಕಾದರೆ ಹೀಗೆ ಬರೆಯ ಬೇಕು—ಎಂದು ಇಂದಿಗೂ ನನಗೆ ಎನಿಸುತ್ತದೆ.) ಅವರು ಹೀಗಿದ್ದಿರಬೇಕು—ಎಂದು ನಾನೇ ಕಲ್ಪಿಸಿಕೊಂಡ ಒಂದು ಚಿತ್ರ ನನ್ನ ಮನಸ್ಸಿನ ಮೇಲೆ ಮೂಡಿ ಮೂಡಿ ಮರೆಯಾಗುತ್ತಿತ್ತು.

ನಾನು ಅವರನ್ನು ಕಂಡದ್ದು ೧೯೪೦ರಲ್ಲಿ—ಅವರು ಬೆಂಗಳೂರಿನ ಬಸವನ ಗುಡಿಯಲ್ಲಿದ್ದ ತಮ್ಮ ಮನೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗುತ್ತಿದ್ದಾಗ. ನನ್ನ ಜತೆಯಲ್ಲಿದ್ದ ಗೆಳೆಯ ಅವರನ್ನು ನನಗೆ ತೋರಿಸಿದ. ಕೂಡಲೆ ನನ್ನ ಹೃದ ಯದ ಹುಚ್ಚು ಹಾರಿಬಂತು. ಮನಸ್ಸಿನಲ್ಲಿ ಮೂಡಿದ್ದ ಅವರ ಚಿತ್ರವನ್ನೂ ಕಣ್ಣಾರೆ ಕಂಡ ಅವರ ರೂಪವನ್ನೂ ಹೋಲಿಸಿದೆ. ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸ ಕಾಣಲಿಲ್ಲ.

ಬೆಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದ ನೆರಳಿನಲ್ಲಿ ನಾನು ನನ್ನ ಜೀವನದ ಸಂದಿಗ್ಧ ಕಾಲವನ್ನು ಕಳೆದೆ ; ಬೆಳೆದೆ. ಆ ಸಂಸ್ಥೆಯ ಸ್ಥಾಪಕರಲ್ಲೊಬ್ಬರು ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪ.

ವೆಂಕಟನಾರಾಯಣಪ್ಪನರೆಂದರೆ ನಮಗೆಲ್ಲಾ ಒಂದು ತೆರನಾದ ಭಯ—ಗೌರವ ಬೆರೆತ ಭಯ. ಅವರ ಮುಂದೆ ಸುಳಿದರೆ ಎಲ್ಲಿ ನಮ್ಮ ಕೊಂಕು ನಡೆನುಡಿ ಯನ್ನು ಟೀಕಿಸುವರೋ ಎಂಬ ಭೀತಿ. ಆದರೆ ಅವರನ್ನು ಮಾತನಾಡಿಸಲೇ ಬೇಕಾಗಿ ಬಂದಾಗ, ಅವರ ನಯವಾದ ನುಡಿಯನ್ನು ಕೇಳಿ, ಕರುಣೆದುಂಬಿದ ಕಣ್ಣುಗಳನ್ನು ನೋಡಿ, ನಮ್ಮ ಭೀತಿಗಾಗಿ ನಮಗೇ ನಗು ಬರುತಿತ್ತು. ವಿದ್ಯಾರ್ಥಿಗಳೆಂದರೆ ಅವರಿಗೆ ಬಲು ವಿಶ್ವಾಸ. ನಮ್ಮ ವಿದ್ಯಾರ್ಥಿನಿಲಯವಂತೂ ಅವರಿಗೆ ಪ್ರಾಣಕ್ಕಿಂತ ಹೆಚ್ಚು. ಅಲ್ಲೇ ನನಗೆ ಅವರ ವ್ಯಕ್ತಿತ್ವದ ಪರಿಚಯವಾದದ್ದು.

ಕಂಡ ತಪ್ಪನ್ನು ಕಟುವಾಗಿ ಟೀಕಿಸುತ್ತಿದ್ದ ಅವರ ಹೃದಯ, ಕಷ್ಟದಲ್ಲಿದ್ದವ ರನ್ನು ಕಂಡಾಗ ಕರಗಿಹೋಗುತ್ತಿತ್ತು. ಅವರ ಮೃದು ಹೃದಯದ ವಿಚಾರವಾಗಿ ನಾವು ಒಂದು ಮಾತು ಹೇಳಿಕೊಳ್ಳುತ್ತಿದ್ದೆವು. ಯಾವುದಾದರೂ ಸಂದರ್ಭದಲ್ಲಿ ನಮ್ಮಲ್ಲಿ ಯಾರಾದರೂ ಕಾರ್ಯನಿರ್ವಾಹಕ ಸಮಿತಿಯ ಮುಂದೆ ನಿಲ್ಲಬೇಕಾಗಿ

ಬಂದಾಗ ನಾವು ಅವನಿಗೆ ಹೇಳಿ ಕಳಿಸುತ್ತಿದ್ದದ್ದು ಹೀಗೆ: "ನಿನ್ನ ಮನಸ್ಸಿಗೆ ನಿಜ ಎಂತ ತೋರಿದ್ದನ್ನ ವೆಂಕಟನಾರಾಯಣಪ್ಪನವರನ್ನ ನೋಡುತ್ತಾ ಹೇಳಿಬಿಡು. ನಿನಗೆ ಜಯ ಸಿದ್ಧ."

ಸತ್ಯವನ್ನು ಅಪ್ಪಿಕೊಳ್ಳುವುದರಲ್ಲಿ ಅವರ ಆತುರ ಅಷ್ಟು. ತಮ್ಮ ಅಭಿಪ್ರಾಯವೇ ಸರಿ ಎನಿಸಿದರೂ, ಇನ್ನೊಬ್ಬರು ಹೇಳುವುದೂ ಸರಿ ಏಕಿರಬಾರದು? ಎಂಬ ಅನಾಸಕ್ತಿ.

ತಾವು ಮಾಡಿದ್ದು ತಪ್ಪೆನಿಸಿದರೆ ಅವರಷ್ಟು ನೊಂದುಕೊಳ್ಳುತ್ತಿದ್ದವರನ್ನು ನಾನು ಬೇರೆ ಕಂಡಿಲ್ಲ. ತಮ್ಮ ಅಳಲನ್ನು ಕಂಡವರ ಮುಂದೆಲ್ಲ ತೋಡಿಕೊಂಡರೂ ಅವರಿಗೆ ಸಮಾಧಾನವಿಲ್ಲ. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಒಂದು ಸಂಗತಿ ನಡೆಯಿತು. ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯ ತಪ್ಪನ್ನು ಕಂಡು ಅವರಿಗೆ ತುಂಬಾ ಸಿಟ್ಟು ಬಂತಂತೆ. ಕೂಡಲೆ ಬೋರ್ಡು ಒರೆಸುವ ಬಟ್ಟೆ ತೆಗೆದು ಆ ವಿದ್ಯಾರ್ಥಿಯ ಮುಖದ ಮೇಲೆ ಎಸೆದರು. ಬಟ್ಟೆಯಲ್ಲಿದ್ದ ಸುಣ್ಣದ ಪುಡಿ ಆ ವಿದ್ಯಾರ್ಥಿಯ ಕಣ್ಣಿಗೆ ಬಿತ್ತು. ಕಣ್ಣೀರು ಹೊಳೆಯಾಗಿ ಹರಿಯಿತು.

ಕೋಪ ಆರಿತು. ಪಾಠ ಮುಂದುವರಿಯಿತು—ಹೇಗೋ! ಮನಸ್ಸು ಬಿಕೋ ಎನಿಸಿತು.

ತಾವು ಮಾಡಿದ್ದು ತಪ್ಪು ಎಂದು ತೋರಿತು. ತಳಮಳ ಏರಿತು.

ತಮ್ಮ ತಪ್ಪಿಗಾಗಿ ಆ ವಿದ್ಯಾರ್ಥಿಯ ಕ್ಷಮಾಪಣೆ ಕೇಳಬೇಕೆಂದು ಅವರಿಗೆ ಎನಿಸಿತು. ಆಗ ಸರಿರಾತ್ರಿ.

ಹಾಗೆನಿಸಿದ್ದೇ ತಡ, ಹೊತ್ತನ್ನೂ ಲೆಕ್ಕಿಸದೆ ಆ ವಿದ್ಯಾರ್ಥಿಯ ಮನೆಯ ಕಡೆಗೆ ನಡೆದೇ ಬಿಟ್ಟರು! ಅವರು ಕ್ಷಮಾಪಣೆ ಕೇಳಿಕೊಂಡಾಗ ಆ ಹುಡುಗ ಮತ್ತೊಮ್ಮೆ ಅತ್ತಿರಬೇಕು. ಆಗ ಬೇರೆ ಕಾರಣಕ್ಕಾಗಿ!

ಕೈ ಹಚ್ಚಿದ ಕೆಲಸ ಮಾಡುವುದರಲ್ಲಿ ಅವರದು ಬಲು ನಿಷ್ಠೆ. ಒಂದು ಕಾಗದ ಬರೆಯಲಿ, ಅದನ್ನು ತಾವೇ ತೆಗೆದುಕೊಂಡು ಹೋಗಿ ಅಂಚೆ ಪೆಟ್ಟಿಗೆಯಲ್ಲಿ ಹಾಕಬೇಕು!

ಇಂಥವರು ಒಂದು ಗಳಿಗೆ ಸುಮ್ಮನೆ ಕುಳಿತಾರೆ? ಜ್ಞಾನದ ಹಸಿವು ಅವರದು. ಮುಪ್ಪಿನಲ್ಲಿ ಕೂಡ ಗಡಿಯಾರದಂತೆ ಕೆಲಸ ಮಾಡುತ್ತಿದ್ದರು.

ಗಡಿಯಾರಕ್ಕಾದರೂ ಹೊತ್ತು ಹೊತ್ತಿಗೆ ಕೀಲು ಕೊಡದಿದ್ದರೆ ನಿಂತು ಹೋದೀತು. ಇವರು ಅದನ್ನೂ ನಿರ್ಲಕ್ಷಿಸುತ್ತಿದ್ದರು. 'ವೆಂಕಟನಾರಾಯಣಪ್ಪ' ಎಂಬುದಕ್ಕೆ 'ಕರ್ತವ್ಯ ನಿಷ್ಠೆ' ಎಂಬುದನ್ನು ಪರ್ಯಾಯ ಪದವಾಗಿ ಬಳಸ ಬಹುದಿತ್ತು!

ಇವರು ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ ಹಲವರು ಇವರ ದುಡಿತವನ್ನು ನೋಡಿ, 'ಇದೇನಿದು! ದುಡ್ಡಿಲ್ಲ, ಕಾಸಿಲ್ಲ. ಇಷ್ಟು ದುಡಿ ಯುತ್ತಾರಲ್ಲ!' ಎನ್ನುತ್ತಿದ್ದರಂತೆ. ಇನ್ನು ಕೆಲವರು ಇವರನ್ನೇ, 'ನಿಮಗೆ ಪರಿಷ ತ್ತಿನಲ್ಲಿ ಎಷ್ಟು ಸಂಬಳ?' ಎಂದು ಕೇಳುತ್ತಿದ್ದರಂತೆ. ಇದಕ್ಕೆ ಏನೆಂದು ಉತ್ತರ ಹೇಳಬೇಕು? ಪ್ರಶ್ನೆ ಬಲು ಸೂಕ್ಷ್ಮ. ಅವರು ಚೇಷ್ಟೆಗೆ ಕೇಳುವರೋ, ನಿಜ ವಾಗಿಯೂ ಕೇಳುವರೊ? ಸಂಬಳ ಇಲ್ಲ ಎಂದರೆ ಅವರು ನಂಬುವರೆಂಬ ಭರವಸೆ ಎಲ್ಲಿ? ಆಗ ಇವರು ನಗುನಗುತ್ತ, ಸಂಬಳವೇ? ನಾನೂರು!' ಎಂದು ಹೇಳಿ ಪ್ರಶ್ನೆಗೆ ಉತ್ತರವನ್ನು ನಗೆಯಲ್ಲಿ ತೇಲಿಸಿಬಿಡುತ್ತಿದ್ದರು. ಇದು ನಿಜವೋ, ಹುಡುಗಾಟವೋ ಎಂಬ ಸಂಶಯ ಹುಟ್ಟಿಸಿ ಬಿಡುತ್ತಿದ್ದರು.

ಕನ್ನಡಕ್ಕಾಗಿ ಸದ್ದಿಲ್ಲದೆ ದುಡಿದ ದೊಡ್ಡ ವ್ಯಕ್ತಿಗಳು ಶ್ರೀ ವೆಂಕಟನಾರಾಯ ಣಪ್ಪ. ವಿಜ್ಞಾನ ಸಾಹಿತ್ಯ ಸೃಷ್ಟಿಗೆ ಕನ್ನಡದಲ್ಲಿ ರಾಜಮಾರ್ಗ ನಿರ್ಮಿಸಿದವರು ಇವರು. ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಪ್ರಕಟವಾದ ಇಂಗ್ಲಿಷ್-ಕನ್ನಡ ನಿಘಂಟಿಗಾಗಿ ಹಗಲಿರುಳು ದುಡಿದು, ಇದನ್ನು ಕೊನೆಗೂ ಕಲ್ಪನೆಯ ಕೈಲಾಸದಿಂದ ಧರೆಗೆ ಇಳಿಸಿದ ಕೀರ್ತಿ ಮುಖ್ಯವಾಗಿ ಶ್ರೀ ವೆಂಕಟನಾರಾಯಣಪ್ಪ ನವರಿಗೆ ಸಲ್ಲಬೇಕು. ಇದನ್ನು ಯಾರೂ ಎಂದೂ ಮರೆಯುವಂತಿಲ್ಲ.

ಎಪ್ಪತ್ತೆರಡು ವರ್ಷಗಳ ತುಂಬು ಜೀವನ. ಮುಪ್ಪಿನಲ್ಲೂ ಇಪ್ಪತ್ತು ವರ್ಷದ ಯುವಕರ ಹುರುಪು. ಅವರು ಇನ್ನೂ ಬಹುಕಾಲ ಬದುಕಬಹುದಿತ್ತು. ಅವರು ಎಷ್ಟು ಹೆಚ್ಚುಕಾಲ ಬದುಕಿದ್ದರೆ ಅಷ್ಟು ಹೆಚ್ಚು ಕೆಲಸ ಕನ್ನಡಕ್ಕೆ ಸಲ್ಲುತ್ತಿತ್ತು. ದುಡಿಯುತ್ತಲೇ ನಡೆದರು.

ಸಾವನ್ನು ಕುರಿತು ಸಾಕ್ರೆಟೀಸ್ ಹೇಳಿದ ಮಾತು ನೆನಪಿಗೆ ಬರುತ್ತದೆ: 'ಜಿಜ್ಞಾಸುವಿಗೆ ಜ್ಞಾನವೇ ಇನಿಯಳು; ಆಕೆಯನ್ನು ಪರಲೋಕದಲ್ಲಿ ಮಾತ್ರವೇ ಹೊಂದಬಹುದೆನ್ನುವುದು ಅವನ ದೃಢವಾದ ನಂಬಿಕೆ. ಹೀಗಿರುವಾಗ ಅವನು ಸಾವು ಬಂದರೆ ಆ ಲೋಕವನ್ನು ಬೇಗ ಸೇರಬಹುದೆಂದು ಸಂತೋಷದಿಂದ

ಹೊರಡದೆ ದುಃಖಪಡುವುದುಂಟೆ? ಇಲ್ಲ ಸಿಮಿಯಾಸ್, ಅವನು ನಿಜವಾದ ಜಿಜ್ಞಾಸುವಾದರೆ ಎಂದಿಗೂ ಹಾಗೆ ಮಾಡುವುದಿಲ್ಲ.'*

ವೆಂಕಟನಾರಾಯಣಪ್ಪನವರು ತಮ್ಮ ಸಾವಿನ ಸಮಯದಲ್ಲಿ ಹೇಳಬಹುದಾಗಿದ್ದರೆ ಹೀಗೆಯೇ ಹೇಳುತ್ತಿದ್ದರೇನೋ. ಇದೇ ಸಮಾಧಾನ ಕೊಡುತ್ತಿದ್ದರೇನೋ.

ಆದರೆ ಅವರ ನಷ್ಟದ ನೋವನ್ನು ಕನ್ನಡದ ಜನ ಬಹುಕಾಲ ಮರೆಯಲಾರರು.†

---

* ಎ. ಎನ್. ಮೂರ್ತಿರಾವ್, 'ಸಾಕ್ರೆಟೀಸನ ಕೊನೆಯ ದಿನಗಳು.' ಮೈಸೂರು ವಿಶ್ವವಿದ್ಯಾನಿಲಯ.

† ೧೯೪೩.

# ಕನ್ನಡಕ್ಕೊಬ್ಬನೇ ಕೈಲಾಸಂ



ಭಾನುವಾರ ಬೆಳಗ್ಗೆ ಬೀದಿ ಬೀದಿ ಅಲೆದು ಮನೆಕಡೆ ಬರುತ್ತಾ ಇದ್ದೆ. ದಾರಿಯಲ್ಲಿ ಯಾರೋ ಹೇಳಿದರು : 'ಕೈಲಾಸಂ ಕಾಲವಾದರು.'

ನಂಬಲಿಲ್ಲ ನಾನು. ಯಾರು ನಂಬಿಯಾರು ?

ಹತ್ತು ನಿಮಿಷದಲ್ಲೇ ಜಯಕಾರ ಕೇಳಿಬಂತು. ಕೈಲಾಸಂ ಅಂತ್ಯಯಾತ್ರೆ.

ಕ್ಷೌರವಿಲ್ಲದ ಅದೇ ಮುಖ. ಅದೇ ಕೆದುರಿದ ಕೂದಲು. ಆದರೆ ದೇಹ ಕೃಶವಾಗಿತ್ತು. ನಗೆ ಓಡಿತ್ತು. ನನ್ನ ಕಣ್ಣನ್ನೆ ನಂಬಲಿಲ್ಲ ನಾನು.

ಜಗದ್ದಾರ್ಶನಿಕ ಕೈಲಾಸಂ. ಚಿರತಾರುಣ್ಯಜೀವಿ ಕೈಲಾಸಂ. ಹಾಸ್ಯ ಮೂರ್ತಿ ಕೈಲಾಸಂ. ಆದರೆ ಆ ನಗೆ ಹೋಯಿತೆಲ್ಲಿ ? ನನಗೆ ನಂಬಲೇ ಆಗಲಿಲ್ಲ.

ಅದು ಮನಸ್ಸಿನ ಒಂದು ವಿಚಿತ್ರ ಸ್ಥಿತಿ. ನಗೆಯಿಲ್ಲ. ಅಳುವಿಲ್ಲ. ಆಶ್ಚರ್ಯ ವಿಲ್ಲ. ಉದ್ವೇಗವಿಲ್ಲ. ಶೂನ್ಯ ಸ್ಥಿತಿ. ಮನೋವ್ಯಾಪಾರವೇ ಉಡುಗಿ ಹೋಗಿತ್ತು.

ಮರುಗಳಿಗೆಯೇ ಒಂದು ಭಯಂಕರ ಭವಿಷ್ಯ ಕಣ್ಣ ಮುಂದೆ ಬಂತು. ಕಣ್ಣೀರನ್ನೊರಿಸಿಕೊಂಡು ನಗಲು ಕಲಿಸಿದವರು ಕೈಲಾಸಂ. ಆ ನಗೆಯೇ ದುಃಖ ವನ್ನು ಹಗುರ ಮಾಡುವ ಸಂಜೀವಿನಿ. ದುಃಖದ ಸರಳರೂಪ.

ಅಳುವ ಮಗು ಸಂತೃಪ್ತಿ ಹೊಂದಿ ಕಣ್ಣೀರು ಆರುವ ಮೊದಲೇ ನಕ್ಕರೆ ಕಾಣುವ ನೋಟ ನೆನಪಿಗೆ ಬಂತು. ಎಂಥ ಜಾದುಗಾರ ಕೈಲಾಸಂ! ಅವರಿಲ್ಲದೆ ನಾಡಿಗೆ ಮುಂದೆ ಏನು ಗತಿ ? ಮೈ ನಡುಗಿತು.

ಆಗ ಕೈಲಾಸಂದೇ ಇನ್ನೊಂದು ಮಾತು ನೆನಪಿಗೆ ಬಂತು : 'ಇಬ್ಸನ್‌ದು ಇನಿಮಾತು. ಗಾಲ್ಸ್‌ವರ್ದೀದು ಗೆಳೆಮಾತು. ಷಾನದು ಸುಡೋ ಮಾತು. ಕೈಲಾಸಂದು ಕೊಡಲಿ ಪೆಟ್ಟು.'

ಅಹುದು! ಕೊಡಲೀ ಪೆಟ್ಟೇ. ಸಮಾಜದ ದುಷ್ಟ ಪದ್ಧತಿಗೆ ಅವರ ಮಾತು ಎಂಥ ಕೊಡಲಿ ಪೆಟ್ಟೋ, ಅವರ ಸಾವು ನಾಡಿಗೆ ಅಂಥ ಕೊಡಲಿ ಪೆಟ್ಟು !

* * *

ಸಾಹಿತ್ಯದಲ್ಲಿ ಅವರು ಸೃಷ್ಟಿಸಿದ ವ್ಯಕ್ತಿಗಳು ಹಲವಾರು—ಅಸಂಖ್ಯ : ಜನ ಎಷ್ಟು ತೆರನೋ ಅಷ್ಟು. ಅಬ್ಬಬ್ಬ ! ಏನು ಅವರ ದೃಷ್ಟಿಶಕ್ತಿ !

ಈ ಪಾತ್ರಗಳಲ್ಲಿ ಕೈಲಾಸಂ ಯಾರ ಹಾಗೆ ?

ಅಹುದು, ಯಾರ ಹಾಗೆ ?....ಯಾರ ಹಾಗೆ ?....ಮನಸ್ಸು ಆಲೋಚಿಸಿತು.

ಸಾತು, ಪಾತು, ನಾಗತ್ತೆ, ಅಹೋಬ್ಳು, ನರಸಿಂಹಯ್ಯ, ಕಿಟ್ಟಿ, ಮಾಧು, ಬೋರ, ಏಕಲವ್ಯ, ಕರ್ಣ—ಯಾರ ಹಾಗೆ ಕೈಲಾಸಂ ?

ಇವರಲ್ಲೆಲ್ಲ ಇರಬಲ್ಲ ಕೈಲಾಸಂ, ಇವರ ನೋವು-ಕಾವು-ಆಸೆ-ದ್ವೇಷ ದುಗುಡ-ಕನಿಕರ ಇವನ್ನೆಲ್ಲಾ ಕಾಣಬಲ್ಲ, ಅನುಭವಿಸಬಲ್ಲ ಕೈಲಾಸಂ ಇವರಲ್ಲಿ ಯಾರ ಹಾಗೆ ?

ಕವಿ ದೇವರ ಹಾಗೆ—ಎಂದು ಯಾರೋ ಹೇಳಿದ ಮಾತು ನೆನಪಿಗೆ ಬಂತು. ದೇವರು ಜಗತ್ತಿನಲ್ಲಿ ಎಲ್ಲವನ್ನೂ ಸೃಷ್ಟಿಸಿದ. ಆದರೆ ಅವುಗಳಲ್ಲಿ ಯಾವ ಒಂದೂ ಅವನ ನಿಜಸ್ವರೂಪವಲ್ಲ. ಅವುಗಳಲ್ಲೆಲ್ಲಾ ಅವನಿದಾನೆ. ಆದರೂ ಅವುಗಳಲ್ಲಿಲ್ಲ. ಹಾಲಿನ ನೊರೆಗೂ ಹಾಲಿಗೂ ಇರುವ ಸಂಬಂಧದ ಹಾಗೆ, ಅಲೆಗೂ ಸಮುದ್ರಕ್ಕೂ ಇರುವ ಸಂಬಂಧದಂತೆ ಅವನಿಗೂ ಲೋಕಕ್ಕೂ ಇರುವ ಸಂಬಂಧ.

ಹಾಗೆಯೇ ಕಲಾವಿದನೂ. ಎಲ್ಲ ಪಾತ್ರಗಳೂ ಅವನ ಮನಸ್ಸಿನ ಕೂಸು. ಆದರೂ ಅವಕ್ಕೆಲ್ಲ ಅವನು ಅತೀತ. ಅವುಗಳಿಂದ ಪ್ರತ್ಯೇಕ. ಕವಿ, ಕಲಾವಿದ, ನವಜಗದ ಸೃಷ್ಟಿಕರ್ತ

* * *

ಆಗ ಗುಂಪಿನಿಂದ ಕೇಳಬಂತು. : 'ಕನ್ನಡಕ್ಕೊಬ್ಬನೇ ಕೈಲಾಸಂ!' ಕೇಳಿ ಮೈ 'ಜುಂ' ಎಂದಿತು.

ಮರುಗಳಿಗೆಯೇ ಅವರ ಜೀವನ ನನ್ನ ಮುಂದೆ ಹಾದು ಹೋಯಿತು. ಅವರ ನಗೆ ನುಡಿ, ಅವರ ಕಿಡಿನುಡಿ, ಅವರ ನಂಜುನುಡಿ, ಅವರ ಕೊಂಕು ನುಡಿ, ಅವರ ಆವೇಶದ ನುಡಿ, ನನ್ನ ಕಿವಿಯಲ್ಲಿ ಮೊಳಗಿದುವು. ಆದರೆ ಈಗೆಲ್ಲಿ ಹೋಯಿತು, ಆ ನಗೆ, ಆ ಲಾವಣ್ಯ? ಇದೇನೀ ಮ್ಲಾನವದನ?

ಕೈಲಾಸಂ ಬೊಂಬಾಯಿಯಿಂದ ಬಂದು ಕೆಲವು ದಿನ ಆಗಿದ್ದವು. ಬೊಂಬಾಯಿಯಲ್ಲಿ ಅವರ ಕೊಠಡಿಯ ಎದುರಿಗೇ ಒಬ್ಬ ಹೆಂಗಿಸಿನ ಕೊಲೆಯಾಯಿತಂತೆ. ಮತೀಯ ಕಲಹದ ಪರಿಣಾಮ. ಆ ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಕಂಡು ಅವರ ಮನಸ್ಸು ಅಲುಗಿತು. ಬಳಿಯಲ್ಲೇ ಇದ್ದೂ ತಾವು ಏನೂ ಮಾಡಲಾಗಲಿಲ್ಲವಲ್ಲ ಎಂದು ಕಣ್ಣೀರಿಟ್ಟರಂತೆ. ಈ ಸೋದರ ಕೊಲೆ ಅವರ ಹೃದಯ ಹಿಂಡಿತು. ಅಂದಿನಿಂದ ಅವರ ನಗೆ ಮಾಸಿತು. ಎಂದಿನ ಕೈಲಾಸಂ ಎಂದು ಮಾತಾಡಿಸ ಬಂದವರಿಗೆ ಮೌನವೇ ಉತ್ತರ. ಇತರರಿಗೆ ದಿಗ್ಭ್ರಮೆಯಾಯಿತು. ಕೈಲಾಸಂಗೆ ಗೊತ್ತಿತ್ತೇನೋ—ತಮ್ಮ ಪ್ರಯಾಣಕ್ಕೆ ಸಿದ್ಧವಾಗಬೇಕು ಎಂದು.

ಎಂಥ ಧೀ ಶಕ್ತಿ! ಎಂಥ ಕವಿ ಹೃದಯ! ಎಂಥ ಲೋಕ ಸಂಗ್ರಹ! ಇವರನ್ನು ಪಡೆದ ಕನ್ನಡನಾಡು ಧನ್ಯ. ಹೀಗೆಂದು ಎಲ್ಲರೂ ಗಳಪುವರು. ಆದರೆ ಜನಕ್ಕೆ ತಿಳಿಯುವ ಮನಸ್ಸಿಲ್ಲ. ಬೇರೆಲ್ಲಾದರೂ ಇಂಥ ವ್ಯಕ್ತಿ ಇದ್ದಿದ್ದರೆ ಜನ ಎಷ್ಟು ಹೆಮ್ಮೆಪಡುತ್ತಿದ್ದರು! ಏನು ಮಾಡುತ್ತಿದ್ದರು!

ಅವರು ಸಾಯುವುದಕ್ಕೆ ಹಿಂದಿನ ವರ್ಷ ಬೆಂಗಳೂರಿನಲ್ಲಿ ಅವರ ಜಯಂತಿ ಆದಾಗ ಕೈಲಾಸಂ ಬಂದಿದ್ದರು. ಕೊನೆಗೆ ಅವರು ಒಂದು ಮಾತಾಡಿದರು : 'ನಾ ಸಾಯಬಹುದು. ಆದರೆ ಅರಳುವ ಹೂವಿನಲ್ಲಿ, ಮಗುವಿನ ನಗೆಯಲ್ಲಿ ನಾನಿರುತ್ತೇನೆ. ಹಾಗಾದರೆ ನಾನು ಧನ್ಯ.'

ಡಿ. ವಿ. ಜಿ. ಹೇಳಿದ ಒಂದು ಮಾತು ಸಾಕು : 'ಹಾಸ್ಯದ ಪರದೆಯಲ್ಲಿ ಪರಮಾರ್ಥ ಅಡಗಿಸಿಟ್ಟಿದ್ದ ಯಾದಿಚ್ಛಿಕ ಬೈರಾಗಿ ಕೈಲಾಸಂ.' ಒಂದು ವಾಕ್ಯದಲ್ಲಿ ಇದು ಅವರ ಜೀವನ ಕಥೆ.*

* ೧೯೪೬.



# ಕತೆಗಾರ ಆನಂದ

ಸುಮಾರು ಐದೂಮುಕ್ಕಾಲು ಅಡಿ ಎತ್ತರ. ಆ ನಿಲವಿಗೆ ತಕ್ಕ ಗಾತ್ರ. ಕೊಳವೆಯ ಷರಾಯಿ. ವಿಚಿತ್ರವಾದ ಬುಷ್‌ಕೋಟು. ಅದರ ಮುಂಬದಿಯಲ್ಲಿ ಮೇಲೆರೆಡು ಕೆಳಗೆರೆಡು ದೊಡ್ಡ ಜೇಬು. ಅವಕ್ಕೆ ಮುಚ್ಚಳ. ಜೇಬುಗಳ ತುಂಬಾ ಕಾಗದವೇ ಮುಂತಾದ ಸರಕು. ಕೊರಳಿಗೆ ಬಿಗಿದ ತೆಳುವಸ್ತ್ರ. ತಲೆಯ ಮೇಲೆ ದಪ್ಪ ಟೋಪಿ. ಕೈಯಲೊಂದು ತುಂಡು ದೊಣ್ಣೆ. ಈ ವಿಚಿತ್ರ ವೇಷದ ವ್ಯಕ್ತಿ ಮೈಸೂರಿನ ಸಾಹಿತ್ಯ ಪ್ರಿಯರಿಗೆ ಚಿರಪರಿಚಿತ. ಈ ವ್ಯಕ್ತಿಯೇ ಹೆಸರಾಂತ ಕತೆಗಾರ 'ಆನಂದ.'

ಆನಂದರ ವ್ಯವಹಾರನಾಮ,ಅಜ್ಜಂಪುರದ ಸೀತಾರಾಮ್ ಎಂದು. ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಆನವಟ್ಟಿಯಲ್ಲಿ—೧೯೦೨ರಲ್ಲಿ. ಇವರ ಹಿರಿಯರ ಊರು ಅಜ್ಜಂಪುರ. ಇವರು ಮಲೆನಾಡಿನ ಶಿಶು. ಅಲ್ಲಿನ ಜನರಂತೆಯೇ ಇವರು ಮೊದಲ ನೋಟಕ್ಕೂ ಮಾತಿಗೂ ಒರಟು. ಆದರೆ ಮನಸ್ಸು ಮೃದು. ಬೆಣ್ಣೆಯಲ್ಲಿ ಕೂದಲು ತೆಗೆಯುವ ನಡೆನುಡಿ ಇವರಿಗೆ ಹಿಡಿಸದು. ಪಂಪನ ನಾಡಾದ ಬನವಾಸಿಯ ಪ್ರಾಂತಕ್ಕೆ ಸೇರಿದವರು ಇವರು. ಇಲ್ಲಿಯ ಜನ ತ್ಯಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯ ಅಲಂಪಿನ ಇಂಪುಗಳಿಗೆ ಆಗರವಾದವರಂತೆ. ಹೀಗೆ ಇಲ್ಲಿ ಮನುಷ್ಯರಾಗಿ ಹುಟ್ಟಲೂ ಪುಣ್ಯ ಬೇಕು. ಅದಾಗದಿದ್ದರೆ

ಈ ನಂದನದಲ್ಲಿ ಮರಿದುಂಬಿಯಾಗಿಯಾದರೂ ಕೋಗಿಲೆಯಾಗಿಯಾದರೂ ಹುಟ್ಟಿದರೆ ಸಾಕು. ಹೀಗೆಂದು ಈ ನಾಡನ್ನು ಹೊಗಳಿದ್ದಾನೆ ಪಂಪ. ಆಗ ಹಾಗಿತ್ತು ಈ ನಾಡು—ಪಂಪನ ದೃಷ್ಟಿಯಲ್ಲಿ.

ಎಳೆಯ ಹುಡುಗ ಸೀತಾರಾಂ ಈ ಸುತ್ತಿನಲ್ಲೆಲ್ಲ ತಿರುಗಾಡಿರಬೇಕು. ಮಲೆನಾಡಿನ ಸೌಂದರ್ಯವನ್ನು ದೇಹದ ಕಣಕಣದಲ್ಲೂ ಹೀರಿಕೊಂಡಿರಬೇಕು. ಚಿಕ್ಕಂದಿನಲ್ಲಿ ಒಳ್ಳೆಯ ಶಿಕ್ಷಣವನ್ನೂ ಪಡೆದರು ಇವರು. ತಂದೆ ಶಿವಮೊಗ್ಗೆಯಲ್ಲಿ ಲಾಯರು. ಮಾಧ್ಯಮಿಕ ಹಾಗೂ ಪ್ರೌಢಶಾಲೆಯ ವ್ಯಾಸಂಗ ಶಿವಮೊಗ್ಗೆಯಲ್ಲಿ. ಈ ವಯಸ್ಸಿನಲ್ಲೇ ಇವರಲ್ಲಿ ಸಾಹಿತ್ಯಾಭಿರುಚಿಯೂ ಬೆಳೆಯಿತು. ಇವರ ಗುರುಗಳು ಯಾರು ಗೊತ್ತೆ? 'ಭಕ್ತಿ ಭಂಡಾರಿ ಬಸವಣ್ಣ'ನವರನ್ನೂ, 'ವಚನಧರ್ಮಸಾರ' ವನ್ನೂ, 'ನಾಗರಿಕ'ನನ್ನೂ ಕನ್ನಡಕ್ಕೆ ನೀಡಿದ ಪ್ರಸಿದ್ಧ ಲೇಖಕರೂ ಸಹೃದಯರೂ ಆದ ದಿವಂಗತ ಎಂ. ಆರ್. ಶ್ರೀನಿವಾಸಮೂರ್ತಿ. ಕಾಳಿದಾಸನ 'ಮೇಘಸಂದೇಶ' ವನ್ನು ಕನ್ನಡದ ಜನಕ್ಕೆ ಮುಟ್ಟಿಸಿದ ಉದ್ದಾಮ ಪಂಡಿತರೂ ರಸಿಕರೂ ಆದ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ. ಇದೇನು ಕಡಿಮೆಯ ಅದೃಷ್ಟವೇ?

ಮುಂದೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಯನ. ಆರಿಸಿಕೊಂಡ ವಿಷಯ—ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ. ವಿಜ್ಞಾನ ಪದವಿ. ವಿದ್ಯೆಯ ಹಂತವನ್ನು ಏರುವ ಬಹುಪಾಲು ವಿದ್ಯಾರ್ಥಿಗಳು ಅರಸುವ ಗುರಿ ಹೆಚ್ಚು-ಕಡಿಮೆ ಇದೇ ತಾನೆ?

ಹೀಗೆ ಈ ಕಾಲಕ್ಕೆ ತೀರ ಸಾಮಾನ್ಯವೆನಿಸಬಹುದಾದ ಇವರ ಜೀವನ ಆಗ ಇನ್ನೊಂದು ದೊಡ್ಡ ಪ್ರಭಾವಕ್ಕೆ ಒಳಗಾಗಿತ್ತು. ಅದು ಸಾಹಿತ್ಯ. ಶ್ರೀನಿವಾಸ ಮೂರ್ತಿಗಳೂ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳೂ ಎರಚಿದ ಬೀಜ ಬರಡು ನೆಲದ ಮೇಲೆ ಬಿದ್ದಿರಲಿಲ್ಲ.

ಸೀತಾರಾಂ ಅವರು ಸೆಂಟ್ರಲ್ ಕಾಲೇಜು ಸೇರಿದಾಗ ಅಲ್ಲಿ ಕನ್ನಡದ ತೊಟ್ಟಿಲು ತೂಗಿತ್ತು. ಅಲ್ಲಿನ ಕರ್ನಾಟಕ ಸಂಘ ಉತ್ಕೃಷ್ಟವಾದ ಕೆಲಸ ಮಾಡತೊಡಗಿತ್ತು. 'ಪ್ರಬುದ್ಧ ಕರ್ಣಾಟಕ' ಪತ್ರಿಕೆ ಹಿರಿಕಿರಿಯ ಸಾಹಿತಿಗಳನ್ನು ಒಂದೆಡೆ ಸೇರಿಸಿತ್ತು. ಹಲವು ಹಚ್ಚ ಹೊಸ ಬರಹಗಾರರಿಗೆ ತಮ್ಮ ಶಕ್ತಿಯನ್ನು ಅರಿತು ಬೆಳಸಿಕೊಳ್ಳಲು ಅಲ್ಲಿ ಎಡೆ ದೊರಕಿತ್ತು. ಈ ಎಲ್ಲಾ ಕೆಲಸದ ಹಿಂದೆ ಇದ್ದ ಸ್ಫೂರ್ತಿಯೆಂದರೆ ಆಗ ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದ ತುಳುಕಿನ

ವೆಂಕಣ್ಣಯ್ಯನವರು. ಸೀತಾರಾಮರಲ್ಲಿ ಅಂಕುರಿಸಿದ್ದ ಸಾಹಿತ್ಯ ಪ್ರೀತಿಗೆ ಪ್ರೋತ್ಸಾಹ ನೀಡಿದವರು ಅವರು. ಸೀತಾರಾಂ ಬಹುಶಃ ತಮಗೆ ಅರಿವಿಲ್ಲದೆಯೇ ಬಹು ದೊಡ್ಡ ಪ್ರಭಾವಕ್ಕೆ ಒಳಗಾಗಿದ್ದರು.

ಸೀತಾರಾಂ 'ಆನಂದ'ರಾದರು. ಕ್ರಿಕೆಟ್ ಮೈದಾನದಲ್ಲಿ ದಾಂಡು ಬೀಸುತ್ತಿದ್ದ ಅವರ ಕೈ ಲೇಖನಿಯನ್ನೂ ಹಿಡಿಯಿತು, ಬಣ್ಣದ ಕುಂಚವನ್ನೂ ಆಡಿಸಿತು. ಕತೆಗಾರ ಆನಂದರ ಉದಯವಾಯಿತು.

ಆನಂದರು ಬರೆದ ಮೊದಲ ಕತೆ 'ಭವತಿ ಭಿಕ್ಷಾಂದೇಹಿ.' ಇದು ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದಾಗ (೧೯೨೨) ಇದನ್ನು ಓದಿದವರು ಆನಂದರ ಕತೆಗಾರಿಕೆಯನ್ನು–ಕಲೆಗಾರಿಕೆಯನ್ನು–ಬಹುವಾಗಿ ಮೆಚ್ಚಿಕೊಂಡರು. ಆನಂದರು ಈ ಕತೆಯನ್ನು ಬರೆದು, ಇದನ್ನು ಪ್ರಕಟಿಸುವ ಧೈರ್ಯವಿಲ್ಲದೆ ಹಿಂಜರಿಯುತ್ತಿದ್ದುದನ್ನು ಇವರ ಗೆಳೆಯರೊಬ್ಬರಿಂದ ತಿಳಿದ ವೆಂಕಣ್ಣಯ್ಯನವರು ಇವರನ್ನು ಕರೆಸಿಕೊಂಡು, ಕಥೆಯನ್ನು ಓದಿ, ಇದನ್ನು 'ಪ್ರಬುದ್ಧ ಕರ್ಣಾಟಕ'ದಲ್ಲಿ ಅಚ್ಚು ಮಾಡಿಸಿದರಂತೆ. ಇವನ್ನು ಆನಂದರು ಯಾವಾಗಲೂ ಸ್ಮರಿಸಿಕೊಳ್ಳುತ್ತಿದ್ದರು.

ಅಲ್ಲಿಂದ ಆರಂಭವಾಯಿತು ಆನಂದರ ಸಣ್ಣ ಕತೆಗಳ ನಿರ್ಮಾಣಕಾರ್ಯ. ಮುಂದೆ ಅವರು ಹಲವು ಒಳ್ಳೆಯ ಕತೆಗಳನ್ನು ಬರೆದರು. ಒಂದಾದ ಮೇಲೊಂದರಂತೆ ಅವರ ಕಥಾಸಂಕಲನಗಳು ಪ್ರಕಟವಾದುವು. ಮೂವತ್ತಕ್ಕೂ ಹೆಚ್ಚು ಕತೆಗಳು ಅವರ ಹೆಸರಿನಡಿಯಲ್ಲಿ ಬೆಳಕು ಕಂಡವು.

ಇವರನ್ನು ಬೆಳಕಿಗೆ ತಂದ ಕೀರ್ತಿ ವೆಂಕಣ್ಣಯ್ಯನವರಿಗೆ ಸಲ್ಲುವುದಾದರೆ, ಇವರ ಕಥಾಲೇಖನಕ್ಕೆ ಆದರ್ಶವಾಗಿ ನಿಂತವರು ಸಣ್ಣ ಕತೆಗಳ ಶ್ರೀನಿವಾಸರು. ಅವರು ಪ್ರಾರಂಭಿಸಿದ ಕನ್ನಡ ಸಣ್ಣ ಕತೆಯ ಪರಂಪರೆಯ ಹಲವು ಕವಲುಗಳಲ್ಲಿ ಒಂದರ ಜಾಡನ್ನು ಹಿಡಿದು ನಡೆದವರು ಇವರು. ಆ ಪರಂಪರೆಯಲ್ಲಿ ಬೆಳೆದ ಹೆಸರಾಂತ ಕತೆಗಾರರಲ್ಲಿ ಮೊದಲ ಹೆಸರು ಆನಂದರದು.

ಪ್ರಥಮ ಹಾಗೂ ದ್ವಿತೀಯ ಮಹಾಯುದ್ಧಗಳ ನಡುವಣ ಕಾಲದ ಭಾರತದ ಮಧ್ಯಮ ವರ್ಗದ ಸಂಸಾರದ ನೈಜ ಚಿತ್ರವನ್ನು ನಾವು ಆನಂದರ ಕತೆಗಳಲ್ಲಿ ಕಾಣಬಹುದು. ಇವರ 'ಭವತಿ ಭಿಕ್ಷಾಂದೇಹಿ' ಎಂಬ ಕತೆ ಇವರ ಆಗಿನ ಜೀವನ ದೃಷ್ಟಿ ಎಂಥದೆಂಬುದನ್ನು ತೋರಿಸುತ್ತದೆ. ಭಿಕ್ಷಾನ್ನದ ಹುಡುಗನೊಬ್ಬನ ದುಃಖ ಜೀವನದ ಚಿತ್ರ ಇದು. ಇದು ತುಂಬಾ ಸಹಜ ಎಂದು ಯಾರಿಗಾದರೂ

ಎನಿಸೀತು. ಆದರೆ ಇಂಥ ಹುಡುಗರಿಗೆಲ್ಲಾ ಶ್ರೀನಿವಾಸರಾಯರಂಥ ಕರುಣಾಳು ಗಳು ಸಿಕ್ಕಿಯಾರೆ ? ಇದು ಸಹಜ ಪರಿಹಾರವೆ ? ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಡಿಕನ್ಸನ ಆಲಿವರ್ ಟ್ವಿಸ್ಟನಿಗೆ ಆದ ಹಾಗೆ ಒಂದು ರೀತಿಯಲ್ಲಿ ಇಲ್ಲಿಯೂ ಆಗುತ್ತದೆ. ಕತೆಯ ಮುಗಿತಾಯ ಕೃತಕವೆಂದು ಹೇಳುವವರ ವಾದವನ್ನು ತಳ್ಳಿ ಹಾಕುವುದು ಸಾಧ್ಯವಿಲ್ಲ. ಆದರೆ ಕತೆಗಾರ ಆನಂದರ ಜೀವನದೃಷ್ಟಿ, ಅವರ ಅನುಕಂಪ, ಜೀವನವನ್ನು ಆಳವಾಗಿ ನೋಡುವ ಹವ್ಯಾಸ, ಒಂದು ಘಟನೆ ಯನ್ನು ಎತ್ತಿಕೊಂಡು ಅದನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವ ಕೈ ಚಳಕ, ವಿವಿಧ ವರ್ಣಗಳ ಎರಚಾಟ—ಇವನ್ನೆಲ್ಲ ಅವರ ಈ ಮೊದಲ ಕತೆಯಲ್ಲೇ ಕಾಣಬಹುದು. 'ಭವತಿ ಭಿಕ್ಷಾಂದೇಹಿ'ಯ ರೀತಿಯವೇ ಆದ ಇನ್ನೂ ಕೆಲವು ಕತೆಗಳನ್ನು ಇವರು ಅನಂತರವೂ ಬರೆದರು. ಇವುಗಳಲ್ಲಿ 'ಬೇವು-ಬೆಲ್ಲ,' 'ಕೊನೇ ಎಂಟಾಣೆ' ಇವು ಬಹು ಯಶಸ್ವಿಯಾಗಿವೆ. ನಿರ್ಮಲ ಸ್ನೇಹದ ಹಿನ್ನೆಲೆಯ ಮೇಲೆ ಬರೆದ ಕರುಣೆಯ ಚಿತ್ರ 'ಬೇವು-ಬೆಲ್ಲ'ವಾದರೆ, ನಿರು ದ್ಯೋಗಿಯ ದಾರುಣ ಚಿತ್ರ 'ಕೊನೇ ಎಂಟಾಣೆ' ಯಲ್ಲಿದೆ. ವ್ಯಕ್ತಿಯ ಆಕಾಂಕ್ಷೆಗಳು ಮುಗಿಲೆತ್ತರಕ್ಕೆ ನಿಂತರೆ ತಾನೇ ಏನು ? ಅವನ ಮನಸ್ಸು ವಿಶ್ವದ ಉದ್ದಕ್ಕೂ ಅಗಲಕ್ಕೂ ಬೆಳೆದರೆ ತಾನೇ ಏನು ? ಬಡತನವೆಂಬ ತಿರುಪು ಮೊಳೆ ನಿರ್ದ ಯತೆಯಿಂದ ಬೆನ್ನ ಮೇಲೆ ತಿರುಗುವಾಗ ಈ ಎಲ್ಲವೂ ನುಚ್ಚುನುರಿಯಾಗುತ್ತವೆ— ಎಂಬುದು ಈ ಕತೆಗಳಲ್ಲಿ ಉದ್ದಕ್ಕೂ ವ್ಯಕ್ತವಾಗುತ್ತದೆ.

ಇವೆಲ್ಲವೂ ಓದಲು ಚೆನ್ನಾದ ಕತೆಗಳೇ. ಆದರೆ, ಆನಂದರ ಕುಸುರಿಗೈ ಪ್ರಕಟವಾದುದ್ದು ಅವರ ಪ್ರಣಯ ಕತೆಗಳಲ್ಲಿ. 'ಹೆಂಡತಿಯ ಕಾಗದ,' 'ನಾವೂ ಹಾಗೆಯೇ,' 'ಪದ್ಮಪಾಕ,' 'ರಾಧೆಯ ಕ್ಷಮೆ'—ಇವು ತುಂಬಾ ಯಶಸ್ವಿಯಾದ ಪ್ರಣಯಕತೆಗಳು. 'ಬೇವು-ಬೆಲ್ಲ'ದಲ್ಲಿ ಬಡತನದ ಹಿನ್ನೆಲೆಯಲ್ಲಿ ಗೆಳೆತನದ ಚಿತ್ರ ವಿರುವಂತೆ, 'ನಾವೂ ಹಾಗೆಯೇ' ಎಂಬ ಕತೆಯಲ್ಲಿ ಪ್ರಣಯದ ಹಿನ್ನೆಲೆಯಲ್ಲಿ ಸ್ನೇಹದ ಹಾರ್ದಿಕ ಚಿತ್ರವಿದೆ. 1927 ರಲ್ಲಿ ಈ ಕತೆಗೆ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಮುದ್ದಣ ಕವಿಯ ಸುವರ್ಣ ಪದಕದ ಸನ್ಮಾನ ಲಭಿಸಿತು. 'ಹೆಂಡತಿಯ ಕಾಗದ'ದ ಕಥನಶೈಲಿ, ತಂತ್ರ, ವಸ್ತು, ಎಲ್ಲವೂ ಆನಂದರ ಅದ್ಭುತ ಶಕ್ತಿಗೆ ಸಾಕ್ಷಿಗಳಾಗಿವೆ. ಉದ್ದನೆಯ ಕಾಗದ ಬರೆಯಬೇಕೆಂದು ಹೊಸದಾಗಿ ಮದುವೆ ಯಾದ ಗುಡು ತನ್ನ ನಲ್ಲೆಗೆ ನೀಡಿದ 'ಆದೇಶ'ಕ್ಕೆ ಉತ್ತರವಾಗಿ ಅವಳು ಒಂದು

ದಪ್ಪ ಲಕ್ಕೋಟೆಯನ್ನೇ ಕಳಿಸಿದ್ದಳು. ಅದನ್ನು ಒಡೆದು ನೋಡಲು ಅವಕಾಶ ವಾಗಲಿಲ್ಲ ಗಂಡಸಿಗೆ—ಅಂದು ರಾತ್ರಿಯ ವರೆಗೂ—ಅವನ ಗೆಳೆಯರ ದೆಸೆಯಿಂದ. ರಾತ್ರಿಗೆ ಅವನು ಅದನ್ನು ಒಡೆದು ನೋಡಿದಾಗ ಅವನಿಗೆ ದೊರೆತ ಅನುಭವ ಎಂಥದೆಂಬುದನ್ನು ಈ ಕತೆಯನ್ನು ಓದಿಯೇ ತಿಳಿಯಬೇಕು! ಲಲಿತ ಶೈಲಿ, ತಡೆಯಿಲ್ಲದ ಓಟ, ಕೊನೆತನಕ ಕುತೂಹಲ, ಸ್ವಾರಸ್ಯವಾದ ಮುಗಿತಾಯ. ಓ ಹೆನ್ರಿಯ ಸಿದ್ಧಿಯನ್ನು ಕಾಣಬಹುದು ಈ ಕತೆಯಲ್ಲಿ. ಆನಂದರ ಕತೆಗಾರಿಕೆಯ ಪರಿಪಕ್ವತೆಯನ್ನು ಅರಿಯಲು ಈ ಒಂದು ಕತೆ ಸಾಕು.

ಆನಂದರ ಪ್ರಸಿದ್ಧಿ ತುಂಬಾ ಹರಡಿದ್ದು ಅವರ 'ನಾನು ಕೊಂದ ಹುಡುಗಿ' ಪ್ರಕಟವಾದಾಗ. ದೇವರಿಗೆ ಹರಕೆ ಸಲ್ಲಿಸುವ ಸಲುವಾಗಿ ಹೆಣ್ಣು ಮಕ್ಕಳನ್ನು 'ಬಸವಿ' ಬಿಡುವ ಒಂದು ಹಳೆಯ ಪದ್ಧತಿಯ ಸುತ್ತಲೂ ಹಬ್ಬಿರುವ ಈ ಕತೆ, ಮಾನವ ಹೃದಯದ ಹಲವು ತಂತಿಗಳನ್ನು ಮೀಂಟುತ್ತದೆ. ಇಲ್ಲಿ ಪ್ರಣಯ ಉಂಟು. ಹಳ್ಳಿಯ ಚೆಲುವಿನ ಬಣ್ಣನೆಯುಂಟು. ಮೂಢನಂಬಿಕೆಯ ಚಿತ್ರಣ ವುಂಟು. ಇವನ್ನೇ ನಂಬಿ ಬಾಳಿದ ಜೀವಕ್ಕೆ ಈ ಆಸರೆ ತಪ್ಪಿದಾಗ ಆಗುವ ದುರಂತದ ಭೀಕರ ಅನುಭವವುಂಟು. ಕತೆಗಾರ ಆನಂದರು ಚಿತ್ರಗಾರರೂ ಹೌದು, ಎಂಬುದಕ್ಕೆ ಈ ಕಥೆ ಸಾಕ್ಷಿ. ಏನು ವರ್ಣವಿನ್ಯಾಸ! ಏನು ಮಾತಿನ ಬೆಡಗು! ಏನು ವಾತಾವರಣ ಸೃಷ್ಟಿ! ಜಂಜಡದ ದಿನಚರಿಯಲ್ಲಿ ಮುಳುಗಿಹೋದ ವಾಚಕ ನನ್ನು ಇನ್ನೊಂದು ಜಗತ್ತಿಗೆ—ವರ್ಣಮಯ ವೇದನಾಮಯ ಸಂಪ್ರದಾಯ ಬದ್ಧ ಜಗತ್ತಿಗೆ—ಕರೆದೊಯ್ದು ಅವನ ಅಂತಃಕರಣವನ್ನು ಸೂರೆಗೊಳ್ಳುತ್ತಾರೆ ಆನಂದರು ಈ ಕತೆಯಲ್ಲಿ! ಈ ಕತೆಯ ಚೆನ್ನಿ ಓದುಗನ ಮನೋಲೋಕದಲ್ಲಿ ಅಚ್ಚಳಿಯದೆ ಉಳಿಯುತ್ತಾಳೆ.

ಚೆನ್ನಿಯದು ಒಂದು ಬಗೆಯ ಮುಗ್ಧತೆಯಾದರೆ 'ಜೊಚ್ಚಲು ಸಂಭ್ರಮ'ದ ಗಂಗಮ್ಮನದು ಇನ್ನೊಂದು ಬಗೆಯದು. ತಾಯ್ತನವನ್ನು ಬಯಸಿ ಪಡೆದ ಹೆಣ್ಣಿನ ದಾರುಣ ಕತೆ ಇದು. ಮನಸ್ಸಿನಲ್ಲಿ ಗಾಬರಿ ಹುಟ್ಟಿಸಿ ಕೊನೆಗೆ ತಿಳಿನಗೆಯಲ್ಲಿ ಪರ್ಯವಸಾನವಾಗುವುದು 'ಚಂದ್ರ ಗ್ರಹಣ.' ಗಂಡ ಹೆಂಡಿರ ರಸಿಕ ಜೀವನದ, ಮಧುರ ಸಂಭಾಷಣೆಯ, ಸುಂದರ ಸಂಸಾರದ ನೈಜಚಿತ್ರಗಳಾದ ಕತೆಗಳು 'ಪದ್ಮಪಾಕ', 'ರಾಧೆಯ ಕ್ಷಮೆ' ಮುಂತಾದವು. ಇವುಗಳಲ್ಲೆಲ್ಲ ಆನಂದರ ಕುಶಲ ಹಸ್ತವನ್ನು ಕಾಣಬಹುದು.

ಆನಂದರು ಕಳೆದ ತಲೆಮಾರಿಗೆ ಸೇರಿದ ಹಿರಿಯ ಕತೆಗಾರರಲ್ಲೊಬ್ಬರು. ಸಣ್ಣ ಕತೆಯ ಬೆಡಗು ಬಿಂಕಗಳನ್ನೂ, ವಿವಿಧ ಮುಖಗಳನ್ನೂ ತೋರಿಸಿದ, ಇಂದಿಗೂ ಅದ್ವಿತೀಯರಾಗಿರುವ, ಶ್ರೀನಿವಾಸರ ಹಾದಿಯಲ್ಲಿ ನಡೆದ ಮೊದಲಿಗರು ಇವರು. ಒಂದು ಕಾಲಕ್ಕೆ ಬಹು ಉತ್ತಮವಾದ ಕತೆಗಳನ್ನು ಬರೆದ ಇವರು, ಆ ಪರಂಪರೆಯಿಂದ ಮುಂದಕ್ಕೆ ಕನ್ನಡ ಸಣ್ಣ ಕತೆ ಬೆಳೆದು ನಡೆದಾಗ ಅದರೊಡನೆ ನಡೆಯಲಿಲ್ಲ. ಇಷ್ಟು ಸಾಕು—ಎನಿಸಿರಬೇಕು ಅವರಿಗೆ. ಇಂಥ ಪ್ರಣಯಕ್ಕಿಂತ ಶಾಶ್ವತವಾದುದ್ದು ಜೀವನದಲ್ಲಿ ಬೇರೆ ಏನು ಇದೆ?—ಎಂದು ಇವರಿಗೆ ತೋರಿತೋ ಏನೋ. 'ಕನ್ನಡದ ಸಣ್ಣ ಕಥೆಗಾರರಲ್ಲಿ ನಾನು ಆಗಲೇ ಹಳೇ ನೀರು—ಎಂಬ ಅರಿವು ನನಗೆ ಚೆನ್ನಾಗಿ ಇದೆ,' ಎಂದು ಅವರೇ ಒಂದು ಕಡೆ ಬರೆದುಕೊಂಡರು. The old order changeth ಎಂಬ ಮಾತನ್ನು ಅವರು ಗುರುತಿಸಿದ್ದರು. ಆದರೆ ನಾನು ಇನ್ನೂ ಜೀವಂತವಾಗಿದ್ದೇನೆ, ಒದೆಯುತ್ತಿದ್ದೇನೆ—ಎಂಬುದನ್ನು ಅವರು ಪದೇ ಪದೇ ನೆನಪು ಮಾಡಿಕೊಡುತ್ತಿದ್ದರು. ಪುರೋಗಾಮಿ ಸಾಹಿತ್ಯದತ್ತವೂ ಇವರ ಆಸಕ್ತಿ ಹರಿದಿತ್ತು. ಸಾಹಿತ್ಯಕ್ಷೇತ್ರದಲ್ಲಿ ನವ್ಯ ಪ್ರಯೋಗಗಳನ್ನು ಕುರಿತ ವಾದದ ಸುಳಿಯಲ್ಲೂ ಸಿಕ್ಕಿದ್ದರು. ಅವರ ಹರಟೆಗಳಲ್ಲಿ ('ಆನಂದ ಲಹರಿ') ಅವರ ಹಳೆಯ ಲಹರಿಯನ್ನು ಹೊಸದಾಗಿ ಕಾಣಬಹುದು. 'ದಹನಚಿತ್ರ,' 'ವೀರಯೋಧ' ಎಂಬ ಎರಡು ನಾಟಕಗಳನ್ನು ಅವರು ಅನ್ಯಭಾಷೆಯಿಂದ ದತ್ತು ತಂದರು. ಅವರ ಹಲವು ಅನುವಾದಗಳಲ್ಲಿ ಅವರ ಶೈಲಿಯ ಹಳೆಯ ಚಕಮುಕಿಯನ್ನೂ, ತಮ್ಮ ಕೃತಿಗಳಿಗೆ ನಾಮಕರಣ ಮಾಡುವ ಅವರ ಜಾಣ್ಮೆಯನ್ನೂ ಕಾಣಬಹುದು.

ಆನಂದರು ಕತೆ ಬರೆಯುವುದನ್ನು ಬಿಟ್ಟರೂ ಲೇಖನಿಯನ್ನು ಬಿಡಲಿಲ್ಲ. ವಿಜ್ಞಾನದ ಪದವಿಯನ್ನು ಪಡೆದು, ರೇಷ್ಮೆ ಇಲಾಖೆಯಲ್ಲಿ ಹತ್ತು ವರುಷ ಕೆಲಸ ಮಾಡಿ, ಸ್ವತಂತ್ರ ಉದ್ಯಮದ ಆಕರ್ಷಣೆಗೆ ಮಾರುಹೋಗಿ, ಇವರು ಆ ಕೆಲಸ ಬಿಟ್ಟರು. ಸ್ವತಂತ್ರ ಉದ್ಯಮ ಇಂಥವರಿಗೆ ಲಾಭದಾಯಕವಾದೀತೆ? ಅದನ್ನು ತೋರೆಯಬೇಕಾಯಿತು ಇವರು. ಲೇಖನವೇ ವೃತ್ತಿಯೂ ಆಯಿತು. ಸಾಹಿತ್ಯದೇವಿ ಒಳ್ಳೆಯ ಸಖಿ, ಆದರೆ ಕೆಟ್ಟ ಹೆಂಡತಿ—ಎಂಬ ಮಾತು ಇವರ ಮಟ್ಟಿಗಂತೂ ನಿಜವಾಯಿತು. ಕಥೆ ಬರೆಯುವುದು ಹೆಚ್ಚು-ಕಡಿಮೆ ನಿಂತೇ ಹೋದರೂ ಸಾಹಿತ್ಯವೇ ಅವರಿಗೆ ಹೊಟ್ಟೆ ತುಂಬಿಸಬೇಕಾಗಿ ಬಂತು. ಪ್ರತಿಯಾಗಿ ಅವರಿಗೆ ಹೆಚ್ಚು ಹಣ

ಬರಲಿಲ್ಲ. ಹಲವು ವ್ಯಾಧಿಗಳ ಆಗರವಾಯಿತು ಅವರ ದೇಹ.

ಆದರೆ ಅವರು ತಮ್ಮ ಕಷ್ಟವನ್ನೆಲ್ಲಾ ನಗೆಯಲ್ಲಿ ತೇಲಿಸಿಬಿಡುತ್ತಿದ್ದರು. ಕೆಲವು ತಿಂಗಳ ಹಿಂದೆ ಒಮ್ಮೆ ಅವರೊಡನೆ ಮಾತನಾಡುತ್ತಿದ್ದಾಗ ಅವರ ಆರೋಗ್ಯದ ವಿಚಾರ ಬಂತು. 'ಅಯ್ಯೋ. ಆ ಮಾತು ಬಿಡಿ. ನನಗೆ ಬಂದಿರುವ ಖಾಯಿಲೆಗಳಲ್ಲೂ ಒಂದನ್ನ ಕಂಡರೆ ಇನ್ನೊಂದಕ್ಕೆ ಆಗದು—ಸವತಿ ಮಾತ್ಸರ್ಯ. ಒಂದು ಆಹಾರ ತಿಂದರೆ ಒಂದು ರೋಗಕ್ಕೆ ಆಗುತ್ತೆ, ಇನ್ನೊಂದಕ್ಕೆ ಆಗೋಲ್ಲ. ಆ ರೋಗಕ್ಕೆ ಒಗ್ಗೋ ಆಹಾರ ತಕ್ಕೊಂಡರೆ ಇನ್ನೊಂದು ಖಾಯಿಲೆಗೆ ಆಗೋಲ್ಲ. ಅನುಭವಿಸೋದು ಕಷ್ಟವಾದರೂ ನೆನಸಿಕೊಂಡರೆ ನಗು ಬರುತ್ತೆ,' ಎಂದರು. ತಮ್ಮದೇ ಆದ ರೀತಿಯಲ್ಲಿ ಜೋರಾಗಿ ನಕ್ಕರು.

ಆನಂದರ ಈ ನಗೆ ಮೈಸೂರಿನ ಸಾಹಿತ್ಯ ಪ್ರಿಯರಿಗೆಲ್ಲಾ ಪರಿಚಿತ. ಅವರು ಸಾಮಾನ್ಯವಾಗಿ ಕೂತು ಹರಟುತ್ತಿದ್ದ ಜಾಗಗಳಲ್ಲಿ ಮತ್ತೆ ಆ ನಗೆಯ ಅಬ್ಬರ ಎಂದೆಂದೂ ಕೇಳಿಸದಂತಾಯಿತು. ಅವರು ಯಾವ ಮುನ್ಸೂಚನೆಯನ್ನೂ ಕೊಡದೆ ನಡೆದೇಬಿಟ್ಟರು. ಅವರು ಬಿಟ್ಟುಹೋದ ಸಣ್ಣಕತೆಗಳು ಮಾತ್ರ ಕೀಟ್ಸನ ಕವನಗಳಂತೆ, ಓ ಹೆನ್ರಿಯ ಕತೆಗಳಂತೆ, ಬೇಲೂರಿನ ಶಿಲಾಬಾಲಕಿಯರಂತೆ, ಓರಣವಾದ ಸಂಸಾರದ ಗಂಡ-ಹೆಂಡಿರ ಪ್ರಣಯ ಕಲಾಪದಂತೆ, ಮಕ್ಕಳ ಲಲ್ಲೆಯಂತೆ ಸದಾಕಾಲಕ್ಕೂ ನಿಲ್ಲುತ್ತವೆ.*

---

* ೧೯೬೪.

# ಕನ್ನಡ ಕುಲ ಗುರು
## ಬಿ. ಎಂ. ಶ್ರೀ.

ಕನ್ನಡ ಕುಲ ಗುರು ಬಿ. ಎಂ. ಶ್ರೀ. ಅವರನ್ನು ನೆನಸಿಕೊಂಡಾಗಲೆಲ್ಲ ನನಗೆ ಶ್ರೀ ರಾಮಕೃಷ್ಣ ಪರಮಹಂಸರ ನೆನಪಾಗುತ್ತದೆ. ಪರಮಹಂಸರಂತೆ 'ಶ್ರೀ' ಅವರೂ ಒಂದು ಬಗೆಯ ಸಾಧಕರು, ಸಿದ್ಧರು, ತಪಸ್ವಿಗಳು.

ದಕ್ಷಿಣೇಶ್ವರದ ಆ ಮಹಾಯೋಗಿ ಶ್ರೀ ರಾಮಕೃಷ್ಣರು ದೇವರೊಡನೆ ಮಾತಾಡುವ ಹಠ ಸಾಧಿಸಿದರಂತೆ. ತಾವು ಪೂಜಿಸುವ ಕಲ್ಲಿನ ಮೂರ್ತಿ ದೇವರಾಗಿದ್ದರೆ, ಆ ದೇವರು ತನ್ನ ಇರುವಿಕೆಯ ಸ್ಪಷ್ಟ ಮಾಹಿತಿಯನ್ನು ತಮಗೆ ಒದಗಿಸಬೇಕು —ಎಂದು ಅವರು ಮೊಂಡು ಹಿಡಿದರಂತೆ. ಈ ಮೂರ್ತಿ ದೇವರಾಗಿದ್ದರೆ, ಜೀವಂತವಾಗಿದ್ದರೆ, ಇದು ಉಸಿರಾಡಲೇ ಬೇಕು—ಎಂದು ಅವರು ತರ್ಕಿಸಿದರಂತೆ. ಒಮ್ಮೆ ಒಂದು ನೂಲಿನ ಎಳೆಯನ್ನು ಆ ಮೂರ್ತಿಯ ಮೂಗಿನ ಬಳಿ ಹಿಡಿದರಂತೆ. ಸೋಜಿಗವೋ—ಎಂಬ ಹಾಗೆ ಆ ಮೂರ್ತಿಯ ಮೂಗಿನ ಉಸಿರಾಟಕ್ಕೆ ನೂಲಿನ ಎಳೆ ಅಲುಗಾಡಿತಂತೆ.

ಪರಮಹಂಸರು ಅಷ್ಟಕ್ಕೇ ನಿಲ್ಲಲಿಲ್ಲ. ಆ ಮೂರ್ತಿಯನ್ನು ಮಾತಾಡಿಸುವವರೆಗೂ ಅವರು ತಮ್ಮ ಪ್ರಯತ್ನ ಬಿಡಲಿಲ್ಲ. ಕೊನೆಗೂ ದೇವರು ಮಾತಾಡಬೇಕಾಯಿತು. ಮುಂದೆ ಸ್ವಾಮಿ ವಿವೇಕಾನಂದರಾಗಲಿದ್ದ ನರೇಂದ್ರ ಅವರನ್ನು ಭೇಟಿಯಾಗಿ, "ನೀವು ದೇವರನ್ನು ನೋಡಿದೀರಾ?' ಎಂದು ಕೇಳಿದಾಗ, 'ನೋಡಿದೇನೆ. ದೇವರೊಡನೆ ಮಾತಾಡಿದೇನೆ,' ಎಂದು ದೃಢವಾಗಿ ಉತ್ತರಿಸಿದರಂತೆ ಶ್ರೀ ರಾಮಕೃಷ್ಣರು.

ಬಿ.ಎಂ.ಶ್ರೀ. ಅವರೂ ಇದೇ ರೀತಿಯ ಸಾಧನೆ, ತಪಸ್ಸು, ನಡಸಿದರು—ನಾಡದೇವಿಯ ಗುಡಿಯಲ್ಲಿ.

ಇವರ ಗುಡಿ ನಾಲ್ಕು ಗೋಡೆಗಳ ನಡುವಣ ಕಿರುಭೂಮಿಯಲ್ಲ. ಇವರು ಮಾತನಾಡಿಸಿದ್ದು ಕಲ್ಲಿನ ಮೂರ್ತಿಯಲ್ಲ. ಇವರ ಗುಡಿ, ಇಡಿಯ ನಾಡು. ಇವರ ದೇಗುಲ, ದೇಶೋವಿಶಾಲ. ಮಂಗಳೂರಿನ, ಕಾರವಾರದ ಕಡಲ ಕರೆಯಲ್ಲಿ ನಿಂತು ಇವರು ನಾಡದೇವಿಯ ಉಲಿಯನ್ನು ಆಲಿಸಿದರು. ಸಹ್ಯಾದ್ರಿಯ ಮೇಲೆ ನಿಂತು ಆಕೆಯ ಸುಯಿಲನ್ನು ಕೇಳಿದರು. ಹಾಳು ಹಂಪೆಯ ಪ್ರದೇಶದಲ್ಲಿ ನಿಂತು ಆಕೆಯ ಶೋಕದ ದನಿಗೆ ಕಿವಿಗೊಟ್ಟರು. ಕನ್ನಡ ನಾಡಿನ ಊರೂರಿಗೂ ಹೋದರು. ಪರಿವ್ರಾಜಕರಂತೆ ಸಂಚರಿಸಿದರು. ಅಲ್ಲೆಲ್ಲ ನಾಡದೇವಿಯನ್ನು, ನುಡಿದೇವಿಯನ್ನು, ಗುರುತಿಸಿದರು. ಆಕೆಯ ಲಲ್ಲೆಯನ್ನು, ಸಂಗೀತವನ್ನು, ಕುಣಿತವನ್ನು, ತಾಳವನ್ನು, ಮೇಳವನ್ನು ಕಂಡರು. ಆಕೆಯೊಡನೆ ಸಂಭಾಷಿಸಿದರು. ಆಕೆಯ ದುಸ್ಥಿತಿಯನ್ನು ಕಂಡು ಕಣ್ಣೀರಿಟ್ಟರು. ಅಣ್ಣನ ಪಾದುಕೆಗಳನ್ನು ಹೊತ್ತು ನಡೆದ ಭರತನಂತೆ ಆಕೆಯ ದಿವ್ಯ ಸಂದೇಶವನ್ನು ಹೊತ್ತು ನಡೆದರು. ಎಲ್ಲೆಡೆಯಲ್ಲೂ ಅದನ್ನು ಬೀರಿದರು. 'ದೇವರನ್ನು ಕಂಡಿದ್ದೀರಾ?' ಎಂಬ ಪ್ರಶ್ನೆಗೆ ಶ್ರೀ ರಾಮಕೃಷ್ಣರು, 'ಕಂಡಿದ್ದೇನೆ, ಸಂಭಾಷಿಸಿದೇನೆ,' ಎಂದು ಹೇಳಿದ ಹಾಗೆ, 'ಕನ್ನಡ ತಾಯಿಯನ್ನು ಕಂಡಿದ್ದೀರಾ?' ಎಂಬ ಪ್ರಶ್ನೆಗೆ 'ಶ್ರೀ' ಅವರು ಅಷ್ಟೇ ದೃಢವಾದ ಉತ್ತರ ನೀಡಿದರು. 'ಕನ್ನಡ ನಾಡದೇವಿಯನ್ನು ಕಂಡಿದ್ದೇನೆ. ಅವಳೊಬ್ಬ ಹಳೆಯ ಮುತ್ತೈದೆ. ಅವಳ ದಿವ್ಯರಥವನ್ನು ಸಿಂಗರಿಸಿ ಎಳೆಯುವ ಕೆಲಸವನ್ನು ನಾವೆಲ್ಲಾ ಮಾಡಬೇಕಾಗಿದೆ. ಬನ್ನಿ. ಒಕ್ಕೊರಲಿನಿಂದ ಕೂಗಿ. ಎಲ್ಲರೂ ಒಂದಾಗಿ ರಥವನ್ನು ಎಳೆಯೋಣ, ಬನ್ನಿ'—ಎಂದು ಹೇಳಿದರು. ದೇವರ ಇರುವಿಕೆಯಲ್ಲಿ ಶ್ರೀ ರಾಮಕೃಷ್ಣರಿಗೆ ಎಷ್ಟು ನಂಬಿಕೆ ಇತ್ತೋ, ನಾಡದೇವಿಯ ಇರುವಿಕೆಯಲ್ಲಿ 'ಶ್ರೀ' ಅವರಿಗೆ ಅಷ್ಟೇ ನಂಬಿಕೆ ಇತ್ತು. ಹೀಗೆಂದರೆ ಇದು ಅತಿಶಯೋಕ್ತಿ ಅಲ್ಲ—ಅವರನ್ನು ಕಂಡು ಅರಿತವರಿಗೆ.

ಬಿ.ಎಂ.ಶ್ರೀ. ಒಂದು ವ್ಯಕ್ತಿಯೆ, ಒಂದು ಶಕ್ತಿಯೆ?—ಎಂಬುದಾಗಿ ನಾನು ಹಲವಾರು ವೇಳೆ ಯೋಚಿಸಿದ್ದೇನೆ. ಬಿ.ಎಂ.ಶ್ರೀ. ಕೇವಲ ಸಾಹಿತ್ಯ ಪ್ರಿಯರಲ್ಲ; ಕೇವಲ ಕವಿಗಳಲ್ಲ; ಕೇವಲ ವಿದ್ವಾಂಸರಲ್ಲ; ಕೇವಲ ನಾಟಕಕಾರರಲ್ಲ; ಕೇವಲ ಭಾಷಣಕಾರರಲ್ಲ; ಕೇವಲ ಅಧ್ಯಾಪಕರಲ್ಲ; ಕೇವಲ ಸಂಘಟಕರಲ್ಲ; ಕೇವಲ

ಪ್ರಚಾರಕರಲ್ಲ. ಇವೆಲ್ಲವೂ ಅವರಲ್ಲಿ ಮೇಳೈಸಿದ್ದುವು.

ಅವರು ದೊಡ್ಡ ಕವಿ ಹೌದು. (ಅವರ 'ಇಂಗ್ಲಿಷ್ ಗೀತಗಳು' ಕನ್ನಡ ಕಾವ್ಯಮಾರ್ಗದಲ್ಲಿ ಹೊಸ ಮಾರ್ಗವನ್ನೇ ಹಾಕಿ ಕೊಟ್ಟಿತು.) ಅವರು ದೊಡ್ಡ ವಿದ್ವಾಂಸರು ಹೌದು. (ಅವರ ಪ್ರಗಲ್ಭ ಪಾಂಡಿತ್ಯವನ್ನು ಮೆಚ್ಚಿ ತಲೆದೂಗದವರಿಲ್ಲ.) ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು, ತಮಿಳು ಮುಂತಾದ ಭಾಷೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು ಅವರು. (ಅವರೊಂದು ಚಲಿಸುವ ವಿಶ್ವಕೋಶ, ಎನ್ನುತ್ತಿದ್ದರು ಎಲ್ಲರೂ.)

ಅವರು ಮೊದಲು ಕಲಿತದ್ದು ಭೌತಶಾಸ್ತ್ರ. ಆಮೇಲೆ ಅಭ್ಯಾಸ ಮಾಡಿದ್ದು ಇಂಗ್ಲಿಷ್. ಅಧ್ಯಾಪಕರಾಗಿದ್ದು ಆಂಗ್ಲ ಸಾಹಿತ್ಯದಲ್ಲಿ. ಪ್ರೊ|| ಮ್ಯಾಕಿಂಟಷ್ ಎಂಬ ಆಂಗ್ಲ ವಿದ್ವಾಂಸರೇ ಒಮ್ಮೆ ಹೇಳಿದರಂತೆ—ಹಿಂದಿನ ಜನ್ಮದಲ್ಲಿ ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಸಾಹಿತ್ಯ ಪ್ರೊಫೆಸರೇ ಆಗಿದ್ದಿರಬೇಕು, ಎಂದು. ಅಷ್ಟೊಂದು ಪಾಂಡಿತ್ಯ, ಪ್ರತಿಭೆ—ಆಂಗ್ಲ ಸಾಹಿತ್ಯದಲ್ಲಿ.

ಆದರೆ ಕನ್ನಡಿಗರಾದ ಇವರು ಕನ್ನಡ ಜನಜೀವನದ ನಾಡಿಯ ಮಿಡಿತವನ್ನು ಮರೆಯಲಿಲ್ಲ. ಅದನ್ನು ಗುರುತಿಸಿ, ಅದರೊಡನೆ ತಮ್ಮ ಜೀವನವೂ ಮಿಳಿತವಾಗುವಂತೆ ಮಾಡಿದರು. ಜನರಲ್ಲಿ ಕನ್ನಡ ಪ್ರೇಮ ಅಷ್ಟಾಗಿ ಇಲ್ಲದಿದ್ದಾಗ, ಕನ್ನಡದಲ್ಲಿ ಯೋಚಿಸುವುದೂ ಬರೆಯುವುದೂ ಮಾತಾಡುವುದೂ ಹೀನಾಯ ಎಂಬುದಾಗಿ ಜನರು ಭಾವಿಸಿದ್ದಾಗ, ಇವರು ಕನ್ನಡದಲ್ಲಿ ಯೋಚಿಸಿದರು; ಕನ್ನಡವನ್ನು ಕುರಿತು ಯೋಚಿಸಿದರು; ಪ್ರಾಚೀನವಾದ ಈ ಸಾಹಿತ್ಯ ಇಂದು ಮತ್ತೆ ಮೇಲ್ಮೆ ಹೊಂದಲು ಏನು ಮಾಡಬೇಕು—ಎಂಬುದನ್ನು ಕುರಿತು ಚಿಂತಿಸಿದರು; ಕನ್ನಡದಲ್ಲಿ ಮಾತಾಡಿದರು; ಕನ್ನಡದಲ್ಲಿ ಬರೆದರು; ಹೊಸ ಸಂಪ್ರದಾಯದ ಪ್ರವರ್ತಕರಾದರು.

ಇಷ್ಟೆಲ್ಲಾ ಇವರು ಮಾಡಿದ್ದು, ಇಂಗ್ಲಿಷ್ ಬಾರದು ಎಂದಲ್ಲ. ಇಂಗ್ಲಿಷ್ ವಿದ್ಯಾಪಾರಂಗತರಾದ ಇವರು ಇಂಗ್ಲಿಷಿನಲ್ಲೂ ಇದೇ ಬಗೆಯ ಕೆಲಸ ಮಾಡಬಹುದಿತ್ತು. ಆದರೆ ನಮ್ಮ ಬದುಕು ಕನ್ನಡದಿಂದ; ನಮ್ಮ ಮೇಲ್ಮೆ ಕನ್ನಡದಿಂದ; ನಮ್ಮ ಮೋಕ್ಷ ಕನ್ನಡದಿಂದ—ಎಂಬುದನ್ನು ಕಂಡು, ಅದರಂತೆ ನಡೆದು, ನುಡಿದು, ಹಾದಿ ಮಾಡಿಕೊಟ್ಟ ಮಹಾ ಪುರುಷರು ಇವರು.

ಬಿ.ಎಂ.ಶ್ರೀ.ಯವರ ವಿದ್ಯಾರ್ಥಿಗಳಾಗದಿದ್ದವರು ನಿಜವಾಗಿಯೂ ಅದೃಷ್ಟ

ಹೀನರು. ಅವರ ಭಾಷಣವನ್ನು ಕೇಳದಿದ್ದವರು ನಿಜವಾಗಿಯೂ ದುರದೃಷ್ಟವಂತರು. ನಿರರ್ಗಳವಾಗಿ ಹರಿಯುತ್ತಿದ್ದ ಅವರ ವಾಗ್ಝರಿಯಲ್ಲಿ ನಮ್ಮ ಮನಸ್ಸಿನಿಂದಾಗ ಆಗುತ್ತಿದ್ದ ಸಂತೋಷವನ್ನು ವರ್ಣಿಸುವುದು ಸಾಧ್ಯವಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ಕನ್ನಡ ಜಾಣ' ತರಗತಿಗಳು ನಡೆಯುತ್ತಿದ್ದಾಗ ಬಿ.ಎಂ.ಶ್ರೀ ಅವರು ಕನ್ನಡ ಭಾಷೆಯ ಚರಿತ್ರೆಯನ್ನು ಕುರಿತು ಉಪನ್ಯಾಸ ಕೊಡುತ್ತಿದ್ದರು. (ಸಂಸ್ಕೃತ ವಿದ್ಯಾರ್ಥಿಯಾದ ನಾನು ಕನ್ನಡ ಕಲಿಯಲು ಆ ತರಗತಿ ಸೇರಿದ್ದೆ.) ಕನ್ನಡ ಭಾಷೆಯ ಏರಿಳಿತಗಳನ್ನು, ಕನ್ನಡ ಪದಗಳು ಯುಗದಿಂದ ಯುಗಕ್ಕೆ ಅರ್ಥವ್ಯತ್ಯಾಸಗೊಳ್ಳುತ್ತಿದ್ದ ಬಗೆಯನ್ನು, ಕನ್ನಡ-ಸಂಸ್ಕೃತ-ಇಂಗ್ಲಿಷ್-ಹಿಂದೀ ಭಾಷೆಗಳ ತಾಕಲಾಟವನ್ನು ಅವರ ಬಾಯಿಂದ ಕೇಳಬೇಕು. ಪರಭಾಷೆಯ ಆಡಳಿತ, ಪರಸಂಸ್ಕೃತಿಯ ದಾಸ್ಯ ಇವುಗಳ ಫಲವಾಗಿ, ಒಳ್ಳೆಯ ಅರ್ಥವಿದ್ದ ಹಲವು ಕನ್ನಡ ಪದಗಳು ಹೇಗೆ ಪಾತಾಳಕ್ಕೆ ಇಳಿದವು —ಎಂಬುದನ್ನು ಅವರ ಬಾಯಿಂದ ಕೇಳಿದಾಗ, ಬೃಹತ್ ಕಾದಂಬರಿಯೊಂದರ ಬಣ್ಣನೆಯನ್ನು ಕೇಳಿದ ಅನುಭವವಾಗುತ್ತಿತ್ತು. ಇಡೀ ಜನಜೀವನದ ಏಳುಬೀಳುಗಳನ್ನು, ಸಾಮ್ರಾಜ್ಯದ ಉತ್ಕರ್ಷ-ಅವನತಿಗಳನ್ನು ಹೇಗೆ ಒಂದೊಂದು ಪದದ ಅರ್ಥವೂ ವ್ಯತ್ಯಾಸಗೊಂಡದ್ದರಲ್ಲಿ ಕಾಣಬಹುದು—ಎಂಬುದನ್ನು ಕುರಿತು ಅವರು ಹೇಳುತ್ತಿದ್ದಾಗ ಮೈ ಜುಮ್ಮೆನ್ನದಿರುವುದು ಯಾರಿಗೆ? ಅಂಥ ಅಧ್ಯಾಪಕರು ಬೇರೊಬ್ಬರು ಕಾಣಸಿಗಲಾರರು.

ಬಿ.ಎಂ.ಶ್ರೀ ಅವರು ಕನ್ನಡ ಸೇವಕರ ಪಡೆಯನ್ನು ಕಟ್ಟಿದ ರೀತಿ ಅದ್ಭುತ. (ಪ್ರತಿಯೊಂದನ್ನೂ ಹಣದ ಗೂಟಕ್ಕೆ ಕಟ್ಟಿ ಹಾಕಿರುವ ಈ ತಲೆಮಾರಿನಲ್ಲಿ 'ಕನ್ನಡ ಸೇವೆ'ಯ ಮಾತಾಡುವುದು ಹಾಸ್ಯಾಸ್ಪದವೆಂಬುದನ್ನು ನಾನು ಬಲ್ಲೆ. ನಾನು ಹೇಳುತ್ತಿರುವುದು ಆಗಿನ ಕಾಲ.) ಪ್ರತಿಯೊಬ್ಬರಿಗೂ ಸಮಯವರಿತು ಪ್ರೋತ್ಸಾಹ ನೀಡಿ, ಬೆನ್ನು ತಟ್ಟಿ, ಅವರನ್ನು ಮುಂದಕ್ಕೆ ತರುವ ಕಾರ್ಯದಲ್ಲಿ ಬಿ.ಎಂ.ಶ್ರೀ ಪರಿಣತರು. ವಿದ್ಯಾರ್ಥಿಗಳ ಬಗ್ಗೆ ಏನೋ ಒಂದು ವಿಶ್ವಾಸ.

ಒಮ್ಮೆ ಒಂದು ಸಭೆ. ಅದರಲ್ಲಿ ನಾನು ಒಂದು ಪ್ರಬಂಧ ಓದಿದೆ. ಅದನ್ನು ಮೆಚ್ಚಿದ ಶ್ರೀ ಅವರು ವೇದಿಕೆಯಿಂದ ಇಳಿದರು. ಪ್ರಬಂಧವನ್ನು ನನ್ನಿಂದ ತೆಗೆದುಕೊಂಡರು. ಚೆನ್ನಾಗಿ ಬರೆದಿದ್ದೀಯೆ—ಎಂದರು.

[ಮುಂದೆ ನನಗೆ ಕನ್ನಡ ಜಾಣ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ. ಪ್ರಮಾಣ

ಪತ್ರ ವಿತರಣೋತ್ಸವ. ನನಗೆ ಒಂದು ಬಹುಮಾನ. ಅದು ಮುಗಿದ ಕೂಡಲೆ ಶ್ರೀ ಅವರು ನನ್ನ ಬಳಿ ಬಂದರು. ಬೆನ್ನು ತಟ್ಟಿದರು. ಅವರು ಆಗ ಏನು ಹೇಳಿದರೋ ನನಗೆ ಜ್ಞಾಪಕವಿಲ್ಲ. ಸಂತೋಷ-ಸಂಭ್ರಮದಲ್ಲಿ ಮಾತು ಎಲ್ಲೋ ಹೋಯಿತು. ಅಂದು ರಾತ್ರಿಯೆಲ್ಲಾ ನನಗೆ ನಿದ್ದೆ ಬರಲಿಲ್ಲ. ಇಂದೂ ಕೂಡ ಆ ದೃಶ್ಯ ನನಗೆ ಚೆನ್ನಾಗಿ ನೆನಪುಂಟು.]

ಹೀಗೆ ಸಾವಿರಾರು ಮಂದಿಯಲ್ಲಿ ಕನ್ನಡ ನಾಡಿನ, ನುಡಿಯ, ಸಾಹಿತ್ಯದ ಪ್ರೇಮ ಬೆಳೆಯುವಂತೆ ಮಾಡಿದ 'ಶ್ರೀ' ಅವರು ಒಂದು ವ್ಯಕ್ತಿಯಲ್ಲ; ಒಂದು ಶಕ್ತಿ, ಒಂದು ಪಂಥ. ಗಾಂಧೀಜಿಯವರಂತೆ ಇವರೂ ಒಂದು ಪಂಥ. ಈ ಪಂಥದ ನಾನಾ ಮುಖವಾದ ಕಾರ್ಯ ಇಂದು ಮುಂದುವರಿಯುತ್ತಿದೆ. ಅವರಂತೆ ಸಾಹಿತಿಗಳು ಇರಬಹುದು. ಭಾಷಣಕಾರರು ಇರಬಹುದು. ಪಂಡಿತರು ಇರಬಹುದು. ಅಧ್ಯಾಪಕರು ಇರಬಹುದು. ಅವರು ನಾನಾ ದಿಕ್ಕುಗಳಲ್ಲಿ ಇಟ್ಟ ಹೆಜ್ಜೆಯನ್ನು ಅನುಸರಿಸುತ್ತಿರುವವರು ಇಂದು ಅನೇಕ ಜನ. ಆದರೆ ಬಿ.ಎಂ.ಶ್ರೀ ಅವರ ಸಮಗ್ರ ವ್ಯಕ್ತಿತ್ವ, ಸಮಗ್ರ ದರ್ಶನ, ಸಮಗ್ರ ಕಾರ್ಯತತ್ಪರತೆ ಇರತಕ್ಕ ವ್ಯಕ್ತಿ ಇನ್ನೊಬ್ಬರು ಇಲ್ಲ. ಆದ್ದರಿಂದಲೇ ನಾನು ಹೇಳಿದ್ದು: ಶ್ರೀ ಅವರು ಒಂದು ವ್ಯಕ್ತಿಯಲ್ಲ, ಒಂದು ಶಕ್ತಿ ಮಾತ್ರವೇ ಅಲ್ಲ; ಒಂದು ಪಂಥ, ಒಂದು ಸಂಸ್ಥೆ. ಅವರು ಹಾಕಿದ ನಾನಾ ದಾರಿಗಳಲ್ಲಿ ಒಂದೊಂದನ್ನಾದರೂ ಒಬ್ಬೊಬ್ಬರೂ ಅನುಸರಿಸಿದರೆ, ಇಷ್ಟಷ್ಟು ಕೆಲಸ ಮಾಡಿದರೆ, ಸಾಕು. ಅಷ್ಟಕ್ಕೇ ಕೃತಕೃತ್ಯತೆ.

ಬಿ.ಎಂ.ಶ್ರೀ ಅವರದು ಕಿರಿದಾದ ದೃಷ್ಟಿಯಲ್ಲ. ಕನ್ನಡದಿಂದ ಭಾರತ, ಭಾರತದಿಂದ ವಿಶ್ವ. ಇದು ಅವರ ದೃಷ್ಟಿ. ಹೀಗೆ ಅವರ ಸಾಹಿತ್ಯ ಸೃಷ್ಟಿ. ತೇಜಃಪೂರ್ಣವಾದ ಅವರ ಮಾತನ್ನೇ ಓದಿ:

ಋತವೊಂದೆ ಗೆಲ್ಲುವುದು ಅನೃತವಲ್ತು.
ಅಮೃತವೆನೆ ವಿದ್ಯೆಯೆ ಅವಿದ್ಯೆಯಲ್ತು.
ವಿಶ್ವ ಭಾರತಿ ಶರಣು ಕಿರುತೀರ್ಥವಲ್ತು.

ಇಂಥ ದರ್ಶನವನ್ನು ಕಂಡ ಬಿ.ಎಂ.ಶ್ರೀ ಅವರು ಹೊಸಗನ್ನಡದ ಅಧ್ವರ್ಯು, ಆಚಾರ್ಯ.*

---

* ೧೯೬೨.

## ಸಜ್ಜನಿಕೆಯ ಕವಿ 'ಪು.ತಿ.ನ.'

'ಅಲ್ಪಾತ್ಮನಾದರೂ ನನ್ನ ಸತ್ವಸಾರವಾಗಿರುವುದರಿಂದ ಈ ಹಣತೆಯು ಜನತಾ ಜನಾರ್ದನನ ಪೂಜಾ ದ್ರವ್ಯವಾಗುವುದಕ್ಕೆ ಯೋಗ್ಯವಾಗಿದೆಯೆಂದು ನಂಬಿ ಕನ್ನಡ ವಾಙ್ಮಯ ಪುಣ್ಯವಾಹಿನಿಯಲ್ಲಿ ಇದನ್ನು ಇಂದು ಗುರುನಿವೇದನ ಪುರಸ್ಸರವಾಗಿ ತೇಲಿಬಿಟ್ಟಿದ್ದೇನೆ. ಈ ಪೂಜೆಯಿಂದ ಆ ಜನಾರ್ದನನು ಪ್ರೀತನಾಗಿರಬಹುದು; ಆಗದಿರಬಹುದು. ಹೇಗಿದ್ದರೂ ಪೂಜೆ ಸಲ್ಲಿಸಿದ ಮಾತ್ರದಿಂದಲೇ ನಾನು ಧನ್ಯ. ಹೀಗೆಂದು ನನ್ನ ನಂಬಿಕೆ.'

ಹೀಗೆಂದು ಹೇಳಿದ ಕವಿ ಬೇರೆ ಯಾರೂ ಅಲ್ಲ—ಪು.ತಿ. ನರಸಿಂಹಾಚಾರ್. ಸಾಹಿತ್ಯ ಪ್ರೇಮಿಗಳಿಗೆ ಅವರು 'ಪು.ತಿ.ನ.'

ಈ ಮಾತು ಹೇಳಿದಂದಿನಿಂದಲೂ ಅವರ ಹಣತೆ ಕಾವ್ಯಗಂಗೆಯ ಎದೆಯ ಮೇಲೆ ಹಿರಿದಾದ ಸೊಡರಾಗಿ ಬೆಳಗುತ್ತಿದೆ. ಅದರ ಹಿಂದೆ ಅವರದೇ ಸಾಲುದೀಪ ನಲವಾಂತು ತೇಲುತ್ತಿವೆ; ಅವನ್ನು ಹೊತ್ತಿಸಿ ತೇಲಿಬಿಟ್ಟ ಕವಿಯ ಆತ್ಮತೇಜಸ್ಸಿನ ಪ್ರತೀಕವಾಗಿ ತೊಳಗುತ್ತಿವೆ. ಆದರೆ ಅಂದಿನ, ಅವರ ಮೊದಲ 'ಹಣತೆ' ಜನತೆಯ ಮುಂದೆ ಬೆಳಗಬಿಟ್ಟಾಗಿನ ಕವಿ ಸೌಜನ್ಯ, ವಿನಯ ಮಾತ್ರ ಇನಿಸೂ ಕುಂದಿಲ್ಲ. ಆ ಸಜ್ಜನಿಕೆ ಇಷ್ಟೂ ಮಾಸಿಲ್ಲ. ಕೀರ್ತಿಯ ಹೊಳೆಮಿಂಚಿಗೆ ಸರಳತೆ ಆಹುತಿಯಾಗಿಲ್ಲ. ಇದು ಈ ಕವಿಯ ವೈಶಿಷ್ಟ್ಯ.

ಅವರ ಈ ನಿವೇದನೆಯಿಂದಲೇ ಅವರ ಸಾಹಿತ್ಯದ ಸ್ವರೂಪ ಎಂಥದೆಂಬುದು ಅರಿವಾದೀತು. ಮಧ್ಯಮವರ್ಗದ ನೆಮ್ಮದಿಯ ಸುಸಂಸ್ಕೃತ ಬ್ರಾಹ್ಮಣ ಸಂಸಾರ

ವೊಂದರ ವಿಕಸಿತ ಕುಸುಮ ಶ್ರೇಷ್ಠರಾದ ಇವರು ಚೆಲ್ವಿಕೆಯ ಆರಾಧಕರು. ಸಮಾಜದ ವೈರ ವಿನ್ಯಾಸದ ಕಲಹದ ದ್ವೇಷಭೂಮಿಯ ಪರಿಚಯ ಹೊಂದಿದವರಲ್ಲ ಇವರು. ಒಂದು ಹೂ ಅರಳಿದರೆ, ಒಂದು ಬೈಗು ಅಡರಿದರೆ, ಒಂದು ಚೆಲುವಿನ ಪ್ರಕೃತಿ ಕ್ರಿಯೆಯಾದರೆ ಅದನ್ನು ಕಂಡು ಹಿಂದೆಯೇ ಮೈಮರೆಯುವ ಸ್ವಭಾವ ಇವರದು. ಈ ಅನುಭೂತಿಗೆ ಅನುಗುಣವಾದ ಸಹಜ ಸಂಸ್ಕೃತಿ. ಸಂಸ್ಕೃತ, ಕನ್ನಡ, ಇಂಗ್ಲಿಷ್—ಈ ತ್ರಿವೇಣೀ ಸಂಗಮದ ಫಲ ಇವರ ಸಾಹಿತ್ಯ, ಇವರ ಕವಿತಾ ವಾಣಿ. ಅಂತೆಯೇ ಇವರ ಹೃದಯದಿಂದ ಹೊಮ್ಮುವ ಕಾವ್ಯ, ಇವರ ಲೇಖನಿಯಿಂದ ಇಳಿಯುವ ಲಲಿತ ಪ್ರಬಂಧ, ಇವರ ಅನುಭವದಿಂದ ಮೈಯಾಂತ ಚಿತ್ರ, ಹೂ ಅರಳಿದ ಅನುಭವವನ್ನೆ ತರಬಲ್ಲುದು; ಕತ್ತಿಯ ಕೂರಲಗಿನ ಹೊಳಪಿನ ಅನುಭವ ತಾರದು; ಅದು ಉದ್ದೇಶವೂ ಅಲ್ಲ:

ಬಳ್ಳಿಯೊಡಲ ಕುಸುಮದಂತೆ
ಹುದುಗಿದೆನ್ನ ಗೀತವು
ಮೆಲ್ಲನೊಡೆದು ಬರುವುದೆಂದು?—
ಎಂದು ನಲಿವೆ—ಬೆದರುವೆ.
ಮುಗುದೆಯೊಡಲ ಪ್ರೇಮದಂತೆ
ಹುದುಗಿದೆನ್ನ ಗೀತವು
ಬಗೆಯ ಗೂಡನೊಡೆಯುತೆಂದು
ಬರುವುದೆಂದು ಬೆದರುವೆ.

ಇವರ ಕಾವ್ಯದ ಝರಿ ಹರಿಯುವುದು ಇಂತು. ಇಂತು ವಿಕಸಿತವಾದರೇನೇ ಇವರಿಗೆ ಚೆಂದ. ಇವರ ಎಲ್ಲ ಕಾವ್ಯಸೃಷ್ಟಿಯ ಹಿಂದಿನ ಸೂತ್ರ ಇದು.

ಈ ಕವಿ ಚೆಲುವಿನ ಆರಾಧಕರೆಂದೆ. ಅಂತೆಯೇ ಪ್ರಕೃತಿಯ ಚೆಲುವಿನಲ್ಲಿ ದೇವರನ್ನು ಕಾಣುವ ಕಣ್ಣು. ಇವರ ನಲ್ಮೆಯ ಯದುಗಿರಿ, ಅದರ ಮೇಲೆ ರತ್ನಪ್ರಾಯವಾಗಿ ನಿಂತ, ನೋಂತವರ ಹೃದಯ ದೈವತವಾದ ಚೆಲುವರಾಯಸ್ವಾಮಿಯ ದೇಗುಲ. ಅದನ್ನು ಸುತ್ತಿಬಳಸಿ, ಚೆಲುವಿನ ಹರಿಕಾರರಂತೆ ಬೆಳಗುತ್ತಿರುವ ಪ್ರಕೃತಿಯ ಬೆಡಗಿನ ದೃಶ್ಯಗಳು—ಇವುಗಳನ್ನು ಕವಿಗೆ ಬಣ್ಣಿಸಿದಷ್ಟೂ ತಣಿವಿಲ್ಲ, ಹಾಡಿದಷ್ಟೂ ತೃಪ್ತಿಯಿಲ್ಲ. ಆ ಯದುಗಿರಿಯ ಮೇಲೆ ಕುಳಿತು ಜಗತ್ತಿನ ಅನಂತತೆಯನ್ನು, ಇದನ್ನೆಲ್ಲ ಕಡೆದ ಕಾಣದ ಕೈಯ ಬೆಡಗನ್ನು,

ಹಾಡುವುದಕ್ಕಿಂತ ಪ್ರಿಯವಾದ ಕಾರ್ಯ ಕವಿಗೆ ಬೇರಿಲ್ಲ. ಶಾಂತಿಯ ತೌರು ಆ ಯದುಗಿರಿ :

ಏನ್ ಶಾಂತಿಯು ಸೌಂದರ್ಯವು
ಯಾದವಗಿರಿ ನಭದಿ !
ಏನ್ ಮೌನವು, ನೀರವತೆಯು
ಮಲೆತುದಿ ದೇಗುಲದಿ !
—ಈ ಶಾಂತಿಯೊಳಾಲಿಸದೋ,
ಉಡುಲೋಕದ ಗಾನ :
ಸಮಶ್ರುತಿ ಲಯ ಹೊಂದಿರುವೀ
ತನು ಮುಚ್ಚಿದ ಗಾನ !

ಕೋಮಲವಾದ ಲತೆ ಕೊಂಗನ್ನು ಆಧರಿಸಿ ಆಲಿಂಗಿಸುವ ಹಾಗೆ, ಈ ಕವಿಗೆ ದೇವರು ಆಲಂಬನ. 'ತೇನ ವಿನಾ ತೃಣಮಪಿ ನ ಚಲತಿ,' ಎಂಬ ವಾಕ್ಯದಲ್ಲಿ ದೃಢವಾದ ನಂಬಿಕೆ. ಆದರೆ ಒಮ್ಮೊಮ್ಮೆ ಈ ನಂಬಿಕೆಯ ಕಟ್ಟು ಸಡಿಲಾಗುತ್ತದೆ. ದೇವನ ಇರವಿನಲ್ಲಿ ಸ್ವಲ್ಪ—ಬಹು ಸ್ವಲ್ಪ—ಸಂಶಯ ಉದ್ಭವವಾಗುತ್ತದೆ. ಆಗ ಅದರ ಹಿಂದೆಯೇ ಸಮಾಧಾನವೂ ಬರುತ್ತದೆ. ದೇವನಿರಲಿ, ಇಲ್ಲದಿರಲಿ, ಅವನಲ್ಲಿ ಜನ ಭಕ್ತಿ ಇಟ್ಟಿದ್ದಾರೆಂಬುದಂತೂ ನಿಜ :

ದೇವನಿರವು ದಿಟವೊ, ಸಟೆಯೊ—
ಹೆರರು ತಿಳಿಯದಿರಿತಗಳನು,
ಹದುಗಿ ಇರುವ ಪಾಪಗಳನು,
ಗುಟ್ಟನೆಲ್ಲವ,
ಎದೆಯ ಹೊಗುತಲೆಲ್ಲ ತಿಳಿದು
ಸಂತವಿಡುವ ನೊಬ್ಬನುಂಟು
ಎನ್ನುವಚಲಭಕ್ತಿ ದಿಟವು,
ಮತ್ತು ಸೋಜಿಗ !

ಜಗತ್ತಿನ ಬಹು ಜನರ ಬಾಳನ್ನು ಮುಂದೂಡಿಸುವ ಶಕ್ತಿ ಈ ನಂಬಿಕೆ.

'ಪು.ತಿ.ನ.'ರ ಕೃತಿಗಳಲ್ಲಿ ನಾನು ಮೊದಲು ಓದಿ ಮೆಚ್ಚಿಕೊಂಡ ಪುಸ್ತಕ 'ರಾಮಾಚಾರಿಯ ನೆನಪು.' ಕಾಲದ ದೃಷ್ಟಿಯಿಂದಲೂ ಇದು ಹಣತೆಗಿಂತ ಮೊದಲು ಪ್ರಕಟವಾಯಿತು. ಇದು ಪದ್ಯವಲ್ಲ, ಗದ್ಯ—'ಎಂಟು ಭಾವನಾ

ಚಿತ್ರಗಳು' ಎಂದು ಅವರೇ ಹೇಳಿದ್ದಾರೆ. ಎಂಟೂ ಎಂಟು ಭಾವಗೀತಗಳು. ಒಡಲು ಮಾತ್ರ ಗದ್ಯದ ಒಡಲು. ಕರುಳನ್ನು ಹಿಂಡಿ ನೋವನ್ನು ಒಸರಿಸುವ 'ರಾಮಾಚಾರಿಯ ನೆನಪು' ಎಂಬ ಮೊದಲ ಚಿತ್ರವೇ ಸಂಗ್ರಹದ ಹೆಸರೂ ಕೂಡ. ಅದನ್ನು ಓದಿ ಹಲವು ವರ್ಷ ಚಿಮ್ಮಿದ್ದರೂ ಆ ನೋವಿನ ನೆನಪು—ಆ ಮಧುರವೇದನೆ—ಕವಿಯಂತೆಯೇ ನನ್ನ ಹೃದಯದಿಂದಲೂ ಮಾಸಿಲ್ಲ. ಅಂಥ ಒಳ್ಳೆಯ ಚಿತ್ರ ಅದು. ಇತರರ ಕಣ್ಣಿಗೆ ಒಂದು ತೆರನಾಗಿ ಕಂಡರೂ, ಅವರ ಕಣ್ಣಲ್ಲಿ ನೇಹದ ಗೆಳೆಯನಿಗೆ ಜೀವದಾನ ಮಾಡಿದ ತ್ಯಾಗಮೂರ್ತಿಯಾಗಿ ಕಾಣುವ 'ಕೃಷ್ಣ ಶಾಸ್ತ್ರಿಯ ತ್ಯಾಗ'ವೇನು ಕಡಮೆಯೆ? ವೆಂಕೋಬರಾಯರು ಒಂದು ಪದ್ಯವನ್ನು ಓದಿ ವಿಮರ್ಶಿಸಿದ್ದು ಆ ಪದ್ಯವನ್ನಷ್ಟೇ ಅಲ್ಲ. ಅದು ಒಂದು ಜೀವನ ವಿಮರ್ಶೆ: ಸಹೃದಯ ಕವಿಯ ಕೈಯಲ್ಲಿ ಬಹು ನವಿರಾಗಿ, ಬಹು ಲಲಿತವಾಗಿ ನಡೆದಿದೆ. ಕನ್ನಡ ಗದ್ಯ ಸಾಹಿತ್ಯಕ್ಕೆ ಅಪೂರ್ವವಾದ ಕಾಣಿಕೆ ಇದು. 'ಹಹ್ಹಾ! ಒಂದು ನಕ್ಷತ್ರ' ತಿಳಿನಗೆಯಲ್ಲಿ ಅದ್ದಿ ತೆಗೆದ ಒಂದು ಸುಂದರ ನಿರೂಪಣೆ. ಕನ್ನಡ ಗದ್ಯ ಸಾಹಿತ್ಯದ ಬೆಳೆವಣಿಗೆಯನ್ನು ವಿವರಿಸುವ ಭವಿಷ್ಯದ ಸಾಹಿತ್ಯ ಚರಿತ್ರಕಾರ 'ರಾಮಾಚಾರಿಯ ನೆನಪನ್ನು ಮರೆಯಲಾರ.

'ರಾಮಾಚಾರಿಯ ನೆನಪಿ'ನಿಂದ ಹೊರಟ ಕವಿಯ 'ರಥ ಸಪ್ತಮಿ'ಯ ದರ್ಶನವೂ ಚೆಲವಾದುದೇ. ಸಂಸ್ಕೃತಿಯ ತವರಿನಲ್ಲಿ ಹುಟ್ಟಿ ಬೆಳೆದು ರೂಪುಗೊಂಡ ಕವಿಹೃದಯದ ಮಾಗಿದ ಫಲ ಇದು. ಯಥಾಪ್ರಕಾರ ಅವರ ನೆಚ್ಚಿನ ನಲ್ಮೆಯ ಯದುಗಿರಿ, ದೇಗುಲ, ಮನೆ, ಸಂಸಾರ, ಇಷ್ಟೆ. ತಮ್ಮೂರು, ತಮ್ಮ ಕೆಳೆ, ತಮ್ಮ ಮನೆ ಇವನ್ನು ಬಿಟ್ಟು ಆಚೀಚೆ ಕದಲುವುದಿಲ್ಲ. ಆದರೆ ತನ್ನ ಅನುಭವವನ್ನೇ ನೆಮ್ಮಿದ ಕವಿ ಅಷ್ಟರಲ್ಲೆ ಎಂಥ ರಸ ಸೃಷ್ಟಿಮಾಡಬಲ್ಲನೆಂಬುದಕ್ಕೆ ಉತ್ತಮ ದೃಷ್ಟಾಂತ ಈ ಸಂಗ್ರಹ. ತರುಣ ದಂಪತಿ ಹೂಡಿದ ಸಂಸಾರ. ಅವರೇ ಪ್ರತ್ಯೇಕವಾಗಿ 'ಗೋಕುಲಾಷ್ಟಮಿ' ಹಬ್ಬ ಆಚರಿಸುತ್ತಿರುವುದು ಇದೇ ಮೊದಲ ವರ್ಷ. ಭಾವುಕರಾದ ಕವಿ ಅದರ ಸುತ್ತ ಕಲ್ಪಿಸಿದ ಚಿತ್ರ. ಹಿಂದಿನ ಗೋಕುಲಾಷ್ಟಮಿಯ ಆಚರಣೆಯ ನೆನಪು. ಇವನ್ನೆಲ್ಲ ಹೇಳ ಹೇಳುತ್ತ ಕವಿ ರಸಜ್ಞರ ಒಲುಮೆ ಗಳಿಸುತ್ತಾರೆ. ಅವರ ಆತ್ಮೀಯತೆ ಬೆರಗುಗೊಳಿಸುವಂಥದು. ಅವರ ವರ್ಣನೆ ಮೈಮರೆಸುವಂಥದು. ಅವರ ವಿಚಾರದ ಹೊಳಲು ಮನ ಬೆರಸುವಂಥದು. ಅವರ ದೈವಭಕ್ತಿ ಸಹೃದಯತೆ ಗಳಿಸುವಂಥದು. ಅವರ ಚೆಲುವಿನ

ಕಣ್ಣು ಆನಂದದ ಅಮೃತಸೇಚನ ಮಾಡಬಲ್ಲುದು. ಈ ಸುಂದರ ಅನುಭವದಲ್ಲಿ ಕವಿಯನ್ನು ನಿಮ್ಮ ಮಗ್ಗುಲಲ್ಲೇ ಕಂಡರೆ ಆಶ್ಚರ್ಯವೇನಿಲ್ಲ. ದೂರದ, ಬಹು ದೂರದ, ಜನಸಮ್ಮರ್ದಕ್ಕೆ ಹೊರಗಾದ, ನಿರ್ಜನ ಪ್ರದೇಶದಲ್ಲಿ ಹಳುವಿನ ನಡುವೆ ಹಾವಿನ ಹಾಗೆ ಹರಿದು ಹೋಗುವ ಒಂಟಿ ದಾರಿ. ಅದರ ಒಂದೆಡೆ ಒಂದು ಪುಟ್ಟ ಸೇತುವೆ—ಆಚೀಚೆ ಅಡ್ಡಗೋಡೆ. ಆ ಗೋಡೆಯ ಮೇಲೆ ಅವರೊಡನೆ ಕೂತು, ಕಾಲನ್ನು ತೂಗಾಡಿಸುತ್ತ, ಕೆಳಗೆ ಕಲ್ಲಿನ ನಡುವೆ ನುಸುಳುವ ತೊರೆ ಯನ್ನು ನೋಡುತ್ತ, ಕವಿಯ ಮಾತಿನ ಪ್ರವಾಹದಲ್ಲಿ ಹೃದಯವನ್ನು ತೇಲಿಬಿಟ್ಟ ಅನುಭವ ಆಗದಿರದು. 'ವೈಲ್ ಮಾಳಿಗೆ ಉತ್ಸವ'ವಾಗಲಿ, 'ರಥಸಪ್ತಮಿ' ಯಾಗಲಿ, 'ಬೀದಿಯ ಬಸವ'ನಾಗಲಿ ಬಲು ಚೆಲುವಾದ ಪ್ರಬಂಧಗಳು. 'ಬೀದಿಯ ಬಸವ' ಒಂದು ರಸಕಟ್ಟಾದ ಹರಟೆ. ಇದು ತೇಂಗೊಳಲಿನಿಂದ ಪ್ರಾರಂಭವಾಗಿ, ಹಲಸಿನ ಹಣ್ಣಿನ ಸವಿ ನೋಡಿ, ಬೀದಿಯ ಬಸವನೊಡನೆ ಸರಸ ವಾಡಿ, ಅರ್ಥಶಾಸ್ತ್ರದ ಜಾಡು ಹಿಡಿದು—ಅಬ್ಬ, ಎಲ್ಲೆಲ್ಲಿ ಹೋದೀತೋ! ಆ ಹೊಳೆಯ ಹಿಂದೆ ಬಂಡೆಯಿಂದ ಬಂಡೆಗೆ ನೆಗೆಯುತ್ತ, ಹರಿಯುತ್ತಿರುವ ಬೆವರನ್ನು ಒರಸಿಕೊಳ್ಳುತ್ತ, ಹೊಂಬಿಸಿಲಿನಲ್ಲಿ ತಂಗಾಳಿಗೆ ಮೈಯೊಡ್ಡುವುದು ಎಷ್ಟು ಆನಂದ !

ಪು.ತಿ.ನ. ಅವರ ಹೆಸರನ್ನು ಹೇಳಿದಾಗ ಅವರ ಅಹಲ್ಯೆಯನ್ನು ಯಾರು ಮರೆಯಬಲ್ಲರು ? ರಾಮಾಯಣದಲ್ಲಿ ಮಿಂಚಿನ ಹಾಗೆ ಹಾದುಹೋಗುವ ಹಲವು ಪ್ರಸಂಗಗಳಲ್ಲಿ ಅಹಲ್ಯೆಯದೂ ಒಂದು. ಮಿಥಿಲಾ ಪುರಿಯತ್ತ ಹೋಗುತ್ತಿದ್ದ ರಾಮ, ವಿಶ್ವಾಮಿತ್ರರ ಆದೇಶದಂತೆ ಅಡ್ಡಹಾಯ್ದು ಗೌತಮ ಮುನಿಯ ಆಶ್ರಮ ಹೊಕ್ಕು, ಶಾಂತಿ ಕಳೆದುಕೊಂಡು ಗಾಳಿಯಾಗಿ ತೊಳಲುತ್ತಿದ್ದ ಅಹಲ್ಯೆಗೆ ರೂಹಿತ್ತು ಸೊಗವಾಡುವಂತೆ ಮಾಡಿದ ಕತೆ ಇದು. ಕವಿಯ ಕುಂಚದ ಮಾಟ ದಿಂದ ಉತ್ತಮ ರೂಪಕವಾಗಿದೆ.

ಅಹಲ್ಯೆಯ ಪ್ರಶ್ನೆ ಚಿರಂತನ ಪ್ರಶ್ನೆ. ಹೆಣ್ಣು-ಗಂಡು ಜಗತ್ತಿನಲ್ಲಿ ಅವತಾರ ತಾಳಿದಂದಿನಿಂದ ಮೈದಾಳಿರುವ ಪ್ರಶ್ನೆ. ಆದ್ದರಿಂದ ಎಲ್ಲ ಕಾಲಕ್ಕೂ ಎಲ್ಲ ವಯ ಸ್ಸಿನವರಿಗೂ ಎಲ್ಲ ಮನೋಭಾವಕ್ಕೂ ಒಗ್ಗುವ ವಸ್ತು. ಗೌತಮನೆಂಬವನು ಒಬ್ಬ ಮಹರ್ಷಿ. ಆತ ಅಹಲ್ಯೆಯನ್ನು ಒಲಿದ. ಒಲುಮೆಯ ಗಂಟಾಗಿ ಅವರಿಗೆ ಒಂದು ಮಗುವೂ ಆಯಿತು. ಆದರೆ ಅನಂತರ ಆ ಋಷಿಯ ಮನಸ್ಸು ತಪೋನ್ಮುಖ

ವಾಯಿತು. ಹೀಗೆ ಬೇರೆಡೆ ಮನಸ್ಸು ತಿರುಗಿದ ಋಷಿ ಮೂಗು ಹಿಡಿದು ಕಾಷ್ಠದಂತೆ ಕೂತರೆ ನವಯೌವನಭರಿತೆ ಅಹಲ್ಯೆ ಏನು ಮಾಡಬೇಕು ? ಆಕೆಯ ಮನವೆಷ್ಟು ನೊಂದಿರಬೇಕು ? ಆದರೆ ಗೌತಮ ಇದನ್ನು ಅರಿಯಲೊಲ್ಲ. ಆಗ ವಿಲಾಸಿ ಇಂದ್ರ ಇವರ ಬಾಳ ನಡುವೆ ಹಾಯ್ದು ಅನರ್ಥಪರಂಪರೆಯನ್ನೆ ಎಸಗುತ್ತಾನೆ. ಆತನ ವಿಲಾಸಕ್ಕೆ ತುತ್ತಾದ ಅಹಲ್ಯೆ ಮುನಿಯ ಶಾಪಕ್ಕೆ ಈಡಾಗಿ ಗಾಳಿಯಲ್ಲಿ ಗಾಳಿಯಾಗಿ ಅಲೆಯುತ್ತಾಳೆ. ಅತ್ತ ಗೌತಮ ಮುನಿಗೂ ಶಾಂತಿಯಿಲ್ಲ. ತಪ್ಪು ಆತನದೆ? ಆಕೆಯದೆ ? ಈ ಪ್ರಶ್ನೆಯನ್ನು ಬಿಡಿಸುತ್ತಾರೆ ಕವಿ.

ಎಂಥ ಮರವೆಯಾ ಇನಿಯ, ಇನಿತೊಂದು  
ಹಂಬಲನು ಬಿಟ್ಟೆ—ನನ್ನ  
ಒಂಟಿಯೊಳಗಿಟ್ಟೆ !  
ಮನವು ಮುದುಟಿತು ಆಸೆ ನೂರಕೆ  
ಬದುಕು ತೆರವೋ ನೂರು ತವಕಕೆ ;  
ಏನು ಹೇಳಲಿ ನಿನ್ನ ಸ್ವಾರ್ಥಕೆ !  
ಹಂಬಲನು ಬಿಟ್ಟೆ—ನನ್ನ  
ಒಂಟಿಯೊಳಗಿಟ್ಟೆ !  
ಎನಿತು ದೂರಕೆ ಸರಿದು ನಿಂತಿಹೆಯೋ  
ನನ್ನ ಮನದನ್ನ—ಹೇ  
ಸತ್ವ ಸಂಪನ್ನ !

ಇದು ಅಹಲ್ಯೆಯ ದಿನದಿನದ ಅಳಲು. ಋಷಿ ಮಾತ್ರ ಇದನ್ನು ಮರೆತ. ಆದರೆ ಆತನಿಗೆ ಅಹಲ್ಯೆಯಲ್ಲಿ ತಾತ್ಸಾರವಿಲ್ಲ. ವಿಮುಖನಾಗಿದ್ದರಿಂದ ಇಷ್ಟೆಲ್ಲ ಅನರ್ಥ ಸಂಭವಿಸಿತು. ಆತನ ಮಾತನ್ನೆ ಕೇಳಿ :

ಅಹಲ್ಯೆ—ನನ್ನ ನಚ್ಚಿನ ಮಡದಿ—ಆ ಚಲುವೆ !  
ನೂರು ಹೆಂಗಳ ಜರೆದು ಆರಿಸಿದೆನಿವಳೋವಿ  
ಈ ತಿರೆಯೊಳೀ ಬಾಳ ನಡಸಲೆಂದೀ ದೇವಿ.  
ರೂಢಿಯೊಳು ಮರೆತೆ ! ಬಾಳ ಹಿನ್ನೆಲೆಗಿಟ್ಟೆ,  
ನನ್ನ ಧರ್ಮದ ಗುಡಿಯ ಬೆಳಕಿಗೇ ಮುಸುಕಿಟ್ಟೆ  
ತಪವೆಂದೆ ಜಪವೆಂದೆ, ರಾಗವನು ಹಿಂಗಿಸಿಧೆ  
ಒಲಿದಗೊಲವೊಳೆ ಮುಕ್ತಿ ಎಂಬುದರಿಯದೆ ಹೋದೆ !

ಆದರೆ ಈ ಪಶ್ಚಾತ್ತಾಪ ಮೂಡಿದ್ದು ಬಲು ತಡವಾಯಿತು. ಆ ವೇಳೆಗಾಗಲೇ ಇಂದ್ರ ತನ್ನ ಕಾಮದ ಹಸಿವನ್ನು ಅಹಲ್ಯೆಯಲ್ಲಿ ತೀರಿಸಿಕೊಂಡಿದ್ದ. ಶಾಪ ಕೊಟ್ಟು, ಅದರ ಕಾವನ್ನು ತಾನೂ ಭೋಗಿಸಿ, ಪಶ್ಚಾತ್ತಾಪದಿಂದ ಬೆಂದು, ಪ್ರೇಮದ ನಿಜಾರ್ಥವನ್ನು ಅರಿತು ಮತ್ತೆ ಗೌತಮ ಋಷಿ ಅಹಲ್ಯೆಯನ್ನು ಕೂಡಿದಾಗ ಜಗವೆ ನಲವಾಗುತ್ತದೆ. ಬಾಳು ಬಾನಾಗುತ್ತದೆ.

ಭಾವ ಮಾಧುರ್ಯ, ಬಂಧದ ಲಾಲಿತ್ಯ, ನುಡಿಯ ಸೌಕುಮಾರ್ಯ—ಏನು ಬೇಕು ನಿಮಗೆ ಈ ಮೂರಂಕಿನ ಗೀತರೂಪಕದಲ್ಲಿ? ಅಪೆರಾದ ಸಂಗೀತ, ಸಾಹಿತ್ಯದ ಅಚ್ಚುಕಟ್ಟು—ಎರಡೂ ಮೇಳವಿಸಿ ರೂಪುವಡೆದ ಮಹಾಕೃತಿಯಿದು. ಕನ್ನಡ ರಂಗಭೂಮಿ ಒಳ್ಳೆಯ ಸ್ಥಿತಿಯಲ್ಲಿದ್ದಿದ್ದರೆ ಈ ರೂಪಕ ಎಷ್ಟು ಶೋಭಾಯಮಾನವಾಗುತ್ತಿತ್ತೋ! ಆದರೆ ಆ ಪುಣ್ಯವಿಲ್ಲ ಕರ್ನಾಟಕಕ್ಕೆ. ಓದಿಕೊಂಡೇ ತೃಪ್ತಿ ಹೊಂದಬೇಕಾಗಿದೆ.

ಇನ್ನೊಂದು ಗೀತರೂಪಕ, 'ಗೋಕುಲ ನಿರ್ಗಮನ.' ಇದರ ಭಾವದ ಸೊಬಗು, ನಾದದ ಬೆಡಗು ಉತ್ಕೃಷ್ಟವಾದದ್ದು. ಬಿಲ್ಲು ಹಬ್ಬಕ್ಕಾಗಿ ಕೃಷ್ಣ ಬಲರಾಮರು ಗೋಕುಲವನ್ನು ಬಿಟ್ಟು ಮಥುರೆಗೆ ನಡೆದ ಸನ್ನಿವೇಶವೇ ಇಲ್ಲಿನ ವಸ್ತು. 'ನಾನು ಕೇಳಿದ ಹಲವಾರು ಸಂಗೀತಗಳ ಸುಖ, ನೋಡಿದ ನೃತ್ಯಾಭಿನಯಗಳ ಸೊಗಸು, ಮನನ ಮಾಡಿದ ಕಾವ್ಯಗಳ ರಸರುಚಿ, ಮತ್ತು ಇವುಗಳೆಲ್ಲದರಲ್ಲೂ ತೂಗುಯ್ಯಲೆಯಾಡಿಸಿದ ಬಗೆ, ನನ್ನ ಹೃದಯಕ್ಕೆ ಅತಿ ಸಮೀಪವಾಗಿ ಸ್ನೇಹದಂತಿರುವ ಒಂದು ತೆರದ ಅಲೌಕಿಕ ವಿಷಾದ, ಅದರ ಸುತ್ತಿನ ಹಂಬಲುಗಳು, ಹೀಗೆ ನಾನು ಜಾಗ್ರತ್ ಸ್ವಪ್ನಾವಸ್ಥೆಗಳಲ್ಲಿ ಪಟ್ಟ ನೂರಾರು ತೀವ್ರಾನುಭೂತಿಗಳು ನನ್ನಲ್ಲಿಯೇ ಮುಗಿಯುವುದೆಂತು? ಇವೆಲ್ಲಾ ಪುಷ್ಪ ಪರಾಗಗಳು ದುಂಬಿಗೆ ಕಾದಿರುವಂತೆ ನನ್ನ ಚೇತನದಲ್ಲಿ ಪಕ್ವದಶೆಯಲ್ಲಿದ್ದಿರಬೇಕು. ಬೃಂದಾವನದಲ್ಲಿ ಹಿಂದೆ ಅಂದು ಗೋಪಗೋಪಿಯರ ಬಾಳಿನಲ್ಲಿ ಪ್ರಾದುರ್ಭವಿಸಿದ ಮಹದನುಭವವೊಂದು ಪುನರ್ಭವಕ್ಕೆ ಕಾಮಿಸುತ್ತಾ ಈಗ ಏಳು ವರ್ಷಗಳ ಹಿಂದೆ ನಾನು ಕೇಳಿದ ಗೊಲ್ಲ ಹುಡುಗನ ಕೊಳಲಿನ ನಾದದ ಮೂಲಕ ಇಂತು ಸಂಸ್ಕೃತವಾದ ನನ್ನ ಹೃದಯವನ್ನು ಹೊಕ್ಕು ಕಾಲಕ್ರಮೇಣ ಭಗವದನುಗ್ರಹ ರೂಪವಾಗಿಯೂ ಭಗವದ್ಭಕ್ತರೂ ಭಾಗವತಪ್ರಿಯರೂ ಆದ ನನ್ನ ತೀರ್ಥರೂಪರ ಆಶೀರ್ವಾದದ ರೂಪವಾಗಿಯೂ ಈ ಕೃತಿ ಜನಿಸಿರಬೇಕು—ಅಷ್ಟೆ.' ಇದು

ಅವರದೇ ಮಾತು. ಕಾಡಿನಲ್ಲಿ ಕೊಳಲ ದನಿಯೊಂದು ಕೇಳಿದಾಗ ಅದರ ಹಿಂದೆ ಕವಿ ಮೈಮರೆಯುತ್ತಾರೆ. ನೆನಪು ದೂರ—ಬಹು ದೂರ—ಹೋಗಿ ಕೃಷ್ಣನು ಗೋಕುಲದಲ್ಲಿ ಕೆಳೆಯೊಡನೆ ಸಲ್ಲಾಪವಾಡಿದ ದಿನ ಕಣ್ಣಮುಂದೆ ಬರುತ್ತದೆ. ಮತ್ತೆ ಬಗೆ ಈ ಲೋಕಕ್ಕೆ ಮೆಲ್ಲಮೆಲ್ಲನೆ ಜಾರುತ್ತಿರುವಾಗ ಆ ಕಾಡ ಗೋವಳನ ಕೊಳಲ ದನಿ ಕೇಳ ಬಂದು ಸಂಪೂರ್ಣವಾಗಿ ಕವಿ ಎಚ್ಚರುತ್ತಾರೆ. ಹಾಡುವಕ್ಕಿಯ ಉಲಿ ಕೇಳಿಬಂದಾಗ ಸುಂದರವಾದ ಮಿತ್ತಿನ ಕಣಸು ಕಂಡ ಕೀಟ್ಸ್ ಕವಿ, ಅದು ಜಾರಿದಾಗ ಹೀಗೆ ಉದ್ಗಾರವೆಳೆಯುತ್ತಾನೆ :

> 'Was it a vision or a waking dream?
> Fled is that music. Do I wake or sleep?'

ಅದೇ ಅನುಭವವೇ ಇಲ್ಲೂ. ಭಾವಗೀತೆಯೇ ರೂಪಕದ ಒಡಲು ಧರಿಸಿ ಬಂದಿದೆ ಯೆನ್ನಬಹುದು. ಆದರೆ ಅಹಲ್ಯೆಯ ಹಾಗೆ ನಾನಾ ಭಾವಗಳ ಹೊಯ್ದಾಟ ವಾಗಲಿ, ಮನಸಿನ ತೊಳಲಾಟವಾಗಲಿ ಇದರಲ್ಲಿಲ್ಲ.

ಪು.ತಿ.ನ.ರ ಕೃತಿಗಳಲ್ಲಿ ಮೇಲೆದ್ದು ನಿಲ್ಲುವ ಇನ್ನೊಂದು, ಅವರ 'ಕವಿ.' 'ಅನಾದಿ ಕಾಲದಿಂದ ಮಾನವನ ಮನಸ್ಸನ್ನು ಸೂರೆಗೊಂಡು ಅವನಲ್ಲಿ ಪ್ರಶ್ನೆ ಗಳನ್ನು ಎಬ್ಬಿಸಿರುವ ಗಿರಿ ವನ ನದಿ ಚೆಲುವ ದೇವಿ ಮಾನವನ ತೇಜಸ್ಸು— ಈ ಪ್ರಕೃತಿ ಶಕ್ತಿಗಳೇ ಇಲ್ಲಿಯ ಪಾತ್ರಗಳು.' ಇವುಗಳ ದಿನಚರ್ಯೆಯ ಅಂತಿಮ ಗುರಿಯೇನು? ಕತವೇನು? 'ಮತಿ ಎಚ್ಚೆತ್ತರೆ ಬರಿ ಪ್ರಶ್ನೆ—ಜಿಜ್ಞಾಸೆ; ಇದಕ್ಕೆ ಉತ್ತರ, ಹೃದಯ ನಲವಿನಲ್ಲಿ ಸಂಪೂರ್ಣವಾಗಿ ಎಚ್ಚರಗೊಳ್ಳುವಿಕೆ.'

> ಓವೋವೋ ಓವೋವೋ!
> ನೆಲ ಮರೆಯೇ ತರುಪೊನಲೇ
> ಓ ಮಾರುತ ಓ ಮುಗಿಲೇ
> ಓ ನರತೇಜವೆ, ಕವಿಯೇ,
> ಎಚ್ಚರಿ ಎಚ್ಚರಿ ನಲವಿಂ
> ಮುತ್ತಿರಿ ಮುತ್ತಿರಿ ಚೆಲುವಂ
> ಹಿಡಿದುಕೊಳ್ಳಿ ಸಿಕ್ಕಿಹಳು
> ಇಗೊ ಮುಂದೆಯೆ ನಕ್ಕಿಹಳು.

—ಇದೇ ಕವಿಯ ಜೀವನ ಸಂದೇಶ.

'ದೋಣಿಯ ಬಿನದ' ಇನ್ನೊಂದು ಕೃತಿ. ಇದರ 'ವಸ್ತು ಲಘು. ಇಲ್ಲಿನ ತರುಣ ತರುಣಿಯರ ನಡವಳಿಕೆಗಳು ಈಗಿನ ಕಾಲದಲ್ಲಿ ನಡೆಯುಬಹುದಾದಂಥವೇ.' ನಲವಾಂತರೆ, ಒಲವಾಂತರೆ, ಸಂಪ್ರದಾಯದ ಕಟ್ಟುಗಳೆಲ್ಲ ಸಡಿಲವಾಗುತ್ತವೆ. 'ರೂಢಿಯ ಮರೆದು ಸಾಹಸಕೊಲಿದು ಮುದವ ಮುಂದು ಮಾಡೀ' 'ನಾವದೃಷ್ಟಕೆ ಕಾಣದಿಷ್ಟಕೆ ತೇಲಿ ನಡೆವೆವೊತು', ಎಂದು ಕಾದಲ ಕಾದಲೆಯರು ಪ್ರಣಯದ ನೌಕೆಯ ಮೇಲೆ ತೇಲಿ ಹೋದಾಗ, ಬಾಳಿನಲ್ಲಿ ಈ ಸಾಹಸವೇ ಚೆನ್ನ ಎಂದು ಉಳಿದವರು ಹೇಳುತ್ತಾರೆ. ಇದು ಬಾಳ ಗೀತ.

ಈ ಕವಿಯ ದೃಷ್ಟಿಕೋನ ಎಲ್ಲರಿಗೂ ಒಪ್ಪಿಗೆಯಾಗದಿರಬಹುದು. ಒಪ್ಪಿಗೆಯಾಗುವದು ಸಾಧ್ಯವಿಲ್ಲ. ಬಾಳಿನ ಒಂದು ಮುಖವಿದು ಮಾತ್ರ ಎಂದು ಎನಿಸಬಹುದು. ಚೆಲುವಿನ ಆರಾಧಕರಿವರು. ದೇವರ ಆಣತಿಗೆ ತಲೆಬಾಗಬೇಕು ; ಆತನ ಲೀಲೆಯನ್ನು ಕೊಂಡಾಡಬೇಕು—ಎಂದು ಆಂಗ್ಲ ಕವಿ ಬ್ರೌನಿಂಗ್ ಹೇಳಿದ. ಅದೇ ಸೂತ್ರ ನಮ್ಮ ಹಲವು ಹಿಂದಿನ ಕವಿಗಳ ಕೃತಿಗಳ ಹಿನ್ನೆಲೆ. ಈ ಸಂಸ್ಕೃತಿಯ ತಳಹದಿಯ ಮೇಲೆಯೇ ಪು.ತಿ.ನ.ರ ಕೃತಿಯೆಲ್ಲ ನಿಂತಿದೆ. ಸಂಕ್ಷೋಭೆಯ ಸಾಹಿತ್ಯ ರಚಿಸಬೇಕು, ಸಂಪ್ರದಾಯದ ಹೆಪ್ಪುಗಟ್ಟಿದ ತಳಹದಿಯನ್ನು ಅಲುಗಿಸಬಲ್ಲ ಕ್ರಾಂತಿಯ ಲಾವಾಪ್ರವಾಹವನ್ನು ಹರಿಸಬೇಕು—ಎಂಬ ಮನೋಭಾವಕ್ಕೆ ಇವರ ಸಾಹಿತ್ಯ ಒಗ್ಗುವುದಿಲ್ಲ. ಆದರೆ ತನ್ನ ಊರು ತನ್ನ ಜನ ತನ್ನ ಆವರಣಗಳಲ್ಲಿ ಒಂದಾಗಿ ಆನಂದಾನುಭೂತಿ ಹೊಂದಿ, ಈ ಆನಂದವನ್ನು ಕನ್ನಡಿಗರಿಗೆ ಹಂಚಿದ ಸಜ್ಜನಿಕೆಯ ಕವಿಯನ್ನು ಹೆಸರಿಸಬೇಕಾದರೆ ಪು.ತಿ.ನ.ರನ್ನು ಮರೆಯುವಂತಿಲ್ಲ. ಈ ಕವಿಯೂ ಇದಕ್ಕಿಂತ ಹೆಚ್ಚೇನನ್ನೂ ಬಯಸರು.*

---

* ೧೯೪೭.

# ಶ್ರೀರಂಗ

೧೯೩೦ನೆಯ ಸೆಪ್ಟೆಂಬರ್ ತಿಂಗಳ ಒಂದು ದಿನ: ಧಾರವಾಡದ ಕರ್ನಾಟಕ ಕಾಲೇಜದ ನಾಟ್ಯ ಸಂಘದವರು 'ಉದರ ವೈರಾಗ್ಯ' ಎಂಬ ಒಂದು ನಾಟಕ ಆಡಿದರು.

ನಾಟಕ ಬಲು ಹೊಸದು: ವಸ್ತುವಿನಲ್ಲಷ್ಟೇ ಅಲ್ಲ, ವಿಚಾರದಲ್ಲೂ; ಅದಕ್ಕೂ ಮಿಗಿಲಾಗಿ ಪ್ರಯೋಗದಲ್ಲಿ.

ಬಹುಕಾಲದಿಂದ ಆ ಕಾಲೇಜಿನಲ್ಲಿ ಕನ್ನಡಕ್ಕೂ ಮರಾಠಿಗೂ ಮೇಲಾಟ. ಕನ್ನಡಕ್ಕೆ ತನ್ನತನವೇ ಇಲ್ಲ–ಎಂದು ಮರಾಠಿಗಳಿಂದ ಮೂಗು ಮುರಿತ. ಸಾಕಷ್ಟು ಆತ್ಮ ವಿಶ್ವಾಸವಿಲ್ಲದ ಕನ್ನಡಿಗರು ಮರು ನುಡಿಯದೆ ತಲೆ ತಗ್ಗಿಸಿ ನಡೆಯುತ್ತಿದ್ದರು.

ಆದರೆ 'ಉದರ ವೈರಾಗ್ಯ' ನಾಟಕ ಪ್ರಯೋಗದಿಂದ ಇವರ ಹಮ್ಮು ಮುರಿಯಿತು. ಅದರಲ್ಲಿ ನಾವೀನ್ಯ, ನಗೆಯ ಅಲೆ, ವಿಚಾರದ ತಿಕ್ಕಾಟ ಇವನ್ನು ಕಂಡು, ಕನ್ನಡದಲ್ಲೂ ಇಂಥ ಕೃತಿ ರಚನೆಯಾಗಿದೆಯಲ್ಲಾ ಎಂದು ಮರಾಠಿ ಪ್ರೇಮಿಗಳಿಗೆ ಕರುಳು ಕಿವಿಚಿದ ಹಾಗಾಯಿತು. ಕನ್ನಡ ಪ್ರೇಮಿಗಳು ಹೆಮ್ಮೆ ತಾಳಿದರು. ನಾಟಕ ಕರ್ತೃವಾದ 'ಶ್ರೀರಂಗ'ರಿಗೆ ಅಭೂತಪೂರ್ವ ಸನ್ಮಾನ ಲಭಿಸಿತು.

ಸುಮಾರು ಎತ್ತರದ, ಬಡಕಲು ಮೈಯ, ಅಗಲವಾದ ಹಣೆಯ ವ್ಯಕ್ತಿ. ಜೀವನದ ಅನುಭವದ ಗುರುತಾಗಿ ಮುಖದ ಮೇಲೆ ಸುಕ್ಕು. ಸಾದಾ ಸರಳ ಜೀವಿ. ತಮ್ಮ ಜನ ಒಲವಿನ ಕಾಣಿಕೆಯಾಗಿ ಹಾಕಿದ ಹಾರದ ಭಾರದಿಂದ ಅವರು ಬಾಗಿಹೋದರು. ಅವರ ಸಾಹಿತ್ಯ ಜೀವನದಲ್ಲಿ ಅದೊಂದು ದೊಡ್ಡ ಮಜಲು.

ಆದರೆ ಆ ದಿನ ಅವರನ್ನು ಸನ್ಮಾನಿಸಿದವರಲ್ಲಿ—ಅವರ ನಾಟಕ ನೋಡಿದವ

ರಲ್ಲಿ—ಬಹು ಜನಕ್ಕೆ ಅವರ ಹಿಂದಿನ ಕಷ್ಟ ಜೀವನ ಗೊತ್ತಿರಲಿಕ್ಕಿಲ್ಲ. ಭಾರತದಲ್ಲಿ ಪ್ರೌಢ ವಿದ್ಯಾಭ್ಯಾಸ ಮುಗಿಸಿಕೊಂಡು ಇಂಗ್ಲೆಂಡಿಗೆ ಹೋದದ್ದು ಐ.ಸಿ.ಎಸ್. ಕಲಿಕೆಗೆಂದು—'ಜಾಗಿರದಾರ'ರಾಗಿ. ಅದು ಸಾಧ್ಯವಾಗದಿದ್ದರೆ ಬ್ಯಾರಿಸ್ಟರಿ ಆದರೂ ಆದೀತೇನೋ ಎಂದು ಆಸೆಪಟ್ಟದ್ದು. ಕೊನೆಗೆ ವಿಧಿ ಸೆಳೆದದ್ದು ಎಂ.ಎ.ಗೆ—ಭಾಷಾಶಾಸ್ತ್ರದತ್ತ. ಪರಿಣತಿ ಪಡೆದದ್ದೂ ಅದರಲ್ಲೆ.

ಆದರೆ ಭಾರತಕ್ಕೆ ಬಂದಾಗ ಅವರಿಗೆ ಸ್ವಾಗತ ನೀಡಲು ಕಾದಿದ್ದ ವಾತಾವರಣವೇ ಬೇರೆ. ತಮ್ಮ ಕನಸಿಗೆ ಅನುಗುಣವಾಗಿ ನಡೆಯಲಿಲ್ಲವೆಂದು ಮನೆಯವರ ಮುನಿಸು. ಕಲಿಕೆಗಾಗಿ ಎತ್ತಿದ ಸಾಲದ ಹಣ ವ್ಯರ್ಥವಾಯಿತಲ್ಲ—ಎಂದು ಅವರ ನೋವು. ಆದ್ದರಿಂದ ಜಾಗಿರದಾರರ ಕಡೆಗೆ ತಾತ್ಸಾರ. ಪರದೇಶಕ್ಕೆ ಹೋಗಿ ಬಂದರೆಂದು ಮಠಾಧಿಪತಿಗಳಿಂದ ಬಹಿಷ್ಕಾರದ ಬೆದರಿಕೆ. ಈ ತಾತ್ಸಾರ-ಬೆದರಿಕೆಗಳನ್ನು ಶಮನ ಮಾಡಲು ತಕ್ಕ ಉನ್ನತ ಅಧಿಕಾರವಾದರೂ ಇತ್ತೆ ?—ಎಂದರೆ, ಜಾಗಿರದಾರರನ್ನು ಆಗ ಅಪ್ಪಿದ್ದು ನಿರುದ್ಯೋಗ. ಇವನ್ನೆಲ್ಲಾ ಮರೆತು ತಾಯಿಯ ಪ್ರೀತಿಯ ಮಡಿಲಲ್ಲಾದರೂ ತಂಗಲು ಆ ತಾಯಿಯೂ ಇಲ್ಲ. ಅವರಿಗೆ ಹದಿನೈದು ವರ್ಷವಾಗಿದ್ದಾಗಲೇ ತಾಯಿ ತೀರಿಕೊಂಡಿದ್ದರು !

ಇನ್ನು ಅವರು ಬದುಕುವುದಕ್ಕೆ ಇದ್ದ ಆಕರ್ಷಣೆಯಾದರೂ ಯಾವುದು ?

ಅದಕ್ಕೇ ಅವರು ತಮ್ಮ ಬಾಳು ಕೊನೆಗಾಣಿಸಿಕೊಳ್ಳಲು ಪ್ರಯತ್ನ ಮಾಡಿದ್ದು. ಆಗ ತಾನೇ ವಿಷಮ ಶೀತಜ್ವರದಿಂದ ಎದ್ದಿದ್ದರೂ ಪಟ್ಟಾಗಿ ಎಣ್ಣೆಯ ಉಣಿಸು ತಿಂದರು. ಚಳಿಯಲ್ಲಿ ಹೊರಗೆ ಮಲಗಿದರು. ಮತ್ತೆ ವ್ಯಾಧಿ ವಿಷಮಿಸಿಕೊಂಡು ಸಾಯಬೇಕೆಂಬ ಹಂಬಲ. ಆದರೆ ಆ ಸಾವು ಇವರನ್ನು ಮುಟ್ಟಲಿಲ್ಲ; ಬಿಟ್ಟು ಓಡಿತು. ಬೆಳಗ್ಗೆ ಎದ್ದಾಗ ಇವರು ಸತ್ತೇ ಇರಲಿಲ್ಲ. ಕೈಕಾಲು ಅಲುಗಾಡುತ್ತಿತ್ತು.

ಆಗ ಬಾಳಿನಲ್ಲಿ ಹೊಸ ಅರ್ಥ ಕಂಡರು. ಬಾಳಿನಲ್ಲಿ ಹೋರಾಡಬೇಕು. ತಮ್ಮ ವಿರುದ್ಧ ನಿಂತ ಶಕ್ತಿಗಳನ್ನೆಲ್ಲ ಎದುರಿಸಬೇಕು. ಹೊಸ ಜಗತ್ತು ಕಟ್ಟಬೇಕು. ಹೇಡಿತನ ಹೊಲ್ಲ....

ಈ ವಿಚಾರದ ಫಲವೇ 'ಉದರ ವೈರಾಗ್ಯ.'

ಅದನ್ನು ರಂಗಭೂಮಿಯಮೇಲೆ ಪ್ರಯೋಗಿಸುವ ವೇಳೆಗೆ ಅವರಿಗೆ ಕರ್ನಾಟಕ ಕಾಲೇಜದಲ್ಲಿ ಪ್ರೊಫೆಸರ್ ನೌಕರಿಯೂ ದಕ್ಕಿತ್ತು.

ಉದರ ವೈರಾಗ್ಯ ಅವರದೇ ಆತ್ಮಕಥನವೇನೋ ಎಂಬಂತಿದೆ. ಅವರು

ಸ್ವಭಾವತಃ ಏಕಾಂತಪ್ರಿಯ. ಆದರೂ ಮಾತಿನ ಚಟ. ಅಲ್ಲದೆ ಅಭ್ಯಾಸ ಮಾಡಿದ್ದು ಭಾಷಾಶಾಸ್ತ್ರ. ಈ ಮೂರೂ ಮುಪ್ಪುರಿಗೊಂಡದ್ದರ ಫಲಿತವೇ 'ಉದರ ವೈರಾಗ್ಯ': ತಾವು ತಮ್ಮಲ್ಲೇ ನಡಸಿದ ಸಂಭಾಷಣೆಯ ನಿರೂಪಣೆ. 'ತಾವು' ಎಂದರೆ ಯಾರು ? 'ವಂಶಾನುವಂಶಿಕವಾಗಿ, ರಕ್ತಗತವಾಗಿ ನಡೆದು ಬಂದ ವೈದಿಕ ಸಂಪ್ರದಾಯದ ಪ್ರತೀಕವೂ ನಾನು ; ಶಿಕ್ಷಣವನ್ನು ಪಡೆದುದಕ್ಕೆ ಅನಿವಾರ್ಯವಾಗಿ ಸಾಮಾಜಿಕ ಜೀವನದಲ್ಲಿ ಬೆರೆತುಕೊಳ್ಳಬೇಕಾದ ಆಧುನಿಕನೂ ನಾನು ; ನನ್ನವರಿಗಿಂತ ಹೆಚ್ಚಿನ ಅನುಭವವನ್ನೂ ಬುದ್ಧಿಶಕ್ತಿಯನ್ನೂ ಪಡೆದು ಅವರಿಗೆ ಮುಂದಾಳು ಆಗಬೇಕೆಂಬ ಸಾಸಿಗನೂ ನಾನು ; ನನ್ನವರ ದಡ್ಡತನವನ್ನೂ ಬಡತನವನ್ನೂ ತಡೆಯದ ಕುಟುಂಬದ ಅಸಂತುಷ್ಟ ಸದಸ್ಯನೂ ನಾನು ! ಈ ನಾಲ್ವರನ್ನು ಇದಿರು ಸಾಲಾಗಿ ನಿಲ್ಲಿಸಿ, ನಿರುದ್ಯೋಗ ಲಂಪಟನಾಗಿ, ಕೈಯಲ್ಲಿ ಸಿಗರೇಟು ಬಾಯಲ್ಲಿ ತಂಬಾಕು ಹೊಟ್ಟೆ ಬರಿದು ಹೆಮ್ಮೆ ಹಿರಿದು ಆಗಿ ಪರೀಕ್ಷಕನಾಗಿರುವ ಇಂಗ್ಲೆಂಡ-ರಿಟರ್ನ್ಡ್-ಇಂಡಿಯಾ-ಟರ್ನ್‌ಟರ್ನ್ಡ್ ವ್ಯಕ್ತಿಯೊಬ್ಬ ನಾನೆ ! ವೇದವ್ಯಾಸಾಚಾರ್ಯ–ಶ್ರೀನಿವಾಸರಾವ–ಮಾಧವ–ಮನೋಹರ–ಆರ್. ಪಿ. ಜಹಗೀರದಾರ–ಈ 'ಅಯ್ದು ನಾನು'ಗಳೆ ತಂತಮ್ಮೊಳಗೆ ವಿಚಾರ ಮಾಡುತ್ತ ನನ್ನ 'ಉದರ ವೈರಾಗ್ಯ' ನಾಟಕವನ್ನು ಬರೆದುವು—ಇಲ್ಲವೆ ಬರೆಯಿಸಿದುವು ಎಂದು ಹೇಳಬಹುದು,' ಎಂದು* ಅವರೇ ಹೇಳಿಕೊಂಡಿದಾರೆ, 'ಆತ್ಮಕಥನ'ದಲ್ಲಿ.

ಲಂಡನ್ನಿನಿಂದ ಹಿಂದಿರುಗಿದ ನಿರುದ್ಯೋಗಿ. ಅಲ್ಲಿ ಸ್ವತಂತ್ರ ವಾತಾವರಣದಲ್ಲಿ ಉಸಿರಾಡಿ ಬಂದ, ಇಲ್ಲಿಯ ಬಂಧನದಿಂದ ಉಸಿರು ಸಿಕ್ಕು ತೊಳಲಾಡುವ ಸ್ಥಿತಿ. ಆಗ ಕನ್ನಡದ ಬಗ್ಗೆ ಇದ್ದ ತಾತ್ಸಾರ ; ಮರಾಠಿ ವೋಹ. ಇವುಗಳ ಜತೆಗೆ ಜನದ ಅಜ್ಞಾನ: ಬ್ರಾಹ್ಮಣರದು ಆಚಾರದ ಅಜ್ಞಾನ ; ಒಕ್ಕಲಿಗರದು ಹುಂಬತನದ ಅಜ್ಞಾನ. ಇವೇ ಈ ನಾಟಕದ ವಸ್ತು.

ಶ್ರೀರಂಗರ ಎಲ್ಲ ನಾಟಕಗಳಲ್ಲೂ† ಹೆಚ್ಚು ಕಡಮೆ ಇದೇ ಭಾವ ಬಂದು ಹೋಗುತ್ತದೆ. ಹಳೆಯ, ಸತ್ತ, ಸಮಾಜವನ್ನು ಕಿತ್ತೊಗೆದು ಹೊಸದನ್ನು ಕಟ್ಟಬೇಕೆಂಬ ನವೋನವ ಭಾವದ ತಾರುಣ್ಯದ ಹುಮ್ಮಸ್ಸು ಒಂದು ಕಡೆ ; ಇದಕ್ಕೆ

---

* 'ಸಾಹಿತ್ಯಜ್ಞರ ಆತ್ಮಕಥನ', ಮಿಂಚಿನಬಳ್ಳಿ.

† ಮೊದಲಿನವುಗಳಲ್ಲಿ.

ಆಸ್ಪದ ಕೊಡದೆ ಹೆಣ ಭಾರವಾಗಿ ಜೋತು ಬಿದ್ದು ಹಿಂದಕ್ಕೆ ಜಗ್ಗುವ ಸಂಪ್ರದಾಯ ಇನ್ನೊಂದು ಕಡೆ: ಪೌರಾಣಿಕ ಐತಿಹಾಸಿಕ ನಾಟಕಗಳಲ್ಲಿ ನಾಯಕ ಖಳನಾಯಕರು ಇದ್ದ ಹಾಗೆ. ಈ ತಿಕ್ಕಾಟಕ್ಕೆ ಹರಿತ ಕೊಡುವ ಹಾಗೆ ಆಚಾರಿ–ವಿಧವೆ–ಹೆಣ್ಣು ಇವರ ಪಾತ್ರ ಸೃಷ್ಟಿ. ಪ್ರತಿಕೂಲ ವಾತಾವರಣದಿಂದ ಹುಚ್ಚೆದ್ದ ತರುಣ ಕನಸಿಗನ ಪ್ರತಿಕ್ರಿಯೆಯೇ ನಾಟಕದ ವಸ್ತು. ಹಂತ ಹಂತಕ್ಕೂ ಮಾತಿನ ಮಸೆದಾಟ. ಹಿಂದಿನ ಪಾತ್ರದ ಮಾತನ್ನೆ ಮುಂದಿನ ಪಾತ್ರ ಹಿಡಿದು, ಹಿಗ್ಗಾ-ಮುಗ್ಗಾ ಲಾಗ ಹಾಕಿಸುವ ಕೈಚಳಕ. ನಗೆಯಲ್ಲಿ ಮೊನೆ. ಮಾತಿನಲ್ಲಿ ಕುಚೋದ್ಯ, ಕೊಂಕು, ಚಮತ್ಕಾರ.

"ಅವರ ಹರಿತವಾದ ಬುದ್ಧಿ ಶಕ್ತಿ, ವ್ಯಂಗ್ಯ ಹಾಸ್ಯ, ಕಟು ವಿಡಂಬನೆ, ಮಾರ್ಮಿಕವಾದ ಮಾತುಗಾರಿಕೆ, ಹದಿರು ನುಡಿಯ ಹೆಕ್ಕಳ ಮತ್ತು ಅವರ ವಿಚಾರ ಸರಣಿ, ವ್ಯಕ್ತಿತ್ವ–ಇವುಗಳೆಲ್ಲ ಅವರ ನಾಟಕಗಳಲ್ಲಿ ಚೆನ್ನಾಗಿ ಹೊಮ್ಮಿವೆ. ಬರಿಯ ವಿನೋದಕ್ಕಾಗಿ ಅಲ್ಲ ಅವರ ನಾಟಕಗಳು: ಅವು ವಿಚಾರಕ್ಕಾಗಿ, ವಿಕಾಸಕ್ಕಾಗಿ—ವಿಡಂಬನ ವಿನೋದಗಳ ಮೂಲಕ"—ಎಂದು ಒಬ್ಬರು ವಿಮರ್ಶಕರು* ಹೇಳಿದ ಮಾತು ಅಕ್ಷರಶಃ ನಿಜ. "ಕಟ್ಟಿದ ಮನೆಯನ್ನು ರಿಪೇರಿ ಮಾಡುವುದೂ, ಸಮಾಜ ಸುಧಾರಿಸಬೇಕೆನ್ನುವುದೂ ಅಷ್ಟೆ ಮೂರ್ಖತನ. ಚಿರಕಾಲ ಬಾಳಬೇಕಾದರೆ ಹೊಸ ಮನೆಯನ್ನೇ ಕಟ್ಟಬೇಕು. ಹೊಸ ಸಮಾಜವನ್ನೇ ಸಿದ್ಧ ಪಡಿಸಬೇಕು." ವಿಶ್ವಾಮಿತ್ರಸೃಷ್ಟಿ ಎಂಬ ಕಾದಂಬರಿಯಲ್ಲಿ ಶ್ರೀರಂಗರು ಬರೆದಿರುವ ಈ ಮಾತು ಅವರ ಎಲ್ಲ ಕೃತಿಯ ತಿರುಳು. ಈ ಭಾವನೆಯ ಪ್ರಚಾರದ ಆವೇಶದಲ್ಲಿ ಇವರ ಪಾತ್ರಗಳು ಆಗಾಗ್ಗೆ ಉದ್ದಾಮ ಭಾಷಣಕಾರರಾಗುವುದುಂಟು. ಒಂದು ಪಾತ್ರ ಮಾತಾಡುತ್ತಿರುವಾಗ ಎದುರು ಪಾತ್ರ ಕಣ್ಣು ಬಾಯಿ ಅಗಲಿಸಿ ಕೇಳುತ್ತ ನಿಲ್ಲಬೇಕಾಗುತ್ತದೆ. ನಾನು ಪ್ರಚಾರಕ್ಕಾಗಿ ನಾಟಕ ಬರೆಯುಲಿಲ್ಲ—ಎಂದು ಅವರೆಂದರೂ, ತಮ್ಮ ತೀವ್ರಭಾವನೆಗಳನ್ನು ಪಾತ್ರಗಳ ಬಾಯಲ್ಲಿ ಆಡಿಸುವ ಚಟ ಬಹಳ. ಇದಕ್ಕೆ ಉದಾಹರಣೆ ಅವರ 'ಹರಿಜನ್ವಾರ'.

'ಶ್ರೀರಂಗ'ರಿಗೆ ಅಖಿಲ ಕರ್ನಾಟಕದಲ್ಲಿ ಕೀರ್ತಿ ತಂದು ಕೊಟ್ಟದ್ದು 'ಹ-ರಿ-ಜ-ನ್ವಾ-ರ'. 'ಹ-ರಿ-ಜ-ನ್ವಾ-ರ' ಎಂಬ ಪದಪ್ರಯೋಗದಲ್ಲೇ 'ಶ್ರೀರಂಗ'ರ ಹದಿರುನುಡಿಯ (pun) ಚಾತುರ್ಯವನ್ನು ಕಾಣಬಹುದು. ಹರಿಜನ ವಾರ

* ಎಂ. ವಿ. ಸೀತಾರಾಮಯ್ಯ, 'ಕನ್ನಡ ನುಡಿ.'

ಆಚರಿಸಬೇಕೆಂಬ ಆಟೋಪದ ಕತೆ ಇದು. ಆದ್ದರಿಂದ 'ಹರಿಜನ ವಾರ.' ಬ್ರಾಹ್ಮಣ್ಯ ಸತ್ತಿದೆ. ಬ್ರಾಹ್ಮಣ್ಯ ಅಳೆಯಬೇಕಾದ್ದು ಜನ್ಮದಿಂದಲ್ಲ, ಜನಿವಾರದಿಂದಲ್ಲ; ನಡವಳಿಕೆಯಿಂದ. ಬ್ರಾಹ್ಮಣ್ಯ ಹಳಸಿರುವಂತೆಯೇ, ಜನಿವಾರವೂ ಹಳಸಿದೆ. ಕೊಳೆಯ ಬೀಡು ಅದು. ಆದ್ದರಿಂದ 'ಹರಿ-ಜನಿವಾರ'. ಹರಿಜನ ಯುದ್ಧ ಕುರಿತದ್ದರಿಂದ ಅದು 'ಹರಿಜನ ವಾರ್ (war).' ಹೀಗೆ ಒಂದೇ ಮಾತಿನಲ್ಲಿ ಜಟ್ಟಿಯ ಕೈಚಳಕ, ಬಫೂನಿನ ಕಚಕುಳಿ ಇಟ್ಟು, ಶ್ರೀರಂಗರು ನಾಡಿನ 'ಕಲಿತವ' ರಲ್ಲೆಲ್ಲ ವಿಚಾರದ ಸುಳಿ ಎಬ್ಬಿಸಿದರು.

'ಸಂಧ್ಯಾಕಾಲ'ದಲ್ಲಿಯೂ ಈ ಬ್ರಾಹ್ಮಣಿಕೆಯ ಅಂಧಶ್ರದ್ಧೆಯೇ ನಗೆಗೀಡಾಗಿದೆ; ನಗೆಗೇಡಾಗಿದೆ. ಇವರ ಎಲ್ಲ ನಾಟಕವೂ ಸಾಮಾನ್ಯವಾಗಿ 'ಬ್ರಾಹ್ಮಣ' ಸಮಾಜದ—ಅದರಲ್ಲೂ ಒಂದು ಪಂಗಡದ 'ಆಚಾರಿ'ಗಳ—ವಿಡಂಬನೆ.

ಏಕಸೂತ್ರತೆಯ ದೃಷ್ಟಿಯಿಂದ ಇವರ 'ಪ್ರಪಂಚ ಪಾಣಿಸತ್ತು' ಹೆಸರಾಗಿದೆ. ಸಾಮ್ಯವಾದದ ವಿಚಾರ ಪ್ರಯೋಗವನ್ನೂ ಇಲ್ಲಿ ಕಾಣಬಹುದು. ಅಂತೆಯೇ ಬಡತನದ ಸಮಸ್ಯೆ ಕುರಿತ 'ದರಿದ್ರನಾರಾಯಣ'; ವಿಧವೆಯು ಗಂಡೋ ಹೆಣ್ಣೋ ಎಂದು ಮಾತಿನ ಚಟ ಎಬ್ಬಿಸಿ, ಕುಚೋದ್ಯದ ಕಡಲುಬ್ಬಿಸಿ, ಸಮಾಜದ ಹೃದಯ ಹೀನತೆಗಾಗಿ ಅದಕ್ಕೆಮುಸಿ ಬಳಿದು, ವಿಚಾರ ಮಥನ ಮಾಡುವ 'ಗಂಡೋ ಹೆಣ್ಣೋ'; ಹೆಣ್ಣನ್ನು ಅಷ್ಟಪುತ್ರ ಸೌಭಾಗ್ಯವತೀ ಭವ—ಎಂದು ಹರಸಿ, ಆ ಅಷ್ಟಪುತ್ರ ಸೌಭಾಗ್ಯ ಲಾಭಕ್ಕಾಗಿ, ಆಕೆಯನ್ನು ಮೂಳೆಯ ಹಂದರ ಮಾಡಿ, ಯಮನ ತೌರಿಗೆ ಅಟ್ಟುವ 'ಧರ್ಮಸಮಾಜ'ಕ್ಕೆ ಸವಾಲಾಗಿ 'ಸಂಸಾರಿಗ ಕಂಸ' —ಈ ನಾಟಕಗಳನ್ನು ನಾವು ಎಂದೆಂದೂ ಮರೆಯುವ ಹಾಗಿಲ್ಲ.

೧೯೪೪ರಲ್ಲಿ ನಾಡಿಗೆ 'ಬರ' ಬಂದಿತು 'ಬರ'ದ ಸಾಹಿತ್ಯ ಬರಲಿಲ್ಲ-ಎಂದು ಪ್ರಗತಿಶೀಲ ಸಾಹಿತಿಗಳು ಕೂಗಿದರು. ಶ್ರೀರಂಗರ ಏಕಾಂಕ ನಾಟಕ ಸಂಗ್ರಹ 'ನಿರಾಹಾರ'ಕ್ಕೆ ಬಹುಶಃ ಏಕಾಂಕ ನಾಟಕ ಕ್ಷೇತ್ರದಲ್ಲೇ ಅಗ್ರಸ್ಥಾನ ದೊರಕೀತು. ಅದರಲ್ಲಿ ನಮ್ಮ 'ಬೂರ್ಷ್ವಾ' ಜನದ ಹೃದಯಹೀನತೆಯನ್ನು ಕಾಣಬಹುದು. ಬರದ ಮಾತು ಎಲ್ಲರೂ ಆಡುವವರೇ. ಮಾತಾಡುವ ಕಾಲ ಹೋಯಿತು—ಎನ್ನುವವರೂ ಅವರೇ. ಆದರೆ ಒಬ್ಬನಾದರೂ ಕಾರ್ಯೋನ್ಮುಖನಾಗಲೊಲ್ಲ. ಬರದ ಸುದ್ದಿ ಕೇಳಿ ನಾಟಕಕಾರನಲ್ಲುಂಟಾದ ಹೃದಯಮಥನವೇ ಮೊದಲ ನಾಟಕ—'ಮುನ್ನೋಟ'. ಬಂಗಾಳದ ಬರದ ಸುದ್ದಿ ಕೇಳಿ ಸಭೆ ಏರ್ಪಡಿಸಿ,

ನಿರ್ಣಯ ಮಾಡಿ, ಸಮಿತಿ ರಚಿಸಿ, ತಿಂಡಿ ತಿಂದು ತೆರಳುವ ಮಧ್ಯಮ ವರ್ಗದ ವರ ಹೃದಯಹೀನತೆಯ ಚಿತ್ರ ಎರಡನೆಯ ನಾಟಕ—'ಭಾಗ್ಯದ ಬರಗಾಲ.' ಸನಾತನಿ 'ಹರಿಸರ್ವೋತ್ತಮಾಚಾರ್ಯ'; ಗಾಂಧೀ ಪಂಥದ ಮುಂದಾಳು 'ನೂಕಪ್ಪಣ್ಣ'; ಪ್ರಗತಿವಾದಿಯೆಂಬು ಹೇಳಿಕೊಳ್ಳುವ, ಬರಿ ತಲೆಯ, ಖಾದಿ ಪೈಜಮುದ, ಶರಟು-ಜಾಕೆಟಿನ 'ಯಾಕಪ್ಪಣ್ಣ'; ಸ್ತ್ರೀ ಚಳವಳಿಯ ನಾಯಕಿ 'ಶ್ರೀಮತಿ ತೂಕಮ್ಮ'; ಕನಸುಗಾರ, ಯಥಾರ್ಥದೂರ 'ಕವಿ' ಮಹಾರಾಯ್ ಬಹದ್ದೂರ್ 'ಮೂಕಪ್ಪ'—ಈ ಎಲ್ಲ ಸ್ವಾರ್ಥಿಗಳು ಸೇರಿದೆಡೆಯಲ್ಲಿ 'ವಿಚಾರ ವಾದಿ' 'ನಾಟಕಕಾರ'ನ ಮಾತಿಗೆ ಬೆಲೆಯೆಲ್ಲಿ? ಬಂಗಾಳದ ಕರುಣ ಕತೆ ಕೇಳಿ, ಎದೆದುಂಬಿ ಕಣ್ಣೀರು ತಂದುಕೊಂಡು, ತನ್ನಲ್ಲಿದ್ದ ಕಾಸು ಕೊಡಲು ಮುಂದೆ ಬಂದ ಬಡ ರೈತನಿಗೆ ದೊರಕಿದ ಉತ್ತರ, ತಾತ್ಸಾರದ ನಗೆ. ಇದು ಸಮಾಜ ಸೇವಕರ ಸೇವೆಯ ಬಗೆ. 'ಬೀದಿಯ ಭೂತ', 'ಬಕಾಸುರ' ಇವುಗಳಲ್ಲಿ ಈ ಕ್ಷಾಮಮಾರಿ ಕನ್ನಡ ನಾಡಿನ ಮನೆಯ ಮುಂದೆಯೆ ನಡೆದು ಬಂದಿದೆ. ಈ ಭೂತ ಎದುಗೊಂಡಾಗ ಈ 'ಹೊಟ್ಟೆತುಂಬಿದ' ಜನ ಯಾವ ಪ್ರತಿಕ್ರಿಯೆ ತೋರಿಸುವ ರೆಂಬುದರ ನಗ್ನಚಿತ್ರವನ್ನು ಇಲ್ಲಿ ಕಾಣಬಹುದು.

ಶ್ರೀರಂಗರ ಹರಟೆ ಕಾದಂಬರಿಗಳಲ್ಲೂ ಇದೇ ವಸ್ತು, ಇದೇ ಭಾವ, ಇದೇ ವ್ಯಂಗ್ಯ, ಇದೇ ಹದಿರು ನುಡಿ, ಇದೇ ಮಾರ್ಮಿಕ ನಗೆ. ಅವರ 'ವಿಶ್ವಾಮಿತ್ರ ಸೃಷ್ಟಿ' ಅಪೂರ್ವಸೃಷ್ಟಿ. ಅವರು ಕವನಗಳನ್ನೂ ಬರೆದಿದ್ದಾರೆ. 'ಆಹ್ವಾನ' ಕವನ ದಲ್ಲಿನ ವಿಚಾರದ ಆಹ್ವಾನವೂ ಇದೇ :

> ನಂಬುಗೆ ಇಲ್ಲದೆ ನಡೆಯದೆ ಬಾಳು ?
> ನಂಬಿ ನಂಬಿದರು ಜೀವನ ಹಾಳು ;
> ಅಳಿಯದಿಹುದು ಗೋಳು !
> ಕೊಂಬೆಯಿಂದ ಕೊಂಬೆಗೆ ತಾ ಕೋತಿ
> ಹಾರವ ತೆರದಲಿ ನಂಬುಗೆ
> ನರನನು ಹಾರಿಪುದೇ ಸಂಸ್ಕೃತಿ !

ಇದು ಅವರ ಕವನ. ನಾಟಕದ ವಿಚಾರಕ್ಕಿಂತ ಯಾವ ರೀತಿಯಲ್ಲಿ ಭಿನ್ನ ?

ಸಂಪ್ರದಾಯ-ಅಂಧಶ್ರದ್ಧೆಗಳ ವಿರುದ್ಧ ಅಂದಿನ ಯುವ ಜನ ನಡಸಿದ ಹೋರಾಟದ ನಾಟಕ ಬರೆದು, ಸಮಾಜಕ್ಕೂ ನಾಟಕಕ್ಕೂ ಕೊಂಡಿ ಏರ್ಪಡಿಸಿ, 'ಸಮಾಜಕ್ಕಾಗಿ ನಾಟಕವೇ ಹೊರತು ನಾಟಕಕ್ಕಾಗಿ ನಾಟಕವಲ್ಲವೆಂಬುದನ್ನು ತೋರಿಸಿಕೊಟ್ಟ ಪ್ರಧಾನ ನಾಟಕಕಾರರು—'ಶ್ರೀರಂಗ.'*

* ೧೯೪೭.

# ರನ್ನ

ಸುಮಾರು ಸಾವಿರ ವರ್ಷಗಳ ಹಿಂದೆ ಬದುಕಿದ್ದು, ಕನ್ನಡದಲ್ಲಿ ಉತ್ತಮ ಕಾವ್ಯರಚನೆಗೈದು, ಕನ್ನಡದ ಅಗ್ರಶ್ರೇಣಿಯ ಕವಿ ಎನ್ನಿಸಿಕೊಂಡು ಕೀರ್ತಿಯ ಸೊಡರಿಟ್ಟ ಸಿದ್ಧಕವಿ ರನ್ನ ಹುಟ್ಟಿದ್ದು ಕ್ರಿ.ಶ. ೯೪೯ರಲ್ಲಿ. ತನ್ನ ಕಾವ್ಯದ ಮೂಲಕ ಆತ ಚಿರಾಯು.

ರನ್ನ ಹುಟ್ಟಿದ ಊರು ಈಗಿನ ಮುಧೋಳ, ಆಗಿನ ಮುದುವೊಳಲು. ಬಳೆಗಾರ ವಂಶ. ಅಣ್ಣಂದಿರು ಬಳೆಗಾರ ಕಸುಬನ್ನೇ ಹಿಡಿದರು.ಈ ಕಿರಿ ತಮ್ಮ ಮಾತ್ರ ಸಾಹಿತ್ಯವಲ್ಲಭೆಯ ಕೈ ಹಿಡಿದು ಕವಿಚಕ್ರವರ್ತಿಯಾದ.

'ಕವಿಚಕ್ರವರ್ತಿ' ಎಂಬ ಬಿರುದನ್ನಾದರೂ ಯಾರು ಕೊಟ್ಟರು ಗೊತ್ತೆ? 'ಪಡೆಯೆಡೆಯ ಕಡೆಯ ಬಡವರು' ಕೊಡಲು ಪಡೆಯಲಿಲ್ಲ. ಚಾಳುಕ್ಯ ಚಕ್ರವರ್ತಿ ತೈಲಪ ಕೊಟ್ಟದ್ದು—ಚಕ್ರವರ್ತಿಯೆಂಬ ಬಿರುದು. ಹೀಗೆಂದು ರನ್ನ ತಾನೇ ಹೇಳಿಕೊಂಡಿದಾನೆ. ಕೆಚ್ಚಿನ, ಆತ್ಮವಿಶ್ವಾಸದ ಕವಿ. ಅಲ್ಲವೆ?

ತನ್ನ ಕೃತಿಗಳ ಇಂಥ ಪ್ರಶಂಸೆ ಬಿಟ್ಟರೆ ರನ್ನನ ವೈಯಕ್ತಿಕ ಜೀವನದ ವಿಚಾರವಾಗಿ ತಿಳಿದು ಬರುವುದು ಅತ್ಯಲ್ಪ. ಈತನಿಗಿಂತ ಹಿಂದೆ ಇದ್ದು, ಇವನಿಗೆ ಸಾಹಿತ್ಯದಲ್ಲಿ ಆದರ್ಶನಾದ ಕವಿ ಪಂಪ, ತನ್ನ ರೂಪಿನ ವಿಚಾರವಾಗಿ ತಾನೇ ಬರೆದುಕೊಂಡಿದ್ದಾನೆ. ಬಾಳೆಯೊಳಗಿನ ಬಣ್ಣದಂಥ ಬಣ್ಣ. ಮೃದುವಾದ ಉಂಗುರ ಕೂದಲು. ಕಮಲದಂಥ ಮುಖ. ಸಾಮಾನ್ಯ ಎತ್ತರ. ಹಿತಮಿತ ಮೃದು ವಚನ. ಲಲಿತ ಮಧುರ ಸುಂದರ ವೇಷ. ಇದು ಪಂಪನ ರೂಪು.

ಆದರೆ ರನ್ನ ಈ ರೀತಿ ತನ್ನ ರೂಪನ್ನು ತಾನು ಅಭಿವರ್ಣಿಸಿಕೊಂಡಂತಿಲ್ಲ. ತನ್ನ ವಿದ್ವತ್ತಿನ ವಿಚಾರವಾಗಿ, ತನ್ನ ಕಾವ್ಯದ ವಿಚಾರವಾಗಿ ಆತ ಧಾರಾಳವಾಗಿ ಹೇಳಿಕೊಂಡಿದಾನೆ. 'ಬಹುರತ್ನಾ ವಸುಂಧರಾ' ಎಂಬುದು ಭೂಮಿಗೆ ಹೇಳತಕ್ಕ

ಮಾತು. ಆದರೆ ಇಳಾತಳದಲ್ಲಿ ಬಹುರತ್ನಗಳಿಲ್ಲ. ಇರತಕ್ಕ ರತ್ನ ಒಂದೇ. ಅದು ತಾನು ! ಎಷ್ಟೊಂದು ಹೆಮ್ಮೆ !

ಅಷ್ಟೇ ಅಲ್ಲ : 'ನಾನು ರತ್ನ ಪರೀಕ್ಷಕ. ಕೃತಿ ರತ್ನ ಪರೀಕ್ಷಕ.' ಹೀಗೆಂದು ಕೊಂಡು ಸರ್ಪರಾಜನ ಹಣೆಯ ಮೇಲಿನ ರತ್ನವನ್ನೂ ರನ್ನನ ಕೃತಿರತ್ನವನ್ನೂ ಪರೀಕ್ಷಿಸುವವನಿಗೆ ಎಂಟೆದೆಯೆ ?

ಏನು ಆತ್ಮವಿಶ್ವಾಸ! ಅಥವಾ—ಆತ್ಮಪ್ರಶಂಸೆಯೋ ?....

ಆದರೆ ಈತ ಉತ್ತಮ ಸಾಹಿತ್ಯದ ಲಕ್ಷಣಗಳನ್ನೂ ಹೇಳಿದಾನೆ. ಈ ಲಕ್ಷಣ ಗಳಿಗೆ ಅನುಗುಣವಾಗಿ ಈತನ ಕಾವ್ಯ ಇದೆಯೇ—ಎಂಬುದನ್ನು ಪರೀಕ್ಷಿಸಿದರೆ ಆಗ ಈ ಮಾತು ಆತ್ಮವಿಶ್ವಾಸದ್ದೋ ಆತ್ಮಪ್ರಶಂಸೆಯದೋ ಎಂಬುದು ಗೊತ್ತಾಗುತ್ತದೆ.

ಕವಿಮಾರ್ಗದ ಒಳಹೊಕ್ಕು ನವರಸವನ್ನೂ ತೆರೆದು ನುಡಿದವನು ಸತ್ಕವಿ. ಗೂಡಾರದ ಅಡಿಯಲ್ಲಿ ಮುಚ್ಚಿಕೊಂಡು ಕುಳಿತವನು ಕವಿಯಾಗಲಾರ. ಇದು ಅವನ ಮಾತು.

ಸರಸ್ವತಿಯೆಂಬ ಅಬಲೆಯ ಗೋಣು ಮುರಿದು ಅರ್ಥಕ್ಕೆ ಕುದಿದು ನೋಯಿ ಸುವವನು ಲೇಖಕನೆ ? ಆತ ಮಹಾಪಾತಕಿ. ಆತನದು ಸರಸ್ವತೀ ದ್ರೋಹ.

ಸಾಹಿತ್ಯ ವಿಚಾರದಲ್ಲಿ ಇಂಥ ಮಾತು ಆಡಿರುವವನು ಹುರುಳಿಲ್ಲದೆ ಆತ್ಮ ಪ್ರಶಂಸೆ ಮಾಡಿಕೊಳ್ಳಲಾರ. ಆತನ ಕೃತಿಯನ್ನು ಪರೀಕ್ಷಿಸಿ ಈ ಕಾಲದ ದೃಷ್ಟಿ ಯಲ್ಲಿ ಅರ್ಥ ಮಾಡಿಕೊಳ್ಳಲು ಯತ್ನಿಸಿದರೆ ಇದು ಸ್ಪಷ್ಟವಾಗುತ್ತದೆ.

ರನ್ನ ಕವಿ ಬರೆದನೆಂದು ಹೇಳಿರುವ ಕೃತಿಗಳು ನಾಲ್ಕು : ಪರಶುರಾಮ ಚರಿತ, ಚಕ್ರೇಶ್ವರ ಚರಿತ, ಅಜಿತ ತೀರ್ಥಕರ ಪುರಾಣ ತಿಲಕ, ಸಾಹಸ ಭೀಮ ವಿಜಯ—ಇವೇ ಆ ನಾಲ್ಕು. ಈ ನಾಲ್ಕರಲ್ಲಿ ಮೊದಲಿನ ಎರಡು ಸಿಕ್ಕಿಲ್ಲ. ಉಳಿದ ಎರಡರಲ್ಲಿ ಮೊದಲನೆಯದು ಧಾರ್ಮಿಕ ಗ್ರಂಥ. ಉಳಿದದ್ದು 'ಸಾಹಸ ಭೀಮ ವಿಜಯ.'

ಮಹಾಭಾರತದ್ದೇ ಕಥಾವಸ್ತು–ಎಂದು ಇದನ್ನು ಓದದೆ ತಳ್ಳಿ ಹಾಕಲಾಗದು. ಮಹಾಕವಿಗಳೆಲ್ಲ ಹಳೆಯ ವಸ್ತುಗಳನ್ನೇ ಎತ್ತಿಕೊಂಡು ಅವಕ್ಕೆ ತಮ್ಮ ಅನು ಭವದ, ತಮ್ಮ ಪ್ರತಿಭೆಯ ರೂಪು ಕೊಟ್ಟು ಹಳೆಯ ಪಾತ್ರಗಳನ್ನೇ ಹೊಸ ಪಾತ್ರಗಳಾಗಿ ಚಿತ್ರಿಸುತ್ತಾರೆ. ಈ ಹಳೆಯ ವ್ಯಕ್ತಿಗಳು ಹೊಸ ಬೆಳಕಿನಲ್ಲಿ

ಹೊಸವಾಗಿ ಪ್ರಕಾಶಿಸುತ್ತವೆ. ನಮ್ಮ ಇತ್ತೀಚಿನ ಸಿದ್ಧ ಸಾಹಿತಿ ಕೈಲಾಸಂ ಕೂಡ ಮಹಾಭಾರತದಲ್ಲಿ ಸೆರೆ ಸಿಕ್ಕ ಎಷ್ಟೋ ಸನ್ನಿವೇಶಗಳನ್ನೆತ್ತಿಕೊಂಡು ಕೃತಿರಚನೆ ಮಾಡಿದ್ದಾರೆ. ಹಳೆಯ ಕತೆಗಳೇ ಇವು—ಎಂದು ಇವನ್ನು ತಳ್ಳಿಹಾಕುವ ಹಾಗಿಲ್ಲ, ಹಾಗೆಯೇ ರನ್ನ, ಸಾವಿರ ವರ್ಷಗಳ ಹಿಂದೆ, ಭಾರತದ ಒಂದು ಪ್ರಸಂಗವನ್ನೇ ಎತ್ತಿಕೊಂಡು, ಆ ನೆವದಲ್ಲಿ ಮನುಷ್ಯನ ರಾಗೋದ್ರೇಕಗಳನ್ನು ಚೆಲ್ಲಾಡಿದಾನೆ. ಇಲ್ಲಿ ರನ್ನನದೇ ಕೈವಾಡ.

ರನ್ನ ತನಗಿಂತ ಸ್ವಲ್ಪ ಹಿಂದಿನ ಕವಿಯಾದ ಪಂಪನ ಕೃತಿಯನ್ನು ಬಹುವಾಗಿ ಮೆಚ್ಚಿದ್ದ. ಆತನೂ ಸಮಸ್ತ ಭಾರತವನ್ನು 'ವಿಕ್ರಮಾರ್ಜುನ ವಿಜಯ'ವೆಂದು ಹೆಸರಿಟ್ಟು ಬರೆದ. ಪಂಪನ ಭಾರತಕ್ಕೆ ಅರ್ಜುನನೇ ನಾಯಕ. ತನ್ನ ಪೋಷಕನೂ ರಾಜನೂ ಆಗಿದ್ದ ಅರಿಕೇಸರಿಯನ್ನೇ ಅರ್ಜುನನನ್ನಾಗಿ ಮಾಡಿ, ಭಾರತ ಕಥೆಯೂ ಕೆಡದಂತೆ, ತನ್ನ ರಾಜನ ಪ್ರಶಂಸೆಯೂ ಬರುವಂತೆ ಪಂಪ ಇದನ್ನು ಬರೆದ. ಪಂಪನ ಈ ಭಾರತದ ಗದಾಯುದ್ಧ ಪ್ರಕರಣವನ್ನೇ ಆಧರಿಸಿಕೊಂಡು ರನ್ನ ಈ ಮಹಾಕೃತಿ ರಚನೆಗೈದಿದಾನೆ. ಇದರಲ್ಲಿ ಪಂಪನ ಪ್ರಭಾವ ಇದೆಯಾದರೂ ರನ್ನನ ಹಾದಿ ರನ್ನನ ಹಾದಿಯೇ.

ಒಳಹೊಕ್ಕು ನೋಡಲು, ಭಾರತದ ಕಥೆಯೆಲ್ಲ ಈ ಗದಾಯುದ್ಧದಲ್ಲಿ ಒಳಕೊಂಡಿತ್ತು ಎಂಬಂತೆ 'ಸಿಂಹಾವಳೋಕನ ಕ್ರಮದಿನ್ ಅರಿಪಿದಂ ಕವಿರನ್ನಂ', ಎಂದು ರನ್ನ ಪ್ರಾಸ್ತಾವಿಕವಾಗಿ ಹೇಳಿಕೊಂಡಿದಾನೆ. ಮಹಾಭಾರತದ ಗದಾಯುದ್ಧದ ಪೂರ್ವ ಕಥೆಯೆಲ್ಲ ಇಲ್ಲಿ ಸಂಗ್ರಹವಾಗಿ ಸಂದರ್ಭ ಒದಗಿದಾಗ ಬಂದಿದೆ.

ಆದರೆ ರನ್ನನ ಪ್ರತಿಭೆಯ ಮುಂಬೆಳಕು ಬಿದ್ದಿರುವುದು ಗದಾಯುದ್ಧ ಪ್ರಕರಣದ ಮೇಲೆ. ಸಕಲವನ್ನೂ ಸೋತು ತನ್ನ ಛಲದ ಹಣ್ಣು ತಿನ್ನುತ್ತಾ ಚಿಂತಾಕುಲನಾದ ದುರ್ಯೋಧನನನ್ನಿಲ್ಲಿ ಕಾಣಬಹುದು. ಕತೆ ದ್ರೌಪದಿ ಭೀಮಸೇನರ ಸಂಭಾಷಣೆಯಿಂದ ಮೊದಲಾಗುತ್ತದೆ. ಭೀಮನದು ಉದ್ದಕ್ಕೂ ಆಟೋಪ. ದುರ್ಯೋಧನನ ಹಿಂದಿನ ಕಪ್ಪು ಕತೆಯ ಪರಿಚಯ ನಮಗಿದೆಯಾದರೂ, ದುರ್ಯೋಧನನಲ್ಲಿ ನಮಗೆ ಈ ಕಾವ್ಯದ ಆರಂಭದಿಂದಲೂ ಒಂದು ರೀತಿಯ ಸಹಾನುಭೂತಿ. ಭೀಮನ ಆಟೋಪ ನಮ್ಮ ಮನಸ್ಸಿಗೆ ಅಷ್ಟಾಗಿ ಒಗ್ಗುವುದಿಲ್ಲ.

ಆದರೆ ರನ್ನನ ದೃಷ್ಟಿಯಲ್ಲಿ ಈ ಕೃತಿಯ ನಾಯಕ ಭೀಮಸೇನನೇ. ಕೃತಿಯ ಹೆಸರೇ 'ಸಾಹಸಭೀಮ ವಿಜಯ'. ಕೊನೆಯಲ್ಲಿ, ದುರ್ಯೋಧನ ತೊಡೆ ಮುರಿದು

ಕೊಂಡು ಸತ್ತಮೇಲೆ, ಭೀಮನಿಗೇ ಪಟ್ಟಬಂಧ. ಧರ್ಮರಾಜನಿಗಲ್ಲ.

ಇದಕ್ಕೆ ಕಾರಣ, ಮತ್ತೆ ರನ್ನನ ಪೋಷಕ ಚಕ್ರವರ್ತಿ ಸತ್ಯಾಶ್ರಯ. ಪಂಪನಂತೆ ರನ್ನನೂ ರಾಜಾಶ್ರಯ ಪಡೆದ ಕವಿ. ಆಗಿನ ಸಾಹಿತ್ಯವೇ ರಾಜಾಶ್ರಯದಲ್ಲಿ ಬೆಳೆದ ಸಾಹಿತ್ಯ. ಸಾಹಿತ್ಯದ ಗುರಿಯೇನು ?—ಎಂಬುದನ್ನು ಬಹುಮಂದಿ ಬಹು ರೀತಿಯಲ್ಲಿ ಹೇಳಿದ್ದರೂ, ಲೌಕಿಕವಾಗಿ ಒಂದು ಸಾಹಿತ್ಯ ಕೃತಿ ರಾಜನ ಮೆಚ್ಚುಗೆ ಪಡೆದಾಗ ಮಾತ್ರ ಅದರ ಸಾರ್ಥಕ್ಯವೆಂದು ಪರಿಗಣಿಸುತ್ತಿದ್ದ ಕಾಲ ಅದು. ಕವಿಗೆ ಅನ್ಯಥಾ ಸ್ಥಾನ ಇದ್ದಂತೆ ಕಾಣುವುದಿಲ್ಲ. ವಿದೂಷಕನಂತೆ, ಇತರ ಆಸ್ಥಾನಿಕರಂತೆ, ಕವಿಯೂ ರಾಜಾಸ್ಥಾನದ ಒಂದು ಅಂಗ–ಅನಿವಾರ್ಯವಾದ ಅಂಗ. ಆಗಿನ ಕಾಲದ ಜನರು, 'ಚದುರರ್ ನಿಜದಿಂ ಕುರಿತು ಓದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಒಬ್ಬ ಕವಿ ಹೇಳಿದ್ದಾನಾದರೂ, ಅಂದಿನ ಜನಗಳೆಲ್ಲ ಅಷ್ಟೊಂದು ವಿದ್ಯಾವಂತರಾಗಿದ್ದರೇ, ಎಂಬುದಕ್ಕೆ ಸಾಹಿತ್ಯದಲ್ಲಾಗಲಿ ಚರಿತ್ರೆಯಲ್ಲಾಗಲಿ ಆಧಾರ ದೊರಕುವುದಿಲ್ಲ. ಆದ್ದರಿಂದ ಕವಿಯಾದವನು ಪ್ರಧಾನವಾಗಿ ರಾಜನ ಆಶ್ರಯವನ್ನೆ ನಿರೀಕ್ಷಿಸಬೇಕಾಗುತ್ತಿತ್ತು. ರಾಜಾಶ್ರಯವನ್ನೂ ಎದುರಿಸಿ ನಿಂತು, ಜನಕ್ಕಾಗಿ ಕಲೆ ಎಂದು ಹೋರಾಟಗೈದ ಪ್ರಸಂಗಗಳು ಆ ಕಾಲಕ್ಕಿನ್ನೂ ನಡೆದಿರಲಿಲ್ಲ. ಈಗಲೂ ಕೂಡ ಈ ಸ್ಥಿತಿ ಪೂರ್ಣವಾಗಿ ಬದಲಾಗಿಲ್ಲ. ಈಗ ಸಾಹಿತ್ಯ ರಾಜಾಶ್ರಯದ ಬದಲು ಬಂಡವಾಳದ ಆಶ್ರಯ ಪಡೆಯಬೇಕಾಗಿದೆ. ಈ ವ್ಯವಸ್ಥೆಯನ್ನು ಭದ್ರಪಡಿಸಲು ಯತ್ನಿಸತಕ್ಕ ಸಾಹಿತ್ಯಕ್ಕೆ ಮಾತ್ರ ಸ್ಥಾನವಿದೆ. ಉಳಿದ, ಸ್ವತಂತ್ರವಾದ, ಸಾಹಿತ್ಯ ಜೀವಂತವಾಗಿ ಬದುಕಬೇಕಾದರೆ ಬಹು ಕಷ್ಟ. ಸಮಾಜ ವ್ಯವಸ್ಥೆಯನ್ನು ಮೀರಿ ನಿಂತು, ತನ್ನ ಪ್ರತಿಭೆಯ ಕೂರಲಗಿನಿಂದ ಸಮಾಜದ ವ್ಯಾಧಿಗೆ ಸಾಹಿತ್ಯದ ಶಸ್ತ್ರಕ್ರಿಯೆ ಮಾಡಬಲ್ಲ ಎದೆಗಾರಿಕೆ ಇಂದಿಗೂ ಬಹು ಮಂದಿ ಸಾಹಿತಿಗಳಿಗೆ ಇಲ್ಲ. ರನ್ನನ ಕಾಲದಲ್ಲಂತೂ ಈ ದೃಷ್ಟಿಕೋನವೇ ಇರಲಿಲ್ಲ.

ರನ್ನ ತನ್ನ ರಾಜನಾದ ಸತ್ಯಾಶ್ರಯನ ಪೋಷಣೆಗೆ ಒಳಪಟ್ಟಿದ್ದ. ಆದ್ದರಿಂದ ಪಂಪ ತನ್ನ ರಾಜನನ್ನು ಕುರಿತು ಬರೆದಂತೆ ರನ್ನ ತನ್ನ ಒಡೆಯನನ್ನು ನಾಯಕನನ್ನಾಗಿ ಮಾಡಿ ಕಾವ್ಯ ಬರೆಯಬೇಕಾಗಿತ್ತು. ಅದಕ್ಕೆ ಈ 'ಗದಾಯುದ್ಧ'ವನ್ನೇ ಆರಿಸಿಕೊಂಡ. ಆದರೆ ಆತನ–ಕವಿಯ–ಒಳದನಿ–ಅಂತಃಪ್ರೇರಣೆ–ಇದೂ ಬಲವಾಗಿತ್ತು. ಆತನಲ್ಲಿ ಉದ್ದಕ್ಕೂ ಒಂದು ಬಗೆಯ ಅಂತರ್ಮಥನ ನಡೆಯು

ತ್ತಿತ್ತೆಂದು ಕಾಣುತ್ತದೆ. ತನ್ನ ರಾಜನನ್ನು ಪ್ರಶಂಸಿಸಿ ಬರೆದು ಆತನ ಋಣ ತೀರಿಸಬೇಕು. ಇದು ಒಂದು ಪಕ್ಷ. ಆದರೆ ತನ್ನ ಕವಿತಾಶಕ್ತಿ ಯಾವ ಅಂಕೆಗೂ ಒಳಪಡದೆ ಸ್ವಚ್ಛಂದವಾಗಿ ಹರಿಯಬೇಕು. ಇದು ಇನ್ನೊಂದು ಪಕ್ಷ. ಲೌಕಿಕಕ್ಕೆ ಕಟ್ಟುಬಿದ್ದು ತನ್ನ ರಾಜನನ್ನೇ ಭೀಮನಿಗೆ ಹೋಲಿಸಿ ಆತನನ್ನೆ ನಾಯಕನನ್ನಾಗಿ ಮಾಡಿಧ. ಉದ್ದಕ್ಕೂ ಭೀಮನ ಪ್ರಶಂಸೆಯೇ. ಭೀಮನ ಉದ್ಧಟತನಕ್ಕೆ. ವಿನಯ ರಾಹಿತ್ಯಕ್ಕೆ, ಅಲ್ಲಲ್ಲಿ ಮೊಗವಾಡ ಹಾಕಲು ರನ್ನ ಪ್ರಯತ್ನಿಸಿದಾನೆ. ಆದರೆ ಭೀಮ ಆತನ ಕೈ ಮೀರಿ, ಧೀರನಾದರೂ ಉದ್ಧತನಾದ, ಧೀರೋದ್ಧತನಾದ, ನಾಯಕನಾಗಿದಾನೆ.

ಆತನ ವಿರುದ್ಧ ದುರ್ಯೋಧನ. ಆತನ ಜೀವನದ ಸುಳಿಯಲ್ಲಿ ಎಷ್ಟೋ ಕಪ್ಪು ಚುಕ್ಕೆಗಳಿವೆ ನಿಜ. ಅವನ್ನೆಲ್ಲ ಕವಿ ರನ್ನ ನೆನಪು ಮಾಡಿಕೊಟ್ಟಿದ್ದಾನೆ ನಿಜ. ಆದರೆ ಆಸ್ಥಾನ ಕವಿ ರನ್ನನ ಸಹಜ ಒಲುಮೆ ಭೀಮನಲ್ಲಾದರೆ, ಮಾನವ್ಯ ಕವಿ ರನ್ನನ ಒಲುಮೆ ಸಹಾನುಭೂತಿ ದುರ್ಯೋಧನನಲ್ಲಿ. ದುರ್ಯೋಧನನ ಒಂದೊಂದು ನಡೆಯೂ ಒಂದೊಂದು ನುಡಿಯೂ ನಮ್ಮ ಒಲುಮೆಯನ್ನೂ ಸಹಾನುಭೂತಿ ಯನ್ನೂ ಗಳಿಸುತ್ತದೆ. ಕೊನೆಗೆ ದುರ್ಯೋಧನ ಬಿದ್ದಾಗ ಭೀಮ ಕಾಲಿನಿಂದ ಆತನ ಕಿರೀಟವನ್ನೊದೆಯುತ್ತಾನೆ. ಈ ಔದ್ಧತ್ಯ ನಮಗೆ ಸಹಿಸುವುದಿಲ್ಲ. ಅನಂತರ ಭೀಮನ ಪಟ್ಟಾಭಿಷೇಕ. ಅಲ್ಲೂ ನಡುವೆ ರನ್ನ ಶೋಕ ತಂದಿಟ್ಟಿದ್ದಾನೆ. ಆದರೆ ದುರ್ಯೋಧನ ಸತ್ತಮೇಲೆ ಓದುಗರಿಗೆ ಮುಂದಿನ ಕತೆ ತಿಳಿಯಲು ಆಸಕ್ತಿಯಿಲ್ಲ. ದುರ್ಯೋಧನ ಸತ್ತೊಡನೆಯೇ ಕುರುಕುಲದ ಸೂರ್ಯನೊಡನೆ ನಮ್ಮ ಸೂರ್ಯನೂ ಮುಳುಗಿದನೆಂದು ರನ್ನ ಕೂಡ ನಿಟ್ಟುಸಿರ್ಗರೆದಿದ್ದಾನೆ. ರನ್ನನ ಈ ಕಾವ್ಯವನ್ನೇ ನಾಟಕವಾಗಿ ಪರಿವರ್ತಿಸಿದ ದಿವಂಗತ 'ಶ್ರೀ'ಯವರೂ ದುರ್ಯೋಧನನ ಸಾವಿ ನೊಡನೆ ನಾಟಕ ಮುಗಿಸುತ್ತಾರೆ. ಇದು ತುಂಬಾ ಉಚಿತವಾಗಿದೆ.

ಹೀಗೆ ಉದ್ದಕ್ಕೂ ರಾಜ ಕವಿ ರನ್ನನ ಮನಸ್ಸಿನಲ್ಲಿ ಭೀಮನೇ ನಾಯಕ ನಾಗಬೇಕೆಂದಿದ್ದರೂ, ಆತನ ಇಚ್ಛೆಯನ್ನು ಮೀರಿ ಮಾನವ್ಯ ಕವಿ ರನ್ನ ದುರ್ಯೋ ಧನನನ್ನು ಉದಾತ್ತ ನಾಯಕನನ್ನಾಗಿ ಸೃಷ್ಟಿಸಿದಾನೆ. ಇದಕ್ಕೆ ಆತನಿಗೆ ಅರಿ ವಿಲ್ಲದೆ ಆತನಲ್ಲಿ ಆಗುತ್ತಿದ್ದ ಈ ಮಥನವೇ, ಈ ಒಳತೋಟಿಯೇ, ಕಾರಣವಿರ ಬಹುದು. ಸಂಪ್ರದಾಯದ ವಿರುದ್ಧ, ಎಲ್ಲ ಕಟ್ಟು ಕಟ್ಟಳೆಗಳನ್ನೂ ಮೀರಿ, ನಿಂತು ಕೃತಿರಚನೆ ಮಾಡುವುದೇ ಕವಿಯ ಗುರಿ. ಆತ ಯಾವ ಹಂಗಿಗೂ ಒಳಪಟ್ಟು

ಸತ್ಯಕ್ಕೆ ಮುಖವಾಡ ಹಾಕಬಾರದು. ಹೀಗೆಂಬ ಭಾವನೆ ಅಂದು ಮೂಡಿದ್ದಿದ್ದರೆ ರನ್ನನೂ ಮಹಾಪ್ರತಿಭಟನೆಯ ಕವಿ ಆಗುತ್ತಿದ್ದನೇನೋ.

ಇದಕ್ಕೆ ಆತನ ಕೆಚ್ಚೇ ಸಾಕ್ಷಿ. ತನ್ನ ಪಾಂಡಿತ್ಯದ, ತನ್ನ ಪ್ರತಿಭೆಯ ಮಾತು ಬಂದಾಗ ಆತ ಯಾರಿಗೂ ಹೆದರಿ ತನ್ನ ಪ್ರಶಂಸೆ ಮಾಡಿಕೊಳ್ಳದೆ ಇರುವುದಿಲ್ಲ. ಗದಾಯುದ್ಧದ ಆ ಕೆಚ್ಚಿನ ಮಾತುಗಳನ್ನಂತೂ ರನ್ನ ಮಾತ್ರ ಬರೆಯಬಲ್ಲ. ಇತರರಿಗೆ ಅದು ಸಾಧ್ಯವಿಲ್ಲ. ಆತನ ಕೊಂಕು ನುಡಿ, ಕಿಡಿ ಮಾತು, ಸಮರದ ಮಸೆತದ ನುಡಿಚಿತ್ರ ಇತರರಿಗೆ ಸಾಧ್ಯವಿಲ್ಲ.

ಭೀಮ-ದುರ್ಯೋಧನರ ಚಿತ್ರ ನೆನಸಿಕೊಂಡಾಗ ಇನ್ನೊಂದು ವಿಚಾರ ಮಿಂಚುತ್ತದೆ. ಭೀಮನಿಗೆ ದೈವಬಲವಿದೆ. ಆತ ಎಷ್ಟೇ ಉದ್ಧಟನಾದರೂ ಸಂಪ್ರದಾಯ ಮೀರಿ ನಡೆಯುವುದಿಲ್ಲ. ಆದರೆ ಕೌರವ ಕುಲೇಂದ್ರನಾದರೋ, ಛಲದ ಅಂಕಮಲ್ಲ. ಆತನಿಗೆ ತಲೆ ತಗ್ಗಿಸುವಂಥ ಸಂಧಿ ತರವಲ್ಲ. ಬಾಳಿದರೆ ನುಡಿದಂತೆ ನಡೆಯಬೇಕು. ತನಗೆ ಮಾಡಬೇಕೆನಿಸಿದ್ದನ್ನು ಆತ ಯಾರಿಗೂ ಹೆದರಿ ಮಾಡದೆ ಬಿಡಲಿಲ್ಲ. ಸಾಯುವ ಮುನ್ನವೂ ಅಷ್ಟೇ. ಜೀವನದಲ್ಲಿ ಇತರರಿಗೆ ಶರಣಾಗಿ ನಡೆಯುವುದಿಲ್ಲ ಎಂಬುವನಿಗೆ ದುರ್ಯೋಧನನಿಗೆ ಆದ ಗತಿಯೇ ಏನೋ ! ದುರ್ಯೋಧನ ಮಾಡಿದ ತಪ್ಪುಗಳ ಮಾತು ಬೇರೆ.

ಹಳಗನ್ನಡವನ್ನು ಓದಿ ಅರ್ಥಮಾಡಿಕೊಳ್ಳುವುದು ಈಗಿನ ಕಾಲದಲ್ಲಿ ಸ್ವಲ್ಪ ಕಷ್ಟ. ಆತನ ಭಾಷೆ ಅರ್ಥವಾದರೂ ಆತನ ದೃಷ್ಟಿಕೋನ ಇಂದು ಹಲವರಿಗೆ ರುಚಿಸದಿರಬಹುದು. ಹತ್ತನೆಯ ಶತಮಾನದ ದೃಷ್ಟಿಕೋನವನ್ನೇ ಇಡಿಯಾಗಿ ಇಪ್ಪತ್ತನೆಯ ಶತಮಾನದ ಜನ ಒಪ್ಪಲಾರರು. ಆದರೆ ಅಂದಿಗೂ ಇಂದಿಗೂ ಸಮಾನವಾಗಿರುವ ಮಾನವನ ಮನೋಭಾವಗಳನ್ನು, ರಾಗೋದ್ರೇಕಗಳನ್ನು ಚಿತ್ರಿಸಿರುವ ಸಾಹಿತ್ಯ, ಈ ಸಮಾನತೆಯ ಕಾರಣದಿಂದ ಎಂದಿಗೂ ಸ್ಥಿರವಾಗಿ ನಿಲ್ಲುತ್ತದೆ. ಪುರಾತನ ಗ್ರೀಕ್ ಸಾಹಿತ್ಯ, ಷೇಕ್ಸ್‌ಪಿಯರ್, ಗಯಟೆ, ರಾಮಾಯಣ, ಭಾರತ—ಎಲ್ಲ ನಮಗೆ ಇಂದಿಗೂ ರುಚಿಸುವುದು ಈ ಸಮಾನ ಮನೋಧರ್ಮದ ಕಾರಣದಿಂದಲೇ.

ರನ್ನ ಸಂಪ್ರದಾಯದ ಕವಿಯಲ್ಲ. ಈ ಕಟ್ಟನ್ನು ಕಿತ್ತು, ಹೊರಬರಬೇಕೆಂಬ ಅಂತರ್ಮಥನ ಆತನಲ್ಲಿ ನಡೆಯುತ್ತಲೇ ಇತ್ತು. ಗದಾಯುದ್ಧ ಇದಕ್ಕೆ ಸಾಕ್ಷಿ. ಈ ದೃಷ್ಟಿಯಿಂದ ಇವನ ಕೃತಿಯನ್ನೋದಿದರೆ ಇದರ ಸ್ವಾರಸ್ಯ ಇನ್ನೂ ಹೆಚ್ಚಾಗುತ್ತದೆ.

ರನ್ನ ಕನ್ನಡದ ಹಿರಿಯ ಕವಿ. ಸಾವಿರ ವರ್ಷವಾದರೂ ಬದುಕಿರುವ, ಇನ್ನು ಸಾವಿರ ವರ್ಷ ಬದುಕಬಲ್ಲ, ಕವಿ. ಅವನಿಗೆ ಸಾವಿಲ್ಲ.*

* ೧೯೪೬.

## 'ಕುವೆಂಪು'

ಕುವೆಂಪು ಅವರ ವಿಚಾರವಾಗಿ ಬರೆಯುವುದು ಒಂದು ದೃಷ್ಟಿಯಲ್ಲಿ ಬಹಳ ಸುಲಭ; ಇನ್ನೊಂದು ದೃಷ್ಟಿಯಲ್ಲಿ ಬಹಳ ಕಷ್ಟ.

(ದೊಡ್ಡ ವ್ಯಕ್ತಿಗಳ ವಿಚಾರವೆಲ್ಲಾ ಹೀಗೆಯೇ.)

ಸಮುದ್ರದ ದಂಡೆಯ ಮೇಲೆ ನಿಂತಾಗ ನಮ್ಮ ಕಣ್ಣಿಗೆ ಗೋಚರವಾಗುವುದೆಷ್ಟು? ದೃಷ್ಟಿಯ ಸೀಮೆಯ ಆಚೆಗೆ ಪಸರಿಸಿ ನಿಂತದ್ದೆಷ್ಟು?

ಮೋಡವಿಲ್ಲದ ರಾತ್ರಿಯಂದು ಆಕಾಶದ ಕಡೆಗೆ ಮುಖ ತಿರುಗಿಸಿದಾಗ ಕಾಣುವ ನಕ್ಷತ್ರ ಲೋಕದ ಪರಿಧಿಯೆಷ್ಟು? ದಿಙ್ಮಂಡಲದ ಆಚೆಗೆ ಹಬ್ಬಿ ರಾರಾಜಿಸುವ ತಾರಾನಿವಹದ ವಿಸ್ತಾರವೆಷ್ಟು?

ಕವಿ ಕುವೆಂಪು ಅವರ ಹಿರಿಮೆಯ ಹರವು ಎಷ್ಟು?

(ಅಳೆಯುವುದು ಕಷ್ಟ.)

ಸಾಮಾನ್ಯವಾಗಿ ಕವಿಗಳಿಗೂ ಕಲಾವಿದರಿಗೂ ದಾರ್ಶನಿಕರಿಗೂ ಒಂದು ಶಾಪ. ಅವರು ಕಂಡದ್ದೇ ಒಂದು ಬಗೆಯಾದರೆ ಅವರು ಬಾಳಿದ್ದೇ ಇನ್ನೊಂದು ಬಗೆ. ಭಾಷೆಯ ತೊಟ್ಟಿಲಲ್ಲಿ ಬ್ರಹ್ಮಾಂಡವನ್ನೇ ತೂಗಬಲ್ಲ ಕವಿಯ ಸ್ವಂತ ಜೀವನವೆಲ್ಲಾ ಬರಡು ವ್ಯಾಪಾರ. ರಾತ್ರಿಯ ದೀಪದ ಥಳುಕಿನಲ್ಲಿ ಬಣ್ಣದ ತಗಡಿನ ಕಿರೀಟ ಧರಿಸಿ ಮೆರೆಯುವ ನಟಸಾರ್ವಭೌಮನ ಹಗಲು ಬಾಳು ಬರಿಯ ಗೋಳು. ಭೂ ವ್ಯೋಮ ಪಾತಾಳಗಳ ಸೃಷ್ಟಿಯ ರಹಸ್ಯದ ಮುದ್ರೆ

ಯನ್ನೊಡೆಯುವ ಸಾಹಸದಲ್ಲಿ ನಿರತನಾದ ದಾರ್ಶನಿಕನ ದೈನಂದಿನ ಜೀವನ ಸಾಮಾನ್ಯವಾಗಿ ದೈನ್ಯಮಯ.

ಆದರ್ಶ ಪ್ರಭುತ್ವದ ಕನಸು ಕಂಡು ಬಣ್ಣಿಸಿದ ಗ್ರೀಕ್ ತತ್ವಜ್ಞಾನಿ ಪ್ಲೇಟೋವಿಗೆ ತನ್ನ ಆದರ್ಶಕ್ಕೆ ಅನುಗುಣವಾಗಿ ರಾಜ್ಯದ ಆಡಳಿತವನ್ನು ನೆರ್ಪುಗೊಳಿಸುವ ಅವಕಾಶ ಲಭಿಸಿದಾಗ ಅವನು ಆ ಯತ್ನದಲ್ಲಿ ಸೋತ. ಕಾಣುವ ಕನಸಿಗೂ ವಾಸ್ತವದ ಜಗತ್ತಿಗೂ ನಡುವೆ ಸೇತುವೆಯನ್ನು ಕಟ್ಟಲಾರದೆ ಹೋದ. ಸ್ವತಃ ದುರ್ಬಲನೂ ರೋಗಿಯೂ ಆಗಿದ್ದ ನೀಷೇ ಎಂಬ ತತ್ವಜ್ಞಾನಿಯಂತೂ, ತನ್ನ ದೈಹಿಕ ದೌರ್ಬಲ್ಯಕ್ಕೆ ವ್ಯತಿರಿಕ್ತವಾದ ಸಿದ್ಧಾಂತವನ್ನೇ ಲೋಕಕ್ಕೆ ಬೋಧಿಸಿದ. ಈ ಜಗತ್ತಿನಲ್ಲಿ ಸಬಲರು ದುರ್ಬಲರ ಮೇಲೆ ದೌಲತ್ತು ಮಾಡುವುದೇ ಸರಿ, ಸಹಜ—ಎಂಬುದಾಗಿ ಘೋಷಿಸಿದ. ಹಿಟ್ಲರನ ನಾಜೀ ಸಿದ್ಧಾಂತಕ್ಕೆ ಸ್ಫೂರ್ತಿ ನೀಡಿದ.

ಕನ್ನಡದ ಕವಿ ಕುವೆಂಪು ಅವರ ವಿಚಾರದಲ್ಲಿ ಈ ಬಗೆಯ ಇತ್ತಂಡ ಜೀವನದ ಅಪವಾದಕ್ಕೆ ಎಡೆಯಿಲ್ಲ. ಅವರು ಕಂಡ ಕಾಣ್ಕೆಗೂ, ನಡಸಿರುವ ಬಾಳ್ವಿಗೂ ವಿರೋಧಾಭಾಸವಿಲ್ಲ. ಅವರ ಬಗೆ ಎಷ್ಟು ಶ್ರೀಮಂತವೋ, ಬಾಳೂ ಅಷ್ಟೇ ಶ್ರೀಮಂತ. ಕೃತಿಯ ಮಹತಿಯಷ್ಟೇ ಬಾಳಿನದೂ ಮಹತಿ.

ಕುವೆಂಪು ಅವರ ಕೃತಿಗಳ ವೈವಿಧ್ಯವೂ, ಸಂಖ್ಯಾ ಬಾಹುಳ್ಯವೂ ಆಶ್ಚರ್ಯಕರ. ಒಂದು ಜೀವಮಾನದ ಮಹಾ ಸಾಧನೆ: 'ತಾರೆಗಳ ದಿಬ್ಬಣವು ಗಗನದಿಂದ್ಳಿತಂದು, ಜೆಟ್ಟದುದಿಯಲಿ ತಳುವಿ, ಸೋಪಾನಗಳನಿಳಿದು, ತಪ್ಪಲಲಿ ಮೇಳವಿಸಿ, ಕವಿದು ಕಿಕ್ಕಿರಿದಂತೆ, ಸಗ್ಗ ನೆಲಕಿಳಿದಂತೆ ನೂರಾರು ದೀಪಗಳು, ಮಿಣುಕುತಿಹ ಸೊಡರುಗಳು ಸಾಲಾಗಿ, ಡೊಂಕಾಗಿ, ಗುಡಿಗಟ್ಟಿ ಕೊಂಕಾಗಿ, ಗೊಂಚಲಲಿ ಗುಂಪಾಗಿ, ತೆಕ್ಕನೆಯೆ ಹುಟ್ಟಿಬರೆ, ಬೆರಗಾಗಿ, ಮರುಳಾಗಿ ಬಾ ನೋಡು ನಿಂತಿಲ್ಲಿ ಮೂಕನಾಗಿ!'

ಕುವೆಂಪು ಅವರು ಕನ್ನಡದ ರಸ ತಪಸ್ವಿ. ವಿಜಯನಗರದ ವಿದ್ಯಾರಣ್ಯರ ಹಾಗೆ ಅಖಂಡ ಕನ್ನಡ ಕಾವ್ಯ ಸಾಮ್ರಾಜ್ಯದ ಪ್ರತಿಷ್ಠಾಪನಾಚಾರ್ಯ. ಇವರ ಅಖಂಡ ಕರ್ನಾಟಕವೆಂಬುದು ರಾಜಕೀಯ ಇತಿ ಮಿತಿಗಳಿಗೆ ಒಳಪಟ್ಟದ್ದಲ್ಲ. ಅದು ಮಾನಸ ಲೋಕದ ಸಾಮ್ರಾಜ್ಯ. ಇವರ ಕನಸಿನ ಕರ್ನಾಟಕಕ್ಕೆ ನೃಪತುಂಗನೇ ಚಕ್ರವರ್ತಿ. ಪಂಪನೇ ಮುಖ್ಯ ಮಂತ್ರಿ. ರನ್ನ ಜನ್ನ ನಾಗವರ್ಮ ರಾಘ

ವಾಂಕ ಹರಿಹರ ಬಸವೇಶ್ವರ ನಾರಣಪ್ಪ ಸರ್ವಜ್ಞ ಷಡಕ್ಷರರನ್ನೊಳಗೊಂಡ ಮಂತ್ರಿಮಂಡಲ. ಈ ಮಾನಸಲೋಕದ ಕವಿತಾ ಸಾಮ್ರಾಜ್ಯಕ್ಕೆ ಆದಿ-ಅಂತ ಗಳಿಲ್ಲ; ಏಳು-ಬೀಳುಗಳಿಲ್ಲ; ಯುದ್ಧ-ಡಾಮರಗಳ ಭೀತಿಯಿಲ್ಲ. ಈ ಸಾಮ್ರಾಜ್ಯದ ಅಡಿಯಲ್ಲಿ ಸಾಸಿಗರಿಗೆ ಲೆಕ್ಕವಿಲ್ಲ: ಇಲ್ಲಿ ಅಸಾಧ್ಯವಾದ ಕೆಲಸವಿಲ್ಲ: ‘ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ; ವಾಮನಕ್ರಮಂ ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ; ಹರನಂ ನರನ್ ಒತ್ತಿ ಗಂಟಲಂ ಮೆಟ್ಟುಗೆ ಮೆಟ್ಟದಿರ್ಕೆ; ಕವಿಗಳ್ ಕೃತಿಬಂಧದೊಳ್ ಅಲ್ತೆ ಕಟ್ಟಿದರ್, ಮುಟ್ಟಿದರ್, ಒತ್ತಿ ಮೆಟ್ಟಿದರ್, ಅದೇಸ್ ಅಳವು ಅಗ್ಗಳವೋ ಕವೀಂದ್ರರಾ!’

ಕುವೆಂಪು ಅವರು ಕಾವ್ಯಲೋಕದಲ್ಲೇ ವಿಹರಿಸುತ್ತಾ ಕೆಳಗಿನ ನೆಲವನ್ನು ಮರೆತವರಲ್ಲ. ದಂತದ ಗೋಪುರದಲ್ಲಿ ಕಣ್ಣು ಮುಚ್ಚಿ ಕೂತ ಕನಸಿಗರಲ್ಲ. ಕನ್ನಡದ ಜನರ ಬಾಳುವೆಯನ್ನು ಹಸನು ಮಾಡುವ ಆಸೆಯನ್ನು ತೊರೆದವರಲ್ಲ. ಸುತ್ತಮುತ್ತಣ ಜನರನ್ನೂ ಪ್ರಕೃತಿಯನ್ನೂ ನಿರುಕಿಸದೇ ಹೋದವರಲ್ಲ. ಹುಟ್ಟಿದ ಮಲೆನಾಡು, ಮೆಟ್ಟಿದ ಮೈದಾನ, ಕಟ್ಟಿದ ಮಾನಸ ಗಂಗೋತ್ರಿ— ಎಲ್ಲೆಲ್ಲೂ ಇವರ ಸ್ಫೂರ್ತಿಯ ಹಸಿರು, ಉಸಿರು; ಮೆದುವಾಗಿ ಊದಿ ಬಿಟ್ಟ ಚೈತನ್ಯಪುಷ್ಪ. ಇವರ ಕವನಗಳಲ್ಲಿ ಕಾಣದ ದೃಶ್ಯವಿಲ್ಲ; ಬಣ್ಣಿಸದ ಭಾವವಿಲ್ಲ. ಇವರ ಕಾದಂಬರಿಯಲ್ಲಿ ಕಡೆಯದ ವ್ಯಕ್ತಿಯಿಲ್ಲ; ನಾಟಕದಲ್ಲಿ ನಡಸದ ಪ್ರಯೋಗ ವಿಲ್ಲ. ಇವರ ಪ್ರಬಂಧಗಳಲ್ಲಿ ವಿಮರ್ಶೆಗೆ ಒಳಗಾಗದ ವಿಚಾರವಿಲ್ಲ. ಕರ್ನಾಟಕ ಜನಜೀವನದಿಂದ ಹಿಡಿದು ಪಂಪನ ಪೆಂಪಿನವರೆಗೆ, ಕನ್ನಡದ ಓಜಸ್ಸಿನಿಂದ ಹಿಡಿದು ಸಂಸ್ಕೃತದ ತೇಜಸ್ಸಿನವರೆಗೆ, ಪ್ರಾಚೀನ ದೃಷ್ಟಿಕೋನದಿಂದ ಹಿಡಿದು ಅದ್ಯತನ ಸಮಸ್ಯೆಯ ವರೆಗೆ ಎಲ್ಲವನ್ನೂ ಕಡೆದು, ಕೊರೆದು, ಹೆಕ್ಕಿ, ತಿಕ್ಕಿ, ತಿದ್ದಿ ಬೆಳಸಿದ ಇವರ ಪ್ರಬಂಧ ವ್ಯವಸಾಯವೇ ಈ ಕಾವ್ಯ ತಪಸ್ವಿಯ ದೈನಂದಿನ ಅಗ್ನಿಹೋತ್ರ.

ಕುವೆಂಪು ಅವರ ಪೂರ್ಣನಾಮ—ಕುಪ್ಪಳಿಯ ವೆಂಕಟಪ್ಪ ಪುಟ್ಟಪ್ಪ. ಬನಸಿರಿಯ ನೆಲಗಟ್ಟು. ಸುಸಂಸ್ಕೃತ ವಂಶದ ಚೌಕಟ್ಟು. ಪ್ರತಿಭೆ ಸಾಧನಗಳ ಅಚ್ಚುಕಟ್ಟು.

ಕುಪ್ಪಳಿಯಲ್ಲಿ ತಂದೆಯ ಮನೆ. ಹಿರಿಕೊಡಿಗೆಯಲ್ಲಿ ತಾಯಿಯ ತೌರು ಮನೆ. ಹುಟ್ಟಿದ್ದು ಹಿರಿಕೊಡಿಗೆಯಲ್ಲಿ. ಬೆಳೆದದ್ದು ಕುಪ್ಪಳಿಯಲ್ಲಿ. ಕಲಿತದ್ದು ತುಂಗೆಯ

ತಡಿಯಲ್ಲಿ. ಮಹತಿಯನ್ನು ಪಡೆದದ್ದು ಮೈಸೂರಿನಲ್ಲಿ. ವ್ಯಕ್ತಿತ್ವ ಶೋಭಿಸಿದ್ದು ಶ್ರೀ ರಾಮಕೃಷ್ಣರ ತೇಜೋವಲಯದಲ್ಲಿ.

(ಅಂತಃ ಸತ್ವ ಪ್ರಕಾಶಕ್ಕೆ ಬರಲು ಇವೆಲ್ಲವೂ ನಿಮಿತ್ತ.)

ಎತ್ತರದ ಬೆಟ್ಟ. ಬಿತ್ತರದ ಕಾನು, ಹೆಮ್ಮರ, ತಿಳಿಝರಿ—ಇವುಗಳ ಸಾನ್ನಿಧ್ಯದಲ್ಲಿ ಬೆಳೆದ ವ್ಯಕ್ತಿತ್ವ.

ಬೇಟೆ, ಓದು, ಹಿರಿಯರ ಆದರ್ಶ, ಪ್ರಕೃತಿಯ ಪಾಠ, ಗೆಳೆಯರ ಒಡನಾಟ.

ಇಂಗ್ಲಿಷ್ ಪೂತನಿಯಿಂದ ನಮ್ಮನ್ನು ಪಾರು ಮಾಡಿಸಬೇಕೆಂದು ಪ್ರಾರ್ಥಿಸುವ ಕುವೆಂಪು ಅವರು ಮೊದಲು ಬರೆದದ್ದು ಆಂಗ್ಲ ಕವನ!

ಆಗ ಮೈಸೂರಿಗೆ ಬಂದಿದ್ದ ಕಸಿನ್ಸ್ ಎಂಬ ಆಂಗ್ಲ ವಿದ್ವಾಂಸರ ಸಂದರ್ಶನ. ಅವರಿಗೆ ತಮ್ಮ ಕವನವನ್ನೋದಿ ತೋರಿಸುವ ಉತ್ಸಾಹ. The Beginner's Muse—ಮೊದಲಿಗನ ಹಾಡು. ಅನ್ಯ ಪಕ್ಷಿಯ ಕೊರಲಿನಲ್ಲಿ ನಮ್ಮ ಕೋಗಿಲೆಯ ಇಂಚರವನ್ನು ಹೊರಡಿಸುವ ಆಸೆ.

ಕಸಿನ್ಸ್ ಅವರು ಕೇಳಿದರು—'ನಿಮ್ಮ ಭಾಷೆಯಲ್ಲಿ ಏನು ಬರೆದಿದ್ದೀರಿ?'

(ಹೌದಲ್ಲ! ನಮ್ಮ ಭಾಷೆಯಲ್ಲಿ ಏಕೆ ಬರೆಯಬಾರದು? ಬರೆಯಲಾಗದೆ?)

ಕಸಿನ್ಸ್ ಸಂದರ್ಶನವನ್ನು ಮುಗಿಸಿ ಮನೆಗೆ ಬರುವಾಗ ಹಾದಿಯಲ್ಲೇ ಕನ್ನಡ ಕೋಗಿಲೆಯಿಂದ ದನಿ ಹೊರಟಿತು. ಇಂಗ್ಲಿಷಿನ 'ಸ್ಪ್ರಿಂಗು' ಕನ್ನಡದ ಚೈತ್ರ-ವೈಶಾಖವಾಯಿತು.

(ಚೈತ್ರ-ವೈಶಾಖ ವಸಂತಋತು.)

ರನ್ನ, ಪಂಪ, ಶ್ರೀಗುರು, ಮಿಲ್ಟನ್, ಷೆಲ್ಲಿ, ಷೇಕ್ಸ್‌ಪಿಯರ್—ಎಲ್ಲರೂ ಉದಿತೋದಿತ ಕವಿಯನ್ನು ಹರಸಿದರು.

ಹಲವು ಗುರು-ಲಘು ಕೃತಿಗಳ ಗಿರಿ ಝರಿಗಳಲ್ಲಿ ಈ ಕನ್ನಡದ ಕಿಂದರಿ ಜೋಗಿಯ ನಾದ ಮಾಧುರ್ಯ ನಿನದಿಸಿತು.

'ರಾಮಾಯಣದರ್ಶನ'ವಾಯಿತು. ಕವಿಪುಂಗವನ ತೇಜಸ್ಸು-ಓಜಸ್ಸು ಆವಿಷ್ಕಾರಗೊಂಡು ನಾಡನ್ನು ಬಳಸಿತು.

ಕನ್ನಡದ ಗಡಿಯನ್ನೂ ದಾಟಿ ದಿಲ್ಲಿಯ ಕೆಂಪು ಕೋಟೆಯನ್ನೇ ಬಳಸಿತು.

ಸಾಹಿತ್ಯ ಅಕಾದಮಿಯಿಂದ ರಾಷ್ಟ್ರ ಪ್ರಶಸ್ತಿಗಳಿಸಿತು. ಕುವೆಂಪು ಅವರು 'ಪದ್ಮಭೂಷಣ'ರಾದರು.

(ಒಂದು ಜೀವಮಾನದ ಹಿರಿಯ ಸಾಧನೆಗೆ ಸೂಕ್ತ ಸಂಭಾವನೆ.)

ಸರ್ವೋದಯ ಸಾಧಕರಾದ ಸಂತ ವಿನೋಬಾ ಅವರಿಂದ ಅಭಿಮಾನದ ಪುರಸ್ಕಾರ. ಶ್ರೀ ರಾಮಾಯಣ 'ದರ್ಶನ ಧ್ವನಿ ರಸಾಮೃತ ಪಾನದಾನಂದ.'

ಲೋಕ್ಷ ಶಿಕ್ಷಣ ನಿರತ ತಪಸ್ವಿ. ಅಧ್ಯಾಪಕ. ಆಚಾರ್ಯ. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿ ಮಹತ್ವದ ಸಾಧನೆ.

ಮಾನಸ ಲೋಕದ ಗಂಗೆಯನ್ನು ಇಳೆಗೆ ಕರೆತರುವ ವೈಭವ. ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾಂಗವಾದ 'ಮಾನಸ ಗಂಗೋತ್ರಿ'ಯ ಅವತಾರ.

'ಕಟ್ಟಡಗಳ ಸಾಲು. ನಡುನಡುವೆ ರಸ್ತೆ. ಅಲ್ಲಿ ಒಂದೆಡೆಯಲ್ಲಿ ಸ್ನಾನ ಸರೋವರ. ಅಲ್ಲಲ್ಲೇ ಸ್ಮಾರಕ ಪೀಠಗಳು. ಎಲ್ಲೆಲ್ಲೂ ಎದ್ದು ಬೆಳೆದು ನಿಂತಿರುವ ಬೃಹದ್ ವೃಕ್ಷಗಳಿಗೆ ಒಂದೊಂದಕ್ಕೂ ಒಬ್ಬೊಬ್ಬ ಮಹರ್ಷಿಯ, ಮಹಾಕವಿಯ, ಮಹಾಜ್ಞಾನಿಯ ಹೆಸರು....ಇದು ವ್ಯಾಸಪೀಠ. ಇಲ್ಲಿ ಪಂಪ ನಾರಣಪ್ಪರ ಹೆಸರಿನ ಪೀಠಗಳು. ಹೀಗೆ ಇಡೀ ಕ್ಷೇತ್ರವೇ ಮಹಾ ವ್ಯಕ್ತಿಗಳ ಹೆಸರಿನಿಂದ ತುಂಬಿರುತ್ತವೆ. ಭಾವಮಯ ಮನೋಮಯ ಶಕ್ತಿಗಳ ನೆಲೆ ಮನೆಯಾಗಿರುತ್ತದೆ.'

(ಕವಿ ಕಂಡ ಕನಸಿನಲ್ಲಿ ಬಹುಪಾಲು ಈಗ ನನಸು. ಅದಕ್ಕಾಗಿ ಅವರಿಂದ ಅವಿಶ್ರಾಂತ ದುಡಿತ.)

ಅರುವತ್ತರ ಗಡಿ ದಾಟಿರುವ ಕುವೆಂಪು ಅವರಿಗೆ ವಿಶ್ರಾಂತಿಯ ಹಂಬಲವಿಲ್ಲ. 'ನೆನಪಿನ ದೋಣಿ'ಯಲ್ಲಿ ಹಿಂದೆ ಹಿಂದೆ ಸಾಗುವ ಜತೆಗೆ, 'ಮಲೆಯಲ್ಲಿ ಮದುಮಗಳ' ಮೆರವಣಿಗೆ ನಡಸುವ ಸಂಭ್ರಮ. ಬ್ರಾಹ್ಮೀ ಪ್ರಜ್ಞೆಯ ಮಹಾಕೃತಿಯೊಂದನ್ನು ಮನೋಮಯಕ್ಕೆ ಕರೆತಂದು ಬೆಳಗಿಸುವ ಕಾರ್ಯದೀಕ್ಷೆ.

ನಮ್ಮ ಸಾಹಿತ್ಯದ ಇಂಪನ್ನೂ ಪೆಂಪನ್ನೂ ಪ್ರಕಟಿಸುವ ಹಂಬಲವೊಂದೇ ಇವರಿಗೆ ಸದಾ.*

---

* ೧೯೬೬



# ಕ್ರಿಸ್ತ ಸೇವಕ ಕೈಥಾನ್

ಅಚ್ಚ ಪರಂಗಿ ವ್ಯಕ್ತಿ. ಆದರೆ ತೊಟ್ಟದ್ದು ಶುಭ್ರಧವಳ ವರ್ಣದ ಜುಬ್ಬಾ, ಪೈಜಾಮ. ಕಾಲಲ್ಲಿ ಎಕ್ಕಡ. ತಲೆಯ ಕೆಂಚು ಕೂದಲು ಕೆದರಿದ್ದರೂ ಅದರಲ್ಲೂ ಒಂದು ಲಕ್ಷಣ. ಕಣ್ಣಿಗೆ ಕನ್ನಡಕ. ತೆಳ್ಳನೆಯ ಎತ್ತರವಾದ ನಿಲುವು. ಇಂಥ ವಿಚಿತ್ರ ವ್ಯಕ್ತಿ ಸೈಕಲ್ ಮೇಲೆ ಕುಳಿತು ಬೆಂಗಳೂರಿನಲ್ಲಿ ಓಡಾಡುತ್ತಿದ್ದ ದೃಶ್ಯ ಹಲವು ವರ್ಷಗಳ ಹಿಂದೆ ಸಾಮಾನ್ಯವಾಗಿತ್ತು. ಅವರೇ ಅಮೆರಿಕದ ರೆವರೆಂಡ್ ರಾಲ್ಫ್ ರಿಚರ್ಡ್ ಕೈಥಾನ್.

ರೆವರೆಂಡ್ ಕೈಥಾನರನ್ನು ಹಲವು ಬಾರಿ ನೋಡಿದ್ದರೂ ನನಗೆ ಅವರ ಪರಿಚಯ ಇರಲಿಲ್ಲ. ಆದರೆ ಅವರ ಸುಹಾಸ, ಸರಳ ನಡತೆ, ವಿನಯ, ನಮ್ರತೆ ಇವು ನನ್ನ ಮನಸ್ಸಿಗೆ ತುಂಬಾ ಹಿಡಿಸಿದ್ದುವು. ಒಮ್ಮೆ ಸಭೆಯೊಂದರಲ್ಲಿ ನನ್ನ ಗೆಳೆಯರೊಬ್ಬರ ಮೂಲಕ ಅವರ ಪರಿಚಯವಾಯಿತು. ಪರಿಚಯವಾದ ಎರಡೇ ನಿಮಿಷದಲ್ಲಿ ನಾನು ಅವರ ಆತ್ಮೀಯರಲ್ಲಿ ಒಬ್ಬನಾದೆ. ಅವರ 'ಆನಂದಾಶ್ರಮಕ್ಕೆ' ಬರಬೇಕೆಂದು ಆಹ್ವಾನ ಬಂತು. ನನ್ನ ಗೆಳೆಯರಂತೂ ಕೈಥಾನರ ಕಸುಬಿಗೇ ಸೇರಿದ್ದರಿಂದ ಅವರಿಗೆ ಆಹ್ವಾನವೇ ಬೇಕಿರಲಿಲ್ಲ.

ರೆವರೆಂಡ್ ರಾಲ್ಫ್ ರಿಚರ್ಡ್ ಕೈಥಾನ್ ಅಮೆರಿಕದವರು. ಹುಟ್ಟು ಮಿನ್ನೆಸೋಟಾದಲ್ಲಿ. ಆದರೆ ಹದಿನಾಲ್ಕು ವರ್ಷದ ಹುಡುಗನಾಗಿದ್ದಾಗಲೇ ಭಾರತದ

ಕರೆ ಬಂತು. ಈ ಅವ್ಯಕ್ತ ಆಹ್ವಾನಕ್ಕೆ ಓಗೊಟ್ಟು ಇವರು ತಮ್ಮ ವಿಶ್ವವಿದ್ಯಾನಿಲಯದ ವ್ಯಾಸಂಗ ಮುಗಿದ ಕೂಡಲೇ ಕ್ರೈಸ್ತ ಪಾದ್ರಿಯಾಗಿ ಭಾರತಕ್ಕೆ ಬಂದರು.

ಆದರೆ ಭಾರತದ ಜನಕ್ಕೆ ಬೇಕಾಗಿದ್ದದ್ದು ಒಣ ಬೋಧೆಯಲ್ಲ ಎಂಬುದನ್ನು ಅವರು ಕಂಡುಕೊಳ್ಳುವುದಕ್ಕೆ ಬಹುಕಾಲ ಬೇಕಾಗಲಿಲ್ಲ. ಜನಕ್ಕೆ ಬೇಕಾಗಿದ್ದದ್ದು ತುಣುಕು ರೊಟ್ಟಿ, ಹಿಡಿ ಅನ್ನ, ಧಾರಾಳವಾಗಿ ಉಸಿರಾಡುವ ಸ್ವಾತಂತ್ರ್ಯ, ಅಜ್ಞಾನದಿಂದ ಮೋಕ್ಷ. ಇವಿಲ್ಲದ ಸೇವಾಕಾರ್ಯವೆಲ್ಲ ಕೇವಲ ಆಡಂಬರ, ತರ್ಕಯುಕುತಿಗಳ ದಾಳದಾಟ—ಎಂಬುದು ಅವರಿಗೆ ಮುಂದಟ್ಟಾಯಿತು. ಆಮೇಲೆ ಗಾಂಧೀಜಿಯ ಸಂಪರ್ಕ, ಟಾಗೂರರ ಸಹವಾಸ. ಅವರ ಮಾರ್ಗ ಖಚಿತಗೊಂಡಿತು. 'ಮಾನವತೆಯೆಲ್ಲ ಒಂದೇ. ಇದನ್ನರಿತು ದುಡಿಯಬೇಕು'—ಎಂಬ ರವೀಂದ್ರರ ಮಾತು ಇವರ ಬಾಳಿಗೆ ಸಂದೇಶವಾಗಿ ಪರಿಣಮಿಸಿತು.

ಈ ಸಮಯಕ್ಕೆ ಭಾರತದಲ್ಲಿ ಉಪ್ಪಿನ ಸತ್ಯಾಗ್ರಹ ಬಹು ಬಿರುಸಾಗಿ ನಡೆಯುತ್ತಿತ್ತು. ಈ ಕಾಲದಲ್ಲಿ ಗಾಂಧಿ-ಇರ್ವಿನ್ನರ ನಡುವೆ ಸಂದೇಶವಾಹಕರಾಗಿದ್ದ ರೆಜಿನಾಲ್ಡ್ ರೈನಾಲ್ಡ್ಸರು ಕೈಥಾನರೊಡನೆ ಮಧುರೆಯಲ್ಲಿ ಕೆಲಕಾಲ ಇದ್ದರಂತೆ. ಅಲ್ಲಿನ ಜಿಲ್ಲಾ ನ್ಯಾಯಾಧಿಪತಿಗೆ ಕೈಥಾನರ ಮೇಲೆ ಕೆಂಗಣ್ಣಿಡಲು ಇಷ್ಟೇ ಕಾರಣ ಸಾಕಾಗಿತ್ತು. ಇವರು ಹೇಳಿದ್ದು, ಹೇಳದಿದ್ದದ್ದು ಎಲ್ಲಾ ಸೇರಿಸಿ ಒಂದು ವರದಿ ತಯಾರಿಸಿದ. ಅದರ ಆಧಾರದ ಮೇಲೆ, ಇವರು ಹೋದ ಹೋದಲ್ಲೆಲ್ಲ ಆಳರಸರ ಬೇಟೆ ನಾಯಿ ಇವರನ್ನು ಹಿಂಬಾಲಿಸಿತು. ಮಲಬಾರು, ಮದ್ರಾಸು, ಮೈಸೂರು—ಉಹುಂ!—ಎಲ್ಲೂ ಇರಗೊಡಿಸಲಿಲ್ಲ. ಕೊನೆಗೆ, ಗಳಿಗೆಗಳಲ್ಲಿ, ಇವರು ಈ ದೇಶವನ್ನೇ ಬಿಟ್ಟು ಅಮೆರಿಕಕ್ಕೆ ತೆರಳಬೇಕಾಯಿತು. ಕಳ್ಳರು, ಕೊಲೆಗಡುಕರು, ಸೂರೆಗಾರರು—ಇವರೆಲ್ಲಾ ಭಾರತದಲ್ಲಿ ಬಂದು ನೆಲಸಲು ಆಗಿನ ಸರಕಾರಕ್ಕೆ ಅಭ್ಯಂತರವಿರಲಿಲ್ಲ. ಆದರೆ ಜನಕೋಟಿಯ ಸ್ನೇಹ ಹಸ್ತಕ್ಕೆ ಇಲ್ಲಿ ಎಡೆ ಇರಲಿಲ್ಲ. ಇದು ಆಗಿನ ಸಾಮ್ರಾಜ್ಯ ನೀತಿ.

ರೆವರೆಂಡ್ ಕೈಥಾನರ ಹುಟ್ಟು ನಾಡು ಅಮೆರಿಕವಾದರೂ ಅವರು ಭಾರತಕ್ಕೆ ದತ್ತು. ಅದರ ಕನಸಿನ ಕರೆಗೆ ಅವರ ಹೃದಯವೇ ನೆಲೆಯಾಯಿತು. ಅವರು ನೋಡಿದ ಭಾರತದ ಕರುಣೆಯ ಚಿತ್ರ ಅವರ ಮನಸ್ಸಿನ ಆಳದಲ್ಲಿ ನೋವುಂಟುಮಾಡಿತು. ಈ ನೋವಿನಿಂದ ಬಾಗಿದ ಅವರು ಭಾರತದ ಪ್ರಜೆಯಾದರು. ಅವರ

ಪತ್ನಿ ಡಾಕ್ಟರ್ ಶ್ರೀಮತಿ ಮಿಲ್ಡ್ರೆಡ್ ಕೈಥಾನ್ ಆದರ್ಶ ಸ್ತ್ರೀತ್ವದ ಪ್ರತೀಕ. ಆಕೆ ಗಂಡನನ್ನೇ ಒಂದು ಕೈ ಮೀರಿಸುವಂಥವರು. ಅಂಥ ಸೇವಾದೀಕ್ಷೆ ಅವರದು. ಜತೆಗೆ ವೈದ್ಯದಲ್ಲಿ ನಿಷ್ಣಾತೆ. ಆಹಾರ ವಿಜ್ಞಾನ ವಿಚಾರವಾಗಿ ಅವರು ಮಲಬಾರಿನಲ್ಲೂ ಮೈಸೂರಿನಲ್ಲೂ ಕೈಗೊಂಡ ಪ್ರಯೋಗ ಕಾರ್ಯ ಅರ್ಧಕ್ಕೆ ನಿಲ್ಲದೆ ಮುಂದುವರಿದಿದ್ದರೆ ನಾಡಿನ ಆಹಾರ ದುಸ್ಥಿತಿಯ ನಿವಾರಣೆಗೆ ಎಷ್ಟೋ ಸಹಾಯ ಆಗುತ್ತಿತ್ತು. ಆದರೆ ಆಳರಸರಿಗೆ ಅದು ಬೇಕಿರಲಿಲ್ಲ. 'ಗಂಡನೊಡನೆ ನಾ ಹೋಗುವುದಿಲ್ಲ. ಇಲ್ಲೇ ಇರುತ್ತೇನೆ,' ಎಂದು ಆಕೆ ಹಟ ಹಿಡಿದು ಕೂತಾಗ ಅವರನ್ನೂ ಹೊರತಳ್ಳುವ ಆಜ್ಞೆಯೊಂದು ಬಂತು.

ಈ ಆಜ್ಞಾಪರಂಪರೆ ಇಷ್ಟಕ್ಕೇ ನಿಲ್ಲಲಿಲ್ಲ. ಕೊನೆಗೆ ಅವರ ಮೂವರು ಮಕ್ಕಳು, 'ನಮ್ಮ ಮೇಲೆ ಆಜ್ಞೆ ಜಾರಿಯಾಗಿಲ್ಲ. ನಾವು ಇಲ್ಲೇ ಇರುತ್ತೇವೆ,' ಎಂದರು. ಕೋಪಗೊಂಡ ಸಾಮ್ರಾಜ್ಯ ಸರಕಾರ ಅವರನ್ನೂ ದಬ್ಬಿತು.

ಕೈಥಾನರನ್ನು ನೆನಸಿಕೊಂಡಾಗಲೆಲ್ಲ ಹಲವು ವರ್ಷಗಳ ಹಿಂದೆ ನಡೆದ ಸಂಗತಿಯೊಂದು ನೆನಪಿಗೆ ಬರುತ್ತದೆ. ಆಗ ಗಾಂಧೀಜಿ ಭಾರತದಾದ್ಯಂತ ಯಾತ್ರೆ ಕೈಕೊಂಡಿದ್ದರು. ಪ್ರತಿ ನಿಲುಮನೆಯಲ್ಲೂ ಅಸಾಧ್ಯ ಜನಸಂದಣಿ. ಈ ಜನಸಮೂಹದ ನಡುವೆ ಒಬ್ಬ ಪರಂಗಿ ಮಹಿಳೆ ಇಬ್ಬರು ಮಕ್ಕಳೊಡನೆ ಗಾಂಧೀದರ್ಶನಾಕಾಂಕ್ಷಿಣಿಯಾಗಿ ಬಂದಳು. ಅವಳೇ ಶ್ರೀಮತಿ ಕೈಥಾನ್. ಗಾಂಧೀಜಿಗೆ ಮಕ್ಕಳು ಎಂದರೆ ಪ್ರೀತಿ ತಾನೆ? ಆ ಮಕ್ಕಳಲ್ಲಿ ಹಿರಿಯಳಾದವಳನ್ನು ಕೇಳಿದರು:

'ನಿನ್ನ ಹೆಸರೇನಮ್ಮ?'

'ಕಮಲಾ.'

ಆಕೆಯ ಹೆಸರು ಮೇರಿ. ಆದರೆ ಆಕೆಯ ತಾಯಿ-ತಂದೆ ಕೂಗುತ್ತಿದ್ದದ್ದು ಕಮಲಾ.

ಗಾಂಧೀಜೀ ಚಿಕ್ಕವನ ಕಡೆ ತಿರುಗಿ, 'ನಿನ್ನ ಹೆಸರೇನು ಮಗೂ?' ಎಂದರು.

'ಕಾಮ್‌ಚಂದ್,' ಎಂದು ತೊದಲಿದ ಅವನು.

'ಕರಮ್‌ಚಂದ್, ಬಾಪೂಜೀ. ನಿಮ್ಮ ಹೆಸರಿಟ್ಟಿದ್ದೇವೆ ಅವನಿಗೆ.' ಮಾತು ಕೂಡಿಸಿದವರು ಶ್ರೀಮತಿ ಕೈಥಾನ್.

ಆಮೇಲೆ, ಹಿಂದೀಯರ ಜತೆಯಲ್ಲಿ ಒಂದಾಗಿ ಸೇವಾಕಾರ್ಯ ಕೈಕೊಳ್ಳುವುದು ಹೇಗೆ?—ಎಂಬ ವಿಚಾರವಾಗಿ ಆಕೆಗೂ ಗಾಂಧಿಗೂ ಚರ್ಚೆಯಾಯಿತು.

ಈ ವಿಚಾರವನ್ನು ಮಹದೇವಭಾಯಿ 'ಹರಿಜನ'ದಲ್ಲಿ ಬಹು ಸೊಗಸಾಗಿ ಬರೆದಿದ್ದಾರೆ.

ಅಂತೂ ಅಂದಿನಿಂದ ಕೈಥಾನ್ ದಂಪತಿಗಳು ಭಾರತಕ್ಕಾಗಿ ಬಹಳ ದುಡಿದರು. ಮಲಬಾರಿನಲ್ಲಿ, ಮೈಸೂರಿನಲ್ಲಿ ಇವರು ಮಾಡಿದ ಮೂಕಸೇವಾಕಾರ್ಯ ಯಾವೊಂದು ಪತ್ರಿಕೆಯಲ್ಲೂ ಪ್ರಚಾರವಾಗಲಿಲ್ಲ. ಆದರೆ ಅದನ್ನು ಪಡೆದವರ ಮೊಗದಲ್ಲಿ ತುಂಬಿದ ಜೀವಕಳೆಯೇ ಕೈಥಾನರ ಬಾಳಿನ ರಸನಿಮಿಷ. ಪ್ರಚಾರ ವೈಖರಿಗೆ ಮನಸೋಲುವ ಕ್ಷಣಿಕ ರಾಜಕೀಯ ಕೈಥಾನರದಲ್ಲ.

ಕೈಥಾನರ ಆಹ್ವಾನದ ಪ್ರಕಾರ ಒಂದು ಭಾನುವಾರ ನನ್ನ ಗೆಳೆಯರೂ ನಾನೂ ಆನಂದಾಶ್ರಮಕ್ಕೆ ಹೋದೆವು. ಅದು ಇದ್ದದ್ದು ಬೆಂಗಳೂರಿನ ಆಗ್ನೇಯಕ್ಕೆ. ಹುಚ್ಚಾಸ್ಪತ್ರೆಯ ಹಿಂದಿನ ಕಾಲುಹಾದಿಯಲ್ಲಿ ನಡೆದು ದಣಿದು ಆನಂದಾಶ್ರಮದ ಹೆಬ್ಬಾಗಿಲ ಮುಂದೆ ನಿಂತಾಗ, 'ಒಳಗೆ ನಮಗೆ ಸಿಗುವ ಸ್ವಾಗತ ಎಂಥದೋ! ನಮ್ಮ ಗುರುತು ಹತ್ತೀತೋ ಇಲ್ಲವೋ! ಕೇವಲ ವ್ಯಾವಹಾರಿಕ ಉತ್ತರ ದೊರೆತು ಹಿಂದಿರುಗಬೇಕಾದೀತೋ!' ಎಂದು ನನಗೆ ಅಳುಕು. ಆದರೆ ನನ್ನ ಸ್ನೇಹಿತರಿದ್ದಾರಲ್ಲ, ಎಂದು ಧೈರ್ಯ. ಕೊನೆಗೆ ಆಶ್ರಮ ನಿವಾಸಿ ಹರಿಜನ ವಿದ್ಯಾರ್ಥಿಯೊಬ್ಬನೊಡನೆ ಒಳಕ್ಕೆ ಹೇಳಿಕಳುಹಿಸಿದ್ದೂ ಆಯಿತು.

ನಮ್ಮ ಸುದ್ದಿ ಇನ್ನೂ ಒಳಗೆ ತಲುಪಿರಲಿಕ್ಕಿಲ್ಲ—ಎನ್ನುವಷ್ಟರಲ್ಲೇ ಒಳಗಿನಿಂದ ಶ್ರೀಮತಿ ಕೈಥಾನ್ ಓಡಿಬಂದರು. ಸಾಮಾನ್ಯ ನಿಲವು. ನಿಲವಿಗೆ ತಕ್ಕ ದಪ್ಪ. ಅಗಲವಾದ ಹಣೆ. ಮಿಂಚುಗಣ್ಣು. ಒರಟು ಬಟ್ಟೆಯ ಲಂಗ. ಹಿಂದೂ ಹೆಂಗಸರ ಹಾಗೆ ಜಡೆ. ನೋಡಿದ ಕೂಡಲೇ ಒಂದು ತುಂಟ ಚಿಕ್ಕ ಹುಡುಗಿ ಎದುರು ನಿಂತ ಹಾಗೆಯೇ ಎನಿಸಿತು ನನಗೆ.

ಕೈಥಾನ್ ಊರಲ್ಲಿರಲಿಲ್ಲ. ಯಾವುದೋ ಹಳ್ಳಿಗೆ ಹೋಗಿದ್ದರು. ಶ್ರೀಮತಿ ಕೈಥಾನರೇ ನಮ್ಮನ್ನು ಆಶ್ರಮದ ಸುತ್ತಣ ತೋಟದಲ್ಲಿ ಕರೆದೊಯ್ದರು. ಆಕೆ ಯೊಡನೆ ಸಂಭಾಷಣೆ ಸಂಭಾಷಣೆಯಲ್ಲ: ಒಂದು ಸಸ್ಯಶಾಸ್ತ್ರ ತರಗತಿ. ನಮ್ಮ ಅಜ್ಜಿಯರು ಹಣ್ಣುಗಳನ್ನು ಒಣಗಿಸಿ, ಬೇಕಾದಾಗ ಕರಿದೋ ಬೇಯಿಸಿಯೋ ಆಹಾರ ತಯಾರಿಸುತ್ತಿದ್ದ ವಿಧಾನವನ್ನು ಬಹಳವಾಗಿ ಹೊಗಳಿದರು. ಇದೇ ವಿಧಾನ ಅವಲಂಬಿಸಿ ಬಾಳೆಯ ಹಣ್ಣು ಒಣಗಿಸಿ ಶೇಖರಿಸಿಡುವ ಪ್ರಯೋಗ ನಡಸಿದ್ದೇನೆ, ನೋಡಿ—ಎಂದು ಒಬ್ಬೊಬ್ಬರ ಕೈಗೂ ಒಂದೊಂದು ಹಿಡಿ ಒಣಗಿದ

ಬಾಳೆಯ ಹಣ್ಣಿನ ಚೂರುಗಳನ್ನು ಕೊಟ್ಟರು. ಅನುಮಾನದಿಂದ ಒಂದು ಚೂರು ಬಾಯಿಗೆ ಹಾಕಿದೆ. ತುಂಬಾ ರುಚಿಯಾಗಿತ್ತು. ಬಹು ಬೇಗ ತುಂಬುಗೈ ಬರಿಗೈಯಾಯಿತು. ಇವರ ಆಹಾರ ಮೌಲ್ಯ ತುಂಬಾ ಹೆಚ್ಚಿನದು—ಎಂದು ಅವರು ಹೊಗಳಿದ್ದನ್ನು ಕೇಳಿ ನಾನು ಸ್ವಲ್ಪ ಉತ್ಸಾಹದಿಂದಲೇ, 'ಹೌದು! ಹೌದು!' ಎಂದೆ. ಅವರಿಗೆ ಬಲು ಸಂತೋಷವಾಯಿತು. ಹೋಗುವಾಗ ನಮ್ಮ ಕೈಗೆ ಅದರ ಪೊಟ್ಟಣ 'ಇನಾಮು' ಬಂತು.

ಕೈಥಾನ್ ದಂಪತಿಗಳು ತುಂಬಾ ಸರಳ ಜೀವನ ನಡಸುತ್ತಿದ್ದರು. ಅವರ ಊಟ ಕೇವಲ ಕಾಯಿ ಪಲ್ಯದ ಹುಳಿ, ಅನ್ನ. ಅವರು ತಯಾರಿಸಿದ ಹುಳಿಯ ರುಚಿಯೂ ನಮಗೆ ಅಯಾಚಿತವಾಗಿಯೇ ಲಭಿಸಿತು. ನಮ್ಮ ಹಸಿದ ಹೊಟ್ಟೆಗೆ ಅದು ಅಮೃತವಾಗಿ ಕಂಡಿತು. ಅವರು ನಡಸುತ್ತಿದ್ದ ಸ್ಕೂಲು, ಆಸ್ಪತ್ರೆ ಎಲ್ಲಾ ನೋಡಿದ್ದಾಯಿತು. 'ಜನಕ್ಕೆ ಇನ್ನೂ ಆಸಕ್ತಿಯಿಲ್ಲ. ಆಸಕ್ತಿ ಇದ್ದರೂ ಹಣ ಇಲ್ಲ. ಓ! ಇನ್ನೂ ಎಷ್ಟೊಂದಿದೆ, ಮಾಡಬೇಕಾದ ಕೆಲಸ!' ಎಂದು ಅವರು ಹೇಳಿದಾಗ ನಮ್ಮ ಎದೆ ಬಹು ಭಾರವಾಗಿತ್ತು.

ಒಳಗೆ ಕರಮ್‌ಚಂದ್ ಮಂಚದ ಮೇಲೆ ಕೂತು ತಕಲಿ ತಿರುಗಿಸುತ್ತಿದ್ದ. 'ಮಂಚದ ಮರದ ಮೇಲೆ ತಕಲಿ ಆಡಿಸಿದರೆ ತಕಲಿಯ ತುದಿ ಮೊಂಡಾಗುತ್ತದೆ. ಕೆಳಗೆ ಒಂದು ರಟ್ಟು ಇಟ್ಟುಕೊಳ್ಳಿ,' ಎಂದು ನನ್ನ ಗೆಳೆಯರು ಹೇಳಿದರು. 'ಹಾ ಹಾಂ?' ಎಂದು ಆಕೆ ಕಣ್ಣಗಲಿಸಿ ಕೇಳಿದರು. ಮತ್ತೆ ನನಗೆ ಎಂಟು ವರ್ಷದ ತುಂಟ ಹುಡುಗಿಯ ನೆನಪು ಬಂತು. ಅಷ್ಟು ಆಸಕ್ತಿ ಅವರಿಗೆ, ಅಲ್ಪ ವಿಷಯದಲ್ಲಿ ಕೂಡ.

ಕೊನೆಗೆ ಹೊರಡುವಾಗ, 'ಇನ್ನೊಮ್ಮೆ ಬನ್ನಿ. ಕೈಥಾನರೂ ಇರುತ್ತಾರೆ,' ಎಂದು ಅವರು ಹೇಳಿ ಬೀಳ್ಕೊಟ್ಟರು. 'ಆಗಲಿ,' ಎಂದೆವು.ಅವರು ಕೊಟ್ಟ ಒಣಗಿದ ಬಾಳೆಯ ಹಣ್ಣಿನ ಚಪಲ ಬೇರೂರಿತ್ತು. ಅಲ್ಲಲ್ಲ, ನಿರೂರಿತ್ತು.

ನಾವು ಅಲ್ಲಿಗೆ ಹೋದದ್ದು ಇನ್ನೊಂದೇ ಒಂದು ಬಾರಿ ಮಾತ್ರ. ಸ್ವಲ್ಪ ದಿನದಲ್ಲೇ ಅವರಿಗೆ ಭಾರತದಿಂದ ಉಚ್ಚಾಟನೆಯ ಆಜ್ಞೆ ಬಂತು. ಹೋಗುವ ಮುನ್ನ ಬೆಂಗಳೂರಿನ ಶಾಲೆಯೊಂದರ ವಿದ್ಯಾರ್ಥಿನಿಲಯದ ಹುಡುಗರಿಗೆ ಸಂದೇಶ ನೀಡುತ್ತಾ, 'ನನ್ನ ಹುಟ್ಟು ನಾಡು ಅಮೆರಿಕಾ. ಒಲಿದ ನಾಡು ಭಾರತ. ಅಮೆರಿಕದಲ್ಲಿದ್ದರೂ ನನ್ನ ಮನಸ್ಸು ಇಲ್ಲೇ. ಬಹು ಬೇಗ ಸ್ವತಂತ್ರ ಭಾರತಕ್ಕೆ

ಮರಳುತ್ತೇನೆ,' ಎಂದರು. ಹೀಗೆ ಹೇಳುತ್ತಿದ್ದಾಗ ಅವರ ಕಣ್ಣು ತೇವವಾಗಿದ್ದುವು. ನಮ್ಮೆಲ್ಲರ ಎದೆ ತುಂಬಿ ಬಂದಿತ್ತು.

ಅನಂತರದ ಮೂರು ವರ್ಷಗಳಲ್ಲಿ ಆದ ಅಗಾಧ ಬದಲಾವಣೆಯ ಪರಿಣಾಮವಾಗಿ ಕೈಥಾನ್ ಸಂಸಾರ ಮತ್ತೆ ಭಾರತಕ್ಕೆ ಮರಳಿತು. ಅವರ ಕನಸಿನ ಸ್ವತಂತ್ರ ಭಾರತ ಇದೇ ಹೌದೋ ಅಲ್ಲವೋ. ಅಂತೂ ನಿಚ್ಛಿದ್ರ ಭಾರತ ಸ್ವತಂತ್ರವಾಗಿದೆ.*

* ೧೯೪೭.



# ಬೆಂಜಮಿನ್ ಗೈ ಹಾರ್ನಿಮನ್

ಕೊಲೆ, ರಕ್ತಪಾತ, ಅನಾಹುತ, ವಿವಾಹ ವಿಚ್ಛೇದ ಇವುಗಳ ವಿಚಾರವಾಗಿ ವರ್ಣರಂಜಿತ ಕತೆಗಳನ್ನು ಹೆಣೆದು ಪ್ರಕಟಿಸುತ್ತಿದ್ದ ಬೊಂಬಾಯಿಯ ಪತ್ರಿಕೆಗಳಿಗೆ ೧೯೪೪ ನೆಯ ಏಪ್ರಿಲ್ ಹದಿನಾಲ್ಕನೆಯ ತಾರೀಖಿನಂದು ವಿಷಾದ ಘಟನೆಯೊಂದು ಸುದ್ದಿಯ ಸಾಮಗ್ರಿಯಾಗಿ ದೊರಕಿತು.

ಬೊಂಬಾಯಿ ರೇವಿನಲ್ಲಿದ್ದ ಹಡಗೊಂದಕ್ಕೆ ಬೆಂಕಿ ತಗುಲಿ ಆಸ್ಫೋಟನೆಯಾಗಿ ಆ ಬೆಂಕಿ ನಗರಕ್ಕೂ ಹಬ್ಬಿತು. ಅಗಾಧ ಸಾವುನೋವುಗಳಾದುವು.

ಈ ಆಸ್ಫೋಟನೆಯ ಸುದ್ದಿಯ ಜತೆಗೇ ಬೊಂಬಾಯಿಯ ಪತ್ರಿಕೆಯೊಂದರಲ್ಲಿ ಇನ್ನೊಂದು ಆಸ್ಫೋಟನೆಯಾಯಿತು. ಆ ಸುದ್ದಿಯನ್ನೋದಿದ ಜನ ಸ್ತಂಭಿತರಾದರು. ಅಂಥ ಸುದ್ದಿ ಅದು.

'ಬಾಂಬೇ ಸೆಂಟಿನಲ್' ಎಂಬ ಪತ್ರಿಕೆಯೇ ಈ ಸುದ್ದಿ ಪ್ರಕಟಿಸಿದ್ದು. ಈ ರೇವಿನ ಆಸ್ಫೋಟನೆಗೆ ಕಾರಣವಾದ ಭಾರತ ಸರ್ಕಾರದ ಬೇಜವಾಬ್ದಾರಿ ವರ್ತನೆಯನ್ನು ಬಯಲಿಗೆಳೆದು ಆ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಲೇಖನವೇ ಈ ಎರಡನೆಯ ಆಸ್ಫೋಟನೆ.

ಆಗ ಆ ಪತ್ರಿಕೆಯಲ್ಲಿ ಈ ರೀತಿ ಸರ್ಕಾರದ ಅಪರಾಧವನ್ನು ಬೆರಳಿಟ್ಟು ತೋರಿಸಿ ಬರೆದ ಸಂಪಾದಕ ಭಾರತೀಯನಲ್ಲ—ಬ್ರಿಟಿಷ್ ಪ್ರಜೆ. ಆತನ ಹೆಸರು ಬೆಂಜಮಿನ್ ಗೈ ಹಾರ್ನಿಮನ್!

ಈ ಹಡಗಿನ ಆಸ್ಫೋಟನೆಯಾದ ಕೂಡಲೇ ಸರ್ಕಾರದವರು ಪತ್ರಿಕಾ

ಸಂಪಾದಕರೆಲ್ಲರ ಒಂದು ಸಭೆ ಕೂಡಿಸಿದ್ದರು. ಈ ಸುದ್ದಿಯ ವಿಚಾರ ಪ್ರಕಟಿಸುವ ಮೊದಲು ನಮ್ಮ ಅನುಮತಿ ಪಡೆಯಬೇಕು—ಎಂದು ಸೂಚಿಸಿದ್ದರು. ತಮ್ಮ ಅಸಹ್ಯ ನೀತಿ ಎಲ್ಲಿ ಬಯಲಿಗೆ ಬಂದೀತೋ—ಎಂದು ಅವರಿಗೆ ಅಂಜಿಕೆಯಾಗಿತ್ತು.

ಆ ಸಭೆಯಲ್ಲಿ 'ಬೊಂಬಾಯಿ ಸೆಂಟಿನಲ್' ಪತ್ರಿಕೆಯ ಸಂಪಾದಕ ಬಿ. ಜಿ. ಹಾರ್ನಿಮನ್ನರೂ ಇದ್ದರು. ಆದರೆ ಅವರು ಸರ್ಕಾರದ ಈ ಆಜ್ಞೆಗೆ ತಲೆಬಾಗಲಿಲ್ಲ. ಸತ್ಯ ಹೊರಹಾಕುವುದೇ ಅವರ ಧ್ಯೇಯ. ಸರ್ಕಾರ ಕೂಡಲೇ ಈ ಘಟನೆ ಕುರಿತು ಒಂದು ವಿಚಾರಣಾ ಸಮಿತಿ ಏರ್ಪಡಿಸಬೇಕು. ಎಲ್ಲ ವಿವರಗಳನ್ನೂ ಪ್ರಕಟಿಸಬೇಕು. ಆಗಿರುವ ಅಗಾಧ ನಷ್ಟದ ವಿವರಗಳನ್ನೂ ಸಾರ್ವಜನಿಕರಿಗೆ ತಿಳಿಸಬೇಕು. ಹೀಗೆಂದು ಅವರು ಬರೆದರು. ಬೊಂಬಾಯಿ ರೇವಿನ ಅಧಿಕಾರಿಗಳು ಈ ಮದ್ದುತುಂಬಿದ ಹಡಗಿನ ವಿಚಾರದಲ್ಲಿ ಮುಂಜಾಗ್ರತೆ ಕ್ರಮ ಕೈಕೊಳ್ಳಬೇಕೆಂದು ಭಾರತ ಸರ್ಕಾರವನ್ನು ಒತ್ತಾಯ ಪಡಿಸಿದ್ದರೂ ಸರಕಾರ ಅದಕ್ಕೆ ಗಮನ ಕೊಡದೆ ಈ ಘಟನೆಗೆ ಅವಕಾಶ ಮಾಡಿಕೊಟ್ಟದ್ದನ್ನು ಕಟುವಾಗಿ ಟೀಕಿಸಿದರು.

ಸರ್ಕಾರ ಇದನ್ನು ಓದಿ ಬೆಂಕಿಯಾಯಿತು. ಕೂಡಲೇ ಹಾರ್ನಿಮನ್ನರ 'ಬಾಂಬೇ ಸೆಂಟಿನಲ್' ಪತ್ರಿಕೆಯ ಮೇಲೆ ಪ್ರತಿಬಂಧಕಾಜ್ಞೆ ಬಂತು. ಅದರ ಪ್ರಕಟನೆ ನಿಂತಿತು.

ಹಾರ್ನಿಮನ್ನರ ಐವತ್ತು ವರ್ಷಗಳ ಪತ್ರಿಕಾ ಜೀವನದಲ್ಲಿ ಇಂಥ ಘಟನೆಗಳು ಎಷ್ಟೋ ಬಾರಿ ಒದಗಿದ್ದುವು. ಆದರೆ ಹಾರ್ನಿಮನ್ ಮಾತ್ರ ಒಮ್ಮೆಯೂ ಎದೆ ಗುಂದಲಿಲ್ಲ.

ಹಾರ್ನಿಮನ್ ಭಾರತಕ್ಕೆ ಕಾಲಿಟ್ಟಾಗ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅತ್ಯಂತ ಶ್ರದ್ಧಾವಂತರಾಗಿದ್ದರು. ಬ್ರಿಟಿಷ್ ನೌಕಾಪಡೆಯ ಅಧಿಕಾರಿಯೊಬ್ಬರ ಮಗ ಆತ. ಆತನ ಸಹೋದರನೂ ಒಬ್ಬ ನೌಕಾಧಿಕಾರಿ. ಇಂಥ ಮನುಷ್ಯ ಭಾರತದ ಪರವಾಗಿ ಪರಿವರ್ತನೆಯಾಗಿ, ಭಾರತ ಸ್ವಾತಂತ್ರ್ಯಕ್ಕಾಗಿ ಐವತ್ತು ವರ್ಷಕಾಲ ಹೋರಾಡಿದ ಕತೆ ಅದ್ಭುತ ರಮ್ಯವಾದದ್ದು.

ಹಾರ್ನಿಮನ್ ಕಲ್ಕತ್ತೆಯ 'ಸ್ಟೇಟ್ಸ್‌ಮನ್' ಪತ್ರಿಕೆಯ ಸಹಸಂಪಾದಕರಾಗಿದ್ದಾಗಲೇ ಅವರ ಮನಸ್ಸಿನ ಪರಿವರ್ತನೆಯಾಯಿತು. ಆಗ ಕಲ್ಕತ್ತೆಯೇ

ಭಾರತದ ರಾಜಧಾನಿಯಾಗಿತ್ತು. ಭಾರತ ರಾಜಧಾನಿ ಕಲ್ಕತ್ತೆಯಿಂದ ದೆಹಲಿಗೆ ವರ್ಗವಾದಾಗ ಬ್ರಿಟಿಷ್ ಸಾಮ್ರಾಜ್ಯಷಾಹಿಗಳು ಅನುಸರಿಸಿದ ಕುಟಿಲ ನೀತಿಯನ್ನೂ ಭಾರತೀಯರ ವಿಚಾರವಾಗಿ ಅನುಸರಿಸಿದ ಹೇಯ ನಡತೆಯನ್ನೂ ಕಂಡು, ಪಕ್ಕಾ ಸಾಮ್ರಾಜ್ಯವಾದಿ ಹಾರ್ನಿಮನ್ನರ ಮನಸ್ಸೂ ಕೂಡ ಹೇಸಿತು. ಈ ಅನ್ಯಾಯದ ವಿರುದ್ಧವಾಗಿ ಹಾರ್ನಿಮನ್ ಈ ಸಾಮ್ರಾಜ್ಯಷಾಹಿ ಪತ್ರಿಕೆಗೆ ರಾಜೀನಾಮೆಯಿತ್ತರು. ನಾಳೆಯ ಜೀವನ ಮಾರ್ಗ ಯಾವುದು!—ಎಂಬ ಪ್ರಶ್ನೆ ಯೇನೋ ಅವರ ಮುಂದಿತ್ತು. ಆದರೆ ಅವರು ಅದಕ್ಕಾಗಿ ಅಂಜಲಿಲ್ಲ.

ಈ ಕಾಲಕ್ಕೆ ಸರಿಯಾಗಿ ಬೊಂಬಾಯಿಯಲ್ಲೊಂದು ರಾಷ್ಟ್ರೀಯ ಪತ್ರಿಕೆ ಪ್ರಾರಂಭವಾಗಲಿತ್ತು. ಅದರ ಸ್ಥಾಪಕರಾದ ಸರ್ ಫಿರೋಜ್‌ಷಾ ಮೆಹ್ತಾ ಆ ಪತ್ರಿಕೆಗೆ ಒಬ್ಬ ಯೋಗ್ಯ ಸಂಪಾದಕನನ್ನು ಅರಸುತ್ತಿದ್ದರು. ಅವರ ದೃಷ್ಟಿಗೆ ಹಾರ್ನಿಮನ್ ಬಿದ್ದರು. ಇವರೇ ಆ ನೂತನ ಪತ್ರಿಕೆಯ ಸಂಪಾದಕರಾದರು.

ಹಾರ್ನಿಮನ್ನರ ಸಂಪಾದಕತ್ವದಲ್ಲಿ 'ಬೊಂಬಾಯಿ ಕ್ರಾನಿಕಲ್' ಬಹು ಬೇಗ ಪ್ರಸಿದ್ಧಿ ಹೊಂದಿತು. ಅದೇ ಒಂದು ಶಕ್ತಿಯಾಯಿತು. ನಿರ್ಭಯವಾಗಿ ಸತ್ಯವನ್ನು ಪ್ರತಿಪಾದಿಸಲು ಆ ಪತ್ರಿಕೆ ಎಂದೂ ಹಿಂದೆಗೆಯಲಿಲ್ಲ. ಆಗಿನ ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷ್ ಸಂಪಾದಕನೊಬ್ಬನ ಅಧೀನದಲ್ಲಿದ್ದ ಈ ಪತ್ರಿಕೆ ಅತ್ಯಂತ ಶ್ಲಾಘನೀಯ ಕಾರ್ಯ ಮಾಡಿತು.

ಬ್ರಿಟಿಷ್ ಸರಕಾರ ಅಮೃತಸರದ ಕೊಲೆಯ ಪ್ರಕರಣ ನಡಸಿದಾಗ ಈ ಪತ್ರಿಕೆಯಲ್ಲಿ ಬಂದ ಲೇಖನಗಳು ಸರ್ಕಾರದ ಉದ್ರೇಕಕ್ಕೆ ಕಾರಣವಾದುವು. ಒಂದು ದಿನ ಅನಿರೀಕ್ಷಿತವಾಗಿ ಹಾರ್ನಿಮನ್ನರ ಗಡಿಪಾರಿನ ಆಜ್ಞೆ ಬಂತು. ಅವರು ಬ್ರಿಟನ್ನಿಗೆ ಹಿಂದಿರುಗಬೇಕಾಯಿತು.

ಹಾರ್ನಿಮನ್ ಎದೆಗುಂದಲಿಲ್ಲ. ಸುಮಾರು ಏಳು ವರ್ಷಕಾಲ ಅವರು ಅಲ್ಲಿಯೂ ಭಾರತದ ಪರವಾಗಿ ಅದ್ಭುತ ಹೋರಾಟ ನಡಸಿದರು. ಪತ್ರಿಕೆಗಳಲ್ಲಿ ಪ್ರಚಾರ ಕಾರ್ಯ ಮುಂದುವರಿಸಿದರು.

ಆದರೆ ಹಾರ್ನಿಮನ್ ಜೀವ ಅಲ್ಲಿ ಸ್ವಸ್ಥವಾಗಿರಲಿಲ್ಲ. ೧೯೨೬ ರಲ್ಲಿ ಒಂದು ದಿನ ಅವರು ಭಾರತದಲ್ಲಿ ಮತ್ತೆ ಕಾಣಿಸಿಕೊಂಡರು. ಈ ಪ್ರಚಂಡ ಪತ್ರಿಕೋದ್ಯೋಗಿ ಸರ್ಕಾರದ ಕಣ್ಣು ತಪ್ಪಿಸಿ ಬ್ರಿಟನ್ನಿನಿಂದ ಕೊಲೊಂಬೋಗೆ ಬಂದು ಅಲ್ಲಿಂದ ಧನುಷ್ಕೋಟಿಯ ಮಾರ್ಗವಾಗಿ ಬೊಂಬಾಯಿಗೆ ಬಂದು ಕೂತರು.

ಹಾರ್ನಿಮನ್ ಸಂತತ ಸತ್ಯಾನ್ವೇಷಕ. ಆದ್ದರಿಂದ ಅವರಿಗೆ ಒಂದು ಪತ್ರಿಕೆಯ ಆಡಳಿತ ಮಿತಿ ಒಗ್ಗುತ್ತಿರಲಿಲ್ಲ. 'ಬೊಂಬಾಯಿ ಕ್ರಾನಿಕಲ್' ಪತ್ರಿಕೆಯನ್ನು ಕಟ್ಟಿ ಬೆಳಸಿದವರು ಅವರು. ಆದರೆ ಆ ಪತ್ರಿಕೆಯಲ್ಲಿ ಇವರ ಸತ್ಯಪ್ರಿಯತೆಗೆ ಅಡಚಣೆ ಒದಗಿದಾಗ ಅದನ್ನು ಬಿಟ್ಟರು. ಅವರು ತಮ್ಮ ಐವತ್ತು ವರ್ಷದ ಪತ್ರಿಕೋದ್ಯೋಗದಲ್ಲಿ ಹಲವಾರು ಪತ್ರಿಕೆಗಳನ್ನು ಕಟ್ಟಿದ್ದಾರೆ. ಕಟ್ಟಿದ ಎಷ್ಟೋ ಪತ್ರಿಕೆಗಳನ್ನು ಸಮಾಧಿ ಮಾಡಿದ್ದಾರೆ. ಒಂದು ಪತ್ರಿಕೆಯನ್ನು ಸ್ಥಾಪಿಸಿದ ಮೇಲೆ, ಆ ಪತ್ರಿಕೆಯ ಉಳಿವಿಗಾಗಿ ತಮ್ಮ ಸತ್ಯಪ್ರಿಯತೆಯನ್ನು ಬಿಟ್ಟು ಕೊಟ್ಟು ಅದಕ್ಕೆ ಅಧೀನರಾಗಿ ಅವರೆಂದೂ ನಡೆಯಲಿಲ್ಲ. ಪತ್ರಿಕೆ ಅವರಿಗೆ ಒಂದು ಸಾಧನ—ಕೇವಲ ನಿಮಿತ್ತ.

ಹಾರ್ನಿಮನ್ನರು ಹಲವಾರು ಪತ್ರಿಕೆಗಳ ಸಂಪಾದಕರಾದರೂ 'ಪ್ರತಿಷ್ಟೆ'ಯ ವ್ಯಕ್ತಿಗಳಾಗಿರಲಿಲ್ಲ. ಅವರಿಗೂ ಕೆಲಸಗಾರರಿಗೂ ಚಿರಸ್ನೇಹ ಬಾಂಧವ್ಯ. ಅವರ ಕೆಲಸಗಾರರಿಗೆ ಅವರು ಧಣಿಯಲ್ಲ, ಮಿತ್ರ. ಆಗ ಬೊಂಬಾಯಿಯಲ್ಲಿ ಇಬ್ಬರು ಗೌರ್ನರುಗಳಿದ್ದರು. ಒಬ್ಬರು ಮಲಬಾರ್ ಹಿಲ್ಲಿನ ಅರಮನೆಯಲ್ಲಿ ವಾಸಿಸುತ್ತಿದ್ದರು. ಇನ್ನೊಬ್ಬರು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕ. ಅಲ್ಲಿಯ ಕೆಲಸಗಾರರು ಹಾರ್ನಿಮನ್ನರನ್ನು ಪ್ರೀತಿಯಿಂದ 'ಗೌರ್ನರ್' ಎಂದು ಕರೆಯುತ್ತಿದ್ದರು.

ಹಾರ್ನಿಮನ್ನರ ಹೃದಯ ತುಂಬಾ ಮೃದು. ಸಂಪಾದಕರಾಗಿದ್ದಾಗ ವ್ಯವಹಾರಕ್ಕೆ ಸಂಬಂಧಿಸಿದ ಎಷ್ಟೋ ಹಣಕಾಸು ಇವರ ಬಳಿ ಓಡಾಡುತ್ತಿತ್ತು. ಆಗ ಯಾರಾದರೂ ಕೆಲಸಗಾರ ತನ್ನ ಕಷ್ಟ ಹೇಳಿಕೊಂಡರೆ ಯೋಚನೆ ಮಾಡದೆ ಇವರು ಆ ಹಣ ಎತ್ತಿಕೊಡುತ್ತಿದ್ದರು. ಅವರ ಸಂಬಳದಲ್ಲಿ ಬಹುಪಾಲು ಈ ರೀತಿ ಅವರಿವರಿಗೆ ದಾನವಾಗಿ ಹೋಗಿ ಕೊನೆಗೆ ಅವರಿಗೆ ಜೀವನಕ್ಕೆ ಸಾಕಾಗುವಷ್ಟು ಉಳಿಯುತ್ತಿರಲಿಲ್ಲ. ಅವರ ಐವತ್ತು ವರ್ಷಗಳ ಪತ್ರಿಕೋದ್ಯೋಗದ ನೆನಪಾಗಿ ಬೊಂಬಾಯಿಯ ಜನ ಆಚರಿಸಿದ ಉತ್ಸವದ ಸಂದರ್ಭದಲ್ಲಿ ಅವರಿಗೆ ಇಪ್ಪತ್ತೈದು ಸಾವಿರ ರೂಪಾಯಿ ನಿಧಿಯನ್ನು ಅರ್ಪಿಸಿದರು. ಆದರೆ ಅವರಿಂದ ಸಹಾಯ ಪಡೆಯಲು ಒಂದು ದೊಡ್ಡ ಗುಂಪೇ ಕಾದಿತ್ತು. ಕೊನೆಗೆ ಹಾರ್ನಿಮನ್ನರಿಗೆ ಉಳಿದದ್ದು ಕೇವಲ ಐದು ಸಾವಿರ ರೂಪಾಯಿ!

ಅವರು ಭಾರತದಿಂದ ಗಡಿಪಾರಾಗಿ ಹಡಗು ಹತ್ತಿ ಹೊರಡಲಿದ್ದಾಗ ಅವರ

ಸೇವಕನೊಬ್ಬ ಹಡಗಿನ ಬಳಿ ಓಡಿ ಬಂದ. ನೀವು ಹೋದ ಮೇಲೆ ನನ್ನ ಗತಿಯೇನು? ಎಂದು ಗೋಳಾಡಿದ. ಕೂಡಲೇ ಹಾರ್ನಿಮನ್ ತಮ್ಮ ಜೇಬಿನೊಳಗೆ ಕೈಹಾಕಿ ಹಣದ ಚೀಲ ಹೊರತೆಗೆದರು. ಅದರಲ್ಲಿದ್ದ ಅಷ್ಟು ಹಣವನ್ನೂ ಎತ್ತಿ ಅವನಿಗೆ ಕೊಟ್ಟರು. 'ಹೋಗು! ಹಾರ್ನಿಮನ್ನನಿಂದ ಕೆಟ್ಟೆನೆಂದು ಈ ಜಗತ್ತಿನಲ್ಲಿ ಯಾರೂ ಹೇಳಿಕೊಳ್ಳಕೂಡದು,' ಎಂದರು.

ಹಾರ್ನಿಮನ್ ವಾದಚತುರರೂ ಹೌದು. ಅವರು ಪತ್ರಿಕೋದ್ಯೋಗ ಹಿಡಿಯದೆ ಲಾಯರಾಗಿದ್ದರೆ ಅಲ್ಲಿಯೂ ಅವರು ಶೋಭಿಸುತ್ತಿದ್ದರು. ಅವರಲ್ಲಿ ಈ ವಾದ ಚಾತುರ್ಯ ಇಲ್ಲದಿದ್ದರೆ ಎಷ್ಟೋ ಸಾರಿ ಸರ್ಕಾರದ ಆಜ್ಞೆಯ ಬಾಣಕ್ಕೆ ಅವರು ತುತ್ತಾಗುತ್ತಿದ್ದರು. ಎಷ್ಟೋ ಮಾನನಷ್ಟದ ಮೊಕದ್ದಮೆಗಳಲ್ಲಿ ಅವರು ಸಿಕ್ಕಿ ಬೀಳಬೇಕಾಗುತ್ತಿತ್ತು. ಆದರೆ ಹಾರ್ನಿಮನ್ನರ ಅದ್ಭುತ ಕಾಯಿದೆ ಜ್ಞಾನ ಅವರನ್ನು ಈ ಅಗ್ನಿಪರೀಕ್ಷೆಯಲ್ಲೆಲ್ಲ ಪಾರು ಮಾಡಿಸಿತ್ತು. ಬೊಂಬಾಯಿನ ಹಲವಾರು ಜೂಜುಕಟ್ಟೆಗಳನ್ನು ಬಯಲಿಗೆಳೆದು ಇವರು ಪೋಲೀಸರ ಕೃತಜ್ಞತೆಗೂ ಪಾತ್ರರಾಗಿದ್ದರು.

ಹಾರ್ನಿಮನ್ನರ ಪತ್ರಿಕಾ ಜೀವನದಲ್ಲಿ ಒದಗಿದ್ದ ಎಡರು ತೊಡರುಗಳು ಹಲವಾರು. ಹೊಸ ಪತ್ರಿಕೆ ಪ್ರಾರಂಭಿಸುವುದು ಅವರಿಗೆ ಬಹು ಸುಲಭ. ಆದರೆ ಅದನ್ನು ನಡಸುವಾಗ ಬರುತ್ತಿದ್ದ ಹಣದ ಅಡಚಣೆಗಳಿಂದ ಹಾರ್ನಿಮನ್ನರಲ್ಲದೆ ಬೇರೆ ಯಾರಾದರೂ ಆಗಿದ್ದರೆ ಚೇತರಿಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಒಮ್ಮೆ ಇವರು ಪತ್ರಿಕೆಯೊಂದನ್ನು ನಡಸುತ್ತಿದ್ದಾಗ ನಾಲ್ಕೈದು ಸಾಲಗಾರರ ತಗಾದೆ ಒಟ್ಟಿಗೆ ಬಂತು. ಒಬ್ಬೊಬ್ಬರೂ ಒಂದೊಂದು ಕೋರ್ಟಿನಲ್ಲಿ ತಗಾದೆ ಹಾಕಿದ್ದರು. ಈ ವಿವಿಧ ಕೋರ್ಟುಗಳ ಸಮನ್ಸ್ ಹಿಡಿದ ಅಮೀನರುಗಳೆಲ್ಲ ಒಂದೇ ದಿನ ಬೆಳಗ್ಗೆ ಒಬ್ಬೊಬ್ಬರಾಗಿ ಹಾರ್ನಿಮನ್ನರ ಮನೆಯ ಬಾಗಿಲಲ್ಲಿ ಕಾಣಿಸಿಕೊಂಡರು. ಹಾರ್ನಿಮನ್ ಎದೆಗುಂದಲಿಲ್ಲ. ಒಬ್ಬೊಬ್ಬರನ್ನೂ ಉಳಿದವರಿಗೆ ಕಾಣಿಸದಂತೆ ಮನೆಯ ಒಂದೊಂದು ಕಡೆ ಕೂರಿಸಿದರು. ತಾವು ಮಾತ್ರ ಯಥಾ ಸಾವಕಾಶವಾಗಿ ಸ್ನಾನ ತೀರಿಸಿಕೊಂಡು ಹೊರಬಂದು ಕಚೇರಿಯಲ್ಲಿ ಕುಳಿತರು. ತಮ್ಮ ಕೆಲಸಗಾರರನ್ನು ಸಂಬೋಧಿಸಿ ಹೇಳುವ ಹಾಗೆ, ಹೊರಗೆ ಸಮನ್ಸ್ ಹಿಡಿದು ಕುಳಿತಿದ್ದವರಿಗೆ ಕೇಳಿಸುವಂತೆ, ನ್ಯಾಯ ಶಾಸನದ ವಿಚಾರವಾಗಿ ಒಂದು ದೊಡ್ಡ ಉಪನ್ಯಾಸ ಕೊಟ್ಟರು. ಇಂಗ್ಲೆಂಡಿನ ಕೋರ್ಟಿನಲ್ಲಿ

'ಹೇಬಿಯಸ್ ಕಾರ್ಪಸ್' ವಿಚಾರವಾಗಿ ಆದ ತೀರ್ಮಾನಗಳೇನು ? ಬ್ರಿಟಿಷ್ ಪ್ರಜೆಗಳಿಗೆ ಸ್ವಾತಂತ್ರ್ಯ ದಾನ ಮಾಡಿದ ಮ್ಯಾಗ್ನಕಾರ್ಟ ಎಂಬ ಪ್ರಣಾಳಿಕೆಯ ವಿಚಾರವಾಗಿ ಜಾನ್ ದೊರೆಗೂ ಶ್ರೀಮಂತರಿಗೂ ನಡೆದ ವಾಗ್ವಾದದ ಸಾರ ವೇನು ? ಎಂಬುದಾಗಿ ಏನೇನೋ ಸೇರಿಸಿ ಒಂದು ದೊಡ್ಡ ಉಪನ್ಯಾಸವಿತ್ತರು. ಹಾರ್ನಿಮನ್ನರ ವಿದ್ವತ್ಪೂರ್ಣವಾದ ಈ ಭಾಷಣವನ್ನು ಕೇಳಿ ಹೊರಗೆ ಕುಳಿತಿದ್ದವರು ದಂಗು ಬಡೆದರು. ಕೊನೆಗೆ ಹಾರ್ನಿಮನ್ನರು ಗಂಭೀರವಾಗಿ, 'ಇಲ್ಲಿ ಯಾರೋ ಕುಡಿದು ಬಂದಿರುವ ಹಾಗೆ ಕಾಣುವುದಲ್ಲ!' ಎಂದರು. ಕೋರ್ಟಿನ ಸಮನ್ಸ್ ಜಾರಿ ಮಾಡುವವನೊಬ್ಬ ಕುಡಿದು ಬಂದು ಸಮನ್ಸ್ ಜಾರಿ ಮಾಡಿದರೆ ಅದು ಕೋರ್ಟಿನ ಹಿತಕ್ಕೆ ಧಕ್ಕೆ ತಂದು, 'ಕಂಟೆಂಪ್ಟ್ ಆಫ್ ಕೋರ್ಟ್' ಆಗಿ ಪರಿಣಮಿಸುತ್ತದೆಯೆಂಬುದಾಗಿ ವಿವರಿಸಿದರು. ಹೊರಗಡೆ ಕುಳಿತಿದ್ದವರ ಪೈಕಿ ಒಬ್ಬ ಕುಡಿದು ಬಂದಿದ್ದ. ಈ ಮಾತು ಕೇಳಿ ಅವನು ಅಲ್ಲಿಂದ ಕಾಲು ತೆಗೆದ. ಉಳಿದವರೂ ಒಬ್ಬೊಬ್ಬರಾಗಿ ಪರಾರಿಯಾದರು.

ಹಾರ್ನಿಮನ್ ಅದ್ಭುತ ಸಾಹಸಿ. ಅವರು ಕೊನೆಯ ತನಕವೂ ಬ್ರಹ್ಮಚರ್ಯ ವನ್ನೇ ಸಾಧಿಸಿದರು. ಬ್ರಿಟಿಷರಾದರೂ ಅವರು ಬರ್ನಾರ್ಡ್ ಷಾ ನಂತೆ ಪೂರ್ಣ ಸಸ್ಯಾಹಾರಿ. ಈ ಅಸ್ಖಲಿತ ಬ್ರಹ್ಮಚರ್ಯವೇ, ಈ ಸಸ್ಯಾಹಾರ ವ್ರತವೇ ಅವರ ಲೇಖನಿಯ ತೀಕ್ಷ್ಣತೆಗೆ ಕಾರಣವಿರಬೇಕು. ಭಾರತ ಸ್ವಾತಂತ್ರ್ಯಕ್ಕಾಗಿ ಬೇರಾವ ಬ್ರಿಟಿಷ್ ಪ್ರಜೆಯೂ ಅವರಷ್ಟು ಹೋರಾಡಿರಲಾರರು. ಗಾಂಧೀಜೀ ಕೂಡ ಹಾರ್ನಿಮನ್ನರನ್ನು ಹೊಗಳಿ ಬರೆದರು. ಹಾರ್ನಿಮನ್ನರೊಬ್ಬ ಧೀರೋದಾತ್ತ ಇಂಗ್ಲಿಷ್ ಪ್ರಜೆ, ಸ್ವಾತಂತ್ರ್ಯದ ಮಂತ್ರೋಪದೇಶಕ. ಅನ್ಯಾಯ ಎಲ್ಲೇ ಬರಲಿ, ಅದನ್ನು ನಿರ್ಭಯವಾಗಿ ಬಯಲಿಗೆಳೆದು, ತಮ್ಮ ಜನಾಂಗದ ಶ್ರೇಷ್ಠರತ್ನವಾಗಿ ಬೆಳಗಿದ್ದಾರೆ. ಭಾರತೀಯರು ಅವರ ಸೇವೆಯನ್ನು ಎಂದೆಂದೂ ಮರೆಯಬಾರದು. ಹೀಗೆಂದು ಗಾಂಧೀಜೀ ಬರೆದರು.

ಸ್ವಾತಂತ್ರ್ಯ ಬಂದ ಮೇಲೂ ಕೂಡ ಹಾರ್ನಿಮನ್ನರ ಹೋರಾಟ ನಿಲ್ಲಲಿಲ್ಲ. ಕಾಂಗ್ರೆಸಿನಲ್ಲಿದ್ದ ಕೊಳಕನ್ನು ಎತ್ತಿ ಹಾಕಲು ಅವರು ಹಿಂತೆಗೆಯಲಿಲ್ಲ. ಅವರೊಬ್ಬ ಅವಿಶ್ರಾಂತ ಜಲಗಾರ.

ಇಂಥ ಅದ್ಭುತ ಚೇತನ ಐವತ್ತು ವರ್ಷಕಾಲ ಭಾರತ ಪತ್ರಿಕೋದ್ಯಮದ ಸ್ವಾತಂತ್ರ್ಯಕ್ಕಾಗಿ ದುಡಿದು ತಮ್ಮ ಹಣ್ಣು ವಯಸ್ಸಿನಲ್ಲಿ

ಮಡಿದರು.* ಆದರೆ ಅವರ ಸಾವು ಮಾತ್ರ ಭಾರತೀಯರಿಗೆ, ಭಾರತೀಯ ಪತ್ರಿಕೋದ್ಯೋಗಿಗಳಿಗೆ ಗೌರವ ತರತಕ್ಕದ್ದಾಗಿರಲಿಲ್ಲ.

ಅವರು ಸಾಯಲು ಸ್ವಲ್ಪ ಕಾಲದ ಹಿಂದೆ. ಅವರಿಗೆ ವಯಸ್ಸಾಯಿತೆಂಬ ಕಾರಣದಿಂದ, 'ಬೊಂಬಾಯಿ ಸೆಂಟಿನಲ್' ಪತ್ರಿಕಾ ಸಂಪಾದಕತ್ವದಿಂದ ಅವರ ಬಿಡುಗಡೆಯಾಯಿತು. ಅಂದಿನಿಂದ ಅವರು ಬಡತನ ಉಪವಾಸಗಳ ಬಂದಿಯಾದರು. ಅವರ ಸೇವಾ ಪ್ರಶಂಸೆ ಮಾಡಿದ ಯಾರೂ ಅವರಿಗೆ ಸಹಾಯ ಮಾಡಲಿಲ್ಲ. ಎಲ್ಲ ಮಮತೆಗೂ ಹೊರಗಾದ ಈ ಪತ್ರಿಕೋದ್ಯೋಗಿ ಏಕಾಂತ ಜೀವಿಯಾಗಿ ತಮ್ಮ ಬಾಳಿನ ನೋವನ್ನೆ ನುಂಗುತ್ತ ಕಾಲ ನೂಕಬೇಕಾಯಿತು.

ಅವರನ್ನು ಈ ಲೋಕದಿಂದ ಎತ್ತಿಕೊಂಡು ಹೋದ ಖಾಯಿಲೆ ಬಂದಾಗಲೂ ಅವರನ್ನು ಯಾರೂ ವಿಚಾರಿಸಿಕೊಳ್ಳಲಿಲ್ಲ. ಯಾವ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಅವರು ಹಗಲಿರುಳು ಹೋರಾಡಿದರೋ ಆ ಪತ್ರಿಕಾ ಸಹಚರಿಗಳು ಕಣ್ಣೆತ್ತಿ ಕೂಡ ಆ ಕಡೆ ನೋಡಲಿಲ್ಲ.

ಅವರಿಗೆ ಆಸ್ಪತ್ರೆಯಲ್ಲಿ ವೈದ್ಯ ಚಿಕಿತ್ಸೆ ಮಾಡಲು ಅಗತ್ಯವಾದ ಔಷಧ ತರಿಸಲು ಬೇಕಾಗಿದ್ದ ಇಪ್ಪತ್ತೈದು ರೂಪಾಯಿ ಕೂಡ ಸಿಕ್ಕಲಿಲ್ಲ. ಅವರ ಸೆಕ್ರೆಟರಿ ಇಪ್ಪತ್ತನಾಲ್ಕು ಗಂಟೆಯ ಕಾಲ ಇದಕ್ಕಾಗಿ ಪರದಾಡಬೇಕಾಗಿ ಬಂತು!

ಅವರಿಂದ ಸಹಾಯ ಪಡೆದವರು ಸಾವಿರ ಜನ. ಅವರ ಹೋರಾಟವನ್ನು ಪ್ರಶಂಸಿಸಿದವರು ಅಸಂಖ್ಯಾತ. ಆದರೆ ಅವರ ಅಂತ್ಯಕಾಲದಲ್ಲಿ—ಅವರು ಸಾವಿನೊಡನೆ ಹೋರಾಟ ನಡೆಸುತ್ತಿದ್ದಾಗ—ಇಪ್ಪತ್ತೈದು ರೂಪಾಯಿ ಅವರಿಗೆ ತಕ್ಷಣ ದೊರಕಲಿಲ್ಲ.

ಇಪ್ಪತ್ತನಾಲ್ಕು ಗಂಟೆ ಮುಂಚೆ ಅದು ದೊರಕಿದ್ದರೆ ಅವರು ಬದುಕುತ್ತಿದ್ದರೇನೋ. ಯಾರು ಬಲ್ಲರು?

ಆದರೆ ಅವರಿಗೆ ಸಾವೇ ಪ್ರಿಯವಾಗಿತ್ತೇನೋ. ಶಕ್ತಿಯಿರುವ ತನಕ ದುಡಿಸಿಕೊಂಡು ಮುಪ್ಪಿನಲ್ಲಿ ನಾಯಿಯನ್ನೊ ದನವನ್ನೊ ಹೊರಗಟ್ಟುವಂತೆ ಹಾರ್ನಿಮನ್ನರನ್ನು ಭಾರತದ ಪತ್ರಿಕೋದ್ಯಮಿಗಳು ನಡಸಿಕೊಂಡರು. ಆದರೆ ಹಾರ್ನಿಮನ್ನರ ಕೀರ್ತಿಗೆ ಇದರಿಂದ ನಷ್ಟವಾಗಲಿಲ್ಲ. ಅವರ ಅದಮ್ಯ ಚೇತನ ಇದಕ್ಕೆ

* ೧೯೪೮ ರಲ್ಲಿ.

ಎದೆಗುಂದಿರಲಾರದು. ಆದರೆ ಇದು ಭಾರತೀಯರಿಗೆ ಅಪಮಾನ. ಅಷ್ಟೆ.

ಪ್ರತಿಭಾವಂತ ಕಲಾವಿದರ ಬಾಳೆಲ್ಲ ಇದೇ ರೀತಿ ಅಂತ್ಯವಾಗುತ್ತದೆ. ಕೊನೆಯಲ್ಲಿ ಉಪವಾಸ ನಿರಾಶೆಗಳ ಸಂಗಾತಿತನದಲ್ಲಿ ಅವರು ಬಾಳನ್ನರ್ಪಿಸಬೇಕಾಗುತ್ತದೆ.

ಕನ್ನಡದ ಕೈಲಾಸಂ ಇದಕ್ಕೆ ಉದಾಹರಣೆ. ಪ್ರಹಸನ ಪಿತಾಮಹನೆಂದು, ಕನ್ನಡಕ್ಕೊಬ್ಬನೇ ಕೈಲಾಸಂ ಎಂದು ಹೊಗಳಿ ಹೊಗಳಿ ಉದ್ದಾಮ ಭಾಷಣ ಮಾಡಿದ ಸಾಹಿತಿಗಳು ಅವರು ಉಪವಾಸದಿಂದ ಸಾಯುತ್ತಿದ್ದಾಗ ಕಿರಿಬೆರಳನ್ನೂ ಎತ್ತಲಿಲ್ಲ. ಸಾಹಿತ್ಯ, ಸಂಸ್ಕೃತಿ ಎಂದು ಮಾತಾಡುವ ಸಂಸ್ಥೆಗಳಿಗೆ ಜೀವಂತ ಸಾಹಿತಿಯೊಬ್ಬನ ಜೀವನ್ಮರಣ ಹೋರಾಟದಲ್ಲಿ ಸಹಾನುಭೂತಿ ಇರಲಿಲ್ಲ.

ಈ ನಡತೆ ಕನ್ನಡ ಜನಕ್ಕೆ ಮಾತ್ರ ಮುಡಿಪಾದದ್ದಲ್ಲ. ಬೊಂಬಾಯಿಯ ಜನಕ್ಕೆ ಮಾತ್ರವೂ ಮುಡಿಪಲ್ಲ. ಕನ್ನಡದ ಕೈಲಾಸಂಗೆ, ಬೊಂಬಾಯಿಯ ಹಾರ್ನಿಮನ್ನರಿಗೆ ಮಾಡಿದಂತೆ ಸಾವಿರ ಸಾವಿರ ಪ್ರತಿಭಾವಂತರಿಗೆ, ಸ್ವಾತಂತ್ರ್ಯದ ಸಮರದೂತರಿಗೆ ಪ್ರಪಂಚದ ಆದ್ಯಂತ ಜನ ಈ ರೀತಿಯ ಅನ್ಯಾಯವೆಸಗಿದ್ದಾರೆ. ಅವರು ಸತ್ತಮೇಲೆ ಅವರ ಗೋರಿಯ ಸುತ್ತ ಕಣ್ಣೀರು ಸುರಿಸಿದ್ದಾರೆ. ಉದ್ದಾಮ ಭಾಷಣ ಮಾಡಿದ್ದಾರೆ. ಅಮೃತಶಿಲೆಯ ವಿಗ್ರಹ ಕಡೆದಿದ್ದಾರೆ.

ಈ ವಿಗ್ರಹದ ವೆಚ್ಚದ ಒಂದು ಭಾಗವನ್ನು, ಈ ಸಂತಾಪ ಸಭೆಗಳ ಪ್ರಕಟನೆಯ ಕರಪತ್ರದ ಅಚ್ಚಿನ ವೆಚ್ಚವನ್ನು, ಆ ಮಹಾವ್ಯಕ್ತಿ ಬದುಕಿದ್ದಾಗ ಆತನಿಗೆ ಕೊಟ್ಟಿದ್ದರೆ ಆತ ಬದುಕಿಕೊಳ್ಳುತ್ತಿದ್ದ. ಪ್ರಜಾ ಸ್ವಾತಂತ್ರ್ಯಕ್ಕಾಗಿ ಇನ್ನೂ ಹೋರಾಡುತ್ತಿದ್ದ.

ಹಾರ್ನಿಮನ್ನರ ಗೋರಿಯ ಸುತ್ತ ಗೇರಾಯಿಸಿದ್ದ ಅವನ ಸಹಚರರುಗಳೂ ನಾಯಕ ಮಣಿಗಳೂ ಇದೇ ಅನ್ಯಾಯ ಎಸಗಿದರು. ಹಾರ್ನಿಮನ್ನರ ದೇಹವೂ, ಅದರೊಂದಿಗೆ ಪತ್ರಿಕಾ ಸ್ವಾತಂತ್ರ್ಯವೂ ಮಣ್ಣಿನ ಅಡಿಯಲ್ಲೇನೋ ಹೂತು ಹೋಯಿತು. ಹಾರ್ನಿಮನ್ ಮತ್ತೆ ಬರಲಾರರು. ಪತ್ರಿಕಾ ಸ್ವಾತಂತ್ರ್ಯವನ್ನು ಮತ್ತೆ ಮೇಲೆತ್ತಲು ಇನ್ನೂ ಎಷ್ಟೋ ವರ್ಷ ಬೇಕು.

ಆದರೆ ಈ ಸಹಚರರು ಹಾರ್ನಿಮನ್ನರ ವಿಚಾರದಲ್ಲಿ ತೋರಿಸಿದ ಸಹಾನುಭೂತಿ ರಹಿತ ಮನೋಭಾವದ ಅಪಕೀರ್ತಿಯ ಕಳಂಕ ಮಾತ್ರ ಹಾರ್ನಿಮನ್ನರ

ಕೀರ್ತಿ ಇರುವವರೆಗೂ ಮಾಸದೆ ಉಳಿಯುತ್ತದೆ.

'ಹಾರ್ನಿಮನ್ನರ ಸೇವೆಯನ್ನು ಭಾರತೀಯರು ಮರೆಯಬಾರದು.' ಎಂದು ಗಾಂಧೀಜೀ ಹಿಂದೆ ಹೇಳಿದ್ದರು. ಗಾಂಧಿಜೀಯ ಅನೇಕ ಮಾತುಗಳನ್ನು ಸುಳ್ಳು ಮಾಡಿದ ಜನ ಅವರ ಈ ಮಾತಿಗೂ ಅದೇ ಹಾದಿ ಕಾಣಿಸಿದರು.*

* ೧೯೪೮.

## ಸರದಾರ್ ಪಟೇಲ್



ಜರ್ಮನ್ ಸಾಮ್ರಾಜ್ಯದ ಚರಿತ್ರೆಯಲ್ಲಿ ಬಿಸ್ಮಾರ್ಕನ ಹೆಸರು ಚಿರಸ್ಥಾಯಿ. ಒಡೆದು ನೂರೆಂಟಾಗಿ, ಫ್ರಾನ್ಸಿಗೆ ಸೋತು ಪದಾಕ್ರಾಂತವಾಗಿದ್ದ ಜರ್ಮನಿಗೆ ರಾಷ್ಟ್ರತ್ವದ ಜೀವಕೊಟ್ಟು ಅದನ್ನು ಏಕಾಧಿಪತ್ಯಕ್ಕೊಳಪಡಿಸಿದ ಕೀರ್ತಿ ಆತನದು. ಬಿಸ್ಮಾರ್ಕ್ ಎಲ್ಲ ವಿಧದಲ್ಲೂ ದೊಡ್ಡ ಮನುಷ್ಯನೆಂದು ಹೇಳಲಾಗದಿದ್ದರೂ, ಚರಿತ್ರೆಯಲ್ಲಂತೂ ಆತನಿಗೊಂದು ಸ್ಥಾನವಿದೆ.

ಸ್ವತಂತ್ರ ಭಾರತದ ಚರಿತ್ರೆಯನ್ನು ಪಠಿಸುವಾಗಲೆಲ್ಲ ಸರದಾರ್ ವಲ್ಲಭ ಭಾಯಿ ಪಟೇಲರ ಹೆಸರನ್ನೂ ಅಂತೆಯೇ ಉಚ್ಚರಿಸಬೇಕು. ಅವರು ಭಾರತದ ಬಿಸ್ಮಾರ್ಕ್ ಎಂದು ಖ್ಯಾತಿ ಪಡೆದ, ಭಾರತದ ಪ್ರಥಮ (ಅದ್ವಿತೀಯ) ಉಪಪ್ರಧಾನಿ.

ಬ್ರಿಟಿಷರು ಭಾರತದ ಆಡಳಿತ ತ್ಯಾಗ ಮಾಡಿದಾಗ ಇಲ್ಲಿದ್ದ ಸಣ್ಣಪುಟ್ಟ ಸಂಸ್ಥಾನಗಳಿಗೆಲ್ಲ ಸ್ವಾತಂತ್ರ್ಯ ದಾನ ಮಾಡಿದರು. ಈ ಸಂಸ್ಥಾನಗಳೆಲ್ಲ ಪ್ರತಿಗಾಮಿ ಶಕ್ತಿಕೇಂದ್ರಗಳಾಗಿ, ಸ್ವತಂತ್ರ ಭಾರತದಲ್ಲಿ ಅಂತಃಕಲಹಕ್ಕೆ ಕಾರಣವಾಗುವವೆಂದು ಅವರಲ್ಲಿ ಕೆಲವರಿಗಾದರೂ ಆಸೆಯಾಗಿತ್ತು. ಕಂಪೆನಿ ಆಡಳಿತದ

ಕಾಲದ ದುರವಸ್ಥೆ ಮತ್ತೆ ಭಾರತಕ್ಕೆ ಒದಗಬಹುದೆಂದೂ ಕೆಲವರ ಹೆದರಿಕೆಯಾಗಿತ್ತು.

ಆದರೆ ಸರದಾರ್ ಪಟೇಲರ ಯುಕ್ತಿ ಯುಕ್ತ ಆಚರಣೆಯಿಂದ ಈ ಚಿಲ್ಲರೆ ಸಂಸ್ಥಾನಗಳೆಲ್ಲ ಭಾರತಕ್ಕೆ ಸೇರಿಕೊಂಡುವು. ಆಗ ಸರದಾರ್ ಪಟೇಲರು ಈ ಸಂಸ್ಥಾನಗಳ ಅಧಿಪತಿಗಳ ಮುಂದೆ ಇಟ್ಟ ದಾರಿ ಎರಡೇ: ಭಾರತದಲ್ಲಿ ಐಕ್ಯವಾಗಬೇಕು. ಇಲ್ಲವೇ, ಸರ್ವನಾಶಕ್ಕೆ ಸಿದ್ಧರಾಗಬೇಕು. ಹೆದರಿದ ಸಂಸ್ಥಾನಾಧೀಶರು ಸ್ವಾರ್ಥ ದೃಷ್ಟಿಯಿಂದ ಭಾರತದಲ್ಲಿ ಐಕ್ಯವಾದರು. ಜನಕ್ಕೆ ಬೇಕಾಗಿದ್ದದ್ದೂ ಅದೇ.

ಹೀಗೆ ಮಾಟಗಾರನ ಮಂತ್ರದ ಕಡ್ಡಿಯಿಂದ ಮುರಿದ ಮೂಳೆಗಳು ಒಂದಾಗಿ ಸೇರುವಂತೆ, ಸರದಾರ್ ಪಟೇಲರ ಚಾಣಾಕ್ಷತೆಯಿಂದ ಭಾರತದ ಅಖಂಡತ್ವ ಉಳಿದುಕೊಂಡಿತು. ೧೮೭೧ರ ಅನಂತರದ ಜರ್ಮನಿಯಂತೆ ಭಾರತವೂ ಒಂದಾಯಿತು.

ಇದೊಂದೇ ವಿಚಾರದಲ್ಲಲ್ಲ. ಎಲ್ಲ ವಿಚಾರಗಳಲ್ಲೂ ಪಟೇಲರಿಗೂ ಬಿಸ್ಮಾರ್ಕನಿಗೂ ಹೋಲಿಕೆಯುಂಟು. ಬಿಸ್ಮಾರ್ಕನಂತೆಯೇ ಹಠ: ತಮ್ಮ ಹಾದಿ ಅನುಸರಿಸದವರನ್ನು ಕಡೆಗಣಿಸುವ ಛಲ. ಮುಖದಲ್ಲಿ ನಗೆಯ ಮಿಂಚು ಸುಳಿಯುವುದೂ ಅಪೂರ್ವ. ಮೀನಮೇಷ ಅವರ ಜೀವನದಲ್ಲೇ ಇಲ್ಲ. ಸರಿಯೋ, ತಪ್ಪೋ—ಎಂದು ಯೋಚಿಸುವುದು ಉಳಿದವರ ಪಾಲು. ತಾವು ಮಾಡಬೇಕೆನಿಸಿದ್ದನ್ನು ಮಾಡಲೇಬೇಕು. ಇದು ಪಟೇಲರ ಜೀವನ ಧರ್ಮ.

ಸರದಾರರ ಮೋರೆಯ ಮೇಲುಭಾಗ ಲೆನಿನ್ನರನ್ನೂ ಕೆಳಭಾಗ ತಿಲಕರನ್ನೂ ನೆನಪು ಮಾಡಿಕೊಡುತ್ತಿದ್ದವಂತೆ. ಹೀಗೆಂದು ಮಹದೇವ ದೇಸಾಯಿ ಒಮ್ಮೆ ಹೇಳಿದ್ದರು. ಆದರೆ ಲೆನಿನ್ನರ ಜೀವನದೃಷ್ಟಿಯಾಗಲಿ, ತಿಲಕರ ಜೀವನದ ದೃಷ್ಟಿಯಾಗಲಿ ಪಟೇಲರಿಗೆ ಆಗಿಬಂದದ್ದಲ್ಲ. ಗಾಂಧೀವಾದಿ ನಾನು, ಎಂದು ಅವರು ಹೇಳಿಕೊಂಡಿದ್ದರೂ ಅವರ ಭಾಷಣಗಳು ಬೆಂಕಿಯ ಮುದ್ದೆ. ಪಾಕಿಸ್ತಾನದ ಅಗ್ನಿಭಕ್ಷಕರಿಗೆ ಸರಿಯಾದ ಸವಾಲು ಕೊಡಲು ಸರದಾರರಿಗೇ ಸಾಧ್ಯ. ಅಂತೆಯೇ, ಮೊದಲಿಂದಲೂ ಲೀಗ್ ಭಕ್ತರಿಗೆ, ಲೀಗ್ ಪತ್ರಿಕೆಗಳಿಗೆ, ಕಾಂಗ್ರೆಸ್ ಗುಂಪಿನಲ್ಲಿ ಎಲ್ಲರಿಗಿಂತ ಪಟೇಲರನ್ನು ಕಂಡರೆ ಮಹಾ ದ್ವೇಷ. ಅವರನ್ನು ಬೈದು ಬರೆಯದ ಲೀಗ್ ಪತ್ರಿಕೆಗಳೇ ಇಲ್ಲ.

ಪಟೇಲರ ಶಠಪ್ರವೃತ್ತಿ ಕಾಂಗ್ರೆಸಿನಲ್ಲೂ ಸರಕಾರದಲ್ಲೂ ಅವರಿಗೆ ಅತ್ಯಂತ ಪ್ರಭಾವಯುತ ಸ್ಥಾನ ಗಿಟ್ಟಿಸಿಕೊಟ್ಟಿತು. ಸ್ವಾತಂತ್ರ್ಯ ಪೂರ್ವದಲ್ಲಿ ಕಾಂಗ್ರೆಸ್ಸು ಗಾಂಧೀಜೀ ಇಟ್ಟ ಗೆರೆಯನ್ನು ದಾಟುತ್ತಿರಲಿಲ್ಲ, ನಿಜ. ಆದರೆ ಗಾಂಧೀಜೀಗೆ ಪಟೇಲರ ಮಾತಿನಲ್ಲಿ ತುಂಬಾ ನಂಬಿಕೆ. ಆದ್ದರಿಂದ ಪಟೇಲರ ಪ್ರಭಾವ ಕಾಂಗ್ರೆಸಿನ ನಡವಳಿಕೆಯಲ್ಲಿ ತುಂಬಾ ಕಾಣಬರುತ್ತಿತ್ತು. ನರಿಮನ್, ಖಾರೆ, ಸುಭಾಷ್ ಚಂದ್ರಬೋಸ್—ಇವರೆಲ್ಲ ಕಾಂಗ್ರೆಸಿನಿಂದ ಉಚ್ಚಾಟನೆ ಹೊಂದುವುದಕ್ಕೆ ಪಟೇಲರೂ ಕಾರಣ. ಪಟೇಲರು ಹಿಡಿದ ಹಠ ಸಾಧಿಸಿಯೇ ತೀರಿಸಿದರು. ಉಡದ ಹಿಡಿತ ಅವರದು.

ಸ್ವತಂತ್ರ ಭಾರತ ಸರಕಾರದಲ್ಲೂ ಪಟೇಲರು ಅದೇ ಸ್ಥಾನ ಉಳಿಸಿಕೊಂಡರು. ಪ್ರಧಾನಿ ಜವಾಹರ್ ಕೂಡ ಪಟೇಲರ ಮಾತನ್ನು ತೆಗೆದುಹಾಕಲು ಅಂಜುತ್ತಿದ್ದ ಕಾಲವಿತ್ತು. ಅದು ಸುಳ್ಳೆಂದು ಪಟೇಲರು ಎಷ್ಟೋ ಬಾರಿ ಹೇಳಿದ್ದರು. ನೆಹರೂ ನನ್ನ ನಾಯಕರು; ಅವರು ಹೇಳಿದ ಹಾಗೆ ನಾನು ಕೇಳುತ್ತೇನೆ—ಎಂದು ಅವರು ಹೇಳುತ್ತಿದ್ದರು. ಕಾರ್ಯತತ್ಪರರಾಗದೆ, ಸರಿ-ತಪ್ಪು ಎಣಿಸುತ್ತಾ ನೆಹರೂ ಕೂತಾಗ ಪಟೇಲರು ತಮ್ಮ ಉಕ್ಕಿನ ನಿರ್ಧಾರವನ್ನು ಮುಂದಿಟ್ಟು ನೆಹರೂ ಸಮ್ಮತಿ ಪಡೆದೇ ಪಡೆಯುತ್ತಿದ್ದರು.

ಭಾರತ ನಾಯಕರ ಪೈಕಿ ಪಟೇಲರಷ್ಟು ಬೇರೆ ಯಾರೂ ಟೀಕೆಗೆ ಒಳಗಾಗಲಿಲ್ಲ. ಇದಕ್ಕೆಲ್ಲ ಅವರ ಹಠದ ಮನೋವೃತ್ತಿಯೇ ಕಾರಣ. ಈ ಛಲ ಅವರ ಕರ್ತವ್ಯನಿಷ್ಠೆಗೆ ಅಗತ್ಯವಾಗಿತ್ತೇನೊ. ಆದರೆ ಈ ಛಲದ ಹಿಂದೆ ಪೂರ್ವ ಯೋಜಿತ ಕಲ್ಪನೆ ಇಲ್ಲದಿದ್ದಾಗ ಪರಿಣಾಮ ನೆಟ್ಟಗಾಗದಂಥ ಅಪಾಯವಿತ್ತು. ಪಟೇಲರಿಗೆ ಸರಿಯಾದ ಸಮಾಜದೃಷ್ಟಿ ಇಲ್ಲವೆಂದೂ, ಕಾರ್ಯ-ಕಾರಣ-ಪರಿಣಾಮ ಭಾವಗಳಿಲ್ಲದೆ ಕಾರ್ಯ ಮಾಡುವವರೆಂದೂ ಹಲವು ಬಾರಿ ಅವರು ಟೀಕೆಗೆ ಗುರಿಯಾಗಿದಾರೆ. ನಾಡಿನ ಪ್ರಗತಿಪರ ಚಟುವಟಿಕೆಗಳಿಗೆ ಪ್ರತಿಬಂಧಕಗಳನ್ನು ಒಡ್ಡಲು ಪಟೇಲರು ಬಹುಮಟ್ಟಿಗೆ ಕಾರಣರೆಂಬ ಒಂದು ಟೀಕೆಯೂ ಇದೆ. ದೇಶದ ಸಂದಿಗ್ಧ ಪರಿಸ್ಥಿತಿಯ ನೆವದಲ್ಲಿ, ಪ್ರಗತಿಕಾರಕ ಚಟುವಟಿಕೆಗಳನ್ನು ಅವರು ತಡೆಗಟ್ಟಿದರೆಂಬುದು ಒಂದು ಟೀಕೆ.

ಮಾಲಿಕ-ಕಾರ್ಮಿಕ ಸಂಗಡ ವಿಂಗಡದಲ್ಲಿ ಅವರ ಸಹಾನುಭೂತಿಯೆಲ್ಲ ಇದ್ದದ್ದು ಮಾಲಿಕವರ್ಗದ ಕಡೆಗೆ—ಎಂದು ಆಕ್ಷೇಪಿಸುವವರೂ ಇದಾರೆ.

ಪಟೇಲರು ಬಂಡವಾಳಿಗರ ಬಲಗೈ—ಎಂದವರೂ ಉಂಟು.

ಆರ್.ಎಸ್.ಎಸ್. ಚಳವಳಿಗೂ, ಇದು ಗಾಂಧೀಕೊಲೆಯಲ್ಲಿ ಪರ್ಯವಸಾನ ವಾದದ್ದಕ್ಕೂ ಪರೋಕ್ಷವಾಗಿ ಪಟೇಲರು ಕಾರಣರಾದರೆಂಬುದು ಇನ್ನೊಂದು ಟೀಕೆ. ಇದು ಸ್ವಲ್ಪ ಉಗ್ರವಾದ ಟೀಕೆಯೆನಿಸೀತು. ಪಟೇಲರು ತಮ್ಮ ನಿರಪರಾಧಿತ್ವವನ್ನು ತೀವ್ರವಾಗಿ ಸಮರ್ಥಿಸಿಕೊಂಡರು. ಆದರೆ ಆರ್. ಎಸ್. ಎಸ್. ಸಂಸ್ಥೆಗೆ ಅವರು ಪರೋಕ್ಷವಾಗಿ ಉತ್ತೇಜನ ನೀಡಿದ್ದಂತೂ ನಿಜ. ಅವರು ಹಾಗೆ ಮಾಡಿದ್ದು, ಹೀಗಾದೀತೆಂಬ ಪೂರ್ವ ಕಲ್ಪನೆಯಿಂದಲ್ಲ. ಮಾಡಿದ್ದೇ ಒಂದಾದರೆ ಆದದ್ದೇ ಒಂದು. ಪಟೇಲರ ಕುಂದು ಇದ್ದದ್ದು ಇಲ್ಲಿ. ಅವರ ಮೋರೆಯು ಮೇಲು ಭಾಗ ಲೆನಿನ್ನರನ್ನು ಹೋಲಬಹುದು. ಆದರೆ ಅವರಿಬ್ಬರ ದೃಷ್ಟಿ ಅಜಗಜಾಂತರ.

ಸರದಾರ್ ಪಟೇಲರು ಭಾರತದ ಬಿಸ್ಮಾರ್ಕ್ ಎಂಬ ಮಾತು ಮಾತ್ರ ಬಹು ಚೆನ್ನಾಗಿ ಒಪ್ಪುತ್ತದೆ. ಬಿಸ್ಮಾರ್ಕನಂತೆಯೇ ಅವರು ಒಡೆದ ಭಾರತವನ್ನು ಕಟ್ಟಿದರು. ಪದಾಕ್ರಾಂತವಾಗಿದ್ದ ಜರ್ಮನಿ ಬಿಸ್ಮಾರ್ಕನ ನಾಯಕತ್ವದಲ್ಲಿ ಒಂದಾಗಿ ಫ್ರಾನ್ಸನ್ನು ಸೋಲಿಸಿತು. ನಿಶ್ಶಕ್ತವೆಂದು ಪರಿಗಣಿತವಾಗಿದ್ದ ಭಾರತ, ಕಾಶ್ಮೀರ ಹೈದರಾಬಾದ್ ಆಚರಣೆಗಳಲ್ಲಿ ತನ್ನ ಶಕ್ತಿಪ್ರದರ್ಶನವನ್ನು ಜಗತ್ತಿಗೆ ಮಾಡಿ ಕೊಟ್ಟಿತು. ಇದಕ್ಕೆ ಸರದಾರರ ನಾಯಕತ್ವವೇ ಕಾರಣ—ಬಹುಮಟ್ಟಿಗೆ.*

---

* ೧೯೪೮

# ವಿಜಯಲಕ್ಷ್ಮಿ ಪಂಡಿತ್

ಉನ್ನತ ವರ್ಗದ ಶ್ರೀಮಂತ ಸಂಸಾರವೊಂದು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋದರೆ ಆಗುವ ಪರಿಣಾಮ, ಸನಾತನ ವಿನೂತನಗಳ ಕಲಸುಮೇಲೋಗರ: ಪಾಶ್ಚಾತ್ಯರ ಆಡಂಬರ, ಪೌರ್ವಾತ್ಯರ ಸಂಪ್ರದಾಯ ಶಾರಣ್ಯ.

ನೆಹರೂ ಕುಟುಂಬದಲ್ಲಿ ಆದದ್ದೂ ಹಾಗೆಯೇ.

ಪಂಡಿತ ಜವಹರಲಾಲ್ ನೆಹರುವಿನ ತಂಗಿ ವಿಜಯಲಕ್ಷ್ಮಿ ಹುಟ್ಟಿದಾಗ ವಿಜಯಲಕ್ಷ್ಮಿಯಾಗಿ ಹುಟ್ಟಲಿಲ್ಲ. ಆಕೆಯ ಹುಟ್ಟು ಹೆಸರು ಸ್ವರೂಪಾ. ಮನೆಯಲ್ಲಿ ಕರೆದದ್ದು ನ್ಯಾನ್. ಕೈಹಿಡಿದ ಗಂಡ ಕೊಟ್ಟ ಹೆಸರು ವಿಜಯಲಕ್ಷ್ಮಿ.

ಸ್ವರೂಪಳ ತಂದೆ ಮೋತಿಲಾಲ್ ನೆಹರೂ ಪಾಶ್ಚಾತ್ಯ ಸಂಸ್ಕೃತಿಯ ಅಚ್ಛಿನ್ನ ಭಕ್ತ. ತಾಯಿ ಸನಾತನ ಧರ್ಮದ ಶರಣೆ. ಇವೆರಡರ ಮಥನದಿಂದ ಹುಟ್ಟಿದ ವಾತಾವರಣದಲ್ಲಿ ಬೆಳೆದ ವ್ಯಕ್ತಿ ವಿಜಯಲಕ್ಷ್ಮಿ.

ಅಣ್ಣ ನೆಹರುವಿನಂತೆ ತಂಗಿ ಸ್ವರೂಪಳ ಶಿಕ್ಷಣವೂ ಇಂಗ್ಲಿಷ್ ನರ್ಸ್–ಇಂಗ್ಲಿಷ್ ಶಿಕ್ಷಕಿಯರ ಕೈಕೆಳಗೆ. ನಾಲ್ಕನೆಯ ವರ್ಷವೇ ಇಂಗ್ಲಿಷ್ ಕಲಿಕೆ. ಆ ಮೇಲೆ ತಾಯಿನುಡಿ. ಆಕೆಯ ತಂದೆಯ ಮನೆಯೆಂಬುದು ಆಗ ಆಡಳಿತದ

ಹಿರಿಯ ಹುದ್ದೆದಾರರ ಆತಿಥ್ಯಗೃಹ. ಹೀಗೆ ಪಾಶ್ಚಾತ್ಯಸಂಸ್ಕೃತಿಯ ಛಂದಸ್ಸಿಗೆ ಬದ್ಧಳಾಗಿ ಬೆಳೆದಳು ವಿಜಯಲಕ್ಷ್ಮಿ. ಆದರೂ ಸನಾತನ ಸಂಪ್ರದಾಯ ಬೆನ್ನಿಗಂಟದೆ ಬಿಡಲಿಲ್ಲ. ಇದನ್ನು ಕೊಡವಲು ಪ್ರಯಾಸವೇ ಆಯಿತು—ವಿಜಯಲಕ್ಷ್ಮಿಗೆ.

ಸ್ವರೂಪ ಇನ್ನೂ ಹನ್ನೆರಡು ವರ್ಷದವಳಿದ್ದಾಗ ಆಕೆಯ ತಂದೆ ಆಗಿನ ಸಂಪ್ರದಾಯಕ್ಕೆ ಅನುಗುಣವಾಗಿ ಗಂಡನೊಬ್ಬನನ್ನು ಗೊತ್ತು ಮಾಡಿದರು. ಇದು ಮದುವೆಯಲ್ಲ, ನಿಶ್ಚಿತಾರ್ಥ. ಮದುವೆಯ ಮೊದಲ ಮೆಟ್ಟಲು. ಹುಡುಗಿ-ಹುಡುಗ ಬೆಳೆದು ದೊಡ್ಡವರಾದ ಮೇಲೆ ಇವರಿಬ್ಬರ ನಡುವೆ ವಿವಾಹ ಸಂಬಂಧ ಬೆಳೆಸಬೇಕೆಂದು ಎರಡೂ ಕಡೆಯ ತಾಯಿತಂದೆಯರ ಪರಸ್ಪರ ಒಡಂಬಡಿಕೆ—ವಾಗ್ದಾನ. ಈ ಒಡಂಬಡಿಕೆ ಆದಮೇಲೆ ಅದನ್ನು ಮುರಿಯುವುದು ಸಾಧ್ಯವಿಲ್ಲ. ಅಷ್ಟು ಪವಿತ್ರ ಅದು.

ವಿಜಯಕ್ಷ್ಮಿ ಬೆಳೆದು ವಯಸ್ಸಿಗೆ ಬಂದಾಗ ಆಕೆಯ ಸ್ವತಂತ್ರ ಪ್ರವೃತ್ತಿಗೆ ಈ ಒಡಂಬಡಿಕೆ ಒಪ್ಪಲಿಲ್ಲ. ಈ ವೇಳೆಗಾಗಲೇ ಪಾಶ್ಚಾತ್ಯ ಸಂಚಾರ ಕೈಕೊಂಡು, ವಿಜಯಲಕ್ಷ್ಮಿಯ ವ್ಯಕ್ತಿತ್ವ ವಿಶಾಲವಾಗಿತ್ತು. ಕೊನೆಗೆ ಒಮ್ಮೆ ವಿರೋಧ ಪರಂಪರೆಯನ್ನೆ ಲೆಕ್ಕಿಸದೆ ಅವರು ಈ ಒಡಂಬಡಿಕೆಯನ್ನು ಕಿತ್ತೆಸದರು. ಮೊದಲು ವಿರೋಧಿಸಿದ ಹಿರಿಯರು ಅಂತ್ಯದಲ್ಲಿ ಸಮ್ಮತಿ ಮುದ್ರೆ ಹಾಕದೆ ವಿಧಿ ಇರಲಿಲ್ಲ.

ವಿಜಯಲಕ್ಷ್ಮಿಯ ಸ್ವತಂತ್ರ ವ್ಯಕ್ತಿತ್ವ ಯಾವ ರೀತಿ ರೂಪುಗೊಂಡಿತ್ತೆಂಬುದಕ್ಕೆ ಇದೊಂದು ದೃಷ್ಟಾಂತ.

ಒಳ್ಳೆಯ, ಕುಲೀನ ಸಂಸಾರ. ಹಿರಿಯ ಮನೆತನ. ದೇಶಭಕ್ತ ತಾಯಿತಂದೆ ಅಣ್ಣ. ವಿಜಯಲಕ್ಷ್ಮಿಯೂ ಸ್ವಯಂಪ್ರಭಾವಾನ್ವಿತೆಯೆ. ಅವರ ಅಂತರ ರಾಷ್ಟ್ರೀಯ ಕೀರ್ತಿ, ಹಿರಿಮೆ—ಹಿರಿಯರ ಛತ್ರದ ಅಡಿಯಲ್ಲಿ ಹೆಜ್ಜೆಯ ಹಿಂದೆ ಹೆಜ್ಜೆ ಹಾಕಿದ್ದರಿಂದ ಅಲ್ಲ. ಅವರು ಲೋಕವಿಖ್ಯಾತ ಜವಹರರ ತಂಗಿ—ಜವಾಹರರಿಗೆ ತಕ್ಕ ತಂಗಿ. ಅವರ ಪ್ರಭೆ ಅಣ್ಣನ ಪ್ರತಿಬಿಂಬವಲ್ಲ. ಧೂಮಕೇತುವಿನ ಸಿಡಿಬೆಳಕೂ ಅಲ್ಲ.

ವಿಜಲಯಲಕ್ಷ್ಮಿಯ ರೂಪು, ಕಣ್ಣು ಕೋರೈಸುವಂಥದು. ಒಮ್ಮೆ ಅವರನ್ನು ನೋಡಿದರೆ ಕ್ಷಣಕಾಲ ಅಪ್ರತಿಭರಾಗಿ ನಿಲ್ಲದೆ ವಿಧಿಯಿಲ್ಲ. ಅನಂತರ ಮೆಲ್ಲಮೆಲ್ಲನೆ ಆ ಚೆಲುವು ಕಣ್ಣಮುಂದೆ ಅರಳುವುದು. ಅನಂತರ ಆಕೆಯ ಮಾತಿನ ಮೆಲ್ಪು, ಇಂಪು, ಬೆಡಗು, ಚುರುಕು. ಅನಂತರ ಆಕೆಯ ವಿಚಾರ ಧಾರೆ. ಹೀಗೆ ಮುಂದಂ ಮುಂದಂ ಆಕೆಯ ಸಮ್ಮೋಹನ ಪ್ರಭಾವಲಯದಲ್ಲಿ ಬಂದಿಯಾಗದವರು ಅತಿ

ವಿರಳ. ಬ್ರಿಟಿಷ್ ಸಾಮ್ರಾಜ್ಯ ವೈಭವದ ಅಪ್ರತಿಮ ಭಟ್ಟಂಗಿ ಫೀಲ್ಡ್ ಮಾರ್ಷಲ್ ಸ್ಮಟ್ಸರನ್ನು ಕೂಡ ಪ್ರಪಂಚ ಸಂಸ್ಥೆಯಲ್ಲಿ ಸೇರಿದ್ದ ವಿವಿಧ ರಾಷ್ಟ್ರ ಪ್ರತಿನಿಧಿ ಸಮೂಹದ ಮುಂದೆ ಲಾಗ ಹಾಕಿಸಿದ ಚಾಣಾಕ್ಷೆ ವಿಜಯಲಕ್ಷ್ಮಿ.

ಕಪ್ಪಾದ ಉಂಗುರ ಕೂದಲು. ಹೊಳೆಯುವ ಹಾಗೆ ಬಾಚಿ ಕಟ್ಟಿದ ಮುಡಿ. ಬಾದಾಮಿಯಂತೆ ಅಗಲವಾದ ಕಣ್ಣು. ಉದ್ದನೆಯ ರೆಪ್ಪೆ. ತಿದ್ದಿದ ಹುಬ್ಬು. ನೀಳ ಮೂಗು. ಚಿನ್ನದ ತಗಡಿನಂತೆ ಮೈಬಣ್ಣ. ಇದು ಅಂದು ಗಂಡ ರಣಜಿತ ಪಂಡಿತರನ್ನು ತಾವಾಗಿ ಮೆಚ್ಚಿ ವರಿಸಿದಾಗಿನ ಆಕೆಯ ರೂಪ. ಇಂದೂ ಕೂಡ ಈ ಚೆಲುವು ಜಾರಿಲ್ಲ. ಪ್ರತಿಯಾಗಿ ಅದಕ್ಕೆ ವಯಸ್ಸಿನ ಮಾರ್ದವತೆ ಬಂದಿದೆ. ಕೂದಲು ಬೆಳ್ಳಿಯ ಚೆಲುವು ತಳೆದಿದೆ. ಕಣ್ಣಿನ ಆ ಮಿಂಚು, ಮುಖದ ಆ ಪ್ರಭೆ ಮಾತ್ರ ಮಾಸಿಲ್ಲ.

ಗಂಡ ರಣಜಿತ್ ಮೇಧಾವಿ, ವಿದ್ವಾಂಸ, ಶಾಂತಿ ಪ್ರಿಯ. ಆಡಂಬರ, ಸದ್ದು, ಗದ್ದಲ ಸೇರದು. ಉಮ್ಮರ್ ಖಯ್ಯಾಮನ ಜಾತಿ. ಆದರೆ ತಮ್ಮವರೆಲ್ಲ ನಾಡ ಬಿಡುಗಡೆಯ ಸಾವು ಬದುಕಿನ ಹೋರಾಟದಲ್ಲಿ ಆಸಕ್ತರಾದಾಗ ತಾವು ಶಾಂತ ವಾಗಿ ಕೂತಿರಲು ಮನಸ್ಸು ಒಡಂಬಡಲಿಲ್ಲ. ತಾವೂ ಈ ಕಡಲಲ್ಲಿ ಧುಮುಕಿದರು. ಎಲ್ಲರೊಡನೆ ಜೈಲುವಾಸ ಅನುಭವಿಸಿದರು. ಆ ನೋವನ್ನೆಲ್ಲ ಉಂಡರು. ಮೂವರು ಕುವರಿಯರನ್ನು ಕೊಟ್ಟು ತೆರಳಿದರು.

ವಿಜಯಲಕ್ಷ್ಮಿ ಹುಡುಗಿಯಾಗಿದ್ದಾಗ ಒಮ್ಮೆ ಮನೆಯ ಮುಂದೆ ಹುಲ್ಲಿನ ನೆಲದ ಮೇಲೆ ಓದುತ್ತ ಕುಳಿತಿದ್ದಳು. ಸ್ವಲ್ಪ ದೂರದಲ್ಲಿ ಆಕೆಯ ತಂದೆ. ಇದ್ದ ಕ್ಕಿದ್ದ ಹಾಗೆಯೇ ತಂದೆ ಮಗಳಿಗೆ ಕೂಗಿ ಹೇಳಿದರು : 'ಅಲುಗಬೇಡ ! ಹಾಗೆಯೇ ಇರು.' ಹುಡುಗಿ ವಿಜಯಲಕ್ಷ್ಮಿ ನಿಶ್ಚಲಳಾಗಿ ಕುಳಿತಳು. ಒಂದು ದೊಡ್ಡ ಕೃಷ್ಣ ಸರ್ಪ ಹರಿದು ಹೋಯಿತು. ಅದು ಆಕೆಯ ತಲೆಯ ಮೇಲೆ ಹೆಡೆಯಾಡಿಸು ತ್ತಿತ್ತಂತೆ. ಆಕೆಗೆ ದೊಡ್ಡ ದೆಸೆಯಿದೆಯೆಂದು ತಾಯಿ ಅಂದಿನಿಂದ ನಂಬಿದರಂತೆ.

ವಿಜಯಲಕ್ಷ್ಮಿಯದು ದೊಡ್ಡ ದೆಸೆಯೇನೋ ಹೌದು. ಸ್ವಾತಂತ್ರ್ಯ ಸಮರ ದಲ್ಲಿ ಎಲ್ಲರೊಡನೆ ಸಮಾನವಾದ ಹೋರಾಟ. ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯ. ಅದರ ಮಹಾ ಸಭೆಯ ಅಧ್ಯಕ್ಷತೆ. ಭಾರತದ ರಾಯಭಾರಿ. ರಾಜ್ಯಪಾಲ ಹುದ್ದೆ. ದೊಡ್ಡ ದೆಸೆ ಎನ್ನಲು ಇನ್ನೇನು ಆಧಾರ ಬೇಕು ?*

* ೧೯೪೭.

# ಶರತ್ ಚಂದ್ರ ಬೋಸ್

ಭಾರತಕ್ಕೆ ಸ್ವಾತಂತ್ರ್ಯ ಬರುವ ವರೆಗೂ ಕಾಂಗ್ರೆಸ್ ರಾಜಕೀಯ ಕ್ಷೇತ್ರದಲ್ಲಿ ಮಾನ್ಯತೆ ಪಡೆದು ಕೀರ್ತಿಶಿಖರವನ್ನೇರಲು ಇದ್ದ ಒಂದೇ ಒಂದು ಹಾದಿಯೆಂದರೆ ಗಾಂಧೀ ಪಕ್ಷದ ಬೆಂಬಲ. ಇದಕ್ಕೆ ಇದಿರು ಬಿದ್ದವರು ಎಷ್ಟೇ ಪ್ರಾಮುಖ್ಯತೆ ಪಡೆದಿರಲಿ, ಅವರಿಗೆ ಶತಭಂಗದ ಇಳಿಹಾದಿ ಸಿದ್ಧ. ಈ ಪ್ರವಾಹದ ಇದಿರು ಈಸಿ, ಮೇಲೆದ್ದು ಬಂದವರು ಬಹುಶಃ ಇಬ್ಬರೇ–ರಾಜಾಜಿ ಒಬ್ಬರು, ಸುಭಾಷ್ ಇನ್ನೊಬ್ಬರು. ರಾಜಾಜಿಯಾದರೂ ಸಮಯ ಚತುರ. ಸುಭಾಷ್ ಹಾಗಲ್ಲ. ಗಾಂಧೀ–ಸುಭಾಷರ ಹಾದಿಗಳು ಒಂದಕ್ಕೊಂದು ತೀರ ವಿರುದ್ಧ—ಉತ್ತರ ಧ್ರುವ ದಕ್ಷಿಣ ಧ್ರುವ ಇದ್ದ ಹಾಗೆ. ಈ ವಿಮುಖದ ಅಗ್ನಿಪರೀಕ್ಷೆಯಲ್ಲಿ ಗೆದ್ದು ಸೋತ, ಸೋತು ವಿಜಯಿಯಾದ ನಾಯಕ ಸುಭಾಷ್. ಇವರ ಅಣ್ಣ ಶರತ್ ಬಾಬು.

ಗಡಿನಾಡಿನಲ್ಲಿ ಖಾನ್ ಸೋದರರಿದ್ದ ಹಾಗೆ ಬಂಗಾಳದಲ್ಲಿ ಬೋಸ್ ಸೋದರರು. ಈ ಇಜ್ಜೋಡಿಯ ನಡುವೆ ಒಂದೇ ವ್ಯತ್ಯಾಸ. ಗಡಿನಾಡಿನ ಆ ಇಬ್ಬರು ಕಾಂಗ್ರೆಸ್ ಭಕ್ತರು. ಬಂಗಾಳದ ಈ ಇಬ್ಬರು ಕಾಂಗ್ರೆಸಿನೊಳಗೇ ಇದ್ದರೂ ಇವರಿದ್ದಲ್ಲಿ ಸುಳಿಗಾಳಿ, ಸುಂಟರಗಾಳಿ. ಆಯ ತಪ್ಪಿದರೆ ವಿರೋಧ ಸಿದ್ಧ.

ಶರತ್-ಸುಭಾಷರ ಪೈಕಿ ಸುಭಾಷರ ಜೀವನ ಒಂದು ಮಹಾ ರುದ್ರಕಾವ್ಯ.

ಸಿಡಿಲು ಮರಿ ಸಂಚರಿಸಿದ ಹಾಗೆ ಅವರು ರಾಜಕೀಯ ಪ್ರವೇಶ ಮಾಡಿ, ಈ ಕ್ಷೇತ್ರದಿಂದ ಮರೆಯಾಗುವ ವರೆಗೂ ಜನರ ಗಮನ ಸೆಳೆದು ಅದನ್ನು ತಮ್ಮಲ್ಲೇ ಹಿಡಿದು ನಿಲ್ಲಿಸಿದ್ದರು. ವಿದ್ಯಾರ್ಥಿದೆಶೆ ಮುಗಿದ ತಕ್ಷಣ ರಾಜಕೀಯು ಅವರಿಗಾಗಿ ಕಾದಿತ್ತು. ಅದರಲ್ಲಿ ಇಳಿದದ್ದೇ ತಡ, ಒಂದಾದ ಮೇಲೊಂದು ಘಟನೆಯ ಪರಂಪರೆ. ಎಲ್ಲೆಲ್ಲೂ ಅವರ ಸುಸ್ಮಿತ ವದನದ ಪ್ರಭಾವ ಮುದ್ರೆ. ಪ್ರತಿಯೊಂದರಲ್ಲೂ ವಿಶಿಷ್ಟ ಮಾರ್ಗ.

ಆದರೆ ಶರತರು ರಾಜಕೀಯಕ್ಕೆ ಕಾಲು ಹಾಕಿದ್ದು ಕ್ರಮ ಕ್ರಮವಾಗಿ. ಇದರಲ್ಲಿ ಮುಂಗಾರಿನ ಅಬ್ಬರವಾಗಲಿ, ಸೆಳೆಮಿಂಚಾಗಲಿ ಇಲ್ಲ. ೧೯೨೦ರಲ್ಲಿ ಸುಭಾಷರು ಸ್ವಾತಂತ್ರ್ಯ ಯುದ್ಧದಲ್ಲಿ ಧುಮ್ಮಿಕ್ಕಿದಾಗ ಶರತರು ಶಾಂತ ಜೀವನ ನಡಸುತ್ತಿದ್ದರು. ಅವರ ಲಾಯರಿ ಕಸುಬು ಚೆನ್ನಾಗಿ ಸಾಗಿತ್ತು. ಅವರು ಪ್ರತ್ಯಕ್ಷವಾಗಿ ರಾಜಕೀಯದಲ್ಲಿ ಭಾಗವಹಿಸಿದ್ದು ೧೯೨೫ರ ಸುಮಾರಿಗೆ. ೧೯೩೦ರ ಸಂಗ್ರಾಮದಲ್ಲೂ ಅವರು ತೆರೆಮರೆಯಲ್ಲಿ ನಿಂತು ಕೆಲಸ ಮಾಡುತ್ತಿದ್ದರು.

ಆದರೂ ಮೊದಲಿನಿಂದಲೂ ಶರತ್ತರದೇ ಪ್ರತ್ಯೇಕ ಮಾರ್ಗ. ಅವರ ಬಂಗಾಳಿ ರಕ್ತವೇ ಅಂಥದು. ದೇಶಬಂಧು ಸಿ. ಆರ್. ದಾಸರು ಬಂಡಾಯದ ಬಾವುಟ ಎತ್ತಿ ಹಿಡಿದಿದ್ದಾಗ ಶರತ್ ಅವರ ಅನುಯಾಯಿಯಾಗಿದ್ದರು. ಆಗಿನಿಂದಲೂ ರಾಜಕೀಯ ಕ್ಷೇತ್ರದಲ್ಲಿ ಅವರದೇ ಪ್ರತ್ಯೇಕ ಸ್ಥಾನ.

ಶರತ್‌ಚಂದ್ರ ಬೋಸರೆಂದರೆ ಸರಕಾರಕ್ಕೆ ಯಾವಾಗಲೂ ತಲೆ ನೋವು. ರಾಜಕೀಯವೇ ಅಲ್ಲ. ಎಲ್ಲ ವಿಚಾರದಲ್ಲೂ ಅಷ್ಟೆ. ಕೈಹಾಕಿದಲ್ಲಿ ಕೊಳಕು ಒದರಿ ಮುಖಭಂಗ ಮಾಡುವ ಖಂಡಿತವಾದಿ ಅವರು. ಸಿ. ಆರ್. ದಾಸರು ಸ್ಥಾಪಿಸಿದ 'ಫಾರ್ವರ್ಡ್' (ಮುನ್ನಡೆ) ಪತ್ರಿಕೆಯಲ್ಲಿ ಇವರು ವ್ಯವಸ್ಥಾಪಕರಾಗಿದ್ದಾಗ ನಡೆದ ಒಂದು ಸ್ವಾರಸ್ಯ ಪ್ರಸಂಗ ಪತ್ರಿಕಾಕರ್ತರಿಗೆಲ್ಲ ಬಹು ಉಪಯುಕ್ತವಾದುದ್ದು. ೧೯೨೮ರಲ್ಲಿ ಈಸ್ಟ್ ಇಂಡಿಯಾ ರೈಲ್ವೆಯಲ್ಲಿ ಒಂದು ಅನಾಹುತವಾದಾಗ ಅದರ ವಿಚಾರವಾಗಿ ಪ್ರೇಕ್ಷಕರೊಬ್ಬರಿಂದ ಬಂದ ಒಂದು ಲೇಖನ ಈ ಪ್ರತಿಕೆಯಲ್ಲಿ ಪ್ರಕಟವಾಯಿತು. ಅದನ್ನು ಕಂಡು ಕನಲಿದ ರೈಲ್ವೆ ಸಂಸ್ಥೆ ಈ ಪತ್ರಿಕೆಯ ವಿರುದ್ಧವಾಗಿ ಕೋರ್ಟಿಗೆ ಹೋಯಿತು. ಕೋರ್ಟು ಈ ಪತ್ರಿಕೆಗೆ ಎರಡು ಲಕ್ಷ ರೂ. ದಂಡ ವಿಧಿಸಿತು. ಆದರೆ ರಾತ್ರೋರಾತ್ರಿಯೇ ಏನು ಪವಾಡ ನಡೆದಿತ್ತು ಗೊತ್ತೆ? 'ಫಾರ್ವರ್ಡ್'ಪತ್ರಿಕೆ 'ನ್ಯೂ ಫಾರ್ವರ್ಡ್'ಪತ್ರಿಕೆಯಾಗಿತ್ತು. ಲಂಡನ್,

ನ್ಯೂಯಾರ್ಕ್, ಬರ್ಲಿನ್, ಪ್ಯಾರಿಸ್‌ಗಳಲ್ಲಿದ್ದ ಅದರ ಪ್ರತಿನಿಧಿಗಳೆಲ್ಲ ಆಗಲೇ ಈ ಹೊಸ ಪತ್ರಿಕೆಯ ಪ್ರತಿನಿಧಿಗಳಾಗಿದ್ದರು!

ಆದರೆ ರೈಲು ಕಂಪೆನಿ ಎದೆಗುಂದಲಿಲ್ಲ. ಈ ಹೊಸ ಪತ್ರಿಕೆಯ ಮೇಲೆಯೇ ಮತ್ತೆ ದಂಡದ ಆಜ್ಞೆ ತಂದಿತು. ಆದರೆ ಅದಕ್ಕೂ ಮುಂಚೆಯೇ ಆ ಪತ್ರಿಕೆ 'ಲಿಬರ್ಟಿ' (ಸ್ವಾತಂತ್ರ್ಯ) ಎಂಬ ನಾಮಧೇಯ ತಳೆದಿತ್ತು. ಜಪ್ಪಯ್ಯ ಎಂದರೂ ಈ ಪತ್ರಿಕೆ ಜಗ್ಗಲಿಲ್ಲ. ಎರಡು ಲಕ್ಷವಿರಲಿ, ಎರಡು ದಮ್ಮಡಿಯೂ ರೈಲು ಸಂಸ್ಥೆಗೆ ದಕ್ಕಲಿಲ್ಲ! ಈ ಪತ್ರಿಕೆಯ ಹಿಂದೆ ಇದ್ದ ಶಕ್ತಿ ಶರತ್ ಬಾಬು.

ಶರತ್‌ಬಾಬುವಿನ ಜೈಲು ಪ್ರವಾಸ ಆರಂಭವಾದದ್ದು ೧೯೩೦ರಲ್ಲಿ. ಸುಮಾರು ಎಂಟು ವರ್ಷ ಕಾಲ ಅವರು ಜೈಲಿನಲ್ಲಿ ಕಾಲ ಕಳೆದರು. ಸಾಮ್ರಾಜ್ಯ ಸರಕಾರಕ್ಕೆ ಇವರ ಮೇಲೆ ಯಾವಾಗಲೂ ಕಣ್ಣು.

೧೯೪೧ರಲ್ಲಿ ಡಿಸೆಂಬರು ತಿಂಗಳಲ್ಲಿ ಬಂಗಾಳದ ನಾಯಕ ಗೋಷ್ಠಿಯಲ್ಲಿ ಬಿಸಿ ಬಿಸಿ ಮಾತುಕತೆ ನಡೆಯುತ್ತಿತ್ತು. ಬಂಗಾಳದ ಏಕಪಕ್ಷೀಯ ಸರಕಾರವನ್ನು ತ್ಯಜಿಸಿ ಸರ್ವಪಕ್ಷಗಳ ಮಂತ್ರಿಮಂಡಲ ಏರ್ಪಡಿಸಲು ಸಂಧಾನ ಬಿರುಸಿನಿಂದ ಸಾಗಿತ್ತು. ಆದರ ಹಿಂದೆ ನಿಂತು, ಓಡಾಡಿ, ಇನ್ನೇನು ಜಯ ಸಾಧಿಸಿದ್ದ ಮುಂದಾಳು ಶರತ್ ಬೋಸ್. ಮರುದಿನದಿಂದ ಅವರೂ ಮಂತ್ರಿಯಾಗುತ್ತಿದ್ದರು. ಸದ್ಯಕ್ಕೆ ಒಂದು ದೊಡ್ಡ ಸಮಸ್ಯೆ ಬಗೆಹರಿಯಿತಲ್ಲಾ—ಎಂತ ಎಲ್ಲರಿಗೂ ಸಮಾಧಾನ.

ಆದರೆ ಬಂಗಾಳದ ಕತೆ ಬೇರೆ ರೀತಿ ನಡೆಯಬೇಕಾಗಿತ್ತು. ಅದಕ್ಕೆ ತಕ್ಕ ಹಾಗೆ ಯೋಗಾಯೋಗ ಸಂಧಿಸಿ, ಆಗಬಾರದ್ದೆಲ್ಲ ಆಗಿ ಹೋಯಿತು. ಮಂತ್ರಿಪದ ಗದ್ದುಗೆಯನ್ನೇರಬೇಕಾಗಿದ್ದ ಶರತ್‌ಚಂದ್ರರು ಕಾರಾಗಾರದ ಸರಳ ಹಿಂದೆ ನಿಂತರು.

ಶರತ್‌ಚಂದ್ರರು ಜಪಾನೀಯರೊಡನೆ ಸಂಬಂಧ ಹೊಂದಿದ್ದಾರೆಂದು ಹೇಳಿ ಸರಕಾರ ಅವರನ್ನು ಹಿಡಿಯಿತು. ದೂರದ ಕೂನೂರಿಗೆ ಕೊಂಡೊಯ್ದು ಏಕಾಂತ ವಾಸದ ಕ್ರೂರ ಶಿಕ್ಷೆ ವಿಧಿಸಿತು. ೧೯೪೫ರಲ್ಲಿ ಕಾಂಗ್ರೆಸ್ ನಾಯಕರೆಲ್ಲರ ಬಿಡುಗಡೆಯಾದಾಗಲೇ ಅವರ ಬಿಡುಗಡೆಯೂ ಆದದ್ದು.

ಶರಚ್ಚಂದ್ರ ಬೋಸರು ಯಾವೊಂದು ನಿಶ್ಚಿತ ಪಕ್ಷಕಾರರಾಗಿರಲಿಲ್ಲ. ಆವೇಶ ಅವರ ಏಕೈಕ ಸಾಧನ. ವಿರೋಧ ಪಂಗಡಕ್ಕೆ ಯಾವಾಗಲೂ ಅವರ ಬೆಂಬಲ.

ನಿಲ್ಮೆ ಅವರಿಗೆ ಎಂದೆಂದೂ ಒಗ್ಗದು. ಪಾದರಸದ ಚಟುವಟಿಕೆ ಅವರಿಗೆ ಆಗಿ ಬಂದದ್ದು. ಈ ಗುಣ ಇಲ್ಲದ ರಾಜಕೀಯ, ಸಂಸ್ಥೆ, ಸಂಗಡ, ಜನ–ಯಾವುದೂ ಅವರಿಗೆ ಸೇರದು. ಅಲ್ಲದೆ ಪಕ್ಷ ಕಟ್ಟುವವರಿಗೆ ಇರಬೇಕಾದ ತಾಳ್ಮೆಯಾಗಲಿ, ರಾಜಕೀಯ ಸಾಧಿಸುವವರಿಗೆ ಅಗತ್ಯವಾದ 'ಚಾರಾ ಬಂಗಾಳಿ' ತನವಾಗಲಿ ಅವರಿಗೆ ಅಭ್ಯಾಸವಿರಲಿಲ್ಲ. ಖಂಡಿತವಾದಿ ಎಂದರೆ ಶರತ್‌ಬಾಬು. ಮುಖ-ಮೂತಿ ನೋಡದೆ ಉಡಾಯಿಸಿಬಿಡುವ ನಿಷ್ಠುರ ಪ್ರಕೃತಿ ಅವರದು.

ಅಂತೆಯೇ ಕಾಂಗ್ರೆಸ್ ಕ್ಷೇತ್ರದಲ್ಲಿ ಯಾರೊಬ್ಬರೂ ಅವರೊಡನೆ ಸೇರಲು ಹೆದರುತ್ತಿದ್ದರು. ಸೆರೆಯಿಂದ ಹೊರಕ್ಕೆ ಬಂದಾಗ ಚೀಣೀಪ್ರಭುತ್ವದ ವಿಚಾರವಾಗಿ ಮಾತನಾಡುತ್ತಾ, ಚಿಯಾಂಗ್ ಕೈಷೇಕರು ಫ್ಯಾಸಿಸ್ಟ್ ಎಂದು ಹೇಳಲೂ ಹಿಂಜರಿಯಲಿಲ್ಲ.* ಸಮಾಧಾನ ಪಡಿಸಲು ಬಂದ ನೆಹರೂವಿಗೂ ಕಾದಿತ್ತು— ಬಿಸಿನುಡಿಯ ಚಾವಟಿಯೇಟು. ಶರತ್‌ಬಾಬು ಅಂಥ ಉಗ್ರ ಕೋಲಾಹಲಿ.

ಶರತ್‌ಬೋಸರ ವಂಶವೇ ಅಂಥದು. ಅವರ ಕುಟುಂಬದಲ್ಲಿ ಒಬ್ಬೊಬ್ಬರೂ ಪ್ರಚಂಡರೇ. ಅವರ ತಂದೆಗೆ ಆರು ಹೆಣ್ಣು, ಎಂಟು ಗಂಡು. ಇವರಿಂದಲೂ ವಂಶ ವೃಕ್ಷ ವಿಪುಲವಾಗಿ ಬೆಳೆದು, ಎಲೆ ಟೊಂಗೆ ಬಿಳಲು ಹರಡಿವೆ. ಈ ವೃಕ್ಷದ ಒಂದೊಂದು ಕುಡಿಯೂ ಒಂದೊಂದು ಹಾದಿಯಲ್ಲಿ ಕೀರ್ತಿ ಗಳಿಸಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ಕಾದಾಡಿ ಕಷ್ಟಕ್ಕೊಳಗಾದ ವೀರರಿಗಂತೂ ಲೆಕ್ಕವೇ ಇಲ್ಲ.

೧೯೪೧ ರಿಂದೀಚೆಗೆ ಬೋಸ್ ಸಂಸಾರ ಪಟ್ಟ ಬವಣೆಗೆ ಕೊನೆ ಮೊದಲಿಲ್ಲ. ಜಪಾನೀಯರೊಡನೆ ಸಂಪರ್ಕವಿಟ್ಟುಕೊಂಡಿದಾರೆಂದು ಈ ಸಂಸಾರದ ಎಷ್ಟೋ ಜನ ಕಾರಾಗೃಹಕ್ಕೆ ನಡೆದರು, ಚಿತ್ರ ಹಿಂಸೆ ಅನುಭವಿಸಿದರು; ಆದರೂ ಜಗ್ಗಲಿಲ್ಲ. ನಾಡ ಬಿಡುಗಡೆಗಾಗಿ ಈ ಸಂಸಾರ ಮಾಡಿದ್ದಕ್ಕಿಂತ ಹೆಚ್ಚಿನ ತ್ಯಾಗ ವನ್ನು ಬಹುಶಃ ಬೇರೊಂದು ಸಂಸಾರ ಮಾಡಿರಲಾರದು.

ಬಂಗಾಳದ ಜನಕ್ಕೆ ಶರತ್ ಬೋಸರೆಂದರೆ ಅಚ್ಚುಮೆಚ್ಚು. ಅವರ ಕಣ್ಮಣಿ ಶರತ್. ಅವರ ಮಾತೆಂದರೆ ಜನಕ್ಕೆ ಬಲು ಆದರ. ಆದ್ದರಿಂದಲೇ ಆಗದವರು ಇವರ ವಿರುದ್ಧ ಕತ್ತಿ ಕಟ್ಟುತ್ತಲೇ ಇದ್ದರು. ಒಮ್ಮೆ ಕಲ್ಕತ್ತಾ ಗಲಭೆ ಆದಾಗ ಒಂದು ಜೀಪ್ ಮೋಟಾರು ಇವರ ಮೇಲೆಯೇ ಹಾದು ಹೋಗುವುದರಲ್ಲಿತ್ತು. ಕೂದಲೆಳೆಯಷ್ಟರಲ್ಲಿ ಆವರು ಪಾರಾದರು.

* ಆಗ ಚಿಯಾಂಗರು ಚೀಣೀ ಗಣರಾಜ್ಯದ ನಾಯಕರಾಗಿದ್ದರು.

ಕೊನೆಕೊನೆಗೆ ಕಾಗ್ರೆಸ್ಸಿನ ವಿಚಾರದಲ್ಲಿ ಹಲವರಲ್ಲಿ ಮೂಡಿದಂತೆ ಶರತ್ ಬೋಸರಲ್ಲೂ ಅತೃಪ್ತಿ ಮೂಡಿತ್ತು. ಅದು ಪ್ರಗತಿ ಮಾರ್ಗ ತುಳಿಯುತ್ತಿರಲಿಲ್ಲ ವೆಂದು ಅವರ ಅತೃಪ್ತಿ. ಬೇರೆ ಪಕ್ಷವನ್ನೂ ಕಟ್ಟಿದ್ದರು ಅವರು.

ಪಕ್ಕಾ ಬಂಗಾಳಿ ಶರತ್ ಬಾಬು. ಬೆಂಕಿ ನವಾಬ.*

---

* ೧೯೪೭.

# ಮುಹಮ್ಮದಾಲಿ ಜಿನ್ನಾ



ಮುಸ್ಲಿಮರದೇ ಪ್ರತ್ಯೇಕ ರಾಷ್ಟ್ರ. ಭಾರತ ವಿಭಾಗವಾಗಿ ಸ್ವತಂತ್ರ ಮುಸ್ಲಿಂ ರಾಜ್ಯ ಸ್ಥಾಪನೆಯಾದಾಗಲೇ ಅವರಿಗೆ ಸಂತೃಪ್ತಿ. ಪಾಕಿಸ್ತಾನಕ್ಕೆ ಒಪ್ಪಿಕೊಳ್ಳದೆ ಭಾರತ ಸ್ವತಂತ್ರವಾಗಲಾರದು. ಹೀಗೆಂದು ಹಠ ಹೂಡಿ, ಕೊನೆಗೂ ಈ ಹಠಸಾಧನೆ ಮಾಡಿದ ಕಾಯಿದೆ ಅಜಾಮ್ ಮುಹಮ್ಮದಾಲಿ ಜಿನ್ನಾ ಅಜ್ಜ ಮುಸ್ಲಿಂ ಅಲ್ಲ. ಅವರಿಗಿಂತ ಹಿಂದೆ ಎರಡು ತಲೆಮಾರಿನ ತನಕ ಅವರ ವಂಶೀಯರು ಹಿಂದೂ ಆಗಿದ್ದರು. ಹೀಗೆಂದರೆ ನಂಬುವುದು ಕಷ್ಟ. ಆದರೆ ನಿಜ.

ಜಿನ್ನಾ ಜೀವನದಲ್ಲಿ ಇಂಥ ವಿರೋಧ ಪರಂಪರೆ ಹಲವಾರಿವೆ. ಹುಟ್ಟಿದ್ದು ಕರಾಚಿಯಲ್ಲಾದರೂ ನೆಲಸಿದ್ದು ಬೊಂಬಾಯಿಯಲ್ಲಿ. ವಿವಾಹ ಬೆಳಸಿದ್ದು ಪಾರ್ಸಿ ತರುಣಿಯೊಂದಿಗೆ. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕೆಲಸ ಮಾಡಿದ್ದು ದಾದಾಭಾಯಿ ನವರೋಜಿಯಂಥ ನಾಯಕರ ಆಪ್ತಕಾರ್ಯದರ್ಶಿಯಾಗಿ. ಮಿಂಟೋ-ಮಾರ್ಲೆ ಸುಧಾರಣೆಯಲ್ಲಿ ಸೂಚಿತವಾಗಿದ್ದ ಪ್ರತ್ಯೇಕ ಮುಸ್ಲಿಂ ಚುನಾವಣೆ ತತ್ವದ ಅಚಲವಿರೋಧಿ ಈತ. ಕಾಂಗ್ರೆಸು ಖಿಲಾಪತ್

ಚಳವಳಿಯಲ್ಲಿ ಮುಸ್ಲಿಮರ ಪರವಾಗಿ ಹೋರಾಡಿದಾಗ ಈ ಪಕ್ಷಪಾತವನ್ನು ಎದುರಿಸಿ ಪ್ರತ್ಯೇಕವಾಗಿ ನಿಂತ ಧೀರ ಜಿನ್ನಾ. ಹಿಂದೂ-ಮುಸ್ಲಿಂ ಸೌಹಾರ್ದ ಪ್ರತಿನಿಧಿಯೆಂದೂ, ಮುಸ್ಲಿಮರ ಗೋಖಲೆಯೆಂದೂ ಹೊಗಳಿಸಿಕೊಂಡ ಮುಸ್ಲಿಂ ನಾಯಕರೂ ಇವರೇ. ಮುಸ್ಲಿಂ ಲೀಗಿನ ನಾಯಕನಾಗಿ, ಕಾಂಗ್ರೆಸ್-ಲೀಗ್ ಸೌಹಾರ್ದಸ್ಥಾಪನೆಗಾಗಿ ಶ್ರಮಿಸಿದ ವಿಶಾಲ ಹೃದಯಿಯೀತ.

ಆದರೆ ಅದೆಲ್ಲ ೧೯೩೦ರ ಹಿಂದಿನ ಮಾತಾಯಿತು. ಆಗ ಜಿನ್ನಾರ ಮನಸ್ಸು ಅಖಂಡ ಭಾರತದ ಕನಸು ಕಾಣುತ್ತಿತ್ತು. ಪ್ರತ್ಯೇಕ ರಾಷ್ಟ್ರದ ಕಲ್ಪನೆ ಅವರ ಬಾಳನ್ನು ತನ್ನ ಕಡೆಗೆ ಇನ್ನೂ ಸೆಳೆದುಕೊಂಡಿರಲಿಲ್ಲ.

೧೯೩೦ರಲ್ಲಿ ಇಂಗ್ಲೆಂಡಿಗೆ ದುಂಡುಮೇಜಿನ ಪರಿಷತ್ತಿಗೆ ಹೋದಾಗ ಜಿನ್ನಾ ಪರಿವರ್ತನೆಯಾದರು. ಮುಸ್ಲಿಂ ಪ್ರತ್ಯೇಕತೆಯ ಮಾತು ಅವರ ಬಾಯಲ್ಲಿ ಬಂದದ್ದು ಆಮೇಲೆ. ಆಮೇಲಣ ವರ್ಷಗಳಲ್ಲಿ, ಅವರು ತಮ್ಮ ಈ ಸೂತ್ರವನ್ನು ಬೆಳಸುತ್ತಾ ಹೋದರು. ಕೊನೆಗೆ, 'ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರವೇ ಬೇಕು. ಈ ರಾಜ್ಯ ಸ್ಥಾಪನೆಯೇ ನನ್ನ ಬಾಳಿನ ಗುರಿ. ಪಾಕಿಸ್ತಾನವನ್ನು ಗಳಿಸಬೇಕು. ಆ ಪ್ರಯತ್ನದಲ್ಲಿ ಸಾಯಲೂ ಸಿದ್ಧ'—ಎಂಬ ಸೂತ್ರವನ್ನು ತಮ್ಮ ಮುಸ್ಲಿಂ ಜನತೆಯ ಮುಂದಿಟ್ಟರು. ಜಿನ್ನಾ ಬಾಳಿನಲ್ಲಿ ಈ ಪರಿವರ್ತನೆಯಾದದ್ದು ಒಂದು ದಿನದಲ್ಲಲ್ಲ, ಒಂದು ರಾತ್ರಿಯಲ್ಲಲ್ಲ. ರಾತ್ರಿ ಮಲಗಿ ಮರುದಿನ ಏಳುವಾಗ ಅವರು ಪಾಕೀಸ್ತಾನವಾದಿಯಾಗಲಿಲ್ಲ. ಬ್ರಿಟಿಷರ ಕುಯುಕ್ತಿಯ ಫಲವೇ ಪಾಕಿಸ್ತಾನ ಎಂಬುದಾಗಿ ಹೇಳುವುದಾದರೂ, ಜಿನ್ನಾರ ಅದ್ಭುತ ಪಾತ್ರವೂ ಅವರ ಸಂತತವಾದ ಸೋಲರಿಯದ ಹೋರಾಟವೂ ಬಹುಪಾಲು ಕಾರಣ. ಬ್ರಿಟಿಷ್ ರಾಜಕಾರಣ ಜಿನ್ನಾರ ಈ ಯತ್ನಕ್ಕೆ ನೀರೆರೆಯಿತು; ಈ ವ್ಯಕ್ತಿಯ ತಲೆಯಲ್ಲಿ ಬಿತ್ತಿದ್ದ ಬೀಜವನ್ನು ಪೋಷಿಸಿ ಬೆಳೆಯಿಸಿತು.

ಜಿನ್ನಾ ಹುಟ್ಟಿದ್ದು ಶ್ರೀಮಂತ ಮನೆತನದಲ್ಲಿ. ಅವರ ತಂದೆ ಪ್ರಸಿದ್ಧ ವರ್ತಕರು. ಅವರ ಪ್ರೌಢ ವಿದ್ಯಾಭ್ಯಾಸ ಇಂಗ್ಲೆಂಡಿನಲ್ಲಿ. ಈ ರೀತಿ ಶ್ರೀಮಂತಿಕೆಯಲ್ಲಿ ಹುಟ್ಟಿ ಬೆಳೆದ ಜಿನ್ನಾರ ಧೀಶಕ್ತಿ ಅದ್ಭುತವಾದರೂ ಜನಸಾಮಾನ್ಯರಿಗಿಂತ ದೂರವಾಗಿ ಇತರಕ್ಕ ಮನೋವೃತ್ತಿಯೇ ಅವರದು. ಅಖಂಡ ಭಾರತದಲ್ಲಿ ಜನಸ್ತೋಮದ ನಾಯಕರಾಗಿ ಅವರ ಹೃದಯದಲ್ಲಿ ಮನೆಮಾಡಿಕೊಂಡಿದ್ದ ಮಹಾತ್ಮ ಗಾಂಧಿಯವರೊಡನೆ ೧೯೪೭ಕ್ಕೆ ಹಿಂದೆ—ಸ್ಪರ್ಧೆ ನಡಸಿದವರು

ಜಿನ್ನಾ. ಆದರೆ ಗಾಂಧಿಜೀ ಜನಕೋಟಿಯಲ್ಲಿ ಮಿಳಿತರಾಗಿ, ಅವರ ದಿನ ನಿತ್ಯದ ಬವಣೆಯಲ್ಲಿ ಕಣ್ಣೀರು ಮಿಡಿದು, ಸಹಾನುಭೂತಿ ತೋರಿ, ಅವರ ಬಾಳಿನ ಬೆಳಕಾಗಿ 'ಮಹಾತ್ಮ'ರಾದರು. ಆದರೆ ಜಿನ್ನಾ ತಮ್ಮ ಮುಸ್ಲಿಂ ಅನುಯಾಯಿಗಳಿಂದ ದೂರ ಸೆಟೆದು ಕೂತು, ಅವರ ಹೃದಯದಲ್ಲಿ ಜಾತಿಮೋಹದ ಹುಚ್ಚು ಆವೇಶವನ್ನು ಕೆರಳಿಸಿ, ಅವರಿಂದ ಮಹಾನಾಯಕ—ಕಾಯಿದೆ ಅಜಾಮ್—ಎನಿಸಿಕೊಂಡರು. ಜಿನ್ನಾ ಹಿಂಬಾಲಕರು ಅವರನ್ನು ಎಂದೂ ತಮ್ಮ ಹೃದಯಕ್ಕೆ ತೀರ ಸಮೀಪದಲ್ಲಿ ಇಟ್ಟು ಆದರಿಸಲಿಲ್ಲ. ಅವರು ಕೇವಲ 'ಮಹಾನಾಯಕ;' ಮಹಾತ್ಮನಲ್ಲ; ಪ್ರೀತಿಯ 'ಬಾಪೂ' ಅಂತೂ ಅಲ್ಲವೇ ಅಲ್ಲ.

ಈ ಶ್ರೀಮಂತ ಪ್ರಿಯತೆಯೇ, ಈ ಪ್ರತ್ಯೇಕತಾಮನೋಭಾವವೇ ಜಿನ್ನಾ ಜಯದ ಗುಟ್ಟು. ಗಾಂಧಿಜೀ ಅಸಹಕಾರ ಚಳವಳಿ ಪ್ರಾರಂಭಿಸಿ ಜನಜಂಗುಳಿಯ ನಡುವೆ ಮಿಳಿತರಾದಾಗ, ಖಿಲಾಫತ್ ಚಳವಳಿಯನ್ನು ತಮ್ಮದಾಗಿ ಮಾಡಿಕೊಂಡು ಮುಸ್ಲಿಮರೊಡನೆ ಸ್ನೇಹ ಸ್ಥಾಪನೆ ಮಾಡಲು ಯತ್ನಿಸಿದಾಗ, ಜಿನ್ನಾ ಅವರಿಂದ ಪ್ರತ್ಯೇಕವಾದರು. ಆದರೂ ಹಿಂದೂ-ಮುಸ್ಲಿಂ ಪ್ರತ್ಯೇಕತಾವಾದಿಯಾಗಿರಲಿಲ್ಲ. ಅವರು ಆಗ 'ಹೋಂ ರೂಲ್' ಭಕ್ತರಾಗಿದ್ದರು. ಜನರಲ್ಲಿ ಉತ್ಸಾಹ ತುಂಬುವ, ಅವರನ್ನು ಬಡಿದೆಬ್ಬಿಸಿ ಅವರಲ್ಲಿ ಒಂದಾಗುವ, ಯಾವ ಕ್ರಮವೂ ಅವರಿಗೆ ಸೇರದು. ಹೀಗೆ ಅವರು ಪ್ರತ್ಯೇಕವಾಗಿ ನಿಂತಾಗ ಕಾಂಗ್ರೆಸು ಅವರಿಗೆ ವಿಚಿತ್ರವಾಗಿ ಕಂಡಿತು. ದಾದಾಭಾಯಿ ನವರೋಜಿ, ಗೋಪಾಲ ಕೃಷ್ಣ ಗೋಖಲೆಯಂಥವರ ನಾಯಕತ್ವವನ್ನೂ, ತಿಲಕ್ ಗಾಂಧಿ ಇವರ ಮುಂದಾಳುತನವನ್ನೂ ಕಂಡ ಜಿನ್ನಾಗೆ ಕಾಂಗ್ರೆಸಿನಲ್ಲಿ ಒಂದು ರೀತಿಯ ಜಾತೀಯತೆ ಕಂಡಿತು. ಇಂಗ್ಲೆಂಡಿನ ಪ್ರಭಾವಕ್ಕೆ ಒಳಗಾದ ಭಾರತ ಬಲುಬೇಗ 'ವಿದೇಶೀಕರಣ'ವಾಗುವುದೆಂದು ನಂಬಿದ್ದ ಜಿನ್ನಾಗೆ ಇದು ನಿರಾಶೆಯನ್ನುಂಟುಮಾಡಿರಬೇಕು. ಹೀಗೆ ಸಣ್ಣ ಸುಳಿಯಾಗಿ ಪ್ರಾರಂಭವಾದ ಅವರ ನಿರಾಶೆ ಕೊನೆಗೆ ಪ್ರಳಯಕಾರಿಯಾಗಿ ದ್ವಿರಾಷ್ಟ್ರ ನಿರ್ಮಾಣದಲ್ಲಿ, ಅಸಂಖ್ಯಾತ ಜನರ ಕಗ್ಗೊಲೆ ಪ್ರಾಣಹಾನಿಗಳಲ್ಲಿ ಪರ್ಯವಸಾನವಾಯಿತು. ಇದಕ್ಕೆಲ್ಲಾ ಜಿನ್ನಾ ಕಾರಣರಲ್ಲವೆನ್ನಲಾಗುವುದಿಲ್ಲ.

ಜಿನ್ನಾ ರಾಜಕೀಯ ಕ್ಷೇತ್ರದಲ್ಲಿ ಹಾಕಿದ ಪಟ್ಟು ಹಲವಾರು; ಅನುಸರಿಸಿದ ಕ್ರಮ ಅನೇಕ. ಪ್ರತಿಯೊಂದು ಸಂದರ್ಭವೂ ಅವರ ಅಂತಿಮ ಧ್ಯೇಯವಾದ

ಪಾಕೀಸ್ತಾನಕ್ಕೆ ಒಂದು ಮೆಟ್ಟಿಲಾಯಿತು. ಹೀಗೆ, ಬಂದ ಸಂದರ್ಭಗಳನ್ನೆಲ್ಲ ಬಳಸಿಕೊಂಡು, ಕೊನೆಯಲ್ಲಿ, ಯಾರೂ ನಿರೀಕ್ಷಿಸದಷ್ಟು ಅಲ್ಪಕಾಲದಲ್ಲಿ, ಜಿನ್ನಾ ಪಾಕಿಸ್ತಾನ ರಾಷ್ಟ್ರ ಸ್ಥಾಪನೆ ಮಾಡಿದರು. ಈ ಅದ್ಭುತ ವಿಜಯ, ಇತರರನ್ನಿರಲಿ, ಜಿನ್ನಾರನ್ನೇ ಬೆರಗುಗೊಳಿಸಿರಬೇಕು. ಪಾಕಿಸ್ತಾನ ಪ್ರಪಂಚದಲ್ಲೇ ಅತ್ಯಂತ ದೊಡ್ಡ ಮುಸ್ಲಿಂ ರಾಷ್ಟ್ರವೆಂದು ಜಿನ್ನಾ ಜಂಭ ಕೊಚ್ಚಿದಾಗ ತಮ್ಮ ಈ ಅದ್ಭುತ ವಿಜಯ ಸಾಧನೆಯನ್ನು ಅವರು ನೆನೆದೇ ಈ ಮಾತು ಹೇಳಿರಬೇಕು.

ಕವಿ ಇಕ್ಬಲರ ಹಾಡಿನಲ್ಲಿ ಸ್ವಪ್ನ ವಿಲಾಸವಾಗಿ, ಇಂಗ್ಲೆಂಡಿನ ಕೇಂಬ್ರಿಜ್ ಶಾಲೆಯ ರಹಮತ್ ಆಲಿಯ ಆದರ್ಶದ ಕನಸಾಗಿ, ಬಂದ ಈ ಪಾಕಿಸ್ತಾನದ ಚಿತ್ರ ಜಿನ್ನಾರ ಹೃದಯದಲ್ಲಿ ಮೂಡಿದ್ದು ಬಹಳ ತಡವಾಗಿ; ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಿಗಳ ಆಡಳಿತ ಪ್ರಾರಂಭವಾದಮೇಲೆ. ಈ ವೇಳೆಗೆ ಆಗಲೇ ಜಿನ್ನಾ ಮುಪ್ಪಿನಲ್ಲಿ ಕಾಲಿಟ್ಟಿದ್ದರು. ಅವರ ಕಪ್ಪು ಕೂದಲು ನರೆಯ ಸಂಗಾತಿತನ ಬೆಳಸಿತ್ತು. ಆದರೆ ಈ ಮುದಿ ರಾಜಕಾರಣಿಯ ತಲೆ ಮುಪ್ಪಡಸಿರಲಿಲ್ಲ. ಮುಸ್ಲಿಂ ಜಾತ್ಯಂಧರಲ್ಲಿ ಸುಪ್ತವಾಗಿದ್ದ, ರೂಪ ರಹಿತವಾಗಿದ್ದ ಆಕಾಂಕ್ಷೆಗೆ ರೂಪು ಕೊಟ್ಟು ಬೆಳಸಿ, ಹಿಟ್ಲರ್ ಮುಸೋಲಿನಿ ಮುಂತಾದ ಸರ್ವಾಧಿಕಾರಿಗಳ ಜಯಸಾಧನೆಯ ಪ್ರಚಾರ ಮಾರ್ಗವನ್ನು ಬಳಸಿಕೊಂಡು, ಚರ್ಚಿಲ್-ಅಮೆರಿದ್ವಯರ ಕುಹಕ ಸಾಮ್ರಾಜ್ಯ ನೀತಿಯ ದುರುಪಯೋಗ ಪಡೆದುಕೊಂಡು ಜಿನ್ನಾ ಕೊನೆಗೂ ತಮ್ಮ ಗುರಿ ಸಾಧಿಸಿಕೊಂಡರು. ಕೇವಲ ಎಂಟು-ಹತ್ತು ವರ್ಷಗಳ ಅವರ ಚದುರಂಗದಾಟ ಅವರಿಗೆ ಪಾಕಿಸ್ತಾನವನ್ನು ಗಳಿಸಿಕೊಟ್ಟಿತು. ಕಾಂಗ್ರೆಸ್ಸು ಸ್ವಾರ್ಥತ್ಯಾಗಮಾಡಿ ಹೋರಾಡಿ ಫಲ ಗಳಿಸಲಿದ್ದಾಗ ಜಿನ್ನಾ ತಮ್ಮ ದಾಳ ಹಾಕಿ ಹಣ್ಣು ಮಾಡಿಕೊಂಡರು. ಜಾತಿಮೋಹದ ಹುಚ್ಚು ಹೊಳೆ ಹರಿಸಿ ತಮ್ಮ ಹಠ ಗೆದ್ದರು.

ಹೀಗೆ ಜಿನ್ನಾ ಕೆರಳಿಸಿದ ಈ ಜಾತ್ಯಂಧತೆ ಅವರ ಕೈಯನ್ನೇ ಮೀರಿದಾಗ, ಪಂಜಾಬ್ ಬಂಗಾಳಾ ಮುಂತಾದೆಡೆಗಳಲ್ಲಿ ರಕ್ತದ ಕೋಡಿಯನ್ನೇ ಹರಿಸಿದಾಗ, ಜಿನ್ನಾ ಕೂಡ ಕೈಕೈ ಹಿಸುಕಿಕೊಂಡಿರಬೇಕು.

ಅದನ್ನು ನಿಲ್ಲಿಸಲಾರದ ಅಸಹಾಯಕತೆಯನ್ನು ಅವರು ಅರಿತುಕೊಂಡಿರಬೇಕು.

ಜಿನ್ನಾ ನಿಜವಾದ ಜನನಾಯಕನಾಗಿರಲಿಲ್ಲವೆಂಬುದು ಇದರಿಂದ ಗೋಚರ

ವಾಗುತ್ತದೆ. ತಾವು ಕಳಚಿದ ದಾವಾನಲವನ್ನು ಮತ್ತೆ ಹಣಿಗಣ್ಣಿನಲ್ಲಿ ಸೇರಿಸಿಕೊಳ್ಳುವ ಶಕ್ತಿ ಅವರಿಗೆ ಇಲ್ಲವಾಯಿತು.

ಜಿನ್ನಾ ಜನಜಂಗುಳಿಗಿಂತ ದೂರ ಕೂತು ದಾಳ ಎಸೆಯುವ ಜಾಣಾಕ್ಷನೇ ವಿನಾ ಗಾಂಧಿಜೀಯ ಹಾಗೆ ಜನಸ್ತೋಮದ ಹೃದಯ ಸೂರೆ ಮಾಡಿದ, ಕೊನೆಗೆ ಅದಕ್ಕಾಗಿಯೇ ಆತ್ಮಾರ್ಪಣೆ ಮಾಡಿದ, ಪ್ರೀತಿಯ 'ಬಾಪೂ' ಅಲ್ಲವೆಂಬುದಕ್ಕೆ ಇದು ಹಿರಿಯ ಉದಾಹರಣೆ.

ಜಿನ್ನಾ ನೀತಿ ಏನೇ ಇರಲಿ, ಭಾರತ ಇಬ್ಭಾಗವಾಗುವುದಕ್ಕೆ ಮುಂಚೆಯೂ ಅನಂತರವೂ ನಡೆದ ರಕ್ತಯಾಗಕ್ಕೆ ಅವರು ಎಷ್ಟೇ ಕಾರಣರಿರಲಿ, ಅವರ ಕೆಲವು ಗುಣಗಳನ್ನು ಅವರ ಶತ್ರುವೂ ಹೊಗಳಬೇಕು. ಅಚಲ ನಿರ್ಧಾರ—ಯಾವ ಆಸೆಗೂ ಮನ ಸೋಲದ ನಿರ್ಧಾರ—ಇದೇ ಅವರ ಬಾಳ ಗುಟ್ಟು. ವಸ್ತ್ರ ಶೃಂಗಾರದಲ್ಲಿ ಪಾಶ್ಚಾತ್ಯರನ್ನು ಮೀರಿಸುತ್ತಿದ್ದರೂ ಅವರ ಜೀವನ ಬಹು ಸರಳ—ಕಟ್ಟುನಿಟ್ಟಿನದು. ೧೯೪೪ ರಲ್ಲಿ ಗಾಂಧೀಜಿನ್ನಾ ಮಾತುಕತೆ ನಡೆದಾಗ ಕೊನೆಯಲ್ಲಿ ಅದು ಮುರಿದುಬಿದ್ದರೂ ಜಿನ್ನಾರ ಅಚಲ ಮನವನ್ನು ಕಂಡು ಆಶ್ಚರ್ಯಪಡಲೇಬೇಕು.

ಜಿನ್ನಾ ತಮ್ಮ ಮುಪ್ಪಿನಲ್ಲಿ ಸತ್ತರು. ಆದರೆ ಪಾಕಿಸ್ತಾನದ ಗಂಡಾಂತರದ ಕಾಲದಲ್ಲಿ ಸತ್ತರು. ಅವರ ನಾಯಕತ್ವ ಪಾಕಿಸ್ತಾನಕ್ಕೆ ಅತ್ಯಗತ್ಯವಾಗಿದ್ದ ಕಾಲದಲ್ಲಿ ಸತ್ತರು.

ಜಿನ್ನಾ ಜಗತ್ತಿನ ಚರಿತ್ರೆಯಲ್ಲಿ ಹೆಸರು ಗಳಿಸಿಕೊಂಡರು. ಆ ಹೆಸರಿನ ಸುತ್ತ ರಕ್ತದ ಚೌಕಟ್ಟು ಹಾಕಬೇಕೆಂಬುದೇನೋ ನಿಜ. ಸಹಸ್ರಾರು ನಿರಾಶ್ರಿತ ಸಂಸಾರಗಳು ಅವರ ಹೆಸರನ್ನು ನೆನೆದಾಗ ಕಣ್ಣೀರನ್ನು ತಿದ್ದುವುದೂ ನಿಜವೇ. ಆದರೆ ಕೇವಲ ಹತ್ತುವರ್ಷ ಕಾಲದಲ್ಲಿ ಕಾಂಗ್ರೆಸಿನ ತಾತ್ಸಾರವನ್ನು ಒಪ್ಪಿಗೆಗೆ ತಿರುಗಿಸಿ ಜಗತ್ತಿನಲ್ಲೊಂದು ಹೊಸ ರಾಜ್ಯ ಸ್ಥಾಪನೆ ಮಾಡಿದ ಮಹಾವ್ಯಕ್ತಿ ಈತ, ಎಂಬುದರಲ್ಲಿ ಸಂಶಯವಿಲ್ಲ.*

---

* ೧೯೪೮.

# ಸರ್ ವಿನ್‌ಸ್ಟನ್ ಚರ್ಚಿಲ್



ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸುಮಾರು ಅರುವತ್ತು ವರ್ಷಕಾಲ ಕುಳಿತು, ಅಲ್ಲಿನ ಸರಕಾರದ ನಾನಾ ಸ್ಥಾನಗಳಲ್ಲಿ ಕೆಲಸಮಾಡಿ, ಎರಡು ಮಹಾ ಯುದ್ಧಗಳ ನಿರ್ವಹಣೆಯಲ್ಲಿ ಮುಖ್ಯ ಪಾತ್ರ ವಹಿಸಿ, ಇವುಗಳ ಬೃಹತ್ ಕತೆಗಳನ್ನು ಮೋಹಕ ಶೈಲಿಯಲ್ಲಿ ರಚಿಸಿ, ಬ್ರಿಟಿಷ ಚಕ್ರಾಧಿಪತ್ಯದ ವಿಸರ್ಜನೆಯ ಅಧ್ಯಕ್ಷತೆ ವಹಿಸುವುದು ತಮ್ಮ ಇಚ್ಛೆಯಲ್ಲವೆಂದು ಘೋಷಿಸಿಯೂ ಆ ಚಕ್ರಾಧಿಪತ್ಯ ತಮ್ಮ ಮುಂದೆಯೇ ಕರಗುತ್ತಿದ್ದದ್ದನ್ನು ಕಣ್ಣಾರೆ ಕಂಡು ಸಮ್ಮನಿರಬೇಕಾಗಿ ಬಂದ ಬ್ರಿಟಿಷ್ ಮಾಜಿ ಪ್ರಧಾನಿ ಗಂಡುಗಲಿ ವಿನ್‌ಸ್ಟನ್ ಚರ್ಚಿಲ್ ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಕೊನೆಯ ಬಾರಿಗೆ* ಪಾರ್ಲಿಮೆಂಟ್ ಭವನದಿಂದ ಹೊರ ನಡೆದರು. ಬ್ರಿಟಿಷ್ ಪಾರ್ಲಿಮೆಂಟಿನ ಆ ಅಧಿವೇಶನದೊಂದಿಗೆ ಅವರ ಸದಸ್ಯತ್ವದ ಅವಧಿ ಮುಗಿಯಿತು. ಮತ್ತೆ ಅವರು ಆ ಸಭೆಗೆ ಸ್ಪರ್ಧಿಸಲಿಲ್ಲ.

ಮಾತಿನ ಮಸೆತ, ನಗೆ-ಹೊಗೆ, ನಿಂದೆ-ಮೂದಲೆ, ಪ್ರಶಂಸೆ-ಪ್ರತಿಕಾರ ಇವುಗಳ ನಡುವೆ ಹೆಡೆ ಆಡಿಸಿ, ಎದೆ ಏರಿಸಿ ನಿಂತು ತಮ್ಮ ದೇಶವನ್ನು ನಾನಾ ಬಗೆಯ ಸಂಕಟಗಳಿಂದ ಪಾರು ಮಾಡಿದ ಚರ್ಚಿಲರ ಮುಖ ಪಾರ್ಲಿಮೆಂಟಿನಿಂದ ಮರೆಯಾಯಿತು.

---

* ೧೯೬೪ ರ ಆಗಸ್ಟ್ ತಿಂಗಳಲ್ಲಿ.

ತೊಂಬತ್ತರ ಮುಪ್ಪಿನಲ್ಲೂ ಚರ್ಚಿಲರಿಗೆ ಪಾರ್ಲಿಮೆಂಟ್ ಹಾಜರಿ ನಿತ್ಯವಿಧಿಯಾಗಿತ್ತು. ಅದರ ಅಧಿವೇಶನ ಇದ್ದಾಗ ಅವರು ಪ್ರತಿನಿತ್ಯವೂ ಬರುವರು. ತಮ್ಮ ಸ್ಥಾನದಲ್ಲಿ ಕೂತು ಸಭೆಯ ಕಲಾಪಗಳನ್ನು ಅವಲೋಕಿಸುವರು. ತಮ್ಮ ಮುಂದಿನ ಪೀಳಿಗೆಯ ಜನ ಯಾವ ರೀತಿ ದೇಶವನ್ನು ನಡಸುವರೆಂಬುದನ್ನು ಕುತೂಹಲದಿಂದ ಈಕ್ಷಿಸುವರು. ಪ್ರಪಂಚದಲ್ಲೇ ಅತ್ಯಂತ ಹಳೆಯದಾದ ಈ ಪ್ರಜಾಪ್ರಭುತ್ವದ ಮುಂದೆ ಇರುವ ಕವಲು ದಾರಿಯತ್ತ ಕಣ್ಣು ಹಾಯಿಸುವರು. ಅನಂತರ ನಿರ್ಗಮಿಸುವರು. ಹೀಗಿತ್ತು ಅವರ ದಿನಚರಿ.

ಅವರು ಕೊನೆಯ ಬಾರಿಗೆ ಪಾರ್ಲಿಮೆಂಟ್ ಭವನ ಪ್ರವೇಶಿಸಿದಾಗಲೂ ಏನೂ ವ್ಯತ್ಯಾಸ ಕಾಣಲಿಲ್ಲ. ಅದೇ ಸಭೆ. ಅದೇ ಮುಖ. ಇನ್ನು ಮುಂದೆಯೂ ಎಂದಿನಂತೆ ನಡೆದುಕೊಂಡು ಹೋದೀತು—ಎಂಬಂಥ ವರ್ತನೆ.

ಹೊರಗೆ ಮಾತ್ರ ವ್ಯತ್ಯಾಸ. ಹೊರಗೆ ಸೇರಿದ್ದ ಸಾಮಾನ್ಯ ಜನ ಚರ್ಚಿಲರ ಆಗಮನ-ನಿರ್ಗಮನಗಳ ಸಮಯದಲ್ಲಿ ಅನೇಕ ಕಂಠಗಳಿಂದ ಜಯಕಾರ ಮಾಡಿದರು. ಚರ್ಚಿಲರ ಬಾಯಲ್ಲಿ ಎಂದಿನಂತೆ ಅವರ ಪ್ರೀತಿಯ ಚುಟ್ಟಾ.

ಪಾರ್ಲಿಮೆಂಟಿನ ಒಳಗಡೆ ಈ ಭೀಷ್ಮ ರಾಜಕಾರಣಿಯ ಮುಂದೆ ತಮ್ಮ ಭಾವನೆಗಳನ್ನು ಪ್ರಕಟಪಡಿಸಲು ಉಳಿದ ಸದಸ್ಯರಿಗೆ ಅಂಜಿಕೆ. ಇದರಿಂದ ಈ ಮುದುಕ ಉದ್ವೇಗ ಗೊಂಡಾರು, ಇವರಿಗೆ ಆಯಾಸವಾದೀತು—ಎಂಬ ಆತಂಕ. ಆದರೆ ಇವರ ನಿರ್ಗಮನಾನಂತರ ಆ ಸದಸ್ಯರು ತಮ್ಮ ಅಭಿಮಾನ ಗೌರವಗಳನ್ನು ವ್ಯಕ್ತಪಡಿಸಿ ನಿರ್ಣಯ ಮಾಡಿದರು. ಅದನ್ನು ಇವರಿಗೆ ಪಾರ್ಲಿಮೆಂಟಿನ ಹಿರಿಯರೇ ತಲುಪಿಸಿದರು. ಬ್ರಿಟಿಷ್ ಪಾರ್ಲಿಮೆಂಟಿನ ದೀರ್ಘ ಇತಿಹಾಸದಲ್ಲೇ ಇಂಥ ಗೌರವ ಸಂದಿರುವುದು ಇವರಿಗೆ ಮಾತ್ರ—ನೆಪೋಲಿಯನ್ನನನ್ನು ಸೋಲಿಸಲು ಕಾರಣರಾದ ಮೊದಲನೆಯ ವೆಲಿಂಗ್ಟನ್ ಡ್ಯೂಕರನ್ನು ಬಿಟ್ಟರೆ.

ಭಾರತೀಯರಾದ ನಾವು ಚರ್ಚಿಲರನ್ನು ಟೀಕಿಸಲು ಹಲವು ಕಾರಣಗಳುಂಟು. ಆದರೆ ನೆನಪಿನಲ್ಲಿಟ್ಟಿರಬೇಕಾದ ಒಂದು ವಿಚಾರವುಂಟು. ಈ 'ಉದ್ಧತ' ರಾಜಕಾರಣಿಯ ನಾಯಕತ್ವ ದ್ವಿತೀಯ ಯುದ್ಧಕಾಲದಲ್ಲಿ ಬ್ರಿಟನ್ನಿಗೆ ಲಭಿಸದಿದ್ದರೆ ಈ ವೇಳೆಗೆ ಬಹುಶಃ ಸ್ವಾತಂತ್ರ್ಯವೆಂಬುದೇ ಸತ್ತು ಎಷ್ಟೋ ವರ್ಷವಾಗಿರುತ್ತಿತ್ತು. ಹಿಟ್ಲರನ ಸೇನೆ ಲಂಡನ್-ಮಾಸ್ಕೋ-ವಾಷಿಂಗ್ಟನ್ನುಗಳನ್ನು ತಲುಪ

ದಂತೆ, ಫ್ಯಾಸಿಸ್ಟರ ದುರಾಕ್ರಮಣ ಜಗತ್ತನ್ನೆಲ್ಲ ಆವರಿಸದಂತೆ, ತಡೆದ ಕೀರ್ತಿ ಚರ್ಚಿಲರದು.

೧೯೪೦ ರ ದಶಕದ ಆದಿಕಾಲವನ್ನು ನೆನಸಿಕೊಳ್ಳಿ. ನಾಜಿ ಸೈನ್ಯ ಫ್ರಾನ್ಸ್, ಬೆಲ್ಜಿಯಂ ಹಾಲೆಂಡುಗಳನ್ನು ನುಂಗಿತ್ತು. ಇಂಗ್ಲೆಂಡನ್ನು ಕಬಳಿಸುತ್ತೇನೆ—ಎಂದು ಹಿಟ್ಲರ್ ಹೆದರಿಸುತ್ತಿದ್ದ. ಅದಕ್ಕೆ ಸಿದ್ಧತೆಯೂ ನಡೆದಿತ್ತು. ಇನ್ನೇನು ಒಂದೇ ನೆಗೆತ. ಬಾಂಬಿನ ಸುರಿಮಳೆ. ಬ್ರಿಟನ್ ಏಕಾಕಿ. ಚರ್ಚಿಲ್ ಹಿಂದೆಗೆಯಲಿಲ್ಲ.

ಅವರು ಪ್ರತಿಜ್ಞೆ ಮಾಡಿದರು. 'ನಾವು ನಮ್ಮ ದ್ವೀಪವನ್ನು ರಕ್ಷಿಸುತ್ತೇವೆ—ಶತಾಯುಗತಾಯು! ಕಡಲ ತಡಿಯ ಮೇಲೆ, ನೆಲದ ಮಡಿಲ ಮೇಲೆ, ಹೊಲದ ಒಡಲಿನಲ್ಲಿ, ಬೀದಿ ಬೀದಿಯಲ್ಲಿ, ಬೆಟ್ಟ ಗುಡ್ಡಗಳಲ್ಲಿ ಕಾದಾಟ ನಡಸಿಯೇವು. ಎಂದಿಗೂ ನಾವು ಶರಣಾಗುವುದಿಲ್ಲ.'

'ನಮ್ಮ ಕರ್ತವ್ಯ ಮಾಡಲು ಟೊಂಕ ಕಟ್ಟೋಣ. ಇನ್ನು ಸಾವಿರ ವರ್ಷ ಕಾಲ ನಮ್ಮ ಸಾಮ್ರಾಜ್ಯ. ನಮ್ಮ ರಾಷ್ಟ್ರಕೂಟ ಉಳಿಯಬೇಕು. ಇದನ್ನು ಜ್ಞಾಪಕದಲ್ಲಿಡೋಣ. ಆಗಿನ ಜನ ನಮ್ಮ ವಿಚಾರವಾಗಿ ಹೇಳಿಯಾರು—ಎಂಥ ಅಮರಗಳಿಗೆಯಲ್ಲಿ ನಾವು ಬದುಕಿದ್ದೆವೆಂಬುದನ್ನು!'

ಈ ಮುಂಡನೆಯ ಬಕ್ಕತಲೆಯ ಸ್ಥಾಣುಮೂರ್ತಿ ಆ ವಿಷ ಘಳಿಗೆಯಲ್ಲಿ ಕೂರ್ಮನಂತೆ ಬ್ರಿಟನ್ನನ್ನು ಎತ್ತಿ ಹಿಡಿದುನಿಂತರು. ಬಾಯಲ್ಲಿ ಚುಟ್ಟಾ. ಕೈಯ ಎರಡು ಬೆರಳು ಅಗಲಿಸಿ ಎತ್ತಿ ಹಿಡಿದು ತೋರಿಸುತ್ತಿದ್ದ ವಿಜಯ ಸಂಕೇತ—'V' ಎಂಬ ಚಿಹ್ನೆ. ಈ ಚರ್ಚಿಲ್ ದೋರ್ದಂಡದ ಮುಂದೆ ಹಿಟ್ಲರನ ಅಸ್ತ್ರಗಳು ಏನೂ ಮಾಡಲಾರವಾದವು. ಬ್ರಿಟಿಷ್ ಕೈಗಾರಿಕೆಯ ಕಾಮಧೇನು ಹಿಟ್ಲರನ ಕೈಗೆ ಸಿಕ್ಕಲಿಲ್ಲ. ಬ್ರಿಟನ್ ದಕ್ಕಲಿಲ್ಲ. ಚರ್ಚಿಲ್ ಜಗ್ಗಲಿಲ್ಲ.

ಹಿಟ್ಲರನ ವಿರುದ್ಧ ಸಜ್ಜುಗೊಳ್ಳಲು ಅಮೆರಿಕಾ-ರಷ್ಯಾಗಳಿಗೆ ಅಗತ್ಯವಾದ ಅವಕಾಶ ಸಿಕ್ಕಿತು.

ಚರ್ಚಿಲರ ವ್ಯಕ್ತಿತ್ವವನ್ನು ವರ್ಣಿಸುವುದು ಸುಲಭವಲ್ಲ. ಅವರು ಎತ್ತಿದ್ದು ಹಲವು ಜನ್ಮ. ಬೆಕ್ಕಿಗೆ ಒಂಬತ್ತು ಜನ್ಮವಂತೆ. ಹಾಗೆಂದು ಒಂದು ನಂಬಿಕೆ ಪಾಶ್ಚಾತ್ಯರಲ್ಲಿ. ಈ ಮೊಂಡ ರಾಜಕಾರಣಿ ಬಿದ್ದು ಮೇಲೆದ್ದದ್ದು ಹಲವು ಸಾರಿ. ಎಷ್ಟೋ ಸಲ ಇವರು ಇತರರ ಭರ್ತ್ಸನೆಗೆ ಗುರಿಯಾಗಿದಾರೆ. ಎಷ್ಟೋ ಸಲ ಇತರ

ವಿರೋಧಿಗಳು ಈ ಮನುಷ್ಯನ ಕತೆ ತೀರಿತು—ಎಂದುಕೊಂಡಿದಾರೆ. ಅಂತ್ಯ ಸಂಸ್ಕಾರ ಮುಗಿಯುವ ಮುನ್ನ ಎದ್ದು ಕುಳಿತ ಮೃತಶರೀರದಂತೆ ಈತ ಎದ್ದು ಸೆಣಸಾಡಿ ಎದುರಾಳಿಗಳನ್ನು ದಂಗುಬಡಿಸಿದಾರೆ. ಭಂಡ ಎನ್ನುವಿರೇನೋ ನೀವು. ಭಂಡ, ಉದ್ದಂಡ, ಮೊಂಡ—ಏನು ಬೇಕಾದರೂ ಹೇಳಿ. ಅಂತೂ ಈತ ಪ್ರಚಂಡ.

ಚರ್ಚಿಲರು ಹುಟ್ಟಿದ್ದು ೧೮೭೪ರ ನವೆಂಬರ್ ಮೂವತ್ತರಂದು. ಅವರ ತಾತ ಮಾರ್ಲ್‌ಬರೋನ ಏಳನೆಯ ಪ್ರಭು. ತಂದೆ ಲಾರ್ಡ್ ರ್‍ಯಾಂಡಲ್ಫ್ ಚರ್ಚಿಲ್. ತಾಯಿ ಜೆನ್ನಿ ಜೆರೋಮ್—ಅಮೆರಿಕನ್ ಸುಂದರಿ.

ಹುಡುಗ ವಿನ್‌ಸ್ಟನ್ ಬಹಳ ತುಂಟ. ಮೇಷ್ಟ್ರಿಗೂ ಈತನಿಗೂ ಶಾಲೆಯಲ್ಲಿ ತಿಕ್ಕಾಟ. ಪಾಠ? ಕೇಳಲೇಬೇಡಿ. ಹಾಗೂ ಹೀಗೂ ಮುಂದೆ ದಬ್ಬಿದ್ದಾಯಿತು.

ಆಮೇಲೆ ಇವರು ಸೈನ್ಯ ಸೇರಿ ಕಾದಾಡಿದರು. ಫಿರಂಗಿಯ ಗುಂಡೆಂದರೆ ಇವರಿಗೆ ಬಹಳ ಇಷ್ಟ. ಆದರೆ ಏನಾಯಿತೋ ಏನೋ. ಸಾಕು, ಸಿಪಾಯಿಯ ಕೆಲಸ—ಎಂದು ತೀರ್ಮಾನಿಸಿದರು. ರಾಜಕೀಯದಲ್ಲಿ ಕೈಹಾಕೋಣ—ಎಂದುಕೊಂಡರು.

ಇಪ್ಪತ್ತೈದನೆಯ ವಯಸ್ಸಿನಲ್ಲಿ ಪಾರ್ಲಿಮೆಂಟಿಗೆ ಸ್ಪರ್ಧಿಸಿದರು. ಸೋತರು. ಆಫ್ರಿಕದ ಬೋಯರ್ ಯುದ್ಧದ ವರದಿ ಮಾಡಲು ನೇಮಕವಾಗಿ ಅಲ್ಲಿಗೆ ಹೋದರು. ಹೋದಲ್ಲಿ ತಮ್ಮ ಪ್ರಭಾವ ತೋರಿಸದೆ ಬಿಟ್ಟಾರೆ, ಇವರು? ಸೆರೆಸಿಕ್ಕಿದರು. ಅದ್ಭುತವಾದ ರೀತಿಯಲ್ಲಿ ಬಂಧನದಿಂದ ಪಾರಾಗಿ ಬಂದರು. ಕೇವಲ ಕೆಲವು ವಾರಗಳ ಹಿಂದೆ ಚುನಾವಣೆಯಲ್ಲಿ ಸೋತಿದ್ದ ಈ ಅನಾಮಕ ಈಗ ರಾಷ್ಟ್ರವೀರನಾದ.

ಅನಂತರ ನಡೆದ ಚುನಾವಣೆಗೆ ಇವರು ಮತ್ತೆ ನಿಂತರು. ಆಗ ಇವರಲ್ಲದೆ ಇನ್ನು ಯಾರಿಗೆ ತಾನೇ ವಿಜಯ?

ಆಗಲೂ ಚರ್ಚಿಲರದು ಕನ್ಸರ್ವೆಟಿವ್ ಪಕ್ಷ. ಆದರೆ ತಮ್ಮ ಪಕ್ಷದ ಇತರರಷ್ಟು ಪ್ರತಿಗಾಮಿಯಾಗಿರಲಿಲ್ಲ ಇವರು ಆಗ. ಮೂರು ವರ್ಷ ಕಳೆಯುವಷ್ಟರಲ್ಲೇ ಇವರು ಆ ಪಕ್ಷ ತ್ಯಜಿಸಿ ಸ್ವಲ್ಪ ಉದಾರ ದೃಷ್ಟಿಯ ಲಿಬರಲ್ ಪಕ್ಷಕ್ಕೆ ಸೇರಿಕೊಂಡರು. ಇನ್ನು ಮೂರು ವರ್ಷಕ್ಕೆ ಆ ಪಕ್ಷ ಬಹುಮತ ಗಳಿಸಿ ಅಧಿಕಾರಕ್ಕೆ ಬಂತು. ಆದರಲ್ಲಿ ಇವರಿಗೆ ಉಪಮಂತ್ರಿ ಪದವಿಯೂ ಸಿಕ್ಕಿತು.

ಅದೃಷ್ಟ ಬಂದರೆ ಒಂದಾದ ಮೇಲೊಂದು ಬಂದು ಬಡಿಯುತ್ತದೆ. ಆಮೇಲೆ ಎರಡು ವರ್ಷಕ್ಕೆ ಇವರು ಚೆಲುವೆಯೊಬ್ಬಳ ಕೈ ಹಿಡಿದರು. ಅಲ್ಲಿಂದ ಮುಂದೆ ಸುಖ ಸಂಕಥಾ ವಿನೋದದಿಂದ ಬಾಳಿದೆ—ಎಂದು ಅವರೇ ಹೇಳಿಕೊಂಡಿದ್ದಾರೆ.

ಇನ್ನೂ ಮೇಲೇರಿದರು ಚರ್ಚಿಲ್. ಪ್ರಥಮ ಮಹಾಯುದ್ಧ ಆರಂಭವಾಗುವುದಕ್ಕೆ ನಾಲ್ಕು ವರ್ಷ ಮುಂಚೆ ಅವರು ಗೃಹಸಚಿವ ಪದವಿಗೇರಿದರು.

ಅವರೇನೋ ತಾವು ಬಹಳ ಉದಾರಿ ಎಂದು ತಿಳಿದುಕೊಂಡಿದ್ದರು. ಆದರೆ ವಾಸ್ತವವಾಗಿ ಅವರದು ಇದಕ್ಕೆ ಭಿನ್ನವಾದ ಗುಣ. ಅವರಿಗೆಯುದ್ಧ ವೆಂದರೆ ತುಂಬಾ ಪ್ರೀತಿ. ಸದ್ದುಗದ್ದಲ ಇಲ್ಲದ ದೀರ್ಘಶಾಂತಿ ಅವರಿಗೆ ತ್ರಾಸದಾಯಕ. ಯುದ್ಧದ ಬೆದರು ಕನ್ನಡಿಯ ಮೂಲಕ ಜೀವನವನ್ನು ನೋಡುವುದೇ ಅವರಿಗೆ ಇಷ್ಟ.

ಅವರು ಗೃಹಮಂತ್ರಿಯಾಗಿದ್ದಾಗ ಕಾರ್ಮಿಕರು ಎರಡು ಸಾರಿ ಸಂಪು ಹೂಡಿದ್ದರು. ಆಗ ಅವರು ಅದನ್ನು ಅಡಗಿಸಲು ಸೈನ್ಯವನ್ನೇ ಕರಸಿದರು!

ಒಮ್ಮೆ ಅವರು ಬ್ರಿಟನ್ನಿನ ದೊಡ್ಡ ನಕ್ಷೆಯ ಮೇಲೆ ಆಯಕಟ್ಟಿನ ಸ್ಥಾನಗಳನ್ನು ಗುರುತಿಸಿ, ಎಲ್ಲೆಲ್ಲಿ ದಂಡು ನಿಲ್ಲಿಸಬೇಕೆಂದು ಲೆಕ್ಕ ಹಾಕುತ್ತಿದ್ದರು. ಅನುಯಾಯಿಯೊಬ್ಬರು ಅವರ ಕೊಠಡಿ ಪ್ರವೇಶಿಸಿದಾಗ ಚರ್ಚಿಲರು ಅವರನ್ನು ಕುರಿತು ಕೇಳಿದರಂತೆ—'ಹೇಗಿದೆ, ಜಾನ್, ನನ್ನ ಸೇನಾ ವಿತರಣೆ?' ಎಂದು. ಕಾರ್ಮಿಕರ ಸಂಪು ಅಡಗಿಸಲು ಈ ಸಿದ್ಧತೆ! ಚರ್ಚಿಲರ ಈ ನಡತೆ ನೋಡಿ ಜಾನರ ಮೈ ನಡುಗಿರಬೇಕು: 'ಯಾವುದೋ ಕಾಫಿ ಅಂಗಡಿಯ ಜಗಳಾನ ಸಾಮಾಜಿಕ ಕ್ರಾಂತಿ ಎಂತ ಭ್ರಮಿಸಿದೀರಲ್ಲ ನೀವು!' ಎನ್ನುತ್ತ ಅವರು ಜೋರಾಗಿ ಕೋಣೆಯ ಬಾಗಿಲು ಹಾಕಿ ಹೊರನಡೆದರಂತೆ.

೧೯೧೪ರಲ್ಲಿ ಪ್ರಥಮ ಮಹಾಯುದ್ಧವನ್ನು ಪ್ರವೇಶಿಸುವುದು ಅನಿವಾರ್ಯವೆಂದು ಬ್ರಿಟಿಷ್ ಮಂತ್ರಿಮಂಡಲ ತೀರ್ಮಾನಿಸಿದಾಗ ಚರ್ಚಿಲರಿಗೆ ತಮ್ಮ ವ್ಯಕ್ತಿತ್ವ ಪ್ರದರ್ಶನಕ್ಕೆ ಸದವಕಾಶ ಒದಗಿ ಬಂತು. ಆಗ ಅವರು ಬ್ರಿಟನ್ನಿನ ನೌಕಾ ಸಚಿವರಾಗಿದ್ದರು. ೧೯೧೫ರಲ್ಲಿ ಅವರು ನಿರ್ದೇಶಿಸಿದ ಕಾರ್ಯಾಚರಣೆಯೊಂದರಲ್ಲಿ ಬ್ರಿಟನ್ನಿಗೆ ಬಲವಾದ ಏಟು ಬಿತ್ತು. ಹೊಣೆಯೆಲ್ಲ ಚರ್ಚಿಲರದೇ. ಬಂತು ಅವರ ಅಧಿಕಾರಕ್ಕೆ ಸಂಚಕಾರ. ಚರ್ಚಿಲ್ ಫ್ರಾನ್ಸಿಗೆ ತೆರಳಿದರು. ಐದು ತಿಂಗಳ ಕಾಲ ಸೇನಾ ನಾಯಕರಾಗಿ ಕಂದಕಗಳಲ್ಲಿ ಕಾದಾಡಿದರು.

೧೯೧೭ರಲ್ಲಿ ಮತ್ತೆ ಬಂತು ಆಹ್ವಾನ—ಮಂತ್ರಿ ಮಂಡಲಕ್ಕೆ. ಈ ಬಾರಿ ಮದ್ದುಗುಂಡುಗಳ ಉತ್ಪಾದನಾ ಸಚಿವತ್ವ. ಈ ಹೊಸ ಅಧಿಕಾರದಲ್ಲಿ ಅವರು ಅದ್ಭುತವನ್ನೇ ಸಾಧಿಸಿದರು. ಯುದ್ಧ ಮುಗಿದ ಮೇಲೆ ಅವರ ಪ್ರಭಾವ ಹೆಚ್ಚಿತು. ಅವರಿಗೆ ಯುದ್ಧ ಸಚಿವ ಪದವಿ ಸಿಕ್ಕಿತು. ಹೊಸ ಅಧಿಕಾರದಲ್ಲಿ ಏನಾದರೂ ಮಾಡಬೇಡವೆ ಈ ಪ್ರತಿಗಾಮಿ ಪ್ರಚಂಡ? ರಷ್ಯದಲ್ಲಿ ಆಗ ಬಾಲ್ಷೆವಿಕ್ ಕ್ರಾಂತಿ. ಇವರ ಹೊಲಸು ಮುಂಗಚೇಷ್ಟೆಗೆ ತಡೆ ಹಾಕಬೇಕು—ಎಂದು ನಿರ್ಧರಿಸಿದರು. ರಷ್ಯಕ್ಕೆ ಸೈನ್ಯ ರವಾನಿಸಿದರು. ಆ ಕ್ರಾಂತಿ ಪಡೆಯ ಮುಂದೆ ಇವರ ಕಾರ್ಯಾಚರಣೆಯೇ ಮುಂಗಸಾಟವಾಯಿತು. ಇವರಿಗೆ ಮುಖಭಂಗವಾಯಿತು.

೧೯೨೨ರ ಚುನಾವಣೆ. ಸೋಲು ಕಟ್ಟಿಟ್ಟಿತ್ತು. ಇವರು ರಾಜಕೀಯ ಬಿಟ್ಟರು. ಹಂಗಾಮಿ ಸಂನ್ಯಾಸ.

ಆ ವೇಳೆಗೆ ಆಗಲೇ ಲೇಖನಿ ಆಡಿಸಿ ಪಳಗಿತ್ತು ಇವರ ಕೈ. ಪ್ರಥಮ ಮಹಾಯುದ್ಧದ ಅದ್ಭುತ ಕತೆ ಬರೆಯತೊಡಗಿದರು. ಹೆಸರು : ಜಗತ್ತಿನ ಬಿಕ್ಕಟ್ಟು.

ಎರಡು ವರ್ಷ ಕಳೆಯಿತು. ಪಾರ್ಲಿಮೆಂಟಿನ ಕರೆ ಅದಮ್ಯವಾಗಿತ್ತು. ಮತ್ತೆ ಇಳಿದರು ಸಮರರಂಗಕ್ಕೆ. ಮತ್ತೆ ತಮ್ಮ ಹಿಂದಿನ ಪಕ್ಷಕ್ಕೆ—ಕನ್ಸರ್ವೆಟಿವ್ ಪಕ್ಷಕ್ಕೆ—ಸೇರಿದರು.

ಚುನಾವಣೆ. ಗೆಲುವು. ಬಾಲ್ಡ್‌ವಿನ್ನರ ಮಂತ್ರಿಮಂಡಲದಲ್ಲಿ ಧನಾಧ್ಯಕ್ಷ ಪದವಿ.

೧೯೨೯. ಕನ್ಸರ್ವೆಟಿವ್ ಪಕ್ಷಕ್ಕೆ ಚುನಾವಣೆಯಲ್ಲಿ ಸೋಲು. ಕಾರ್ಮಿಕ ಪಕ್ಷಕ್ಕೆ ಅಧಿಕಾರ. ಪಕ್ಷದ ಅನುಯಾಯಿಗಳೊಡನೆ ಮಂತ್ರಿಸಂಪುಟದಿಂದ ಚರ್ಚಿಲ್ ನಿರ್ಗಮನ.

ಆದರೆ ಇದ್ದೇ ಇತ್ತು ಬರೆಯುವ ಕೆಲಸ. ಎಂಥ ಕೆಲಸದ ಮಧ್ಯದಲ್ಲೂ ಅವರು ಈ ನಿತ್ಯಕರ್ಮ ಬಿಟ್ಟಿರಲಿಲ್ಲ. ಈಗ ಅದೇ ಸದಾ. ವರ್ಷಕ್ಕೆ ಹತ್ತು ಲಕ್ಷ ಪದಗಳಷ್ಟು ಉತ್ಪಾದನೆ ಮಾಡುವ ಕಾರಖಾನೆ. 'ಮಾರ್ಲ್‌ಬರೋವಿನ ಜೀವನ-ಕಾಲ' ಎಂಬ ಬೃಹತ್ ಕೃತಿಯ ರಚನೆ.

ಪಾರ್ಲಿಮೆಂಟಿನ ಸ್ಥಾನ ಬಿಟ್ಟುಕೊಟ್ಟಿರಲಿಲ್ಲ ಇವರು.

ಪ್ರಥಮ ಯುದ್ಧಕ್ಕೆ ಮುಂಚೆ ಬ್ರಿಟನ್ನಿಗೆ ಎಚ್ಚರಿಕೆ ನೀಡಿದ್ದರು ಚರ್ಚಿಲ್—ಯುದ್ಧ ಬಂದೀತು, ಜೋಕೆ! ಎಂದು. ಆಗ ಸರಕಾರ ಅವರ ಮಾತು ಕೇಳಿತ್ತು. ಕೈಸರನ ದಾಳಿ ಎದುರಿಸಲು ಬ್ರಿಟಿಷ್ ನೌಕಾಬಲ ಸಿದ್ಧವಾಗಿತ್ತು.

ದ್ವಿತೀಯ ಮಹಾಯುದ್ಧಕ್ಕೆ ಮುಂಚೆಯೂ ಇವರು ನಾಜಿ ಆಕ್ರಮಣ ಕುರಿತು ಎಚ್ಚರಿಕೆ ನೀಡುತ್ತಲೇ ಇದ್ದರು. ಯುದ್ಧ ಆರಂಭವಾಗುವುದಕ್ಕೆ ಏಳು ವರ್ಷ ಮುಂಚೆಯೇ ಇವರು ಬ್ರಿಟನ್ನನ್ನು ಎಚ್ಚರಿಸಿದ್ದರು.

ಆದರೆ ಬ್ರಿಟಿಷ್ ಸರಕಾರದ ನೀತಿ ಬೇರೆಯಾಗಿತ್ತು. ೧೯೩೮ರಲ್ಲಿ ನೆವಿಲ್ ಚೇಂಬರ್ಲೇನರು ಹಿಟ್ಲರನ ನೆಲದ ದಾಹವನ್ನು ಸೌಮ್ಯಮಾರ್ಗದಿಂದ ಅಡಗಿಸಲು ಯತ್ನಿಸಿದರು.

ಬಕಾಸುರನಿಗೆ ದಿನಕ್ಕೊಂದು ಗಾಡಿ ಅನ್ನ; ದಿನಕ್ಕೊಬ್ಬ ಮನುಷ್ಯನ ಬಲಿ!

ತಾವು ಮಾಡಿಕೊಂಡ ಮ್ಯೂನಿಚ್ಚಿನ ಅವಮಾನಕರ ಒಪ್ಪಂದವನ್ನು ಚೇಂಬರ್ಲೇನ್ ಹೊಗಳಿಕೊಂಡರು. ನಮ್ಮ ಕಾಲದಲ್ಲಿ ಶಾಂತಿ ಸ್ಥಾಪಿಸುವುದು ಸಾಧ್ಯವಾಯಿತು—ಎಂದುಕೊಂಡರು.

ಆದರೆ ಚರ್ಚಿಲ್ ಅಭಿಪ್ರಾಯ ಬೇರೆಯಾಗಿತ್ತು.

ಅವರು ಹೇಳಿದರು: 'ನಿಮಗೆ ಇದ್ದದ್ದು ಎರಡೇ ಮಾರ್ಗ: ಯುದ್ಧ ಅಥವಾ ಅವಮಾನ. ನೀವು ಅವಮಾನದ ಹಾದಿ ಹಿಡಿದಿರಿ. ಯುದ್ಧವನ್ನೇ ಪಡೆಯುತ್ತೀರಿ.'

ಈ ಬಾರಿ ದೇಶ ಚರ್ಚಿಲರ ಮಾತು ಕೇಳಲಿಲ್ಲ. ಹಿಟ್ಲರ್ ೧೯೩೯ರಲ್ಲಿ ಪೋಲೆಂಡ್ ಆಕ್ರಮಣದ ಮೂಲಕ ವಿಶ್ವಯುದ್ಧದ ಸಿಡಿಮದ್ದಿನ ಮನೆಗೆ ಕೊಳ್ಳಿ ಇಟ್ಟಾಗ ಬ್ರಿಟನ್ನು ಸಂಪೂರ್ಣವಾಗಿ ಅಸಿದ್ಧವಾಗಿತ್ತು.

ಚೇಂಬರ್ಲೇನರು ಚರ್ಚಿಲರನ್ನು ನೌಕಾಶಾಖಾ ಮಂತ್ರಿಯಾಗಿ ನೇಮಿಸಿದರು.

ಮುಂದಿನ ಎಂಟು ತಿಂಗಳಲ್ಲಿ ಚರ್ಚಿಲ್ ಬ್ರಿಟನ್ನಿನ ಪ್ರಧಾನಿಯಾದರು.

"ನಾನೇನು ಕೊಡಲಿ, ನಿಮಗೆ–ರಕ್ತ, ದುಡಿಮೆ, ಕಣ್ಣೀರು ಬೆವರು ಇವುಗಳನ್ನಲ್ಲದೆ?" ಎಂದು ಅವರು ತಮ್ಮ ಜನತೆಗೆ ಹೇಳಿದರು.

"ಬನ್ನಿ ಮತ್ತೆ! ಎಲ್ಲರೂ ದುಡಿಯೋಣ—ನಮ್ಮ ಗುರಿ ಸಾಧಿಸಲು! ಯುದ್ಧರಹಿತ ವಿಶ್ವವನ್ನು ಸೃಷ್ಟಿಸಲು."

"ಎಲ್ಲ ಯುದ್ಧವನ್ನೂ ಕೊನೆಗೊಳಿಸುವ ಯುದ್ಧ!"

ಚರ್ಚಿಲರು ಬ್ರಿಟನ್ನಿನ ಸಾವು ಬದುಕಿನ ಹೋರಾಟದ ನಾಯಕತ್ವ ವಹಿಸಿದ್ದರು. ಅದು ಅವರ ಜೀವನದ ರಸಘಳಿಗೆ.

ಚರ್ಚಿಲ್—ರೂಸ್ವೆಲ್ಟ್–ಸ್ಟಾಲಿನ್ ಸಹಯೋಗದ ಮುಂದೆ ಹಿಟ್ಲರನ ಸೇನೆ ಕುಸಿಯಿತು.

ದ್ವಿತೀಯ ಮಹಾಯುದ್ಧದ ಹಲವು ಅಮರ ಸನ್ನಿವೇಶಗಳು ಚರ್ಚಿಲರ ಜೀವನದೊಂದಿಗೆ ಹೆಣೆದುಕೊಂಡುವು.

ಯೂರೋಪಿನಲ್ಲಿ ಯುದ್ಧ ಕೊನೆಗೊಂಡಿತು. ಏಷ್ಯದ ರಂಗದಲ್ಲೂ ಮುಗಿಯಿತು. ಗೆದ್ದು ಗಲಿತವಾದ ಬ್ರಿಟನ್ನಿನ ಪುನರ್ನಿರ್ಮಾಣ ದೊಡ್ಡ ಸಮಸ್ಯೆ.

ಯುದ್ಧ ಕಾಲದಲ್ಲಿ ಕೆಚ್ಚಿನಿಂದ ಕಾದಾಡಿದ ಬ್ರಿಟಿಷ್ ಜನ ತಮಗೆ ಜಯ ತಂದುಕೊಟ್ಟ ಪ್ರೀತಿಯ ವಿನ್ನಿಯನ್ನು ಕೃತಜ್ಞತೆಯಿಂದ ಕಂಡರು. ಆದರೆ ಯುದ್ಧದ ಚದುರಂಗದಲ್ಲಿ ನುರಿತ ಈ ಕೈಗೆ ಶಾಂತಿ ರೂಢಿಸುವ ಕಲೆ ಗೊತ್ತಿಲ್ಲವೆಂಬುದನ್ನು ಜನ ಮರೆಯಲಿಲ್ಲ. ಅವರು ಚರ್ಚಿಲರನ್ನು ಗದ್ದುಗೆಯಿಂದ ಇಳಿಸಿದರು. ಹೊಸ ಸಮಾಜ ನಿರ್ಮಾಣದ ಹೊಣೆಗಾರಿಕೆಯನ್ನು ಲೇಬರ್ ಪಕ್ಷಕ್ಕೆ ವಹಿಸಿಕೊಟ್ಟರು.

ಚರ್ಚಿಲ್ ಎದೆಗುಂದಲಿಲ್ಲ. ಬಂದೂಕ ಇಲ್ಲದಿದ್ದರೆ ಬರೆವಣಿಗೆ ಇಲ್ಲವೆ ?

ಬರೆಯುವ ಮೇಜಿನ ಮುಂದೆ ಮೈ ಬಗ್ಗಿಸಿ ಕುಳಿತರು ಚರ್ಚಿಲ್. ದ್ವಿತೀಯ ಮಹಾಯುದ್ಧವನ್ನು ಕುರಿತ ಮೇರುಕೃತಿ ಹೊರಬಿತ್ತು. ಇಟ್ಟಿಗೆಯ ಕಟ್ಟಡ ಕಟ್ಟುವುದೆಂದರೆ ಅವರಿಗೆ ತುಂಬಾ ಪ್ರೀತಿ. ಇದು ಒಂದು ಹಳೆಯ 'ಖಯಾಲಿ'. ಇಟ್ಟಿಗೆ ಪೇರಿದಂತೆ ಗ್ರಂಥ ಸಂಪುಟಗಳನ್ನು ಪೇರಿದರು ಅವರು. ಕುಂಚ ಹಿಡಿದು ಚಿತ್ರ ಬರೆದರು. ಅಶ್ವಹೃದಯಿ, ಜೀವನೋಲ್ಲಾಸಿ. ಚರ್ಚಿಲರಿಗೆ ಒಂದೆ ಎರಡೇ ಹವ್ಯಾಸ? ಅವರ ಪ್ರೀತಿಯ ಕುದುರೆ ಇಂಗ್ಲೆಂಡಿನಲ್ಲೇ ಬಲು ಚುರುಕು. ಓಡಾಟ, ಭಾಷಣ, ಊಟ, ಪಾನ—ಯಾವುದರಲ್ಲೂ ಕಡಿಮೆಯಿಲ್ಲ ಚರ್ಚಿಲ್.

ಚರ್ಚಿಲರ ಜಾಯಮಾನ ದೊಡ್ಡದು. ಜೀವನವೋ—ವಿವಿಧ ವರ್ಣಮಯ. ಹನ್ನೆರಡು ಜನರ ಜೀವನವನ್ನು ಸೇರಿಸಿದರೆ ಅವರ ಒಂದಕ್ಕೆ ಸಮವಾದೀತೋ ಇಲ್ಲವೋ! ಅಂಥ ಅಸಾಮಾನ್ಯ ಪುರುಷ. ನೆಪೋಲಿಯನ್ನನ ಶೌರ್ಯ. ಪುರುಷ ಸರಸ್ವತಿಯ ಪುಸ್ತಕ ಜ್ಞಾನ. ಪತ್ರಿಕೋದ್ಯಮಿಯ ಸಿದ್ಧಹಸ್ತ. ಅಪ್ರತಿಮ ಭಾಷಣಕಾರ. ಚಿತ್ರಪ್ರಿಯ. ರಾಜಕಾರ್ಯ ಚತುರ. ಮೇಧಾವಿ ನಾಯಕ. ಹೀಗೆ ಇವರ ಹೆಸರಿನ ಮುಂದೆ ನಾನಾ ಗುಣ ಹವ್ಯಾಸ ಉದ್ಯೋಗಗಳ ಹೆಸರು ಸೇರಿಸಬಹುದು. ಇವರಷ್ಟು ದೀರ್ಘಕಾಲ ಪಾರ್ಲಿಮೆಂಟಿನಲ್ಲಿ ಕುಳಿತು ಪ್ರಜಾಪ್ರಭುತ್ವದ

ಹಾದಿಯಲ್ಲಿ ಹಲವು ಮೈಲುಗಲ್ಲುಗಳನ್ನು ನೆಟ್ಟವರು ಇನ್ನೊಬ್ಬರಿಲ್ಲ.

ಚರ್ಚಿಲ್ ಏಕಾಂಗವೀರ. ಉಳಿದವರೆಲ್ಲ ಕುಬ್ಜರು—ಇವರ ಭುಜಕ್ಕೂ ಬರಲಾರದಷ್ಟು! ಜತೆಯವರನ್ನು ಮೆಟ್ಟಿ ನಿಲ್ಲುವಂಥ ಸ್ವಭಾವ. ಇತರರ ಅಭಿಪ್ರಾಯಕ್ಕೆ ಮಣಿಯದ ಹಠ. ಇತರರದೆಲ್ಲ ತಪ್ಪು! ತಮ್ಮೊಬ್ಬರದೇ ಸರಿ. ಆದ್ದರಿಂದ ಇತರರನ್ನೇನು ಕೇಳಬೇಕು? ಹೇಳುವುದಷ್ಟೇ ಕೆಲಸ. ಇದು ನನ್ನ ತೀರ್ಮಾನ. ಇದು ಸರಿ ಎನ್ನುವುದಕ್ಕೆ ಕಾರಣ ಬೇಕೋ? ತೆಗೆದುಕೊಳ್ಳಿ: ಒಂದು....ಎರಡು....ಮೂರು....ಅವರ ಜೀವನವೇ ಒಂದು ಭಾಷಣ—ಒಂದು ದೀರ್ಘಭಾಷಣ. ಸಂಭಾಷಣೆಯೆಂಬುದೇ ಇಲ್ಲ ಅವರ ಬಳಿ. ನಿರ್ದಯ ನಿಷ್ಠುರತೆ. ಅವರ ಅತಿಯಾದ ಗಾಂಭೀರ್ಯ ಒಮ್ಮೊಮ್ಮೆ ಹಾಸ್ಯಾಸ್ಪದವೆನಿಸುತ್ತಿತ್ತು. ಆದರೂ ತಡವರಿಸದ ಸ್ವಯಂ ಪ್ರಜ್ಞೆ. ಗಂಟು ಮುಖ. ನಿರ್ಧಾರದ ದಪ್ಪ ತುಟಿ. ಇತರರ ಬಗ್ಗೆ ತಾತ್ಸಾರದ ಬಣ್ಣ ಬೆರೆತ ನಸುನಗೆ. ಅವರ ಬಗ್ಗೆ ಲಾರ್ಡ್ ಆಕ್ಸ್‌ಫರ್ಡ್ ಹೀಗೆ ಹೇಳಿದರಂತೆ: ವಿವೇಚನೆ ಇಲ್ಲದ ಪ್ರಚಂಡ ಪ್ರತಿಭೆ ಈತನಿಗೆ!

ಇಂಥ ಮನುಷ್ಯ ಯುದ್ಧ ಕಾಲಕ್ಕೇ ಸರಿ—ಎಂದು ಬ್ರಿಟಿಷ್ ಜನತೆ ತೀರ್ಮಾನಿಸಿದ್ದು ಆಶ್ಚರ್ಯವಲ್ಲ. ಅನಂತರ ಬಂದ ಲೇಬರ್ ಸರಕಾರ ಆದರ್ಶದ ಹಾದಿಯಲ್ಲಿ ಮುನ್ನಡೆಯಿತು; ಗತಕಾಲದ ಸಮಾಜದ ಸೊಟ್ಟಗಳನ್ನು ಸರಿಪಡಿಸಲು ಟೊಂಕ ಕಟ್ಟಿತು. ಸಾಮ್ರಾಜ್ಯದ ಕೊಂಬೆ ರೆಂಬೆ ಕತ್ತರಿಸಿ ಬೇರೆ ಬೇರೆ ನೆಟ್ಟದ್ದಾಯಿತು—ತಾಯಿ ಮರದ ಸುತ್ತಲೇ. ರಾಷ್ಟ್ರೀಕರಣದ ಹೆದ್ದಾರಿಯನ್ನು ಹಾಕಿದ್ದಾಯಿತು.

ಆದರೆ ಹೊಸದನ್ನು ಸೃಷ್ಟಿಸುವ ಉತ್ಸಾಹ ಒಂದಾದರೆ ಅದನ್ನು ಮುರಿಯುವ ಪ್ರವೃತ್ತಿ ನೂರಾರು. ತೊಡಕು ಹಲವಾರು. ಎಲ್ಲವೂ ನೆಟ್ಟಗಾಗಲಿಲ್ಲ ಎಂಬ ನೋವು. ಬಯಸಿದ್ದು ಆಗಲಿಲ್ಲ—ಎಂಬ ಅಸಹನೆ. ಕಾರ್ಮಿಕ ಸರಕಾರ ಹೋಗಿ ಮತ್ತೆ ಕನ್ಸರ್ವೇಟಿವ್ ಪಕ್ಷ ಅಧಿಕಾರಕ್ಕೆ ಬಂತು. ಪ್ರಧಾನಿಯ ಪಟ್ಟ ಚರ್ಚಿಲರಿಗಲ್ಲದೆ ಬೇರೆ ಯಾರಿಗೆ?

ಎಪ್ಪತ್ತೇಳು ವರ್ಷದ ಈ ಮೂರ್ತಿ ತಮ್ಮ ಮುದಿ ಹೆಗಲಿನ ಮೇಲೆ ಬ್ರಿಟನ್ನಿನ ಭಾರವನ್ನು ಮತ್ತೆ ಹೊತ್ತರು. ದೊಡ್ಡ ಸಾಮ್ರಾಜ್ಯ ಇದ್ದು, ನೂರು ಕಡೆಯಿಂದ ಹುಟ್ಟು ಹಾಕುವ ಅಂಬಿಗರ ಸಹಾಯ ಇದ್ದಾಗ ಬ್ರಿಟಾನಿಯಾ ನೌಕೆಯನ್ನು ನಡಸುವುದು ಸುಲಭವಾಗಿತ್ತು. ಆದರೆ ಈಗ ಅವರೆಲ್ಲರ ಸಹಾಯವಿಲ್ಲ. ಚರ್ಚಿಲ

ರಂತೆಯೇ ಬ್ರಿಟನ್ನಿಗೂ ಮುಪ್ಪು ಕವಿದಿತ್ತು. ಮೆಟ್ಟಿಲು ಮೆಟ್ಟಿಲಾಗಿ ಅದರ ಹಿರಿಮೆ ಇಳಿಯುತ್ತಿತ್ತು. ಮುಂದೆ ಇಳಿಜಾರಾಗಿ—ಇನ್ನೂ ಚಾಚಿ ನಿಂತಿವೆ—ಮೆಟ್ಟಿಲು ಮೆಟ್ಟಿಲು ಮೆಟ್ಟಿಲು.

ಚರ್ಚಿಲರು ಪ್ರಧಾನಿಯ ಅಧಿಕಾರ ಸಾಕುಮಾಡಬೇಕಾಯಿತು. ಅವರ ಅನಂತರ ಒಬ್ಬರು, ಇನ್ನೊಬ್ಬರು, ಮತ್ತೊಬ್ಬರು—ಹೀಗೆ ಪ್ರಧಾನಿಗಳು ಬಂದು ಹೋದರು.

ಚರ್ಚಿಲ್ ಎಲ್ಲವನ್ನೂ ಕಂಡರು. ಬ್ರಿಟಿಷ್ ಸಾಮ್ರಾಜ್ಯ ಅವರ ಕಣ್ಣೆದುರಿಗೇ ಕರಗಿತು.

ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತಾವು ಅಧಿಕಾರದಲ್ಲಿದ್ದಾಗ ತಕ್ಕ ಮಟ್ಟಿಗೆ ರಕ್ಷಿಸಿದ್ದಾಯಿತು. ಈಗ ಆ ಶಕ್ತಿ ಯಾರಿಗೂ ಇಲ್ಲ. ಅಥವಾ ಕಾಲ ಧರ್ಮವೇ ಹೀಗೋ? **Old order changeth !**

ಚರ್ಚಿಲರು ಈ ಬಗ್ಗೆ ಹೆಚ್ಚಾಗಿ ಚಿಂತಿಸಲರಿಯರು. ಚಿಂತನಶೀಲರಲ್ಲ ಅವರು. ಕಾರ್ಯಪಟು. ಕಾಳಗದಲ್ಲಿ ಧುಮ್ಮಿಕ್ಕುವುದು. ಗೆದ್ದರೆ ಸರಿ. ಸೋತರೆ ಕಾಯೋಣ. ಬಿದ್ದಾಗಲೆಲ್ಲ ಮೀಸೆ ಮಣ್ಣಾಗಲೇ ಬೇಕೆ?

ಈ ಕಾಳಗದ ಕಡುಗಲಿ, ತೊಂಬತ್ತರ ತುಂಬು ಜೀವನದ ಶ್ರದ್ಧಾವಂತ ನಾಯಕ, ಗತ ದಿನಗಳ ಕತ್ತಿಯ ಝಳಪು, ಮಾತಿನ ಮಸೆತ, ನಗೆ–ಹೊಗೆ, ನಿಂದೆ–ಮೂದಲಿ, ಪ್ರಶಂಸೆ–ಪ್ರತಿಕಾರಗಳ ಮಾರ್ದನಿಗೆ ಕಿವಿಗೊಡುತ್ತ ತಮ್ಮ ಜೀವನದ ಉಳಿದ ಕಾಲವನ್ನು ಕಳೆಯುವರು.*

* ೧೯೬೪.



# ಹೆರೊಲ್ಡ್ ಜೆ. ಲಾಸ್ಕಿ

ಪ್ರಪಂಚದ ಪ್ರಸಿದ್ಧಪುರುಷರಲ್ಲಿ ಕೆಲವರ ಹೆಸರು ಹೇಳುವುದೂ ಒಂದೇ, ವಿಚಾರದ ಜೇನುಗೂಡಿನಲ್ಲಿ ಕೈ ಹಾಕುವುದೂ ಒಂದೇ. ಅವರ ಆಚಾರ ವಿಚಾರಗಳೆಲ್ಲ ತುಂಬಿಟ್ಟ ಪುಷ್ಪರಸದಂತೆ. ಅಷ್ಟೊಂದು ಉತ್ಕೃಷ್ಟ. ಅವರ ಹೆಸರಿನ ಸುತ್ತ ಅವರ ವೈಯುಕ್ತಿಕ ವಿಷಯಗಳ ಬದಲು ಅವರು ಪ್ರವರ್ತಿಸಿದ ವಿಚಾರದ ಪ್ರಭಾವಳಿಯೇ ಮಿನುಗುತ್ತದೆ. ನಿಜವಾದ ಪ್ರಸಿದ್ಧ ಪುರುಷರ ಲಕ್ಷಣವೇ ಇದು. ಗಾಂಧಿಯವರ ಹೆಸರು ಹೇಳಿದಾಗ ಅವರ ಭಾವನೆಗಳ ನೆನಪು ಬಂದು ಮೈ ಪುಳಕಗೊಳ್ಳಬೇಕು. ಹಿಟ್ಲರನ ಹೆಸರು ಅವನ ಸರ್ವಾಧಿಕಾರದ, ಸ್ವಾತಂತ್ರ್ಯಾಪಹರಣದ ನೆನಪಿನ ಅಲೆಯೆಬ್ಬಿಸಿ ಮೈನಡುಕ ಹುಟ್ಟಿಸುತ್ತದೆ. ವೈಜ್ಞಾನಿಕ ಸಮತಾವಾದದ ಸಿದ್ಧಾಂತದ ಪ್ರಭಾವಳಿಯಲ್ಲೇ ಮಾರ್ಕ್ಸನ ಪ್ರಸಿದ್ಧಿಯೆಲ್ಲ. ಹೆರೊಲ್ಡ್ ಜೆ. ಲಾಸ್ಕಿಯೂ ಇಂಥವರ ಗುಂಪಿಗೆ ಸೇರಿದ ಪ್ರಸಿದ್ಧ ವಿಚಾರವಾದಿ. ಇವರಂತೆಯೇ ಲಾಸ್ಕಿಯೂ ಒಬ್ಬ ವ್ಯಕ್ತಿಯಲ್ಲ, ಒಂದು ಪಂಥ.

ಹೆರೊಲ್ಡ್ ಜೆ. ಲಾಸ್ಕಿ ಇಂಗ್ಲೆಂಡಿನಲ್ಲಿದ್ದ ಒಬ್ಬ ಮಹಾ ಜಿಜ್ಞಾಸು. ಅವರು ಹುಟ್ಟಿದ ವರ್ಷ ೧೮೯೩. ಅವರು ತೀರಿಕೊಂಡಾಗ* ಅವರಿಗೆ

---

* ೧೯೫೦.

ಕೇವಲ ಐವತ್ತಾರು ವರ್ಷ. ಅವರು ಇದ್ದ ಕಾಲವೇ ಅವರ ವಿಚಾರಗಳನ್ನು ತಿದ್ದಿದ ಉಳಿ.

ಹತ್ತೊಂಬತ್ತನೆಯ ಶತಮಾನದ ಅಂತ್ಯಕಾಲ: ವಿಶ್ವವ್ಯವಸ್ಥೆಯೆಲ್ಲ ಒಂದು ಮಹಾಕ್ರಾಂತಿಯ ಪ್ರಸವವೇದನೆಯಲ್ಲಿತ್ತು. ಮಧ್ಯಯುಗ ಕಳೆದು ಯಂತ್ರಯುಗ ಯುರೋಪಿನಲ್ಲೆಲ್ಲ ಪರಿಣತಾವಸ್ಥೆಗೆ ಬರುತ್ತಿತ್ತು. ಅಮೆರಿಕವೂ ಯಂತ್ರದ ಹಾದಿ ತುಳಿಯುತ್ತಿತ್ತು. ಎಲ್ಲೆಲ್ಲೂ ಮಧ್ಯಯುಗದ ವಿರುದ್ಧ, ರಾಜಮಾನ್ಯತೆಯ ವಿರುದ್ಧ, ಶ್ರೀಮಂತ ಮಾನ್ಯತೆಯ ವಿರುದ್ಧ ಬಂಡಾಯವೆದ್ದು ಹೊಸ ಯಂತ್ರ ವ್ಯವಸ್ಥೆಯ ವಿಕಾಸಕ್ಕೆ ಅನುಗುಣವಾದ ವ್ಯತ್ಯಾಸಗಳಾದುವು. ಹಳೆಯ ರಾಜಕೀಯ ವ್ಯವಸ್ಥೆಗಳೇ ಬಹುತೇಕ ಉಳಿದಿದ್ದವಾದರೂ, ಅವು ಸೂಕ್ತ ಮಾರ್ಪಾಟು ಹೊಂದಿದುವು. ಹಿಂದೆ ಶ್ರೀಮಂತನಿಗೂ ಆಳಿಗೂ ಇದ್ದ ಸಂಪ್ರದಾಯದ ಗಂಟು ತೊಡೆದುಹೋಗಿ, ಕಾರ್ಖಾನೆಯ ಒಡೆಯನಿಗೂ ಕೂಲಿಕಾರನಿಗೂ ಕೇವಲ ದ್ರವ್ಯ ಸಂಬಂಧ ಉಳಿದುಕೊಂಡಿತು. ಇವರಿಬ್ಬರ ನಡುವೆ ಹೃದಯ ಸಂಬಂಧ ಏರ್ಪಟ್ಟು ಬೆಳೆಯುವುದು ಸಾಧ್ಯವೇ ಇರಲಿಲ್ಲ. ಐರೋಪ್ಯರ ಮುಖ್ಯಮತವಾದ ಕ್ರೈಸ್ತಮತ ಮೊದಲು ಈ ಹೊಸ ಬಂಡಾಯವನ್ನು ವಿರೋಧಿಸಿತಾದರೂ, ಕೊನೆಗೆ ಬಂಡವಾಳ ವ್ಯವಸ್ಥೆಗೇ ಗೆಲವು ಲಭಿಸಿದಾಗ, ಅದಕ್ಕೆ ಅನುಗುಣವಾಗಿ ತನ್ನ ಧೋರಣೆಯನ್ನು ಬದಲಾಯಿಸಿಕೊಂಡು, ಅದರ ಸ್ಥಿರೀಕರಣಕ್ಕೆ ಅಗತ್ಯವಾದ ಕಟ್ಟುಪಾಡು ಮಾಡಿತು. ರಾಜಕೀಯ ವ್ಯವಸ್ಥೆಯೂ ಈ ಹೊಸ ಶಕ್ತಿಯುತ ವರ್ಗದ ಕೈಗತ್ತಿಯಾಯಿತು. ವ್ಯಕ್ತಿಸ್ವಾತಂತ್ರ್ಯವೆಂದರೆ ಪ್ರತಿಯೊಬ್ಬನೂ ತನ್ನಿಚ್ಛೆ ಬಂದಂತೆ ವ್ಯವಹರಿಸುವ ಸ್ವಾತಂತ್ರ್ಯ. ಅರ್ಥಶಾಸ್ತ್ರಜ್ಞರೂ ರಾಜಕೀಯವೇತ್ತರೂ ಈ ಸ್ವಾತಂತ್ರ್ಯವನ್ನು ಹಾಡಿ ಹೊಗಳಿದರು. ವ್ಯಕ್ತಿಪ್ರಯತ್ನದ ನಡುವೆ ಸರಕಾರ ಪ್ರವೇಶ ಮಾಡಬಾರದೆಂಬ ತತ್ವ ಆಚರಣೆಗೆ ಬಂತು.

ಇದು ಅಂದಿನ ಯಂತ್ರಗಾರಿಕೆಗೆ ಸಹಾಯಕವಾಗಿತ್ತು. ಉತ್ಪತ್ತಿ ಅಗಾಧವಾಗಿ ಬೆಳೆಯಿತು. ಯಂತ್ರಶಕ್ತಿಗೆ ಇತಿಮಿತಿ ಇಲ್ಲವಾಯಿತು. ಆದರೆ ಈ ಹೊಸ ವ್ಯವಸ್ಥೆಯಲ್ಲಿ ಮೇಲಿನ ಕೆಲವರಿಗೆ ವ್ಯಕ್ತಿಸ್ವಾತಂತ್ರ್ಯದ ಅವಕಾಶ ದೊರಕಿತೇ ವಿನಾ ಕೆಳಗಿನ ಹಲವರಿಗೆ ಇದು ಅರ್ಥಹೀನ ಕರಟಪುರಾಣವಾಯಿತು. ಯಂತ್ರದ ಒಡೆಯರಿಗೆ ಇಚ್ಛೆಬಂದಾಗ ಯಾರನ್ನಾದರೂ ಕೆಲಸಕ್ಕೆ ನೇಮಿಸುವ, ಅಥವಾ ಕೆಲಸದಿಂದ ತೆಗೆಯುವ, ಹಕ್ಕಿತ್ತು. ಉಳಿದವರಿಗೆ ಕೆಲಸಮಾಡುವ, ಅಥವಾ

ಬಿಡುವ, ಹಕ್ಕಿತ್ತು. ನಿಜ. ಆದರೆ ಇದು ಬರಿಯ ಬಾಯಿಮಾತಿನ ಸ್ವಾತಂತ್ರ್ಯ. ಅವರ ಸಂಪಾದನೆಯ ಸ್ವಾತಂತ್ರ್ಯ ಕಸಿದುಹೋಗಿತ್ತು. ಅವರು ಪರಾಧೀನರು. ಕೆಲಸ ಸಿಕ್ಕಿದಾಗ ಉಪವಾಸ ಬಳಲಿ ಸಾಯುವ ಸ್ವಾತಂತ್ರ್ಯವೊಂದೇ ಅವರ ಪಾಲಿಗೆ ಉಳಿದದ್ದು.

ಹೀಗೆ ಸಮಾಜದಲ್ಲಿ ಒಂದು ವಿಚಿತ್ರ ಸ್ಥಿತಿ ಉಂಟಾಯಿತು. ಆಗ ಹಲವರು ವಿಚಾರವಂತರು ನಮ್ಮ ಈ 'ಸ್ವಾತಂತ್ರ್ಯ'ದ ನಿಜವಾದ ಅರ್ಥವನ್ನು ಕುರಿತು ಚಿಂತಿಸತೊಡಗಿದರು. ಸಮತೆಯಿಲ್ಲದ ಸ್ವಾತಂತ್ರ್ಯ ಗಂಧವಿಲ್ಲದ ಹೂವಿನಂತೆ— ಎಂಬ ಭಾವನೆ ಹುಟ್ಟಿತು. ಶ್ರೀಮಂತವರ್ಗಕ್ಕೂ ಶ್ರಮಜೀವಿ ವರ್ಗಕ್ಕೂ ನಡುವಣ ಈ ತಿಕ್ಕಾಟ ಮುಂದುವರಿಯುವುದೆಂದೂ, ಕೊನೆಗೆ ಶ್ರಮಜೀವಿವರ್ಗದ ಸರ್ವಾಧಿಕಾರ ಸ್ಥಾಪನೆಯಾಗುವುದೆಂದೂ, ಸಮತಾವಾದ ಏರ್ಪಡುವುದೆಂದೂ ಕಾರ್ಲ್ ಮಾರ್ಕ್ಸ್ ಎಂಬುವರು ಭವಿಷ್ಯ ನುಡಿದರು. ಆದರೆ ಇದು ಫಲಿಸಿರಲಿಲ್ಲ. ಎಲ್ಲೆಲ್ಲೂ ಒಂದು ಬಗೆಯ ನಿರಾಶೆ, ಧ್ಯೇಯ ಹೀನತೆ, ನಿರಸನ—ಇವು ಬೆಳೆದುವು.

ಆಗಿನ ಕಾಲದ ಸಾಹಿತ್ಯದಲ್ಲೂ ಇದು ಪ್ರತಿಬಿಂಬಿಸಿತು. ಟಿ. ಎಸ್. ಇಲಿಯಟ್ ಮುಂತಾದ ಕವಿಗಳು ನಮ್ಮ ಈ ಹೊಸ ನಾಗರಿಕತೆಯ ವಿಫಲತೆಯನ್ನೂ ಆತ್ಮಹೀನತೆಯನ್ನೂ ಅವಲಂಬಿಸಿ ಕೃತಿ ರಚನೆ ಮಾಡಿದರು.

ಈ ಎಲ್ಲ ವಿಫಲತೆಯ ಸಮಾಧಿಯ ಮೇಲೆ ಹೊಸದೇನಾದರೂ ಬರಲೇಬೇಕು—ಎಂದು ಹಲವರು ಕನಸು ಕಂಡರು. ವೆಲ್ಸ್, ಹಕ್ಸ್ಲಿ, ಸಿಂಕ್ಲೇರ್‌ಲೆವಿ—ಇವರೆಲ್ಲ ಈ ಹೊಸ ವ್ಯವಸ್ಥೆಯ ಬರುವಿಕೆಯನ್ನು ನಿರೀಕ್ಷಿಸಿದರು. ಆದರೆ ಈ ಯಾರಲ್ಲೂ ಈ ಹೊಸ ವ್ಯವಸ್ಥೆ ಹೇಗಿದ್ದೀತು? ಹೇಗಿರಬೇಕು? ಎಂಬುದರ ಸ್ಪಷ್ಟ ಚಿತ್ರ ಇರಲಿಲ್ಲ.

ಹೆರಾಲ್ಡ್ ಲಾಸ್ಕಿ ಬೆಳೆದದ್ದು ಈ ವಾತಾವರಣದಲ್ಲಿ. ಈ ವಿಚಾರದ ತಾಕಲಾಟ ಅವರ ಬುದ್ಧಿಯ ಮೇಲೆ ತುಂಬಾ ಪರಿಣಾಮ ಉಂಟುಮಾಡಿರಬೇಕು. ಅವರು ಬಹಿರ್ಮುಖಿಯಲ್ಲ; ಅಂತರ್ಮುಖಿ, ಚಿಂತನಶೀಲ. ಅವರ ಅಗಲವಾದ ಹಣೆ, ಆಳವಾದ ಕಣ್ಣು, ಹೊಲೆದಿಟ್ಟಂಥ ತುಟಿ—ಇವು ಅವರ ಆಲೋಚನಾಪರತೆಯ ಆಳವನ್ನು ಅಳೆಯುವ ಬಾಹ್ಯ ಲಕ್ಷಣ. ವಿಚಾರದ ಪಟ್ಟು ಅವರ ಜೀವನಕ್ಕೆ ರೂಪು ಕೊಟ್ಟಿತು. ಆಗಿನ ವಾತಾವರಣವೂ ಹಾಗೆಯೇ ಇತ್ತು.

ಆಗಿನ ಕಾಲದ ನಾನಾ ಸಮಸ್ಯೆಗಳನ್ನು ಕುರಿತು ಲಾಸ್ಕಿಯೂ ಆಳವಾಗಿ

ಚಿಂತಿಸತೊಡಗಿದರು. ಅವರ ಬರವಣಿಗೆಯೆಲ್ಲ ಈ ಆಲೋಚನೆಯ ಅಕ್ಷರರೂಪ.

ಮೊಟ್ಟಮೊದಲನೆಯದಾಗಿ, ಸಂಶಯಕ್ಕೆ ಎಡೆಕೊಟ್ಟದ್ದ ಪದವೆಂದರೆ 'ಸ್ವಾತಂತ್ರ್ಯ'. ಸ್ವಾತಂತ್ರ್ಯವನ್ನು ಕುರಿತು ಎಲ್ಲರೂ ಮಾತನಾಡುವವರೇ. ಆದರೆ ಅದರ ನಿಜವಾದ ಅರ್ಥ ಏನೆಂದು ಎಷ್ಟು ಜನ ಆಲೋಚಿಸುತ್ತಾರೆ? 'ಸ್ವಾತಂತ್ರ್ಯ' ಎಂಥದಿರಬೇಕು?—ಎಂಬುದಾಗಿ ಲಾಸ್ಕಿ ಮಾಡಿರುವ ವಿಚಾರ ಅವರ ಆದರ್ಶದ ಒರೆಗಲ್ಲಾಗಿದೆ. 'ಆಧುನಿಕ ನಾಗರಿಕತೆಯಲ್ಲಿ ವ್ಯಕ್ತಿಸೌಖ್ಯ ಶಾಶ್ವತವಾಗಿ ಉಳಿಯಲು ಅಗತ್ಯವಾದ ಸಾಮಾಜಿಕ ವ್ಯವಸ್ಥೆಗಳಿಗೆ ಯಾವ ಅಡಚಣೆಯೂ ಇಲ್ಲದಿರುವುದೇ ಸ್ವಾತಂತ್ರ್ಯ.' ಇದು ಅವರ ವ್ಯಾಖ್ಯೆ.

ಇಂಥ ವ್ಯವಸ್ಥೆಗೆ—ನಿಜವಾದ ಸ್ವಾತಂತ್ರ್ಯಕ್ಕೆ—ಯಾವ ಬಗೆಯ ಅಡಚಣೆಯೂ ಇರಬಾರದು. ಅಷ್ಟೇ ಅಲ್ಲ. ಯಾವ ಗುಂಪಾಗಲಿ, ಯಾವ ಪಕ್ಷ ವಾಗಲಿ, ವ್ಯಕ್ತಿಯಾಗಲಿ ಮಿತಿಯಿಲ್ಲದ ಅಧಿಕಾರ ಹೊಂದಿರಬಾರದು. ಹಾಗೇ ನಾದರೂ ಆದರೆ ಈ ಅಧಿಕಾರ ದುರ್ವ್ಯಯವಾಗುವ ಅವಕಾಶವಿದೆ.

ಆಡಳಿತಗಾರರ ಅಧಿಕಾರಕ್ಕೆ ಮಿತಿಯಿಲ್ಲದೆ ಇದ್ದರೆ, ಅವರ ಪ್ರತಿಯೊಂದು ಆಚರಣೆಯನ್ನೂ ಪ್ರಶ್ನಿಸುವ ಅಧಿಕಾರ ಪ್ರಜೆಗೆ ಇಲ್ಲದೆ ಇದ್ದರೆ, ಆಗ ಈ ಸ್ವಾತಂತ್ರ್ಯವೇ ಉಳಿಯುವುದಿಲ್ಲವೆಂದೂ ಅವರು ಹೇಳಿದರು.

ಯಾವ ಪ್ರಜೆಗೂ ಯಾವ ಬಗೆಯ ಆತಂಕವೂ ಇರಬಾರದು. ಇದು ಆದರ್ಶ. ಆದರೆ ಆಡಳಿತ ನಡೆಸಲು ಪ್ರಜೆಗಳ ಅಧಿಕಾರ ಪಡೆದ, ಅವರಿಂದ ಆರಿಸಿ ಬಂದ, ಪ್ರತಿನಿಧಿಗಳು—ಆಡಳಿತಗಾರರು—ಆಡಳಿತ ನಡೆಸಬೇಕಾದರೆ ಅವರು ಕೆಲವು ಸೂತ್ರಗಳನ್ನು ಹಾಕಬೇಕಾಗುವುದಲ್ಲವೆ? ಅಂದರೆ ಅಷ್ಟರ ಮಟ್ಟಿಗೆ ಪ್ರಜೆಗಳ ಸ್ವಾತಂತ್ರ್ಯ ಮೊಟಕಾಗಬಹುದು. ಇವೆರಡರ ಸಾಮರಸ್ಯವೇ ಸ್ವಾತಂತ್ರ್ಯದ ಸಾರ.

ಆರ್ಥಿಕ ವಲಯದಲ್ಲಂತೂ ಪ್ರಜೆಗಳ ಈ ಅನಿರ್ಬಂಧಿತ—ಸ್ವಚ್ಛಂದ—ಆಚರಣೆ ಆತ್ಮನಾಶಕ್ಕೆ ಹಾದಿ. ಆದ್ದರಿಂದ ಪ್ರತಿಯೊಬ್ಬನಿಗೂ ಆರ್ಥಿಕ ಕ್ಷೇತ್ರದಲ್ಲಿ ಸಂಪಾದನೆಯ ಹಕ್ಕು ಲಭಿಸಬೇಕು, ಅವಕಾಶ ದೊರಕಬೇಕು. ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಒಬ್ಬ ಇನ್ನೊಬ್ಬನ ಸಂಪಾದನೆಯ ಅವಕಾಶವನ್ನು ಕಸಿದುಕೊಳ್ಳಬಾರದು. ತನ್ನ ಧನಬಲದ ದುರುಪಯೋಗ ಪಡೆದು ಇನ್ನೊಬ್ಬನ ಅನ್ನ ಕಸಿದುಕೊಳ್ಳುವಂತಾಗಬಾರದು. ಪ್ರತಿಯೊಬ್ಬನಿಗೂ ಆರ್ಥಿಕ ಕ್ಷೇತ್ರದಲ್ಲಿ ಸಂಪಾದನೆಯ ಹಕ್ಕು ಲಭಿಸಬೇಕು, ಅವಕಾಶ ದೊರಕಬೇಕು. ಇದಾಗ

ಬೇಕಾದರೆ ಸರ್ಕಾರ ಪ್ರವೇಶಿಸಲೇಬೇಕು. ಪ್ರತಿಯೊಬ್ಬನಿಗೂ ಬದುಕುವ ಅವಕಾಶ ಇಲ್ಲದ ಸ್ವಾತಂತ್ರ್ಯವೇ, ಸ್ವಾತಂತ್ರ್ಯವೇ ಅಲ್ಲ. ಆದ್ದರಿಂದ ಅವಕಾಶ, ಸ್ವಾತಂತ್ರ್ಯ ಇವೆರಡೂ ಒಂದೇ ನಾಣ್ಯದ ಎರಡು ಮುಖ.

ಸ್ವಾತಂತ್ರ್ಯ ನಿಜವಾಗಿ ಉಳಿಯಬೇಕಾದರೆ ಪ್ರತಿಯೊಬ್ಬ ಪ್ರಜೆಯ ಮನಸ್ಸೂ ಈ ರೀತಿ ತರಪೇತು ಪಡೆಯಬೇಕು. ಪ್ರತಿಯೊಬ್ಬ ಪ್ರಜೆಯೂ ತನ್ನನ್ನು ತಾನು ಅರಿಯುವ, ತನ್ನ ಕ್ಷೇತ್ರವ್ಯಾಪ್ತಿಯನ್ನೂ ಇತರರ ಹಕ್ಕುಗಳನ್ನೂ ತಿಳಿಯುವ, ಸ್ವತಂತ್ರವಾಗಿ ವಿಚಾರ ಮಾಡುವ ವ್ಯಕ್ತಿಯಾಗಬೇಕು. ಆಗ ಮಾತ್ರ ಸ್ವಾತಂತ್ರ್ಯದ ಹೆಸರು ಸಾರ್ಥಕವಾಗುತ್ತದೆ.

ಲಾಸ್ಕಿ ಈ ರೀತಿ ವಿಚಾರ ಬೆಳೆಸಿಕೊಂಡು ಹೋಗಿದಾರೆ. ಅವರು ಬರೆದಿರುವ 'ಆಧುನಿಕ ರಾಷ್ಟ್ರದಲ್ಲಿ ಸ್ವಾತಂತ್ರ್ಯ'* ಎಂಬ ಒಂದು ಪುಸ್ತಕ ಈ ವಿಚಾರವನ್ನು ಕುರಿತದ್ದು.

ಆಡಳಿತಗಾರರು ತಮ್ಮ ಅಧಿಕಾರದ ದುರುಪಯೋಗಪಡಿಸಿಕೊಂಡು ಸರ್ವಾಧಿಕಾರಿಗಳಾಗುವ ರೀತಿಯನ್ನೂ ಕುರಿತು ಅವರು ಚಿಂತಿಸದೇ ಇಲ್ಲ. ಹಾಗೆಯೇ ಪ್ರಜೆಗಳಿಂದ ಸ್ವಾತಂತ್ರ್ಯದ ಸರ್ವನಾಶ ಹೇಗಾಗುವುದೆಂಬುದನ್ನು ಅವರು ಇನ್ನೊಂದು ಪುಸ್ತಕದಲ್ಲಿ ವಿವರಿದ್ದಾರೆ.

ಬಹುಶಃ ಅವರ ಶ್ರೇಷ್ಠ ಕೃತಿಗಳ ಪೈಕಿ 'ರಾಜಕೀಯ ವ್ಯಾಕರಣ'† ಎಂಬುದು ಒಂದು. ಇದರಲ್ಲಿ ನಮ್ಮ ರಾಜಕೀಯ ವ್ಯವಸ್ಥೆಗಳ ಸಂಕ್ಷಿಪ್ತ ಇತಿಹಾಸವನ್ನೂ, ಅವುಗಳ ಧ್ಯೇಯ ಧೋರಣೆಗಳನ್ನೂ, ಅವುಗಳ ಸಾಫಲ್ಯ ಗಳನ್ನೂ ವಿವರಿಸಿದ್ದಾರೆ. 'ಪ್ರಜಾಸತ್ತೆಯ ಗಂಡಾಂತರ'‡ ಎಂಬ ಪುಸ್ತಕದಲ್ಲಿ ನಮ್ಮ ಪ್ರಜಾಸತ್ತೆಯ ಆದರ್ಶಗಳೆಲ್ಲ ಆಚರಣೆಯಲ್ಲಿ ಹೇಗೆ ಗಾಳಿಯಲ್ಲಿ ಇಟ್ಟ ಹೊಟ್ಟನಂತೆ ಹಾರಿಹೋಗುತ್ತವೆಯೆಂಬುದನ್ನು ವಿವೇಚಿಸಿದ್ದಾರೆ.

ನಮ್ಮ ನಾಗರಿಕತೆಯನ್ನು ಕುರಿತು ಅವರಾಡುವ ಮಾತಂತೂ ಬಹು ತೀಕ್ಷ್ಣ ವಾಗಿದೆ. ಯಂತ್ರಸಿದ್ಧಿಯ ಫಲವಾಗಿ ಲಭಿಸಿದ ಹೊಸ ಸಂಪತ್ತಿನಿಂದ ನಮ್ಮ ಮತ್ತೇರಿತು. ಈ ಹೊಸ ಸಂಪತ್ತಿನ ಲಾಭಕ್ಕೆ ಪ್ರತಿಯಾಗಿ ನಮ್ಮ ಕರ್ತವ್ಯ

---

* *Liberty in the Modren State*

† *The Grammar of Politics*

‡ *Democracy in Crisis*

ವೇನೆಂಬುದನ್ನು ನಾವು ವಿಚಾರಿಸಲಿಲ್ಲ. ಈ ಸಂಪತ್ತಿನ ಲಾಭಕ್ಕಾಗಿ ನಾವು ಅನುಸರಿಸಿದ ಮಾರ್ಗದ ಪರಿಣಾಮ ಏನೆಂಬುದನ್ನು ನಾವು ಚಿಂತಿಸಲಿಲ್ಲ. ತತ್ವದರ್ಶನವಿಲ್ಲದ ಕೇವಲ ಯಾಂತ್ರಿಕ ಅಭ್ಯಾಸ, ಧ್ಯೇಯವಿಲ್ಲದ ಸಾಮರ್ಥ್ಯ, ನ್ಯಾಯವಿಲ್ಲದ ಅಧಿಕಾರ—ಇವು ನಮ್ಮನ್ನು ಕುರುಡರನ್ನಾಗಿ ಮಾಡಿದುವು. ಇಂದಿನ ಫಲವನ್ನು ನೋಡಿ ಮುಂದಿನ ನೆಲೆಯನ್ನೆ ಮರೆತೆವು. ಇದು ಅವರು ಆಡಿರುವ ಮಾತು.

ಹೊಸ ಯಂತ್ರಯುಗ ಬಂದಾಗ, ಅದಕ್ಕೆ ತಕ್ಕಂತೆ ಹೊಸ ಸಾಮಾಜಿಕ ವ್ಯವಸ್ಥೆ ರೂಪುಗೊಳ್ಳಲಿಲ್ಲ; ಹೊಸ ಸಂಸ್ಥೆಗಳು ಹುಟ್ಟಲಿಲ್ಲ. ಮಧ್ಯಯುಗದ ಸಂಸ್ಥೆಗಳೇ ಹೊಸಯಂತ್ರಯುಗದ ಅನುಕೂಲಕ್ಕೆ ತಕ್ಕಂತೆ ಹೊಂದಿಕೊಂಡವು. ಇದನ್ನು ಕಂಡು ಅವರಿಗೆ ತುಂಬಾ ಧಿಕ್ಕಾರವಿತ್ತು. ಇಂಥ ಹೃದಯಹೀನ ಸಂಸ್ಥೆಗಳನ್ನು ಅವರು ತೀಕ್ಷ್ಣವಾಗಿ ಟೀಕಿಸಿದ್ದಾರೆ. ಹೃದಯವಿಲ್ಲದ 'ಧರ್ಮ', ಅರ್ಥವಿಲ್ಲದ ಸಂಸ್ಥೆ. ಇಂಗ್ಲೆಂಡಿನ ಲಾರ್ಡ್ಸ್ ಸಭೆ ಪ್ರತಿಯೊಬ್ಬ ಶ್ರೀಮಂತ ಪುತ್ರನಿಗೂ ಜನ್ಮತಃ ಸದಸ್ಯತ್ವ ದೊರಕಿಸಿಕೊಡುವ ಸಭೆ. ಈ ಸಭೆಯ ಸದಸ್ಯತ್ವವೂ ವಂಶಪಾರಂಪರ್ಯವಾದಲ್ಲಿ ಇನ್ನು ಪ್ರಜಾಸತ್ತೆಗೆ ಅರ್ಥವೆಲ್ಲಿ? ಇಂಗ್ಲೆಂಡಿನ ಇಂದಿನ ಚುನಾವಣೆ ಕೇವಲ ಹಣವುಳ್ಳವರ ಚದುರಂಗದಾಟ. ಇಂದಿನ ಪಕ್ಷಪದ್ಧತಿ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯ ಕಾಲದ ಪದ್ಧತಿಯ ಪ್ರೇತಸ್ವರೂಪ. ಇಂದಿನ ನ್ಯಾಯ ಪದ್ಧತಿಯೆಂಬುದು, ಶ್ರೀಮಂತರ ಶ್ರೀಮಂತಿಕೆಯ ಸ್ಥಿರೀಕರಣದ ವ್ಯವಸ್ಥೆ.

ಅಮೆರಿಕದ ಸ್ಥಿತಿಗತಿಗಳ ಪರಿಚಯವೂ ಲಾಸ್ಕಿಗೆ ಚೆನ್ನಾಗಿ ಇತ್ತು. ಅಮೆರಿಕದ ಪ್ರತ್ಯೇಕತ್ವದ ಆಶ್ರಯದಲ್ಲಿ ಯೂರೋಪಿನ ರಾಷ್ಟ್ರಗಳು ಹಾವಿನ ಹೆಡೆಯ ನೆರಳಿನ ತಂಪು ಪಡೆದಾವು—ಎಂದು ಅವರು ಯುದ್ಧ ನಡೆಯುತ್ತಿದ್ದಾಗಲೇ ಹೇಳಿದರು.* ಸಮಾಜವಾದದ ಸೊಲ್ಲೇ ಇಲ್ಲದ ಅಮೆರಿಕ, ಯುದ್ಧ ಮುಗಿದ ಮೇಲೆ, ಪ್ರತಿಗಾಮಿ ಶಕ್ತಿಗಳ ಆಟದ ನೆಲವಾದೀತು. ಹೀಗೆಂದು ಅವರು ಆಗಲೇ ಮುನ್ನೆಚ್ಚರಿಸಿದ್ದರು. ಇನ್ನೊಂದು ತಲೆಮಾರಿನ ವೇಳೆಗೆ ನಮ್ಮ ಅಭಿಪ್ರಾಯಗಳೇ ಮಾರ್ಪಟ್ಟು ಹೋಗುತ್ತವೆ. ಸೋವಿಯತ್ ರಷ್ಯದ ಹಾದಿ ನಮ್ಮ ವಿಚಾರ ಪ್ರಣಾಳಿಯನ್ನು ತಿದ್ದುತ್ತದೆ. ಇನ್ನೆರಡು ತಲೆಮಾರಿನ ಕಾಲದಲ್ಲಿ

* *Choosing the Planners.*

ನಮ್ಮ ಕಷ್ಟ ಪರಿಹಾರಕ್ಕೆ ಚೀನದ ಸಲಹೆಯನ್ನು ಕೇಳುವ ಸ್ಥಿತಿಯೂ ಬರುತ್ತದೆ. ಹೀಗೆಂದು ಅವರು ೧೯೪೪ರಲ್ಲೇ ಹೇಳಿದರು.

ಹಾಗಾದರೆ ಲಾಸ್ಕಿಯ ನಿಷ್ಕೃಷ್ಟ ದೃಷ್ಟಿಕೋನ ಯಾವುದು? ಅವರು ಸಮಾಜವಾದಿಯೆ? ಮಾರ್ಕ್ಸ್ ತತ್ವಪ್ರತಿಪಾದಕರೆ? ಮಾನವ ಸ್ವಾತಂತ್ರ್ಯದ ಕನಸುಗಾರರು ಮಾತ್ರವೆ? ಯಾವುದು ಅವರ ವಿಚಾರಮಾರ್ಗ?

ಲಾಸ್ಕಿ ಪಕ್ಕಾ ಸಮಾಜವಾದಿ. ಫೇಬಿಯನ್ ಸಮಾಜವಾದ ಅವರ ಮನಸ್ಸಿಗೆ ಹಿಡಿದಷ್ಟು ಬೇರೆ ಯಾವುದೂ ಹಿಡಿಯಲಿಲ್ಲ. ಈ ವಾದಕ್ಕೆ ಲಾಸ್ಕಿ ಬಹುವಾಗಿ ದುಡಿದರು. ಸರಕಾರವು* ದೇಶದ ಆರ್ಥಿಕ ಕ್ಷೇತ್ರಗಳನ್ನು ನಿಯಂತ್ರಿಸ ಗೊಳಿಸಬೇಕೆಂಬದು ಲಾಸ್ಕಿಯ ಅಭಿಪ್ರಾಯ. ಇವರು ಬ್ರಿಟನ್ನಿನ ಕಾರ್ಮಿಕ ಪಕ್ಷದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರಲ್ಲದೆ ಕೆಲವು ಕಾಲ ಅದರ ಅಧ್ಯಕ್ಷರೂ ಆಗಿದ್ದರು. ಯುದ್ಧಾನಂತರ ಬ್ರಿಟನ್ನಿನಲ್ಲಿ ಲೇಬರ್ ಪಕ್ಷಕ್ಕೆ ಅದ್ಭುತ ವಿಜಯ ದೊರಕಲು ಲಾಸ್ಕಿಯೇ ಕಾರಣ. ಈ ಪಕ್ಷದ ಮಿದುಳಿನಂತಿದ್ದರು.

ಆದರೆ ಲಾಸ್ಕಿ ಅಷ್ಟೊಂದು ಬಹಿರ್ಮುಖಿಯಲ್ಲ. ಅಂತರ್ಮುಖತೆ, ಚಿಂತನ ಶೀಲತೆ ಅವರ ಹುಟ್ಟುಗುಣ. ಕ್ರಾಂತಿಯಲ್ಲಿ ಅವರಿಗೆ ಪ್ರೀತಿ. ಆದರೆ ಆ ಕ್ರಾಂತಿ ರಕ್ತಪಾತವಿಲ್ಲದೆ ಆಗಬೇಕು—ಎಂಬುದು ಅವರ ಮತ. ಅವರ ಬಳಿ ವಿಚಾರಕ್ಕೆ ಪ್ರಥಮ ಸ್ಥಾನ. ಜಗತ್ತಿನ ಕ್ರಾಂತಿಗಳನ್ನು ಕುರಿತು ಪುಸ್ತಕವೊಂದನ್ನು ಅವರು ಬರೆದಿದ್ದಾರೆ. ಸೋವಿಯಟ್ ರಾಜ್ಯದ ಆಚಾರ ಮಾರ್ಗ ಅವರಿಗೆ ತುಂಬಾ ಹಿಡಿಸಿತ್ತು. ಆದರೆ ರಕ್ತಕ್ರಾಂತಿಯಿಲ್ಲದೆ ಇದು ಸಾಧ್ಯವಿಲ್ಲವೇ—ಎಂಬುದು ಅವರನ್ನು ಪೀಡಿಸುತ್ತಿತ್ತು. ಈ ವರ್ಗಮಥನ ಅನಿವಾರ್ಯ. ಇದು ನಡೆದೇ ನಡೆಯುತ್ತದೆ, ಕ್ರಾಂತಿಯಲ್ಲಿ ಪರ್ಯವಸಾನವಾಗಿಯೇ ಆಗುತ್ತದೆ—ನಾವು ಇಚ್ಛಿಸಲಿ, ಬಿಡಲಿ. ಹೀಗೆಂಬ ಮಾರ್ಕ್ಸನ ವೈಜ್ಞಾನಿಕ ದೃಷ್ಟಿ ಲಾಸ್ಕಿಯ ಮೈ ನಡುಗಿಸುತ್ತಿತ್ತು. ಈ ಶಸ್ತ್ರಕ್ರಿಯೆಯ ಅನಿವಾರ್ಯತೆಯನ್ನು ಅವರು ಒಪ್ಪಿ ಕೊಳ್ಳಲಿಲ್ಲ.

ಆದರೆ ಕೊನೆಕೊನೆಯಲ್ಲಿ ಲಾಸ್ಕಿ ತಮ್ಮ ಪಕ್ಷದಲ್ಲೇ ಉಂಟಾದ ಹಲಬೆರಕೆಯ ಪ್ರವೃತ್ತಿಯನ್ನು ಕಂಡು ಅದನ್ನು ಕಟುವಾಗಿ ಟೀಕಿಸಿದರು. ಅವರು ಯಾವುವನ್ನು ಸಾಧ್ಯವೆಂದು ನಂಬಿದ್ದರೋ ಅದನ್ನು ತಮ್ಮ ಪಕ್ಷ ಮಾಡದುದನ್ನು ಕಂಡು

---

* *The State* ಎಂಬ ಅರ್ಥದಲ್ಲಿ.

ಅವರಿಗೆ ನಿರಾಶೆಯಾಗಿತ್ತು. ತಾವು ಯಾವ ಬ್ರಿಟನ್ ರಷ್ಯಾ ಸೌಖ್ಯವನ್ನು ಆಶಿಸಿದ್ದರೋ ಅದು ಸಾಧ್ಯವಾಗಲಿಲ್ಲ. ಅಮೆರಿಕೆಯ ಬಗ್ಗೆ ನುಡಿದಿದ್ದ ಅಂಜಿಕೆಯ ಮಾತು ನಿಜವಾಗಿತ್ತು. ಒಳನಾಡಿನಲ್ಲೂ ಕೂಡ ತಾವು ಬಯಸಿದ ರೀತಿಯ ಆರ್ಥಿಕ ವ್ಯವಸ್ಥೆ ಎಣಿಸಿದಂತೆ ನಡೆಯಲಿಲ್ಲ. ಆದ್ದರಿಂದ ಅವರು ನೊಂದು ಮಾಡಿದ ಟೀಕೆ ಅವರನ್ನು ಅಪ್ರಿಯರನ್ನಾಗಿಸಿತು. ಆದರೆ ಬದಲಾಗಿದ್ದದ್ದು ಅವರಲ್ಲ: ಅವರು ನಂಬಿದ್ದ ಪಕ್ಷ, ಅವರನ್ನು 'ಅನುಸರಿಸು'ತ್ತಿದ್ದ ಮಂದಿ.

ಲಾಸ್ಕಿಗೆ ವಿದ್ಯಾಪ್ರೌಢಿಮೆಯಿತ್ತು. ಅವರು ಲಂಡನ್ ವಿಶ್ವವಿದ್ಯಾನಿಲಯದಲ್ಲಿ ರಾಜಕೀಯಶಾಸ್ತ್ರದ ಪ್ರಾಧ್ಯಾಪಕರಾಗಿ ಅಗಾಧ ಶಿಷ್ಯವರ್ಗದ ಪ್ರೀತಿ ಸಂಪಾದನೆ ಮಾಡಿದರು. ಬ್ರಿಟಿಷ್ ಪತ್ರಿಕಾ ಕ್ಷೇತ್ರದಲ್ಲಿ ಎಷ್ಟೋ ದುಡಿದರು. 'ವ್ಯಕ್ತಿರೇಖಾ ಚಿತ್ರ' ವನ್ನು ರಚಿಸಿ ರೂಢಿಗೆ ತಂದವರು ಅವರು.

ಅವರು ಲೇಬರ್ ಪಕ್ಷದವರಾದರೂ ಅವರ ವಿಚಾರಕ್ಕೆ ಯಾವ ತಡೆಯೂ ಇರಲಿಲ್ಲ. 'ಕಮ್ಯೂನಿಸಂ' ಎಂಬ ಪುಸ್ತಕದಲ್ಲಿ ಅವರು ತಮ್ಮ ನಿಷ್ಪಕ್ಷಪಾತ ದೃಷ್ಟಿಯ ಅರಿವು ಮಾಡಿಕೊಟ್ಟಿದ್ದಾರೆ. ತಮಗೆ ಸರಿಕಂಡ ವಿಚಾರವನ್ನು ನಿರ್ಭಯವಾಗಿ ಹೇಳಬಲ್ಲ ಎದೆಗಾರಿಕೆ ಅವರಿಗೆ ಇತ್ತು. ಹಿಂದೆ ವಿದ್ಯಾರ್ಥಿಯಾಗಿದ್ದಾಗ ತಮ್ಮ ಸ್ವತಂತ್ರ ಭಾವನೆಗಳಿಗಾಗಿ ತಾವು ಕಲಿಯುತ್ತಿದ್ದ ವಿಶ್ವವಿದ್ಯಾನಿಲಯವನ್ನೇ ಬಿಡಬೇಕಾಗಿ ಬಂತು. ಕೊನೆಗಾಲದಲ್ಲಿ ತಮ್ಮ ನಿರ್ಭಯ ವಿಚಾರ ಸರಣಿಗಾಗಿ ಅನಿಷ್ಟ ವ್ಯಾಜ್ಯಪ್ರಸಂಗದಲ್ಲಿ ಸಿಲುಕಿ ಒದ್ದಾಡಬೇಕಾಯಿತು. ಆದರೆ ಅವರು ಎದೆಗುಂದಲಿಲ್ಲ. ಅವರು ಕಮ್ಯೂನಿಸ್ಟ್ ಪ್ರಚಾರಕರೆಂದು ಅವರ ಭಾಷಣವನ್ನು ಬಹಿಷ್ಕರಿಸಿದ ಪ್ರಭೃತಿಗಳೂ ಉಂಟು. ಆದರೆ ಇಂಥ ಆಡಳಿತಗಾರರಿಗೆ ಅವರು ಬಹಳ ಹಿಂದೆಯೇ ಎಚ್ಚರಿಕೆ ನುಡಿದಿದ್ದರು: 'ಯಾವ ಆಡಳಿತವರ್ಗ ಇತರರ ಅಭಿಪ್ರಾಯಗಳನ್ನು ಸಹಿಸುವುದಿಲ್ಲವೋ, ಅಂಥ ಆಡಳಿತವರ್ಗಕ್ಕೆ ಉಳಿಗಾಲವಿಲ್ಲ. ಅದಕ್ಕೆ ಪ್ರತಿಯಾಗಿ ವಿರೋಧಪಕ್ಷ ತಲೆಯೆತ್ತಿ ಬದುಕುತ್ತದೆ. ವಿಚಾರ ಸ್ವಾತಂತ್ರ್ಯದ ಹಕ್ಕನ್ನು ಯಾರೂ ಕಸಿದುಕೊಳ್ಳಲಾರರು.'

ಈ ವಿಚಾರ ಸ್ವಾತಂತ್ರ್ಯದ ಹಕ್ಕಿಗಾಗಿ ಬದುಕಿ ಶ್ರಮಿಸಿದ ಹಿರಿಯಜೀವನ ಹೆರಾಲ್ಡ್ ಲಾಸ್ಕಿಯದು. ಅವರು ಕೇವಲ ಶುಷ್ಕ ಪಂಡಿತರಲ್ಲ, ಪಕ್ಕಾ ಸಮಾಜವಾದಿ; ಕೇವಲ ಸ್ವಪ್ನಜೀವಿಯಲ್ಲ, ಸ್ವಾತಂತ್ರ್ಯದ ಜೀವಶಿಲ್ಪಿ. ಭಾರತದ ಮಿತ್ರ.*

---

* ೧೯೫೦.

# ಡೇವಿಡ್ ಲೋ

ಕಪ್ಪು ಮಸಿ. ಅದರಲ್ಲಿ ಅದ್ದಿದ ಕುಂಚ. ಆದರಿಂದ ನಾಲ್ಕು ಗೆರೆ ಎಳೆದು ಜಗತ್ತಿನ ಗಮನವನ್ನೇ ಸೆಳೆದ ಅದ್ಭುತ ವ್ಯಂಗ್ಯಕಲಾವಿದನ ಹೆಸರು ಕೇಳಿದ್ದೀರಾ? ಅವನೇ ಡೇವಿಡ್ ಲೋ.

ಡೇವಿಡ್ ಲೋ ವ್ಯಂಗ್ಯಕಲಾವಿದನೆಂದೆ. ಅವನ ವ್ಯಂಗ್ಯಚಿತ್ರವನ್ನು 'ಕಲೆ'ಯ ವಿಶಿಷ್ಟಾರ್ಥದಲ್ಲಿ ಬಳಸಬಹುದೆ?—ಎಂದು ಕೆಲವರು ಸಂಶಯಪಡಬಹುದು. ಪ್ರಕೃತಿಯ ರಮ್ಯ ಚಿತ್ರಗಳನ್ನು, ಜೀವನದ ನಾನಾ ಪೆಡಸು ಸಮಸ್ಯೆಗಳನ್ನು ಕಣ್ಣಾರ ಕಂಡ ಕಲಾವಿದ ಅದಕ್ಕೆ ತನ್ನ ಅನುಭೂತಿಯ ಅಭಿಷೇಕ ಮಾಡಿ ಉತ್ತಮ ಚಿತ್ರಗಳನ್ನು ಬಿಡಿಸುತ್ತಾನೆ. ಇದಕ್ಕೆ ಅವನಿಗೆ ತೆರೆ–ಬಣ್ಣ–ಕುಂಚಗಳ ವಿವಿಧ ಸಾಧನಾಂಗಗಳೇ ಬೇಕಾಗಬಹುದು. ಇಲ್ಲವೆ, ಕೆಲ ರೇಖೆಗಳಲ್ಲಿ ಒಂದು ಹಿರಿಯ ಭಾವವನ್ನು ಎತ್ತಿ ತೋರಿಸಬಲ್ಲ ಸಂಗ್ರಹಶಕ್ತಿ ಅಗತ್ಯವಾಗಬಹುದು. ಇವೆರಡೂ ಸಾನುಭೂತಿಯ ಮಾರ್ಗಗಳು. ಕಲಾವಿದ ಇಲ್ಲಿ ಅನುಸರಿಸುವುದು ನೇರಮಾರ್ಗವನ್ನು. ಸುತ್ತುಬಳಸಿನ ಧುತ್ತತನ ಅವನಿಗೆ ಇಲ್ಲ. ಸಾಮಾನ್ಯವಾಗಿ

ಇಂಥವರನ್ನು ಕಲಾವಿದರೆಂದು ಕರೆಯುವುದು ಲೋಕರೂಢಿ.

ಆದರೆ ಡೇವಿಡ್ ಲೋ ಇವರಿಗಿಂತ ಭಿನ್ನ. ಅವರಿಗೆ ವಿವಿಧ ವರ್ಣಸಂಯೋಜನೆಯ ಸಾಧನ ಸಹಸ್ರವಿಲ್ಲ. ಅವುಗಳನ್ನು ಆಳವಡಿಸಬಲ್ಲ ಚಾತುರ್ಯ ಇರಬಹುದಾದರೂ ಅವು ಬೇಕಿಲ್ಲ. ಅಲ್ಲದೆ ಕಂಡದ್ದನ್ನು ನೇರವಾಗಿ ನಿರೂಪಿಸುವ ಹಾದಿಯೂ ಇವರದಲ್ಲ. ಇವರ ಮನಸ್ಸಿನ ಪ್ರತಿಕ್ರಿಯೆಯೇ ಬೇರೆ ತೆರ. ಇವರು ಕಂಡ ರೂಪ ಸನ್ನಿವೇಶಗಳೆಲ್ಲ ಇವರ ಮನಸ್ಸಿನ ಕಮ್ಮಾರ ಶಾಲೆಯಲ್ಲಿ ವಿಚಿತ್ರ ರೂಪ ತಳೆದು ಹೊಸ ಬೆಡಗಿನಿಂದ ಹೊರಬರುತ್ತವೆ. ತಮ್ಮ ಮನಸ್ಸಿಗೆ ಏನು ತಾಕಿತೋ, ನೋಡುಗರ ಮನಸ್ಸಿನಲ್ಲಿ ಏನು ಪರಿಣಾಮ ಉಂಟುಮಾಡಬೇಕೋ ಅಷ್ಟೇ ಇವರ ಲಕ್ಷ್ಯ. ಅದೇ ಇವರ ಗಮ್ಯ. ಉಳಿದದ್ದು ಗೌಣ. ಹೀಗೆ, ಇವರ ಹೃದಯಸರಸ್ಸಿನಲ್ಲಿ, ಸಹಾನುಭೂತಿಪರ ವಾತಾವರಣದಲ್ಲಿ, ಮಿಂದ ಈ ಚಿತ್ರಗಳು ಹೊಸ ಮೈಯಾಂತು ಹೊಸತನದಿಂದ ಹೊರ ಬರುತ್ತವೆ. ಇವರ ಹೃದಯ ಒಂದು ರಾವುಗನ್ನಡಿ. ಆ ರಾವುಗನ್ನಡಿಯ ಅಡಿಯಲ್ಲಿ ಕಾಣುವ ಚಿತ್ರ,ಮೂಲದ ಪ್ರತಿಕೃತಿಯಲ್ಲ. ಪ್ರತಿಕ್ರಿಯೆಯ ರಸಸಿದ್ಧಿ. ವ್ಯಂಗ್ಯಾನುಭೂತಿಯ ಪಕ್ವಫಲ. ವ್ಯಂಗ್ಯ, ಅನುಭೂತಿ, ಎರಡೂ ಇರುವುದರಿಂದ ನಗೆಯೇ ಇದರ ಆತ್ಮ. ಇದರ ಹೊಗರು. ಸಮಾಜದ ಹುಳುಕನ್ನೇ ರಾವುಗನ್ನಡಿಯಲ್ಲಿ ಎತ್ತಿ ಹಿಡಿಯುವುದೇ ಇವರ ಚಿತ್ರದ, ಇವರ ಕಲೆಯ ಉದ್ದೇಶ. ಈ ಉದ್ದೇಶ ನೆರವೇರಿದಾಗಲೇ ಅದು ಸಾರ್ಥಕ. ವಿದೂಷಕಸಮ್ಮತವೇ ಇವರ ಹಾದಿ. ಜಗಳವಿಲ್ಲದೆ, ಕದನವಿಲ್ಲದೆ, ನಗೆಯ ಕಡಲುಬ್ಬಿಸಿ, ಆ ಅಲೆಯ ಹೊಯ್ದಾಟದ ನಡುವೆ ನಮ್ಮ ವಿಕಾರ ಸ್ವರೂಪವನ್ನು ಎತ್ತಿ ತೋರಿಸುವ ವಿಡಂಬನ ವಿಧಾನ ಇವರದು. ನಗೆಯ ರಸಾಯನದಲ್ಲಿ ಲೋಕಸಂಗ್ರಹಕ್ಕೆ ಹೊರಟ ಸಿದ್ಧ ಕಲಾವಿದ ಡೇವಿಡ್ ಲೋ.

ಡೇವಿಡ್ ಲೋ ಸಂಪತ್ತಿನ ಆರಾಧಕರಲ್ಲ. ಇವೊತ್ತು ಜಗತ್ತನ್ನು ಅನರ್ಥದ ಪ್ರೇತಮಾರ್ಗದಲ್ಲಿ ಕೊಂಡೊಯ್ಯುತ್ತಿರುವ ಅರ್ಥವ್ಯವಸ್ಥೆಯ ಅತಿರೇಕಗಳನ್ನು ಅವರು ಮನಗಂಡಿದ್ದಾರೆ. ಅಂತೆಯೇ ಅದರ ಅನರ್ಥಗಳನ್ನು ನಗೆ ಮಿಡಿಯುವ ಹಾಗೆ, ಕರುಳು ಕಿವಿಚುವ ಹಾಗೆ, ಹೃದಯ ಹಿಂಡುವ ಹಾಗೆ ನಿರೂಪಿಸಬಲ್ಲ ಸಹೃದಯತೆ ಅವರಿಗೆ ಇದೆ.

ಅಮೆರಿಕದ ನ್ಯೂಯಾರ್ಕ್ ನಗರ ಪಾಶ್ಚಾತ್ಯ 'ಅರ್ಥಸಂಸ್ಕೃತಿ'ಯ ಮೂರ್ತ ಸ್ವರೂಪ. ಈ ಸಂಸ್ಕೃತಿಯ ಬಿಳಿ-ಕಪ್ಪುಗಳೆರಡನ್ನೂ—ಎರಡು ಮುಖಗಳನ್ನೂ

—ಕಾಣಬೇಕಾದರೆ ಅಲ್ಲಿಗೆ ಹೋಗಬೇಕು. ಅಲ್ಲಿ ಸಂಪತ್ತಿನ ರಾಶಿಯ ಮಗ್ಗುಲಲ್ಲೆ ಅನರ್ಥದ ಕೊಳಕು ನಾತ ಮೂಗು ಬಡಿಯುತ್ತದೆ. ಅನರ್ಥ ಪರಂಪರೆಯ, ಅನ್ಯಾಯದ ಜೋಮಾಲೆಯ ನೆಲೆಮನೆ ಅದು. ವೈಭವ ವ್ಯಭಿಚಾರಗಳ ತಿಪ್ಪೆ ಅದು. ಇದನ್ನು ಕಂಡ ಕಲಾವಿದ ಹೇಗೆ ಚಿತ್ರಿಸಬೇಕು? ನೋಡುವವರ ಮನಸ್ಸಿನಲ್ಲಿ ಕೆರಳಿಸಬೇಕಾದ್ದು ಜಿಗುಪ್ಸೆಯನ್ನೆ, ರೋಷವನ್ನೆ, ಕರುಣೆಯನ್ನೆ, ನಾಚಿಕೆಯನ್ನೆ? ಯಾವುದು ಸರಿ? ಕಲೆಯಲ್ಲಿ ಅನುಸರಿಸಬೇಕಾದ ವಿಧಾನ ಯಾವುದು?

ಡೇವಿಡ್ ಲೋ ಅನುರಿಸಿದ್ದು ವ್ಯಂಗ್ಯವಿಧಾನ. ಅವರು ಮನಸ್ಸಿನಲ್ಲಿ ಎದ್ದ ಅಗಾಧ ಆಂದೋಲನಕ್ಕೆ,ದುಃಖದ ಕಡಲಿಗೆ,ಹಾಸ್ಯದ ತೆಳುಪೊರೆ ಸುತ್ತಿ ಜಗತ್ತಿನ ಮುಂದಿಟ್ಟರು. ಪರಿಣಾಮ: ಮೊದಲು ನಗೆ; ಅನಂತರ ಆ ನಗರದ ಭೀಕರ ಚಿತ್ರ.

ಯಥಾಪ್ರಕಾರ ಅವರು ಉಪಯೋಗಿಸಿದ ಸಾಧನ ಅಷ್ಟು ಮಸಿ, ಒಂದು ಕುಂಚ. ಇದರಿಂದ ಎಳೆದ ನಾಲ್ಕು ಗೆರೆ. ಒದೊಂದು ಗೆರೆಗೂ ಹೃದಯ ಪ್ರವೇಶ ಮಾಡಿ ನೋವಿನ ರಕ್ತಸ್ರೋತ ಮಾಡಿಸಬಲ್ಲ ಕೂರ್ಪಿತ್ತು.

ನ್ಯೂಯಾರ್ಕ್ ನಗರದ ದೃಶ್ಯ: ಮುಗಿಲು ಮುಟ್ಟುವ ರಾಕ್ಷಸಸೌಧ. ಅದರ ಕೆಳಗೆ ಗಾಳಿ ಬೆಳಕು ಕಷ್ಟಪಟ್ಟು ಪ್ರವೇಶ ಮಾಡಬೇಕು. ಆ ಎತ್ತರಕ್ಕೆ ಆಷ್ಟೊಂದು ಕಿರಿದೆನಿಸಿದ ಬೀದಿ. ಅಲ್ಲಿ ಇಂದಿನ ಪಾಶ್ಚಾತ್ಯ ಅರ್ಥನಾಗರಿಕತೆಯ ಪಾಪಕೂಪವನ್ನೆಲ್ಲ, ದುಃಖಸಾಗರವನ್ನೆಲ್ಲ ಕಾಣಬಹುದಾಗಿದೆ. ಉನ್ನತವಾದ ಸೌಧವೊಂದರ ಮೇಲೆ, ಅಡಿಯಲ್ಲಿ ನಡೆಯುತ್ತಿರುವ ಈ ಶೋಕ ವ್ಯಾಪಾರವನ್ನೆಲ್ಲ ನೋಡುತ್ತ, ಚಿಂತಾಮಗ್ನನಾಗಿ, ಕೈಮೇಲೆ ಗಲ್ಲವಿಟ್ಟು ಕೂತಿದ್ದಾನೆ—ಸೈತಾನ. ಅವನ ತಲೆಯಮೇಲೆ ಎರಡು ಕೊಂಬು. ಅಲ್ಲಿ—ಕೆಳಗಡೆ—ನಡೆಯುತ್ತಿರುವ ಅನ್ಯಾಯ ಪರಂಪರೆಯೆಲ್ಲ ಅವನಿಗೂ ಹೊಸದು; ಅವನು ಕೂಡ ಕಂಡರಿಯ. ಆದ್ದರಿಂದಲೇ ಅವನಿಗೆ ಚಿಂತೆ. 'ನಾ ಕೂಡ ಕಲಿಯಬೇಕಾದ್ದಿದೆ ಇಲ್ಲಿ!' ('well, I have to learn it, too!') ಎನಿಸಿದೆಯಂತೆ ಅವನಿಗೆ. ಈ ಚಿತ್ರ ಕೆರಳಿಸುವ ನಗೆ, ಹೃದಯವನ್ನೇ ಅಲುಗಿಸಬಲ್ಲ ತೀಕ್ಷ್ಣಧಾರೆ.

ಡೇವಿಡ್ ಲೋ ಹಿರಿಯ ದ್ರಷ್ಟಾರ. 'ದಿ ಈವಿನಿಂಗ್ ಸ್ಟ್ಯಾಂಡರ್ಡ್' ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಅವರು ಬಹುಕಾಲ ಕೆಲಸ ಮಾಡುತ್ತಿದ್ದರು. ಆ ಪತ್ರಿಕೆಯ ವ್ಯಂಗ್ಯಚಿತ್ರಕಾರರಾಗಿದ್ದರು ಅವರು. ಆ ಪತ್ರಿಕೆಯ ಒಡೆಯ—ಬಂಡವಾಳ ವ್ಯವಸ್ಥೆಯ ಆರಾಧಕರಾದ ಲಾರ್ಡ್ ಬೀವರ್ ಬ್ರೂಕ್. ಆದರೆ

ಡೇವಿಡ್ ಲೋ ಅವರದು ಸಾಮಾನ್ಯ ಜನರ ವಕೀಲಿ. ಇವರಿಬ್ಬರಿಗೂ ಗಂಟು ಬಿದ್ದದ್ದೇ ಆಶ್ಚರ್ಯ.

ಆದರೆ ಅಲ್ಲೇ ಲೋ ಅವರ ಹಿರಿಮೆ ಇದ್ದುದ್ದು. ವಿರೋಧ ಪಂಗಡದಲ್ಲೇ ಇದ್ದು, ಅವರ ಮುಖಕ್ಕೆ ರಾವುಗನ್ನಡಿ ಹಿಡಿಯುವ ಚಾಣಾಕ್ಷರಾಗಿದ್ದರು ಅವರು. ಒಮ್ಮೆ—ಎಂದರೆ ಅಬಿಸೀನಿಯಾ ಯುದ್ಧ ಪ್ರಾರಂಭವಾಗಿದ್ದಾಗ—ಇಟಲಿಯ ಮುಸೋಲಿನಿ ಅದನ್ನು ಕಬಳಿಸಲು ಮೊದಲಿಟ್ಟದ್ದಾಗ—ಡೇವಿಡ್ ಲೋ ಅವರು ಇಟಲಿಯ ಈ ಆಕ್ರಮಣವನ್ನು ಕಟುವಾಗಿ ಟೀಕಿಸಿ ಚಿತ್ರ ಬರೆದರು. ಕೂಡಲೇ ಒಡೆಯ ಬೀವರ್‌ಬ್ರೂಕರ 'ಫರ್ಮಾನ್' ಬಂತು—'ನೀವು ಅಬಿಸೀನಿಯಾದ ವಿಚಾರ ಬರೆಯಬಾರದು,' ಎಂತ. ಆದರೆ ಹಾಸ್ಯದೃಷ್ಟಿಯ ಡೇವಿಡ್ ಲೋಗೆ ಸೋಲಿನ ಸೊಲ್ಲೇ ಇಲ್ಲ. ಮರುದಿನವೇ ಅವರ ಪತ್ರಿಕೆಯಲ್ಲೇ ಬಂತು ವ್ಯಂಗ್ಯಚಿತ್ರ —ಮೂರು ಬೀವರ್ ಬ್ರೂಕ್ ಕಪಿಗಳು: 'ಅಬಿಸೀನಿಯಾ ವಿಚಾರ ಕೇಳುವುದಿಲ್ಲ', 'ಅಬಿಸೀನಿಯಾ ವಿಚಾರ ಮಾತನಾಡುವುದಿಲ್ಲ', 'ಅಬಿಸೀನಿಯಾ ವಿಚಾರ ನೋಡುವುದಿಲ್ಲ', ಎಂದು ಅವುಗಳ ತಲೆಬರಹ. ನೋಡಿ ತಲೆ ಚಚ್ಚಿಕೊಳ್ಳಬೇಕೇ ?....

ಡೇವಿಡ್ ಲೋ ಕೇವಲ ಆದರ್ಶವಾದಿಯಲ್ಲ; ಪಕ್ಕಾ ಯಥಾರ್ಥವಾದಿ. ಅವರು ಇತರರು ಅನುಸರಿಸುವ ಹಾದಿ ಅನುಸರಿಸತಕ್ಕವರೂ ಅಲ್ಲ. ಅವರದೇ ವಿಶಿಷ್ಟ ವಿಧಾನ. ಇತರರು ರಷ್ಯಾವನ್ನು ಚಿತ್ರಿಸಬೇಕಾದರೆ ಹಿಮಕರಡಿಯನ್ನೂ, ಇಂಗ್ಲೆಂಡನ್ನು ಚಿತ್ರಿಸಬೇಕಾದರೆ 'ಜಾನ್ ಬುಲ್ಲ' ನನ್ನೂ, ಅಮೆರಿಕಾ ಚಿತ್ರಿಸಬೇಕಾದಾಗ ಉದ್ದನೆಯ ಗಡ್ಡದ ಬಾಗಿದ ಮೈಯ ಸ್ವಾಮಿ ಕಕ್ಕಾ (ಅಂಕಲ್ ಸ್ಯಾಮ್) ನನ್ನೂ ಚಿತ್ರಿಸುತ್ತಾರೆ. ಆದರೆ ಡೇವಿಡ್ ಲೋಗೆ ಈ ತುಳಿದ ಹಾದಿ ಬೇಕಿಲ್ಲ. ರಷ್ಯಾ ಚಿತ್ರಿಸಬೇಕಾದರೆ ಕರಡಿಯ ಬದಲು ಸ್ಟಾಲಿನನನ್ನೇ ಚಿತ್ರಿಸಿಯಾರು. ಅಮೆರಿಕಾಧ್ಯಕ್ಷ ಫ್ರಾಂಕ್‌ಲಿನ್ ರೂಸ್‌ವೆಲ್ಟ್ ಸತ್ತಾಗ ಅವರು ಬರೆದ ಯಥಾರ್ಥ ಚಿತ್ರ ಮನಕರಗಿಸುವಂತಿದೆ. ತೆರವಾದ ಮೇಜಿನ ಮೇಲೆ ರೂಸ್ವೆಲ್ಟರು ಬಳಸುತ್ತಿದ್ದ ಸಿಗರೇಟ್ ಕೊಳವೆ. ಒಬ್ಬ ಸಾಮಾನ್ಯ ಅಮೇರಿಕನ್ ಸಿಪಾಯಿ ತನ್ನ ಅಂತ್ಯಗೌರವದ ಕಾಣಿಕೆಯಾಗಿ ಆ ಮೇಜಿನ ಮೇಲೆ ಪುಷ್ಪಗುಚ್ಛವನ್ನಿಡುತ್ತಿದ್ದಾನೆ. ಅಷ್ಟೇ. ಹಿರಿಯ ವ್ಯಕ್ತಿಗಳ ಆಡಂಬರವೊಂದೂ ಇಲ್ಲ. ಮನುಷ್ಯನಿಗೆ ಆತ್ಮವೆಂಬುದೊಂದಿದ್ದರೆ, ರೂಸ್ವೆಲ್ಟರ ಆತ್ಮಕ್ಕೆ

ಇದಕ್ಕಿಂತ ಪ್ರಿಯವಾದ ಕಾಣಿಕೆ ಬೇರೊಂದಿಲ್ಲವೆನ್ನಬಹುದೇನೋ.

ಜಗತ್ತಿನ ರಾಜಕೀಯ ಅನುಸರಿಸುತ್ತಿದ್ದ ವಕ್ರಮಾರ್ಗವನ್ನು ಅವರಂತೆ ಬೇರೆ ಯಾರೂ ಟೀಕಿಸಲಾರರು. ಇದನ್ನು ಎಲ್ಲರೂ ಗಮನಿಸಿದ್ದಿದ್ದರೆ ಇಂದಿನ ಅನರ್ಥವೆಲ್ಲ ನಡೆಯುತ್ತಲೇ ಇರಲಿಲ್ಲ. ಬ್ರಿಟನ್ನಿನ ಆಗಿನ ಪ್ರಧಾನಿ ಚೇಂಬರ್ ಲೇನ್ ಮುಂತಾದ ಸಾಮ್ರಾಜ್ಯವಾದಿಗಳನ್ನು ಕಂಡರೆ ಲೋಗೆ ತುಂಬಾ ತಾತ್ಸಾರ. ಚೇಂಬರ್‌ಲೇನರನ್ನು ನೋಡಿದರೇ ಸಾಕು. ಅವರು ಮಾಡಿದ ಫಜೀತಿಯೆಲ್ಲ ಅರ್ಥವಾಗಬೇಕು. ಅಂಥ ಚಿತ್ರಕೌಶಲ ಲೋದು. ತಮ್ಮ ಕುರ್ಚಿಯ ಅಡಿಯಲ್ಲಿ ರುವ ಬಾಂಬೊಂದಕ್ಕೆ ಬೆಂಕಿಯಿಡಲು ಚೇಂಬರ್‌ಲೇನ್ ಮುಸೋಲನಿಗೆ ಬೆಂಕಿ ಕಡ್ಡಿ ಕೊಡುತ್ತಿರುವ ಚಿತ್ರವೊಂದು ಬಹು ಅರ್ಥಪೂರ್ಣವಾಗಿದೆ. ಇನ್ನೊಂದು ಚಿತ್ರದಲ್ಲಿ ಚೇಂಬರ್‌ಲೇನ್ ತಮ್ಮ ಗೆಳೆಯನಾದ ಸಾಮ್ರಾಜ್ಯವಾದಿ ಬ್ಲಿಂಪನ ಜತೆಯಲ್ಲಿ ಅಗ್ನಿಪರ್ವತದ ಮೇಲೆ ಕುಳಿತಿದ್ದಾರೆ. ರಷ್ಯನ್ ಪ್ರತಿನಿಧಿ ಲಿಟ್ವಿನಾಫ್ ಅದನ್ನು ಆರಿಸಲು ಸಹಾಯ ಮಾಡುವುದಾಗಿ ಮುಂದೆ ಬಂದಾಗ ಚೇಂಬರ್‌ಲೇ ಆ ಸಹಾಯವನ್ನು ನಿರಾಕರಿಸುತ್ತಾರೆ; ತಮ್ಮ ಬೆನ್ನು ಬೇಯುತ್ತಿರುವುದನ್ನೂ ಲೆಕ್ಕಿಸದೆ ಕೂತಿದ್ದಾರೆ; 'ಕೈ ಸುಟ್ಟುಕೊಳ್ಳುವುದು ಸಾಧ್ಯವಿಲ್ಲ' ಎನ್ನುತ್ತಿದ್ದಾರೆ. ಲೋ ಅವರ ಪ್ರತಿಭೆ ಕಾಣುವುದು ಇಲ್ಲಿ.

ಯುದ್ಧ ಮುಗಿದಾಗಲೂ ಅವರು ಯಥಾರ್ಥದ ನಗ್ನ ಸತ್ಯವನ್ನು ಮರೆಯ ಲಿಲ್ಲ. ಯುದ್ಧ ಕೊನೆಗೊಂಡಾಗ ಅವರು ಚಿತ್ರಿಸಿದ್ದು ಯುದ್ಧವೀರನನ್ನಲ್ಲ, ಸಾಮಾನ್ಯ ಪ್ರಜೆಯನ್ನು: ಯುದ್ಧ ಮುಗಿಯಿತು; ಇನ್ನು ನಮ್ಮ ಮುರಿದ ಮನೆ ಯನ್ನು ಕಟ್ಟೋಣ—ಎಂಬ ಪ್ರಜಾಸಾಮಾನ್ಯರನ್ನು. ವಿದೇಶಾಂಗ ಮಂತ್ರಿ ಸಮ್ಮೇಳನ ಮುರಿದು ಬಿದ್ದಾಗ, 'ನಮ್ಮ ಭವಿಷ್ಯ ನಮಗೆ ಮೊದಲೇ ಗೊತ್ತಿತ್ತು!' ಎಂಬ ಸಾಮಾನ್ಯ ಪ್ರಜೆಯ ಉದ್ಗಾರ. ಪ್ರಪಂಚಸಂಸ್ಥೆಯಲ್ಲಿ ಒಡಕು ಹುಟ್ಟಿ ದಾಗ, ಯುದ್ಧಭಯ ಮತ್ತೆ ಘರ್ಜಿಸಿದಾಗ, ಆ ಸಂಸ್ಥೆಯ ಕಟ್ಟಡಕ್ಕಾಗಿ ತೋಡಿದ ತಳಹದಿ ಶಾಂತಿಯ ಅಸ್ತಿಭಾರವಾಗುವುದೋ? ಅಥವಾ ಬಾಂಬಿನ ಮಳೆಗರೆ ದಾಗ ಅವಿತುಕೊಳ್ಳಲು ರಕ್ಷಣಾಸ್ಥಾನವಾಗುವುದೋ?—ಎಂಬ ಭೀಕರ ಪ್ರಶ್ನೆ. ಇದೀಗ ಡೇವಿಡ್ ಲೋ ಅವರ ವ್ಯಂಗ್ಯಚಿತ್ರಕಲೆಯ ಸ್ವರೂಪ.

ಅಂತೆಯೇ ಡೇವಿಡ್ ಲೋ ಅವರ ವ್ಯಂಗ್ಯಚಿತ್ರಗಳಿಗೆ ಪ್ರಂಪಚದ ಮನ್ನಣೆ. ಅವರ ವ್ಯಂಗ್ಯಚಿತ್ರವೆಂದರೆ ರಾಜಕೀಯ ನಾಯಕರಿಗೆ ಕೂಡ ಭೀತಿ. ಗೀಚಿದ

ಗೆರೆಯಲ್ಲಿ ವಿಶ್ವರೂಪ ದರ್ಶನ ಮಾಡಿಸಿಕೊಟ್ಟ ವ್ಯಂಗ್ಯರಸಿಕರು ಅವರು. ದೈವ ದತ್ತವಾದ ಭವ್ಯ ವಿಶ್ವದಲ್ಲಿ ಮನುಷ್ಯ ಮಾಡಿಕೊಂಡ ಹಗರಣವನ್ನು ಎತ್ತಿಹಿಡಿದ ಸಾಹಸಿ. ಅವರು ಬರೆದಾಗ ಕೋಟಿ ಜನದ ಒಡೆಯರೂ ಗಡಗುಟ್ಟಿದರು. ಎಲ್ಲರ ಮನತಟ್ಟುವ ಕಲಾಸಿದ್ಧಿ ಅವರದು. ಅವರದು ಜಗತ್ತಿಗೆ ನೀತಿ ಬೋಧಿಸುವ ಹಂಬಲವಲ್ಲ. ಮುಚ್ಚಿದ ಹೃದಯದ ಹುಂಬತನವೂ ಅಲ್ಲ. ಜನದ ಕಣ್ಣಾಗಿ, ಹೃದಯವಾಗಿ, ಬುದ್ಧಿಯಾಗಿ, ಕಲಾಸೃಷ್ಟಿ ಮಾಡುವುದು ಅವರ ವಿಶಿಷ್ಟ ಮಾರ್ಗ. ಈ ಮಾರ್ಗ ಇತರ ಕಲಾಮಾರ್ಗಗಳಿಗಿಂತ ಭಿನ್ನವೆನ್ನಿ. ಆದರೆ ಕಲೆಯಲ್ಲ ಎನ್ನಲು ಮಾತ್ರ ಸಾಧ್ಯವಿಲ್ಲ. ನಿಜವಾದ ಜನತಾ ಕಲಾವಿದ, ಜನವತ್ಸಲ, ಡೇವಿಡ್ ಲೋ.*

—

* ೧೯೪೭.



# ಚಾರ್ಲಿ ಚಾಪ್ಲಿನ್

ಚಾರ್ಲಿ ಚಾಪ್ಲಿನ್ ಹೆಸರು ಯಾರು ಕೇಳಿಲ್ಲ ? ಚತುರ ನಗೆಗಾರರೆಂದು, ನಗೆಯ ಹಿಂದೆ ಜೀವನದ ಕಟು ವಿಮರ್ಶೆ ನೀಡಬಲ್ಲರೆಂದು ಹೆಸರಾದ ಚಿತ್ರ ನಟರು ಅವರು.

ಅಮೆರಿಕದಿಂದ ಬರುವ ನೂರಾರು ಚಿತ್ರಗಳ ನಡುವೆ ಆಗೊಮ್ಮೆ ಈಗೊಮ್ಮೆ ಇವರ ಚಿತ್ರಗಳು ಪ್ರದರ್ಶಿತವಾಗುತ್ತಿರುತ್ತವೆ. ತೊಡೆ ಕುಣಿಸಿ ಚುಂಬನ ಕಲಾವಿಲಾಸವನ್ನೇ ಪ್ರದರ್ಶಿಸುವ ಕಾಮಪ್ರಚೋದಕ ಚಿತ್ರಗಳಿಗಿಂತ, ಕೊಲೆ ದರೋಡೆ ಮುಂತಾದ ಹೇಯಕೃತ್ಯ ವರ್ಣನೆ ಮಾಡುವ ಚಿತ್ರಗಳಿಗಿಂತ, ಎಲ್ಲ ಪುರೋಗಾಮಿ ಶಕ್ತಿಗಳನ್ನೂ ಅಪಹಾಸ್ಯಕ್ಕೀಡುಮಾಡಿ ಮನುಷ್ಯನ ಮೃಗೀಯ ಭಾವನೆಗಳನ್ನೇ ಪ್ರಚಾರ ಮಾಡುವ ಚಿತ್ರಗಳಿಗಿಂತ ತೀರ ಭಿನ್ನವಾದ ಇವರ ಚಿತ್ರಗಳು ಚಿತ್ರಮಂದಿರದಲ್ಲಿ ಪ್ರದರ್ಶಿತವಾಗುವುದು ತುಂಬಾ ಅಪೂರ್ವ. ಆದರೂ ಅವು ಪ್ರದರ್ಶಿತವಾದಾಗಲೆಲ್ಲ ಅವು ಎಲ್ಲ ವಿಚಾರಪ್ರಿಯರ, ಮಾನವತಾವಾದಿಗಳ ಪ್ರಶಂಸೆಯನ್ನು ಪಡೆದೇ ಇವೆ.

ಚಾರ್ಲಿ ಚಾಪ್ಲಿನ್ ಎಂದಾಗ ಆ ಹೆಸರಿನ ಹಿಂದೆ 'ನಗೆ' ಎಂಬ ಅರ್ಥ ಕೂಡಿಕೊಂಡೇ ಇರುತ್ತದೆ. ಪದಕ್ಕೆ ಅರ್ಥ ಕೂಡಿಕೊಂಡೇ ಇರುವಂತೆ, 'ಚಾರ್ಲಿ ಚಾಪ್ಲಿನ್' ಎಂದೊಡನೆಯೇ ನಗೆಯ ಅವತಾರವೂ ಆಗಲೇಬೇಕು. ಚಾರ್ಲಿ ಚಾಪ್ಲಿನ್, ನಗೆ—ಇವೆರಡೂ ಪರ್ಯಾಯ ಪದಗಳೆಂದರೂ ಸರಿಯೇ. 'ಕೈಲಾಸಂ' ಎಂದೊಡನೆಯೇ ನಗೆಯ ಜಾದೂಗಾರ ಎಂದು ಕನ್ನಡಿಗರು ಭಾವಿಸಿಕೊಳ್ಳುವುದಿಲ್ಲವೆ? ಹಾಗೆ.

ಆದರೆ ಕೈಲಾಸಂ ನಾಟಕ ಕೇವಲ ನಗೆಯಲ್ಲ. ನಗೆಯ ಅಲೆಯಾಗಿ ಅವರ ನಾಟಕಗಳೆಲ್ಲ ಗಾಳಿಯಲ್ಲಿ ತೇಲಿ ಹೋಗುವುದಿಲ್ಲ. ಕರ್ಪೂರವನ್ನು ಸುಟ್ಟರೆ ಕೊನೆಯಲ್ಲಿ ಏನೂ ಉಳಿಯುವುದಿಲ್ಲವಂತೆ. ಶುದ್ಧನಗೆ—ನಗೆಗಾಗಿ ನಗೆ—ಆ ಜಾತಿಯದು. ಆದರೆ ಕೈಲಾಸಂ ಹಾಸ್ಯ ಕೊನೆಗೆ ನಗೆಯಲ್ಲೇ ಲೀನವಾಗುವುದಿಲ್ಲ. ಕೊನೆಯಲ್ಲಿ ಉಳಿಯುವುದು ಶೋಕದ ಹನಿ; ಅಂತಃಕರಣದ, ಅನುಕಂಪದ ಭಾವ. ಅವರೇ ಹೇಳಿದ್ದಾರೆ:

> 'ಕಿರಿ ಆಳದ ನಗೆ ನೀರಿನ ಮೇಲೆ
> ತಿರುಗಾಡುತ ಬಹುವೇಳೆ
> ಕಣ್ಣೀರಿನ ಕಡಲಿನ ಪಾಲು
> ಹಾಸ್ಯದ ಹರಿಗೋಲು.'

ಚಾರ್ಲಿ ಚಾಪ್ಲಿನರದು ಕೈಲಾಸಂ ಕಲೆಯ ಜಾತಿ. ನಗೆಯ ಮೊನೆಯಲ್ಲಿ ಅಳುವಿನ ಆಳವನ್ನು ತೋರಿಸುವವರಾತ. ಎ.ಜಿ.ಗಾರ್ಡಿನರ್ ಹೇಳಿದಂತೆ, ಚಾರ್ಲಿ ಚಾಪ್ಲಿನ್ ಕುಚೋದ್ಯಗಾರನಲ್ಲ. ಅವರೊಬ್ಬ ಪ್ರವಾದಿ. ಜಗತ್ತಿನ ಅಖಂಡತೆಯನ್ನು, ಮಾನವತೆಯ ಏಕತೆಯನ್ನು, ಸಾರಲು ಚಲನಚಿತ್ರವೊಂದು ಮಹಾಸಾಧನವೆಂಬುದನ್ನು ಕಂಡುಕೊಂಡು. ಈ ತತ್ವಪ್ರಚಾರಕ್ಕಾಗಿ ಜೀವನವನ್ನೇ ಮುಡಿಪಿಟ್ಟ ಮಹಾಸಾಧಕ ಚಾರ್ಲಿ ಚಾಪ್ಲಿನ್.

ಅಂತೆಯೇ ಚಾರ್ಲಿ ಚಾಪ್ಲಿನ್ ಕಲಾವಂತಿಕೆ ಎಲ್ಲ ದೇಶಗಳ ಜನರನ್ನೂ ಮುಗ್ಧಗೊಳಿಸಿದೆ. ಏಷ್ಯದ ಜನಸ್ತೋಮ, ಯೂರೋಪಿನ ಜನತೆ, ಆಫ್ರಿಕದ ನೀಗ್ರೋಗಳು—ಎಲ್ಲರಿಗೂ ಅವರು ಪ್ರಿಯರಾಗಿರುವುದಕ್ಕೆ ಅವರ ಈ ಮಾನವೀಯತೆಯೇ ಕಾರಣ. ಚಲನಚಿತ್ರದ ಭಾಷೆ ಆಡುವ ಮಾತಿನ ಭಾಷೆಯಲ್ಲ. ಅದು ನಾಟಕದ ಭಾಷೆಯೂ ಆಯಿತು. ಆದರೆ ಚಲನಚಿತ್ರ ಒಂದು ಹೊಸ ಕಲಾಪ್ರಕಾರ.

ಈ ಹೊಸ ಕಲಾಪ್ರಕಾರಕ್ಕೆ ಹೊಸ ಭಾಷೆಯೇ ಬೇಕು. ಈ ಭಾಷೆ ಆಡುವ ಮಾತಿನದಲ್ಲ; ಅಭಿನಯದ್ದು, ಸನ್ನೆಯದು. ಇದು ಚಾರ್ಲಿ ಚಾಪ್ಲಿನರ ಅಭಿಪ್ರಾಯ. ಆದರೆ ಹಲವು ಚಲನಚಿತ್ರ ತಯಾರಕರು ಇದನ್ನರಿತಿಲ್ಲ. ಆಡುವ ಮಾತಿಗೆ ಅವರು ಅಭಿನಯವನ್ನು ಹೊಂದಿಸುತ್ತಾರೆ. ಚಾರ್ಲಿಯ ಚಿತ್ರದಲ್ಲಿ ತದ್ವಿರುದ್ಧ: ಅಭಿನಯವೇ ಪ್ರಧಾನ; ಮಾತು ಗೌಣ; ಅದು ಇಲ್ಲದಿದ್ದರೂ ಸರಿಯೇ. ಅಂತೆಯೇ ಚಾಪ್ಲಿನರ ದೇಹದ ಪ್ರತಿಭಾಗವೂ ಪ್ರೇಕ್ಷಕರಿಗೆ ಭಾವ ಸಮಾರಾಧನೆಯ ಅಭಿನಯ ನೀಡುತ್ತದೆ. ಅವರ ದೇಹ ವೀಣೆಯಂತೆ ಮಿಡಿಯುವ ತಂತಿ. ಮಾತಿಗೆ ಮೀರಿದ ಭಾವ ಪ್ರಕಟನ—ಅಂತಃಕರಣಕ್ಕೆ ತಾಂಗುವ ರಸದೌತಣ—ಇದು ಅವರ ಗುರಿ. ಅವರ ಚಿತ್ರ, ಘರದೆಯ ಮೇಲೆ ಬೀಳುವ ನಿರ್ಜೀವ ಛಾಯೆಯಲ್ಲ. ಅದು ಸಜೀವ. ಬೇಕಾದರೆ ನೀವು ಚಾರ್ಲಿಗೆ ಕಚಕುಳಿಯಿಡಬಹುದು, ಅವರನ್ನು ಅಳಿಸಬಹುದು, ಉದ್ರೇಕಗೊಳಿಸಬಹುದು—ಎನ್ನುವಷ್ಟು ಸಜೀವ.

ಮಾತಿಗೆ ಮೀರಿದ ಈ ಅಭಿನಯಚಾತುರ್ಯದಿಂದಲೇ ಚಾರ್ಲಿ ಚಾಪ್ಲಿರ್ ಎಲ್ಲ ದೇಶಗಳ, ಎಲ್ಲ ವರ್ಗಗಳ ಜನರಿಗೂ ಪ್ರಿಯರಾಗಿರುವುದು.

ಎ. ಜಿ. ಗಾರ್ಡಿನರ್ ಎಂಬ ಲೇಖಕರು ಚಾರ್ಲಿ ಚಾಪ್ಲಿನರನ್ನು ಚಾರಲ್ಸ್ ಡಿಕನ್ಸನಿಗೆ ಹೋಲಿಸುತ್ತಾರೆ. ಇಬ್ಬರೂ ಮಾನವತಾವಾದಿಗಳು. ಇಬ್ಬರೂ ಬಡತನಲ್ಲಿ ಬೆಳೆದವರು. ಆದರೆ ಡಿಕನ್ಸ್ ಲೇಖಕ. ಚಾರ್ಲಿ ಚಾಪ್ಲಿನ್ ಚಲನಚಿತ್ರ ನಟ. ಚಲನಚಿತ್ರದ ಅವತಾರವಾಗದಿದ್ದರೆ ಚಾಪ್ಲಿನ್ ಬಹುಶಃ ಲೇಖಕರೋ ರಂಗಭೂಮಿಯ ನಟರೋ ಆಗುತ್ತಿದ್ದರೇನೋ. ಊಹಿಸುವುದು ಕಷ್ಟ. ಅಂತೂ ಚಾಪ್ಲಿನ್, ಡಿಕನ್ಸ್ ಇಬ್ಬರೂ ಬಡತನದ ಆಡುಂಬೊಲದಲ್ಲಿ ಆಟವಾಡಿದವರು. ಸಾಮಾನ್ಯಜನರನ್ನು—ಸಂತೆಯ ನೆರವಿಯನ್ನು — ಪತಿತರನ್ನು — ಚಿತ್ರಿಸುವುದರಲ್ಲೇ ಇಬ್ಬರಿಗೂ ಆಸಕ್ತಿ. ಡಿಕನ್ಸನ ಕಾದಂಬರಿಗಳನ್ನು ಓದಿದಾಗ ಆತನ ಪಾತ್ರನಿರೂಪಣಾ ಕೌಶಲವನ್ನೂ,ಆತ ರಚಿಸಿರುವ ಪಾತ್ರವೈವಿಧ್ಯವನ್ನೂ ಕಂಡು ಬೆರಗಾಗುತ್ತದೆ. ಜನಜಂಗುಳಿಯ ಅಳು-ನಗು, ಕೋಪ-ಕನಿಕರ, ದ್ವೇಷ-ಸ್ನೇಹ, ಮಮತೆ-ಮಾತ್ಸರ್ಯ, ಮಿತಿ-ವೈಪರೀತ್ಯ ಇವುಗಳನ್ನು ಕಂಡು ಅಂತಃಕರಣ ಮೃದುವಾಗುತ್ತದೆ. ಕೊನೆಗೆ ಹೊರಡುವುದು ಒಂದು ನಿಟ್ಟುಸಿರು, ಅಸಹಾಯತೆಯ ಉದ್ಗಾರ. ಈ ಜನಜಂಗುಳಿ ಎಷ್ಟು ಸಜೀವ! ಎಷ್ಟು ನಿರ್ದುಷ್ಟ!

ಎಷ್ಟು ಸರಳ! ಆದರೆ ಅವರ ಬಾಳ ಗೋಳಿಗೆ ಕೊನೆಯೆಲ್ಲಿ? ಈ ಜಂಗುಳಿಯಲ್ಲಿ ವ್ಯಕ್ತಿಶಃ ಒಬ್ಬೊಬ್ಬರೂ ಸನ್ನಿವೇಶದ ಶಿಶುಗಳು. ಅವರ ಬವಣೆಯನ್ನು ಕಂಡು ಮರುಗಬೇಕಷ್ಟೆ. ಬಿಡುಗಡೆ? ಎಂದೋ, ಹೇಗೋ,—ಯಾರು ಬಲ್ಲರು? ಡಿಕನ್ಸನ ಊಹೆಗೆ ನಿಲುಕದ ವಿಷಯ ಅದು.

ಚಾರ್ಲಿ ಚಾಪ್ಲಿನರ ಕಲೆಯೂ ಡಿಕನ್ಸರ ರೀತಿಯದು. ಬೀದಿಯ ಜೀವನವೇ ಅವರ ಕಲೆಯ ತಿರುಳು. ಈ ಜಗತ್ತೆಂಬುದು ನಿಷ್ಕರುಣೆಯ ಬೀಡು. ಈ ಕಟ್ಟುಗ್ರ ಜಗತ್ತಿನಲ್ಲಿ ಸರಳ ಸಹಜ ಜೀವಿಗಳಿಗೆ ಬಾಳುವ ಆಸೆಯೇ ಇಲ್ಲ. ಏನೂ ಅರಿಯದ ನಿರ್ದುಷ್ಟ ಜೀವಿಯ ಅಭಿನಯ ಮಾಡುವ ಚಾರ್ಲಿ ಈ ಆಭಾಸವನ್ನು—ಈ ರುದ್ರ ಸನ್ನಿವೇಶವನ್ನು—ನಗೆಯ ಹನಿ ಚಿಮುಕಿಸಿ ಪ್ರೇಕ್ಷಕರಿಗೆ ನೀಡುತ್ತಾರೆ. ಯಾಂತ್ರಿಕವಾದ ಜೀವನ ಹೇಗೆ ಎಲ್ಲ ಮಾನವ ಸಹಜ ಪ್ರವೃತ್ತಿಗಳನ್ನೂ ತೊಡೆಯುತ್ತದೆ—ಎಂಬುದನ್ನು ಚಿತ್ರಿಸುತ್ತಾರೆ. ಚಿತ್ರದ ನಾಯಕ ಯಾವಾಗಲೂ ವಿಷಣ್ಣಮುಖಿ. ವಿರೋಧಾಭಾಸಗಳ ಗೊಂದಲವೆಬ್ಬಿಸಿ ನಗೆಯ ಸಮಾರಾಧನೆ ಮಾಡುವ ಚಾರ್ಲಿ ಈ ನಗೆಯ ಹಿಂದೆ ಪ್ರೇಕ್ಷಕರಿಗೆ ನೀಡುವುದು ಈ ವಿಷಾದ ಚಿತ್ರ: ದಯಾರಹಿತ ಜಗತ್ತಿನಲ್ಲಿ ಈ ಬೆದರುಗಂಗಳ ಸಹಜ ಮಾನವ ಬೇಡುವ ಕ್ಷಮಾಭಿಕ್ಷೆ; ಹಣದ ಸರಪಳಿಯಲ್ಲಿ ಬಿಗಿದ ಹೃದಯದ ಬಿಡುಗಡೆಯ ಭಿಕ್ಷೆ.

ಚಾರ್ಲಿಯ ಚಿತ್ರಗಳೆಲ್ಲಾ ಸಾಮಾನ್ಯವಾಗಿ ವಿಷಾದಾಂತಗಳೇ. ವಿಷಾದಾಂತವೆಂದರೆ ಸಾಯಲೇಬೇಕೆಂದಲ್ಲ. ಕಟುಜಗತ್ತಿನ ನಡುವೆ ಉಸಿರು ಸಿಕ್ಕಿ ಸಾಯುತ್ತಿರುವ ಮಾನವತೆಯ ದಾರುಣ ಚಿತ್ರಗಳು ಅವು.

ಅವರ ಈಚಿನ ಚಿತ್ರಗಳಲ್ಲೊಂದಾದ 'ಮ'ಸ್ಯೂರ್ ವರ್ಡ್ಯೂ' ಎಂಬ ಚಿತ್ರ ಇವರ ಹಿಂದಣ ಚಿತ್ರಗಳಿಗಿಂತ ಭಿನ್ನ. ಇದರ ನಾಯಕ ಸಾಮಾನ್ಯ ಬ್ಯಾಂಕ್ ನೌಕರ—ಅಹಿಂಸಾ ಪ್ರೇಮಿ. ತನ್ನ ಕೆಲಸ ಕಳೆದುಕೊಂಡಾಗ ಹೆಂಡತಿ ಮಕ್ಕಳ ಪೋಷಣೆಗಾಗಿ ಹತ್ಯಾ ಪ್ರಕರಣವನ್ನೇ ನಡಸುತ್ತಾನೆ. ಆದರೆ ಅದು ವ್ಯವಹಾರ ಮುಖ. ವೈಯಕ್ತಿಕವಾಗಿ ಆವನು ಅಕಲುಷಿತ. ಪರಿಸ್ಥಿತಿಯ ದಾಸನಾಗಿ ಅವನು ಅಕೃತ್ಯ ನಡಸುತ್ತಾನೆ. ವೈಯಕ್ತಿಕವಾಗಿ ಅಹಿಂಸಾಪ್ರಿಯನೆನಿಸಿದರೂ ಸನ್ನಿವೇಶದ ಪ್ರಭಾವದಿಂದ ಕೊಲೆಯೆಸಗಿದ ಈತನಿಗೆ ನೇಣಿನ ಹಾದಿ. ಆದರೆ ರಾಷ್ಟ್ರದ ಉದ್ಧಾರದ ಹೆಸರಿನಲ್ಲಿ ಕೊಲೆಯೆಸಗುವ ಯುದ್ಧಪ್ರೇಮೀ ಸರಕಾರಗಳಿಗೆ

ನೇರವಾಗಿ, ಮದ್ದು ಗುಂಡು ಒದಗಿಸುವುದು ಕೀರ್ತಿಯ ಹಾದಿ, ಐಶ್ವರ್ಯದ ಹಾದಿ. ಇದು ಜಗತ್ತಿನ ನೀತಿ! ಇಂದಿನ ವ್ಯವಸ್ಥೆಯ ಈ ಭೀಕರ ಚಿತ್ರವನ್ನು ಇಲ್ಲಿ ಕಾಣಬಹುದು. ಅವರು ರಚಿಸಿದ ಇನ್ನೊಂದು ಚಿತ್ರ, ಕಲಾವಿದನ ಬಾಳಿನ ಕತೆ. ಅದೊಂದು ಚಿತ್ರಕಾವ್ಯ.

ಚಾರ್ಲಿ ಇಂದಿನ ವ್ಯವಸ್ಥೆಯ ಅವಸಾನದ ನೋವನ್ನು ಚಿತ್ರಿಸಿದ್ದಾರಾಗಲಿ, ಈ ಭಗ್ನಾವಶೇಷದಿಂದ ಹೊರಬರಲಿರುವ ನೂತನ ವ್ಯವಸ್ಥೆಯ ಹರಿಕಾರನ ಕೆಲಸವನ್ನು ಅವರು ಕೈಕೊಳ್ಳಲಿಲ್ಲ. ಪ್ರಗತಿ-ಪ್ರತಿಗಾಮಿ ಶಕ್ತಿಗಳ ನಡುವೆ ನಡೆಯುತ್ತಿರುವ ಘರ್ಷಣೆಯನ್ನು, ಈ ಘರ್ಷಣೆಯ ಫಲವಾಗಿ ರೂಪಿತವಾಗುವ ವ್ಯವಸ್ಥೆಯನ್ನು, ಹೀಗಾಗಲೇಬೇಕೆಂಬ ಆಶಾವಾದವನ್ನು ನಾವು ಅವರ ಚಿತ್ರಗಳಲ್ಲಿ ಕಾಣುವುದಿಲ್ಲ. ಅಸಹಾಯಕತೆಯ ನಿಟ್ಟುಸಿರಿನಲ್ಲಿ ಅವು ಕೊನೆಗೊಳ್ಳುತ್ತವೆ. ಆದರೆ ಇಂದು ಹಾಲಿವುಡ್ಡು ಜಗತ್ತಿನಲ್ಲೆಲ್ಲಾ ಪ್ರಸಾರ ಮಾಡುತ್ತಿರುವ ಕಾಮಪ್ರಚೋದಕ ದೃಶ್ಯಗಳನ್ನಾಗಲಿ, ಕೊಲೆಯ ನಾನಾ ಪ್ರಕಾರಗಳನ್ನಾಗಲಿ ಅವುಗಳಲ್ಲಿ ಕಾಣುವುದಿಲ್ಲ. ಅವರ ಚಿತ್ರ ಶುದ್ಧಾಂತಃಕರಣದ ರಸಬುಗ್ಗೆ.

ಅವರ ಎಪ್ಪತ್ತೈದು ವರ್ಷಗಳ ಮಾಗಿದ ಜೀವನವೇ ಒಂದು ಕಾವ್ಯ——ಅಂತಃಕರಣವನ್ನು ಕಲಕುವ ಕಾವ್ಯ. ಅವರು ಹುಟ್ಟಿದ್ದು ಲಂಡನ್ನಿನಲ್ಲಿ. ತಂದೆ ತಾಯಿಯರದು ನಾಟ್ಯ ಜೀವನ. ಕಡುಬಡತನ. ಕುಡುಕ ತಂದೆ. ಬೇರೆಯಾದ ತಾಯಿಗೆ ಕೆಲಸ ಹೋಯಿತು. ಹೊಲಿಗೆಯ ವೃತ್ತಿಯಿಂದ ಅವಳು ಸಂಸಾರ ನಿರ್ವಹಿಸಬೇಕಾಯಿತು ಹೀಗೆ ಚಾರ್ಲಿಯ ಬಾಲ್ಯ ಮೊದಲಿಟ್ಟಿತು.

ಐದನೆಯ ವರ್ಷದಲ್ಲಿ ಮೊದಲನೆಯ ಅಭಿನಯ. ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಅಮೆರಿಕ. ಆಮೇಲೆ ಕೆಲವೇ ವರ್ಷಗಳಲ್ಲಿ ಪ್ರಖ್ಯಾತ ನಟ, ನಿರ್ಮಾಪಕ, ನಿರ್ದೇಶಕ, ಕಥಾ ಲೇಖಕ.

ಮದುವೆ ನಾಲ್ಕು ಸಾರಿ. ನಾಲ್ಕನೆಯವಳೇ ಪ್ರಖ್ಯಾತ ನಾಟಕಕಾರ ಯೂಜಿನ್ ಓನೀಲನ ಮಗಳು. ಚಾಪ್ಲಿನರದು ತುಂಬು ಸಂಸಾರ.

ಚಾಪ್ಲಿನರಂಥ ನಿಜವಾದ ಕಲಾವಿದ ಯಾವ ಕೃತಕ ವ್ಯವಸ್ಥೆಗೂ ಕಟ್ಟುಬೀಳಲಾರ. ಹಾಗೆ ಆದಾಗ ಆತನ ಕಲೆಯ ಕೊಲೆ. ಇಂಗ್ಲೆಂಡಿನಲ್ಲಿ ಹುಟ್ಟಿದ ಈ ನಟರ ವಾಸ ಭೂಮಿ, ಕರ್ಮಭೂಮಿ ಅಮೆರಿಕಾ. ಹೆಂಡತಿ ಮಕ್ಕಳು ಅಮೆರಿಕನರು. ಸ್ಟುಡಿಯೋ ಇದ್ದದ್ದು ಅಮೆರಿಕದಲ್ಲಿ. ಅವರು ಮಾತ್ರ ಅಮೆರಿಕದ ಪ್ರಜೆತನಕ್ಕೆ

ಅರ್ಜಿ ಹಾಕಲಿಲ್ಲ. ನಾನು ರಾಷ್ಟ್ರೀಯವಾದಿಯಲ್ಲ—ಎಂಬುದೇ ಅವರ ಅಭಿಪ್ರಾಯ.

ಹಣದ ಕೃತಕ ವ್ಯವಸ್ಥೆ ಇಂದು ಹಾಲಿವುಡ್ಡನ್ನೆಲ್ಲಾ ವ್ಯಾಪಿಸಿಕೊಂಡು ಅಲ್ಲಿನ ಚಿತ್ರಕಲೆಯನ್ನು ಮಾನವತಾ ದೂರವಾದುದನ್ನಾಗಿ ಮಾಡಿದೆಯಷ್ಟೆ. ಆದರೆ ಚಾಪ್ಲಿನ್ ಈ ಕುಣಿಕೆಗೆ ಸಿಲುಕಲು ಒಪ್ಪದೆ ಸ್ವತಂತ್ರವಾಗಿ ಜನತಾ ಕಲಾಸೇವೆ ಮಾಡಲಿಚ್ಛಿಸಿದ ಕಲಾವಿದರ ಪೈಕಿ ಒಬ್ಬರು. ಇಂಥ ಕಲಾವಿದರೆಲ್ಲ ಅಮೆರಿಕಾ ವಿರೋಧಿಗಳೆಂಬ ನಾಮಧೇಯಕ್ಕೆ ಒಳಗಾಗಿ ಕಷ್ಟ-ತುರಂಗವಾಸಗಳಿಗೆ ಒಳಗಾಗಬೇಕಾಯಿತು. ಚಾರ್ಲಿ ಚಾಪ್ಲಿನ್ ಅಮೆರಿಕಾ ವಿರುದ್ಧ ಚಟುವಟಿಕೆಗಳ ಪರಿಶೀಲನಾ ಸಮಿತಿಯ ಸಂಶಯಗ್ರಸ್ತ ನೋಟಕ್ಕೆ ಒಳಗಾಗಬೇಕಾಯಿತು. ಅವರು ಇಂಗ್ಲೆಂಡಿಗೆ ಮತ್ತೆ ಹಿಂದಿರುಗಿದ ಅನಂತರ ಅವರ ಮೇಲೆ ಒಂದು ನಿಷೇಧಾಜ್ಞೆ ಜಾರಿಯಾಯಿತು. ಅವರು ಅಮೆರಿಕಾ ವಿರುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿರಲಿಲ್ಲವೆಂಬುದು ನಿರ್ಧಾರವಾಗುವವರೆಗೂ ಅಮೆರಿಕಕ್ಕೆ ಮರಳಬಾರದೆಂಬ ಕಟ್ಟಾಜ್ಞೆ.

'ನ್ಯೂಯಾರ್ಕ್ ಟೈಂಸ್'ನಂಥ ಪತ್ರಿಕೆ ಕೂಡ ಅಮೆರಿಕಾ ಸರ್ಕಾರದ ಈ ನಿರ್ಧಾರವನ್ನು ಕುರಿತು ಬರೆಯುತ್ತಾ ಎಚ್ಚರಿಕೆ ನೀಡಿತು. ಚಾಪ್ಲಿನರಂಥ ಕಲೆಗಾರರು ದೇಶದ್ರೋಹಾತ್ಮಕ ಕಾರ್ಯದಲ್ಲಿ ನಿರತರಾಗಿರುವರೆಂದು ವಾದಿಸಲು ಎಳಸುವುದು ಮಹಾ ಅಪಾಯಕರ. ಈ ಬಗ್ಗೆ ಸರಕಾರ ಎಚ್ಚರ ವಹಿಸಬೇಕು—ಎಂದು ಆ ಪತ್ರಿಕೆ ಬರೆಯಿತು.

ನಿಜವಾದ ಕಲಾವಿದರು ಯಾವ ನಿರ್ಬಂಧಕ್ಕೂ ಒಳಗಾಗುವುದಿಲ್ಲ. ಪರಿಣಾಮವನ್ನು ನೆನೆದು ಹೆದರಿ ಪರಿಸ್ಥಿತಿಯೊಡನೆ ಒಪ್ಪಂದ ಮಾಡಿಕೊಳ್ಳುವುದಿಲ್ಲ.

ಚಾಪ್ಲಿನರ ಮುಂದಿನ ಕ್ರಮವೇನು ?—ಎಂಬುದಕ್ಕೆ ಅವರ ನ್ಯಾಯವಾದಿ ಒಂದು ಮಾತು ಹೇಳಿದರು : 'ಚಾಪ್ಲಿನ್ ಏನು ಮಾಡಿಯಾರೆಂದು ಹೇಳುವುದು ಯಾವಾಗಲೂ ಅಸಾಧ್ಯವೇ.'

ಅವರ ಕಲೆ, ಜೀವನ—ಎರಡಕ್ಕೂ ಅನ್ವಯಿಸುವ ಮಾತು ಇದು.*

* ೧೯೫೨.



## ಜಾರ್ಜ್ ಬರ್ನಾರ್ಡ್ ಷಾ

ಆಂಗ್ಲ ಸಾಹಿತ್ಯ ಕ್ಷೇತ್ರದಲ್ಲಿ 'ಜಿ.ಬಿ.ಎಸ್' ಎಂದು ಪ್ರಖ್ಯಾತರಾದ ವ್ಯಕ್ತಿ ಜಾರ್ಜ್ ಬರ್ನಾರ್ಡ್ ಷಾ.

ಬರ್ನಾರ್ಡ್ ಷಾ ಅವರ ಹೆಸರನ್ನು ಕೇಳದ ಆಂಗ್ಲ ಸಾಹಿತ್ಯ ಪ್ರೇಮಿ ಬಹುಶಃ ಇಲ್ಲ. ಷಾ ಮುಖ್ಯವಾಗಿ ನಾಟಕಕಾರ. ಅವರ ನಾಟಕ ಕೇವಲ ಸಾಹಿತ್ಯದ ಮೃಷ್ಟಾನ್ನ ಭೋಜನವಲ್ಲ; ವಿಚಾರಕ್ಕೆ ಆಮಂತ್ರಣ, ಚರ್ಚೆಗೆ ಪ್ರಸ್ತಾವನೆ. ನಗೆ, ಅಣಕ, ಮಾತಿನ ಮಸೆದಾಟಗಳ ನೆವದಲ್ಲಿ ಓದುಗರನ್ನೂ ಪ್ರೇಕ್ಷಕರನ್ನೂ ಆಳವಾದ ವಿಚಾರದ ಕಡಲಿಗೆ ಕೊಂಡೊಯ್ಯುತ್ತವೆ—ಅವರ ನಾಟಕಗಳು. ಷಾ ನಾಟಕಗಳು ಪ್ರಥಮತಃ ಚರ್ಚಾ ಪ್ರಸಂಗ; ಅನಂತರ ನಾಟಕ. ಷಾ ಮುಖ್ಯವಾಗಿ ಪ್ರಚಾರಕ. ಕೈಲಾಸಂ ಕೃತ ಗುಂಡೂರಾಯ ಉಪನ್ಯಾಸದ ಹಂಬಲ ಪೂರೈಸಿಕೊಳ್ಳುವ ಸಲುವಾಗಿ ನಾಟಕ ಕಟ್ಟಿ ಆಡಿದ ಹಾಗೆ. ಷಾ ಆ ಜಾತಿ.

ಷಾ ಹುಟ್ಟಿದ್ದು ಐರ್ಲೆಂಡಿನ ನಗರ ಡಬ್ಲಿನ್ನಿನಲ್ಲಿ. ಆಗ ತಂದೆಗೆ ನಲವತ್ತಾರು ವರ್ಷ. ತಾಯಿಗೆ ಇಪ್ಪತ್ತಾರು. ಅವರಿಬ್ಬರ ನಡುವಣ ಸಂಬಂಧ ಸುಖದಾಯಕ ವಾಗಿರಲಿಲ್ಲ. ತಂದೆ ಕುಡುಕ. ತಾಯಿ ಸಂಗೀತ ವಿದುಷಿ. ಬರ್ನಾರ್ಡ್‌ಷಾರ ಸಂಗೀತಪ್ರಿಯತೆಗೆ ತಾಯಿಯೇ ಕಾರಣ.

ಷಾ ಮೊದಲು ಒಂದು ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದರು. ಐದು ವರ್ಷದಲ್ಲಿ ಅದರ ಮುಖ್ಯ ಖಜಾಂಚಿಯಾದರು. ಆದರೆ ಅವರಿಗೆ ಅಲ್ಲಿ ಮನಸ್ಸಿನ ನೆಮ್ಮದಿ ಇರಲಿಲ್ಲ. ಕೆಲಸ ಬಿಟ್ಟುಕೊಟ್ಟು ಲಂಡನ್ನಿಗೆ ಬಂದರು. ಅಲ್ಲಿ ಬಹುಕಾಲ ಅತೀವ ಕಷ್ಟ ಪರಂಪರೆ, ಅಲೆದಾಟ. ಕೊನೆಗೆ ನಾಟಕ ಕ್ಷೇತ್ರದಲ್ಲಿ ಜಯ.

ಷಾರ ಮೊದಲ ನಾಟಕ ಪ್ರಕಟವಾದಾಗ ವಿಮರ್ಶಕರ ಕಟು ವಿಮರ್ಶೆಯ ಸುರಿಮಳೆ. ಈ ವಿಮರ್ಶೆಗೆ ಎದೆಗುಂದಲಿಲ್ಲ, ಷಾ. ಅವರ ಒಂದೊಂದು ನಾಟಕಕ್ಕೂ ವಿವರಣಾತ್ಮಕವಾದ ಒಂದೊಂದು ದೊಡ್ಡ ಮುನ್ನುಡಿ. ವಿಮರ್ಶೆಗೆ ಪ್ರತಿ ವಿಮರ್ಶೆ. ಸವಾಲಿಗೆ ಜವಾಬು. ವಿಮರ್ಶಕ ಗಣ, ಈ ಬೆಂಕಿಯ ಮುದ್ದೆಯನ್ನು ನುಂಗಿ ನೀರು ಕುಡಿಯಲಾರದೆ ಹೋಯಿತು. ಇವರು ಸಂಪ್ರದಾಯದ ವಿರುದ್ಧ ನಡಸಿದ ಬಂಡಾಯದ ಪ್ರಚಾರವನ್ನು ಸಹಿಸಲಾರದೆ ಇವರನ್ನು 'ಅವಿವೇಕಿ' ಎಂದು ಕರೆದ 'ಸನಾತನಿ'ಗಳು ಮೂಲೆಯಲ್ಲಿ ಕುಳಿತರು. ಬರ್ನಾರ್ಡ್ ಷಾ ಪ್ರಚಂಡ ವ್ಯಕ್ತಿಯಾದರು. 'ಕ್ರಾಂತಿ'ಯ ಕುಡಿ ಶ್ರೀಮಂತರ ಮನ್ನಣೆಗೆ ಪಾತ್ರ ವಾಯಿತು; ಅವರ ಬಾಗಿಲ ತೋರಣವಾಯಿತು. ಇಂಥ ದೊಡ್ಡ ನಾಟಕಕಾರ ನನ್ನು ಅರಿಯಲಾಗದೆ ಹೋದ ಮೂಟ್ಠಾಳತನದ ಬಿರುದು ತಮಗೆ ಎಲ್ಲಿ ಅಂಟೀತೋ—ಎಂದು ವಿಮರ್ಶಕರು ಅವರ ನಾಟಕಗಳನ್ನು ಕೊಂಡಾಡಿದರು. ಅವರ ನಾಟಕಗಳನ್ನು ಓದಿದ, ನೋಡಿದ ಜನರು ಷಾರ ಜಾಣ್ಮೆಗೆ ತಲೆದೂಗಿದರು; ಅವರ ಬಿಚ್ಚು ಮಾತಿಗೆ ಮರುಳಾದರು; ನಗೆಯ ರಸಾಯನವನ್ನು ಮೆದ್ದು ಬಾಯಿ ಚಪ್ಪರಿಸಿದರು; 'ಷಾ ಮಹಾಪುರುಷ', ಎಂದು ಪ್ರಶಂಸೆಯ ಸನ್ಮಾನ ನೀಡಿದರು.

ಷಾಗೆ ಇಷ್ಟೆಲ್ಲಾ ಸನ್ಮಾನ ದೊರೆತರೂ, ಪೂಜೆಯ ಪೀಠದ ಗೌರವ ಪ್ರಾಪ್ತಿ ಯಾಗಿದ್ದರೂ, ಅವರು ತಮ್ಮ 'ಕುಚೋದ್ಯ' ಬಿಡಲಿಲ್ಲ. ಕತ್ತೆಯ ಲತ್ತೆಯ ಪ್ರಹಾರ ಪದ್ಧತಿ ಬಿಡಲಿಲ್ಲ. ದೊಡ್ಡಸ್ತಿಕೆಯ ಮೊಗವಾಡದ ಮೆರೆದಾಟದ 'ಚಾಪಲ್ಯ' ಬಿಡಲಿಲ್ಲ. 'ನಾನು ಮಹಾ ನಾಟಕ ಕಾರ' ಎಂದು ಹೇಳಿಕೊಳ್ಳಲು

ಅವರಿಗೆ ನಾಚಿಕೆಯಾಗಲಿಲ್ಲ. 'ಷೇಕ್ಸ್‌ಪಿಯರ್‌ನನ್ನು ನನ್ನೊಡನೆ ಹೋಲಿಸಿಕೊಂಡರೆ, ಆತನ ಬುದ್ಧಿ ಎಷ್ಟು ಚಿಕ್ಕದು!—ಎನಿಸುತ್ತದೆ'. ಹೀಗೆಂದು ಹೇಳಿಕೊಳ್ಳಲು ಅವರು ಹಿಂದೆಗೆಯಲಿಲ್ಲ.

ಷಾರನ್ನು ಅರಿಯದಿದ್ದವರಿಗೆ ಈ ಅಹಂಭಾವ ಅರ್ಥವಾಗುವುದಿಲ್ಲ. ಸಂಪ್ರದಾಯವನ್ನು, ಕುರಿಯ ಹಾದಿಯನ್ನು, ಆರಾಧನ ಪ್ರಿಯತೆಯನ್ನು ಕಂಡರೆ ಷಾಗೆ ಆಗದು. ಷೇಕ್ಸ್‌ಪಿಯರ್ ದೊಡ್ಡ ಕವಿ—ಎಂಬ ಒಂದೇ ಒಂದು ಮಾತು ಹೇಳುತ್ತಾ ಜನ ಆತನ ಕೃತಿಗೆ ಅನ್ಯಾಯ ಮಾಡಿದಾರೆ. ಆತನ ಕೃತಿಗಳ ಗುಣ ಗ್ರಹಣ ಮಾಡುವ, ಸಾರಾಸಾರ ವಿಚಾರ ಮಾಡುವ ಶಕ್ತಿ ಜನಕ್ಕೆ ಇಲ್ಲವಾಗಿದೆ. ಈ ಅಂಧಾರಾಧನೆಯಿಂದ ಜನರನ್ನು ಎಚ್ಚರಗೊಳಿಸಲು ಚಾಟಿಯ ಏಟೇ ಬೇಕು. ತಮ್ಮ ಬಗೆಗೂ ಜನ ಈ ರೀತಿಯ ಅನ್ಯಾಯವೆಸಗದಂತೆ ಮಾಡಲು, ತಮ್ಮ ಕೃತಿಗಳಿಗೆ ಪ್ರಚಾರ ದೊರಕಿಸಲು, ಷಾ ಅನುಸರಿಸಿದ ಮಾರ್ಗ ಇದು—ಆತ್ಮ ಪ್ರಶಂಸಾ ವಿಧಾನ. ಇದು ತಮ್ಮ ಖ್ಯಾತಿಗಾಗಿ ಅಲ್ಲ; ತಮ್ಮ ಭಾವನೆಗಳ ಪ್ರಚಾರಕ್ಕಾಗಿ.

ಷಾ ನಾಟಕಗಳು ವಿಚಾರಪ್ರಧಾನವಾದಂಥವು. ಅವರು ಪ್ರಥಮತಃ ಪ್ರಚಾರಕರು; ಅನಂತರ ನಾಟಕಕಾರರು, ನಗೆಗಾರರು, ವಿಡಂಬನಕಾರರು. ಅವರ ಗುರಿ ಕಲೆಯೇ ಅಲ್ಲ, ಜೀವನ. ಜೀವನದ ಜಿಡ್ಡನ್ನು ತೊಳೆದು ಸ್ವಚ್ಛ ಮಾಡುವ ಕೆಲಸ ಅವರದು. ಗತಕಾಲದ ಗಷ್ಟನ್ನು ಹಿಂಡಿ ಕಳೆಯಬೇಕು. ಪ್ರತಿ ತಲೆಮಾರಿಗೂ ಹೊಸ ದೃಷ್ಟಿ, ಹೊಸ ಕೃತಿ ಬರಬೇಕು. ಸಂಪ್ರದಾಯಬದ್ಧವಾದ ಈ ಕಲೆಯೆಲ್ಲ ಹಳೆ ಸಾಮಾನಿನ ಅಂಗಡಿಗೆ ಹೋಗಲು ಮಾತ್ರ ಅರ್ಹ. ಮಾನವನ ಜೀವಂತ ಜ್ಯೋತಿಯ ಸುತ್ತ ಕಟ್ಟಿರುವ ಈ ಸಂಪ್ರದಾಯದ ಕಿಟ್ಟವನ್ನು ಆಗಿಂದಾಗ್ಗೆ ಒರಸುತ್ತಲೇ ಇರಬೇಕು. ಸಮಾಜದಲ್ಲಿ ಇಂದು ನಡೆಯುತ್ತಿರುವ ಅನ್ಯಾಯಗಳೆಲ್ಲ ದಯಾಶೀಲರಿಂದಲೆ ನಡೆಯುತ್ತಿವೆ. ಸಂಪ್ರದಾಯಕ್ಕೆ ಸಿಲುಕಿ ಬೆಂಡಾಗಿ, ಮನಸ್ಸಿನ ಅನುಕಂಪವನ್ನು ಕಳೆದುಕೊಂಡ ಜನರೇ ಈ ಅನ್ಯಾಯಗಳಿಗೆ ಕಾರಣ. ಇದು ಷಾರ ಸಮಾಜ ದೃಷ್ಟಿ.

ಷಾ ಸಾಮಾನ್ಯಜನರಂತಿದ್ದಿಲ್ಲವೆಂತಲೇ, ಅವರಲ್ಲಿ ಅನುಕಂಪ ಗುಣ ಇದ್ದದ್ದರಿಂದಲೇ, ಅವರು ಕೆಲವು ಕಟ್ಟುನಿಟ್ಟುಗಳಿಗೆ ತಮ್ಮನ್ನು ತಾವೇ ಒಳಪಡಿಸಿಕೊಂಡರು. ಅವರು ಅಚ್ಚ ಸಸ್ಯಾಹಾರಿ. ಪ್ರಾಣಿಗಳ ದೇಹದಿಂದ

ತೆಗೆದ ಮದ್ದಿನಲ್ಲಿ, ಸೂಜಿ ಮದ್ದಿನಲ್ಲಿ, ಅವರಿಗೆ ವಿಶ್ವಾಸವಿಲ್ಲ. ಹಿಂದೂ ದೃಷ್ಟಿಯಿಂದ ಅವರು ಪಕ್ಕಾ ಸಾತ್ವಿಕ.

ಪ್ರಾಣಿಹಿಂಸೆಯನ್ನು ಕಂಡು ಅನುಕಂಪಗೊಳ್ಳುತ್ತಿದ್ದ, ಸಸ್ಯಾಹಾರವಲ್ಲದೆ ಬೇರೆ ಮುಟ್ಟದ, ಈ ವೈರಾಗಿ ಸಾಮಾಜಿಕವಾಗಿ ನಡೆಯುತ್ತಿದ್ದ ಹಲವು ಅನ್ಯಾಯಗಳನ್ನು ಕಂಡು ಕನಲದೆ ಇರಲಿಲ್ಲ. ಅವುಗಳನ್ನು ತಮ್ಮ ಕೃತಿಗಳಲ್ಲಿ ಒಡಮೂಡಿಸದೆ ಬಿಡಲಿಲ್ಲ. ದಲಿತರ ದುಡಿಮೆಯ ರಕ್ತದಿಂದ ಹೆಪ್ಪುಗಟ್ಟಿದ ಹಣವನ್ನು ಕುರಿತು ಅವರಿಗೆ ಧಿಕ್ಕಾರ. ಅದನ್ನು ತಮ್ಮ ಕೃತಿಯೊಂದರಲ್ಲಿ ವ್ಯಕ್ತಪಡಿಸಿದರು. ಹಣವೇ ಈ ಅನ್ಯಾಯ ವ್ಯವಸ್ಥೆಯ ಅಡಿಗಲ್ಲು—ಎಂಬುದನ್ನು ಅವರು ಬಲ್ಲರು. ಆದರೆ ತಾವೂ ಈ ಹಣದ ವ್ಯವಸ್ಥೆಯ ಒಳಗೇ ಬಂದವರು. ಪ್ರಾಣಿಹಿಂಸೆಯನ್ನು ಕಂಡು ಕೆರಳಿದ, ಮಾಂಸಾಹಾರ ವರ್ಜನೆ ಮಾಡಿದ ಸಾತ್ವಿಕ ವೈರಾಗಿ ಷಾ ಹಣವನ್ನು ಮಾತ್ರ ಬಿಡಲಿಲ್ಲ; ಬಿಡಲೂ ಆರದೆ ಹೋದರು. ಹಣ ಬಿಡಲು ಸಾಧ್ಯವಿಲ್ಲ. ಬಿಸಾಡಿದರೂ ಅದನ್ನು ಬೇರೆ ಯಾರಾದರೂ ಮುಟ್ಠಾಳ ಆರಿಸಿಕೊಂಡಾನು. ಆದ್ದರಿಂದ ಈ ವ್ಯವಸ್ಥೆ ಬದಲಾಗುವ ವರೆಗೂ ತಾಳಿಕೊಂಡಿರೋಣ. ಇದು ಷಾ ಧೋರಣೆ.

ಹೀಗೆ ಷಾರ ನಿಸ್ಸಹಾಯಕತೆ ಇಂಥ ಹಲವು ವಿಚಾರಗಳಲ್ಲಿ ಕಾಣಬರುತ್ತದೆ. ಹೌದು, ವ್ಯವಸ್ಥೆ ಬದಲಾಗಬೇಕು. ಆದರೆ ಅದು ಆಗುವ ಬಗೆ ಹೇಗೆ? ಕೃತಿಯಿಂದಲೆ? ವಿಚಾರದಿಂದಲೆ?

ಷಾ ಹೇಳುತ್ತಾರೆ: ವಿಚಾರದಿಂದ ಸಾಧ್ಯ. ಕೃತಿಯ ಪ್ರಶ್ನೆಯೇ ಇಲ್ಲ. ವ್ಯವಸ್ಥೆ ಬದಲಾಗುವ ವರೆಗೂ ಕಾಯೋಣ. ವಿಚಾರವನ್ನು ಪ್ರಚುರಪಡಿಸಬೇಕು. ವಿಚಾರಶೀಲರಾದ ಮಧ್ಯಮ ವರ್ಗದ ಜನ ಎಚ್ಚತ್ತುಕೊಳ್ಳಬೇಕು. ಆಗ ಎಲ್ಲ ಸರಿಹೋಗುತ್ತದೆ.

ಷಾ ಮಧ್ಯಮ ವರ್ಗದಲ್ಲಿ ಜನಿಸಿದವರು. ಮೇಲಿನ ವರ್ಗದವರಂತೆ ಆಳುವವರ ವರ್ಗಕ್ಕೆ ಅವರು ಸೇರಲಿಲ್ಲ. ಕೆಳಗಿನ ವರ್ಗದವರಂತೆ ಆಳುವ ಆಸೆ ಅವರ ವರ್ಗಕ್ಕಿಲ್ಲ. ಆದ್ದರಿಂದ, ವೈಯಕ್ತಿಕ ವಿಚಾರದ ಕೋಟೆ ಕಟ್ಟಿ, ಆ ಕೋಟೆಯಲ್ಲಿ ಕನಸಿನ ರಾಜ್ಯ ಕಟ್ಟಿ, ಆ ರಾಜ್ಯದಲ್ಲಿ ಅಡ್ಡಾಡುವ ಪ್ರಜೆಗಳ ವಿವರಣೆ ಕೊಡುವ ಕಾರ್ಯದಲ್ಲಿ ಅವರು ಕೈ ಹಾಕಿದರು. ಅವರ 'ಬ್ಯಾಕ್ ಟು ಮೆಥುಸೆಲಾ' ನಾಟಕದಲ್ಲಿ ಈ ಕನಸು ಮೂಡುತ್ತದೆ. ವಿಚಾರಕ್ಕೆ ಅಲ್ಲಿ ಪ್ರಾಧಾನ್ಯ. ಚಿಟ್ಟೆಯ

ಕಲೆಗಾರಿಕೆಗೆ ಅಲ್ಲಿ ಎಡೆಯಿಲ್ಲ. ಇದು ಷಾ ಪ್ರಪಂಚ : ಬುದ್ಧಿಜೀವಿಗಳೆಲ್ಲ ಕೂಡಿ ಕಟ್ಟಿದ ರಾಜ್ಯ ; ಅದು ಸರ್ವಾಧಿಕಾರವೇ ಆದೀತೇನೋ ; ಅದೇ ಆದರ್ಶ ರಾಜ್ಯ. ಇದು ಎಲ್ಲರ ಒಳ್ಳೆಯದಕ್ಕೆ. ಇದು ಅವರ ನಾಟಕಗಳು ನಮ್ಮನ್ನು ಕೊಂಡೊಯ್ಯುವ ಮಾರ್ಗ.

ವಿಚಾರಕ್ಕೆ ಆಸ್ಪದವಿಲ್ಲದ ಕೃತಿ ಸರ್ವಾಧಿಕಾರಕ್ಕೆ ಎಡೆಕೊಡುವಂತೆ, ಕೃತಿಗೆ ಆಸ್ಪದವಿಲ್ಲದ ವಿಚಾರ ಕಾಗದದ ಹೂವಿನಂತೆ. ವಿಚಾರವೆಂಬುದು ಸಮಾಜದಲ್ಲಿ ಮನುಷ್ಯನ ಸ್ಥಾನವೇನೆಂಬುದನ್ನೆ ಅವಲಂಬಿಸುತ್ತದೆ. ಕೃತಿಗೆ ತಾಳೆಯಿಲ್ಲದ ಕೇವಲ ವಿಚಾರ, ಕನಸಿನ ಕಲ್ಪನೆ. ಆದರೆ ಷಾ ನಾಟಕಗಳ ಪಾತ್ರಗಳೆಲ್ಲ ವಿಚಾರ ಜೀವಿಗಳು. ಅವರ ಜೋನ್ ಆಫ್ ಆರ್ಕ್, ಅವರ ಜ್ಯೂಲಿಯಸ್ ಸೀಸರ್—ಇವರೆಲ್ಲ ವಿಚಾರಬದ್ಧವಾಗಿ, ತರ್ಕಬದ್ಧವಾಗಿ, ನಡೆಯುವ ಜೀವಿಗಳು. ಮಾತಿನ ಮಸೆತ, ವಿಚಾರದ ತಾಕಲಾಟ, ಅಭಿಪ್ರಾಯಗಳ ಚಕಮುಕಿ—ಇವನ್ನೇ ನಾವು ಅವರ ನಾಟಕಗಳಲ್ಲಿ ಕಾಣುತ್ತೇವೆ. ಮಾನವನ ಹೃದಯದ ಗುಣಗಳು ಅವರ ಪಾತ್ರಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ. ಆದರೆ ಸಾಮಾನ್ಯಜನ ಕೇವಲ ಬುದ್ಧಿಜೀವಿಗಳಲ್ಲ. ಒಂದೊಂದು ಸನ್ನಿವೇಶದಲ್ಲೂ ಅವರು ಎಸಗುವ ಕೃತಿ ಅವರನ್ನು ಹೊಸ ವಿಚಾರಕ್ಕೆ ಎಳೆದೊಯ್ಯುತ್ತದೆ. ಹೊಸ ಕೃತಿ ಹೊಸ ವಿಚಾರ ಹೊಸ ಕೃತಿ—ಈ ರೀತಿ ಕೃತಿ ವಿಚಾರಗಳು ಕೈಗೆ ಕೈಯಿಟ್ಟು ನಡೆದಾಗಲೇ ಸಾರ್ಥಕ. ಇವುಗಳ ಹಿಂದೆ ಮನುಷ್ಯನ ರಾಗ-ದ್ವೇಷಗಳು, ಸ್ನೇಹ-ಅನುಕಂಪಗಳು—ಇವೆಲ್ಲ ಉಂಟು. ಆದರೆ ಷಾ ಪಾತ್ರಗಳು ಕೇವಲ ಬುದ್ಧಿಜೀವಿಗಳು ; ಸೂತ್ರದ ಬೊಂಬೆಗಳು ; ಷಾರ ವಿಚಾರಗಳು ಪ್ರಚಾರ ಸಾಧನಗಳು. ಷಾರ ನಾಟಕೋದ್ದೇಶವೂ ಅಷ್ಟೇ.

ಆದರೆ ಕೃತಿಯ ಜತೆಯಿಲ್ಲದ ಅವರ ವಿಚಾರಗಳು ಕಾಲು ಕಳೆದುಕೊಂಡ ಬೊಂಬೆಗಳಂತಾಗುತ್ತವೆ. ವ್ಯವಸ್ಥೆ ಬದಲಾಗುವ ವರೆಗೂ ಕಾಯೋಣ—ಎಂಬಲ್ಲಿ ಷಾರ ನಿಸ್ಸಹಾಯಕತೆಯ ಅರಿವಾಗುತ್ತದೆ. ಕೇವಲ ವಿಚಾರ ಪ್ರಚಾರದಲ್ಲೇ ಜಗತ್ತನ್ನು ಬದಲಿಸುವ ಅವರ ಇಚ್ಛೆಯ ವೈಫಲ್ಯದ ವಿರೋಧಾಭಾಸ ಕಾಣಬರುತ್ತದೆ. ನಮ್ಮ ಇಂದಿನ ಸಮಾಜದ ಅನ್ಯಾಯವನ್ನು, ಈ ವ್ಯವಸ್ಥೆಯ ಜೀರ್ಣಸ್ಥಿತಿಯನ್ನು, ಬಯಲಿಗೆಳೆಯುವುದರಲ್ಲಿ ಅವರು ಪ್ರವೀಣರು. ಅದನ್ನು ಕೆಡವಿ ಬೇರೆ ಕಟ್ಟುವುದರಲ್ಲೂ ಅವರ ಒಪ್ಪಿಗೆಯುಂಟು. ಆದರೆ ವಿಧಾನ ಮಾತ್ರ

ಅವರ ವಿಚಾರದ ಚೌಕಟ್ಟಿನಿಂದ ಹೊರಗು. ಅದು ಕೇವಲ ವಿಧಾನವಾಗಿ, ಯಥಾರ್ಥತೆಯ ಅಡಿಪಾಯವಿಲ್ಲದೆ, ಮುರಿದು ಬೀಳುತ್ತದೆ.

ಷಾರ ಪ್ರಯತ್ನ ಹೇಗೆ ವಿಫಲವಾಗಿದೆಯೆಂಬುದನ್ನು, ಆಚರಣೆಯ ಆಧಾರವಿಲ್ಲದ ವಿಚಾರ ಹೇಗೆ ಬುಡಹೀನವೆಂಬುದನ್ನು, ಕೇವಲ ವಿಚಾರವೇ ಮಾನವರ ಮುಖ್ಯ ಗುಣವಲ್ಲವೆಂಬುದನ್ನು, ಕಾಣಬೇಕಾದರೆ ಅವರ ಕೃತಿಗಳ ಪರಿಣಾಮವನ್ನು ಕಾಣಬೇಕು. ಷಾ ಕುಚೋದ್ಯ ಬಹು ಪ್ರಸಿದ್ಧಿ. ಅವರ ಕೃತಕ ಜಂಭಗಾರಿಕೆ ಜಗತ್ತಿನ ಕಣ್ಣನ್ನೂ ಕಿವಿಯನ್ನೂ ಅವರತ್ತ ಸೆಳೆಯಿತು. ಆದರೆ ಅವರ ಮನಸ್ಸು ಷಾರತ್ತ ನಡೆಯಿತೇ ಎಂಬುದು ಅನುಮಾನ. ಸಮಾಜದ ಅಪ್ರಿಯ ಸಂಗತಿಗಳನ್ನು ನುಂಗಿಸಲು ಅವುಗಳಿಗೆ ಷಾ ಅವರು ಹಾಸ್ಯದ ಸಕ್ಕರೆ ಸವರಿದರು. ಆ ಸಕ್ಕರೆಯ ಕವಚದ ಗುಳಿಗೆ ನುಂಗಿದ ಸಾಮಾಜಿಕರು ಮೊದಲು ಕಸಿವಿಸಿಗೊಂಡರು. ಆದರೆ ಇಂದು ಸಕ್ಕರೆಯನ್ನು ಮಾತ್ರ ಸವಿದು ಗುಳಿಗೆಯನ್ನು ಉಗುಳುವ ವಿದ್ಯೆಯನ್ನು ಅವರು ಕಲಿತುಕೊಂಡಿದಾರೆ. ಷಾರ ಪ್ರಸಿದ್ಧಿಗೆ ಕಾರಣ ಈ ಸಕ್ಕರೆಯ ಕವಚ. ಒಳಗಿನ ಗುಳಿಗೆಯ ಕಡೆಗೆ ಜನರ ಗಮನವಿಲ್ಲ. ಅವರ ಪ್ರತಿಭೆಯನ್ನು, ಅವರ ಹಾಸ್ಯ ರಸಾಯನವನ್ನು, ಮೆಚ್ಚುವ ಜನ, ಅವಕ್ಕಾಗಿ ಅವರಿಗೆ ಪೂಜೆಯ 'ಕೈಂಕರ್ಯ' ಸಲ್ಲಿಸುತ್ತಾರೆ. ಅಲ್ಲಿಗೇ ಅವರ ಕೃತಿಯ ಸಾಫಲ್ಯ ಮುಗಿಯುತ್ತದೆ. ಇದು ಷಾಗೂ ಅರಿವಾಗಿದ್ದಿರಬೇಕು.

ತಾವು ಹುಟ್ಟಿ ಬೆಳೆದ ಸಮಾಜದ ವಿಷದ ಸುಳಿಯೊಳಗಿನಿಂದ ಷಾ ಬರಲಾರದೆ ಹೋದರಾದರೂ, ಅವರು ಮಹಾ ಪ್ರತಿಭಾಶಾಲಿ ; ಬಹು ದೊಡ್ಡ ಜೀವ. ಇಂದಿನ ಹೃದಯಹೀನ ವ್ಯವಸ್ಥೆಯ ಅನ್ಯಾಯ ಪಂಥದ ನಿಜವಾದ ಬಣ್ಣವನ್ನು ಬಯಲಿಗೆಳೆದು. ಈ ಪಂಥವನ್ನು ಪ್ರತಿಪಾದಿಸುತ್ತಿದ್ದ ಜನರ ಹೃದಯಕ್ಕೆ ಕನ್ನಡಿ ಹಿಡಿದ ಮಹಾನ್ ವ್ಯಕ್ತಿ ಷಾ. ಇದನ್ನು ಯಾರೂ ಅಲ್ಲಗಳೆಯುವಂತಿಲ್ಲ.*

---

* ೧೯೫೦.



## ಬೋರಿಸ್ ಪಾಸ್ಟರ್‌ನಾಕ್

ಸೋವಿಯತ್ ರಾಜ್ಯವನ್ನುಳಿದ ಪ್ರಪಂಚಕ್ಕೆ ಅಷ್ಟಾಗಿ ಪರಿಚಿತರಾಗಿಲ್ಲದಿದ್ದು, ಒಮ್ಮಿಂದೊಮ್ಮೆಗೇ ಕಣ್ಣು ಕೋರೈಸುವ ನಿಬ್ಬೆಳಕಿನ ರಂಗಸ್ಥಲದ ಮೇಲೆ ಬಂದ ಪ್ರಖ್ಯಾತ ರಷ್ಯನ್ ಲೇಖಕ ಬೋರಿಸ್ ಪಾಸ್ಟರ್‌ನಾಕ್.

೧೯೫೮ ರ ಅಕ್ಟೋಬರ್ ೨೩ ರಂದು ಸ್ವೀಡನ್ನಿನ ಸಾಹಿತ್ಯ ಅಕಾಡಮಿ ಹೊರಡಿಸಿದ ಒಂದು ಪ್ರಕಟನೆಯೇ ಈ ಹಠಾತ್ ಖ್ಯಾತಿಗೆ ಕಾರಣ. ಆ ವರ್ಷ ಸಾಹಿತ್ಯ ಕ್ಷೇತ್ರದಲ್ಲಿ ನೊಬೆಲ್ ಪಾರಿತೋಷಕ ಪಾಸ್ಟರ್‌ನಾಕರಿಗೆ ಸಲ್ಲತಕ್ಕದ್ದೆಂದು ಆ ಪ್ರಕಟನೆ ತಿಳಿಸಿತ್ತು.

ಒಡನೆಯೇ ಪಾಸ್ಟರ್ನಾಕ್ ಆ ಸಂಸ್ಥೆಗೆ ಸುದ್ದಿ ಕಳುಹಿಸಿದರು: 'ಈ ಬಹುಮಾನಕ್ಕಾಗಿ ನಾನು ತುಂಬಾ ಕೃತಜ್ಞ. ಇದು ನನ್ನ ಹೃದಯವನ್ನು ಸೂರೆಗೊಂಡಿದೆ, ನನ್ನನ್ನು ಚಕಿತಗೊಳಿಸಿದೆ, ನನಗೆ ಹೆಮ್ಮೆ ಉಂಟು ಮಾಡಿದೆ, ಸಂಕೋಚ ಉಂಟುಮಾಡಿದೆ.'

ಆದರೆ ಸೋವಿಯತ್ ರಾಜ್ಯದ ಲೇಖಕರು ಪಾಸ್ಟರ್‌ನಾಕರನ್ನು ಕಟುವಾಗಿ ಟೀಕಿಸಿದರು. 'ಪಾಸ್ಟರ್ನಾಕ್ ದೇಶದ್ರೋಹಿ, ನಮ್ಮ ಸಾಮ್ಯವಾದಿ ದೇಶದ

ದೂಷಕ' ಎಂದು ಅಲ್ಲಿನ ಸಾಹಿತ್ಯ ಪತ್ರಿಕೆಯೂ,'ಪ್ರಾವ್ಡಾ'* ಎಂಬ ಪತ್ರಿಕೆಯೂ ಬರೆದುವು. 'ಪಾಸ್ಟರ್ನಾಕರಲ್ಲಿ ಸೋವಿಯತ್ ಪ್ರಜೆಯೆಂಬ ಹೆಮ್ಮೆ ಉಳಿದಿದ್ದರೆ ಅವರು ಮೊದಲು ಈ ಬಹುಮಾನವನ್ನು ತಿರಸ್ಕರಿಸಲಿ,' ಎಂದೂ ಸೂಚಿಸಿದುವು. ಸೋವಿಯತ್ ಲೇಖಕರ ಸಂಘದಿಂದ ಅವರು ಉಚ್ಚಾಟನೆಗೊಂಡರು.

ಇದಾದ ಹಲವು ದಿನಗಳ ಅನಂತರ ಅವರು ನೊಬೆಲ್ ಸಮಿತಿಗೆ ಒಂದು ಪತ್ರ ಬರೆದು, ತಾವು ಈ ಬಹುಮಾನ ಸ್ವೀಕರಿಸುವುದಿಲ್ಲವೆಂದು ಹೇಳಿದರು. 'ನಾನು ಯಾವ ಸಮಾಜಕ್ಕೆ ಸೇರಿದ್ದೇನೋ ಆ ಸಮಾಜದಲ್ಲಿ ಈ ಮರ್ಯಾದೆಗೆ ಕಲ್ಪಿಸಿರುವ ಅರ್ಥದ ದೃಷ್ಟಿಯಿಂದ ನಾನು ಈ ಬಹುಮಾನವನ್ನು ಸ್ವೀಕರಿಸಲಾರೆ,' ಎಂದು ಬರೆದರು.

೧೯೫೮ ರ ಡಿಸೆಂಬರ್ ೧೦ ರಂದು ಆ ವರ್ಷದ ನೊಬೆಲ್ ಬಹುಮಾನಗಳನ್ನು ಹಂಚುವ ಸಂದರ್ಭದಲ್ಲಿ ಪಾಸ್ಟರ್ನಾಕ್ ಇರಲಿಲ್ಲ. ಸುಮಾರು ಮೂರು ಲಕ್ಷ ರೂಪಾಯಿಗಳ ಬಹುಮಾನವನ್ನೂ, ಭಾರವಾದ ಚಿನ್ನದ ಪದಕವನ್ನೂ ಅವರಿಗಾಗಿ ತೆಗೆದಿಡಲಾಯಿತು. ಮುಂದೆ ಎಂದಾದರೂ ಪಾಸ್ಟರ್ನಾಕರು ಈ ಬಹುಮಾನವನ್ನು ಸ್ವೀಕರಿಸುವುದು ಸಾಧ್ಯವಾಗಬಹುದು—ಎಂದು ಆ ಸಂಸ್ಥೆಯ ಪ್ರತಿನಿಧಿ ಆಶೆ ವ್ಯಕ್ತಪಡಿಸಿದರು.

ಸೋವಿಯತ್ ರಾಜ್ಯದ ಒಳಗಡೆ ಪಾಸ್ಟರ್ನಾಕರ ವರ್ತನೆಯ ವಿಚಾರವಾಗಿ ಟೀಕೆ ಎದ್ದಿತ್ತು. ಈ ಕೆಟ್ಟ ಬಹುಮಾನವನ್ನು ಪಾಸ್ಟರ್ನಾಕ್ ಬೇಕಾದರೆ ಪಡೆಯಲಿ, ಆದರೆ ಅವರು ಮತ್ತೆ ನಮ್ಮ ದೇಶಕ್ಕೆ ಕಾಲಿಡುವುದು ಬೇಡ—ಎಂದು ಅಲ್ಲಿನ ಸಾಹಿತ್ಯ ನಾಯಕರು ಹೇಳಿದರು.

ರಷ್ಯದ ನೆಲದಲ್ಲಿ ಹುಟ್ಟಿ ಬೆಳೆದು, ಅದನ್ನು ತೀವ್ರವಾಗಿ ಪ್ರೀತಿಸುತ್ತಿದ್ದ ಪಾಸ್ಟರ್ನಾಕರಿಗೆ ಅವರ ತಾಯಿ ನೆಲವನ್ನು ಬಿಡುವುದೆಂದರೆ ಸಾವಿಗಿಂತಲೂ ಕಠೋರ. ನಾನು ಇಲ್ಲೇ ಸತ್ತೇನು; ನನ್ನ ನಾಡನ್ನು ಬಿಡಲಾರೆ—ಎಂದು ಅವರು ಹೇಳಿದರು. ಹೀಗೆಂದು ಅವರು ಆಗ ರಷ್ಯದ ಪ್ರಧಾನಿಯಾಗಿದ್ದ ಕ್ರುಶ್ಚೇವರಿಗೂ ಪತ್ರ ಬರೆದರು. ನನ್ನನ್ನು ನನ್ನ ದೇಶದಲ್ಲಿ ಬದುಕಗೊಡಿ. ಇಲ್ಲಿಂದ ಹೊರಹಾಕಬೇಡಿ—ಎಂದರು.

---

*'ಪ್ರಾವ್ಡಾ' ಎಂದರೆ 'ಸತ್ಯ' ಎಂದು ಅರ್ಥವಂತೆ.

ಇಷ್ಟೆಲ್ಲಾ ಬಿರುಗಾಳಿಗೆ ಕಾರಣವಾದದ್ದು ಪಾಸ್ಟರ್ನಾಕರ 'ಡಾ|| ಜಿವಾಗೋ' ಎಂಬ ಕಾದಂಬರಿ.

ರಷ್ಯದಲ್ಲಿ ಅಲ್ಲಿನ ಸಾಮಾಜಿಕ ಪರಿವರ್ತನೆಯನ್ನೂ ಅದರ ಗುಣಗಳನ್ನೂ ವರ್ಣಿಸುವ ಕಾದಂಬರಿಗಳಿಗೆ ಕೊರತೆಯಿಲ್ಲ. ಅವರು ಕಟ್ಟುತ್ತಿರುವ ಹೊಸ ಸಮಾಜದ ಹಿರಿಮೆಯನ್ನು ಎತ್ತಿ ಹಿಡಿಯುವ ಕೃತಿಗಳಿಗೆ ಗೌರವ ಪ್ರಶಸ್ತಿಗಳು ಧಾರಾಳವಾಗಿ ಸಲ್ಲುತ್ತವೆ. ಸಾಹಿತ್ಯವನ್ನು ಈ ದೃಷ್ಟಿಯಿಂದಲೇ ನೋಡ ಬೇಕೆಂಬುದು ಅಲ್ಲಿನ ಅಧಿಕೃತ ನೀತಿ. ತಾವು ಕಟ್ಟುತ್ತಿರುವ ಹೊಸ ಸಮಾಜದ ಕಟು ಟೀಕೆ ನಿಂದೆಗಳು ಆ ಸಮಾಜಕ್ಕೆ ಮಾರಕವಾಗಬಹುದೆಂಬ ಕಾರಣದಿಂದ ಅವಕ್ಕೆ ಅಲ್ಲಿ ಎಡೆಯಿಲ್ಲ. ಮಾಡುವ ಟೀಕೆಗಳು ಮಾರಕವಾಗಬಾರದೆಂಬುದು ಧೋರಣೆ. ಹೊಸ ಸಮಾಜ ಕಟ್ಟುವ ಉತ್ಸಾಹಿಗಳಿಗೆ ಸಹಜವಾದ ವರ್ತನೆ. ವರ್ಗರಹಿತ ಸಮಾಜರಚನೆಯ ಹಾದಿಯನ್ನು ಕುಂಠಿತಗೊಳಿಸುವ ಭಾವನೆಗಳನ್ನು ಅವರು ಪುರಸ್ಕರಿಸರು. ಆದರೆ ಪಾಸ್ಟರ್ನಾಕರ ಕಾದಂಬರಿ 'ಡಾ|| ಜಿವಾಗೋ' ಈ ಯಾವ ಕಟ್ಟುಪಾಡುಗಳಿಗೂ ಒಳಪಟ್ಟಿರಲಿಲ್ಲ. ಅದರಲ್ಲಿದ್ದುದು ಸೋವಿಯತ್ ಉತ್ಕರ್ಷದ ವರ್ಣನೆಯಲ್ಲ. ರಷ್ಯದ ಕ್ರಾಂತಿಯ ಹಿನ್ನೆಲೆಯಲ್ಲಿ ರಚಿತವಾದ ಈ ಕಾದಂಬರಿಯ ಕೇಂದ್ರ: ಮನುಷ್ಯ ವ್ಯಕ್ತಿ. ಆಡಳಿತದ ಕಬ್ಬಿಣದ ಚೌಕಟ್ಟಿನಲ್ಲಿ ಸಿಕ್ಕಿದ ಮಾನವ ಹೃದಯದ ಸ್ಪಂದನ.

'ಡಾ|| ಜಿವಾಗೋ' ಒಂದು ಐತಿಹಾಸಿಕ ಕಾದಂಬರಿ. ಇದರ ವಸ್ತು ನೂರಿನ್ನೂರು ವರ್ಷಗಳ ಹಿಂದಣ ಇತಿಹಾಸವಲ್ಲ. ನಿನ್ನೆ ಮೊನ್ನೆಯ ಕ್ರಾಂತಿಯ ಅನಂತರದ ರಷ್ಯದ ಇತಿಹಾಸ. ಈ ಕಾಲದ ರಷ್ಯದ ಜೀವನ ನಿರೂಪಣೆ— ಪಾಸ್ಟರ್ನಾಕ್ ಕಂಡಂತೆ.

ರಷ್ಯದ ಇಂದಿನ ವ್ಯವಸ್ಥೆಯನ್ನು ತೀಕ್ಷ್ಣವಾಗಿ ನೋಡುವುದೇ ಇದರ ಗುರಿಯಲ್ಲ. ಎಲ್ಲರನ್ನೂ ಗುಡಿಸಿ ಒಟ್ಟಾಗಿಸುವ ಆಡಳಿತ ವ್ಯವಸ್ಥೆಯನ್ನು, ಕುರಿ ಮಂದೆಯಂತೆ ಆಲೋಚಿಸುವ ಕ್ರಮವನ್ನು, ಮನುಷ್ಯರನ್ನು ಯಂತ್ರಗಳಾಗಿ ಮಾರ್ಪಡಿಸುವ ಪ್ರವೃತ್ತಿಯನ್ನು ವಿರೋಧಿಸಿ ಮಾನವನ ಹಿರಿಮೆಯನ್ನು ಎತ್ತಿ ಹಿಡಿಯಲು ಯತ್ನಿಸುತ್ತದೆ ಈ ಕಾದಂಬರಿ. ಈ ಕಾದಂಬರಿಯ ಆರಂಭವೇ ಅರ್ಥಪೂರ್ಣವಾಗಿದೆ. ಬದುಕಿರುವವರನ್ನು ಹೂಳುವ ಪದ್ಧತಿಯನ್ನು ನೆನಪು ಮಾಡಿಕೊಡುವ ಸನ್ನಿವೇಶದೊಡನೆ ಕಾದಂಬರಿ ಆರಂಭವಾಗುತ್ತದೆ.

'ಜಿವಾಗೋ'ವಿನ ಅಂತ್ಯಕ್ರಿಯೆಯಿಂದ ಆರಂಭವಾಗುತ್ತದೆ ಕಾದಂಬರಿ. ಆದರೆ ಈ ಜಿವಾಗೋ ಕಾದಂಬರಿಯ ನಾಯಕನಾದ ಜಿವಾಗೋ ಅಲ್ಲ, ಅವನ ಅಪ್ಪನೂ ಅಲ್ಲ. ಅವನ ತಾಯಿ. ಆದರೆ ಯಾರಾದರೇನು ? ವ್ಯತ್ಯಾಸವಿಲ್ಲ. ಬದುಕಿಯೂ ಸತ್ತ, ಬದುಕಿಯೇ ಹೂಳಲ್ಪಟ್ಟ ಜೀವನ ನಮ್ಮದು—ಎಂಬ ಧ್ವನಿಯೊಡನೆ ತೊಡಗುವ ಈ ಕಾದಂಬರಿಯ ಉದ್ದಕ್ಕೂ ಈ ಭಾವನೆ ಸ್ಪಷ್ಟವಾಗುತ್ತಾ ನಡೆಯುತ್ತದೆ. ಒಂದೊಂದು ಹೆಸರೂ ಒಂದೊಂದು ಸನ್ನಿವೇಶವೂ ಹಲವು ಅರ್ಥಗಳೊಡನೆ ಪುಷ್ಟಿಗೊಂಡು ನಡೆಯುತ್ತವೆ. ಜಿವಾಗೋ ಎಂಬ ಹೆಸರೇ ಅರ್ಥಪೂರ್ಣ. ಇದು ತುಂಬುಜೀವನವನ್ನು ನೆನಪಿಗೆ ತರುತ್ತದೆ.

ಡಾ|| ಜಿವಾಗೋನೊಡನೆ ಪ್ರೇಮ ಬೆಳೆಸಿದ ಲಾರಾಳು ರಷ್ಯದ ಸಂಕೇತ. ಹೀಗೆ ರಷ್ಯದ ಜನಜೀವನದ ಕತೆ ಇದು. ಈ ಜೀವನದ ಸೊಗಸಾದ ವರ್ಣನೆ ಕಾದಂಬರಿಯ ತುಂಬಾ ಬಂದಿದೆ.

ಕ್ರಾಂತಿ ಯುದ್ಧಗಳಿಂದ ಬಸವಳಿದ ರಷ್ಯನರ ಜೀವನವನ್ನು ಕುರಿತ ಈ ಕಾದಂಬರಿ ಅಲ್ಲಿನ ಕ್ರಾಂತಿಯನ್ನೂ ಕಾಂತ್ರಿಯ ಅನಂತರದ ಪರಿವರ್ತನೆಯ ಹೋರಾಟವನ್ನೂ ಹೊಗಳಿಲ್ಲವೆಂಬುದು ನಿಜ. ರಾಷ್ಟ್ರದ ಹೆಸರಿನಲ್ಲಿ, ಸಮಾಜದ ಹೆಸರಿನಲ್ಲಿ, ಯೋಜನೆಯ ಹೆಸರಿನಲ್ಲಿ, ಗುರಿಯನ್ನು ನಿಲುಕುವ ಸನ್ನಾಹದಲ್ಲಿ ಬಾಡುತ್ತಿರುವ ಜೀವನ ಕುಸುಮದ ದಾರುಣತೆಯನ್ನಿಲ್ಲಿ ನಾವು ಕಾಣಬಹುದು. ಕೊನೆಯಲ್ಲಿ ಡಾ|| ಜಿವಾಗೋ ಗಾಳಿಯಿಲ್ಲದೆ ಉಸಿರು ಸಿಕ್ಕಿ ಸಾಯುತ್ತಾನೆ. ಸ್ವಾತಂತ್ರ್ಯದ ಗಾಳಿಯ ಅಭಾವದಿಂದ ಜನಜೀವನದ ಉಸಿರು ಸಿಕ್ಕಿದೆಯೆಂಬುದಕ್ಕೆ ಇದು ಸಂಕೇತವಾಗಿರಬಹುದು.

ಹೀಗೆ ರಷ್ಯದ ಕ್ರಾಂತಿಯ ಅನಂತರದ ಜೀವನವನ್ನು ಕಟುವಾಗಿ ಕಂಡು ಬರೆದ ಈ ಕಾದಂಬರಿಯನ್ನು ರಷ್ಯದ ಆಡಳಿತ ಯಂತ್ರ ಮನ್ನಿಸದೆ ಹೋದದ್ದು ಅಸಹಜವಲ್ಲ. ೧೯೫೬ ರಲ್ಲಿ ಅದನ್ನು ಪ್ರಕಟಿಸಬೇಕೆಂದು ಅಲ್ಲಿನ 'ನೋವಿಮಿರ್' ಎಂಬ ಪತ್ರಿಕೆಗೆ ಸಲ್ಲಿಸಿದಾಗ ಆ ಪತ್ರಿಕೆಯನ್ನು ನಡೆಸುವವರು ಇದನ್ನು ಪುರಸ್ಕರಿಸಲೊಲ್ಲದೆಹೋದರು. ತಮ್ಮ ಕಾಲ ಅಡಿಯ ನೆಲವನ್ನು ತಾವೇ ಅಗೆಯಗೊಡಲು ಬಿಡುವರೆ ಇವರು ? ಇದೇ ಕಾಲಕ್ಕೆ ಪಾಸ್ಟರ್ನಾಕರು ಇದರ ಒಂದು ಪ್ರತಿಯನ್ನು ಇಟಲಿಗೆ ಕಳುಹಿಸಿದರು. ರಷ್ಯದ ಸಾಹಿತ್ಯ ನಾಯಕರು ಅದನ್ನು ಹಿಂದಕ್ಕೆ ಪಡೆಯಲು ಯತ್ನಿಸಿದರು. ಆದರೆ ಕೈ ಮಿಂಚಿಹೋಗಿತ್ತು. ಇಟಲಿಯ ಆ ಪ್ರಕಾಶಕ

ಅದನ್ನು ಹಿಂದಿರುಗಿಸಲೊಲ್ಲದೆ ಹೋದ. ಅದು ಪ್ರಕಟವಾದೊಡನೆ ಜಗತ್ತಿನ ಗಮನ ಸೆಳೆಯಿತು. ನೊಬೆಲ್ ಪಾರಿತೋಷಕದ ಪ್ರಕಟನೆಯಿಂದ ಪಾಸ್ಟರ್ನಾಕ್ ಜಗತ್ಪ್ರಸಿದ್ಧರಾದರು.

ಈ ಪಾರಿತೋಷಕ ಪ್ರದಾನ ಪ್ರಕರಣದ ಸುತ್ತ ಒಂದು ದೊಡ್ಡ ಹಗರಣವೇ ನಡೆದಿದೆ. ರಷ್ಯ ನಿರ್ಮಿಸುತ್ತಿರುವ ಹೊಸ ಸಮಾಜದ ಭರ್ತ್ಸನೆ ಇರುವುದರಿಂದ ಇದಕ್ಕೆ ಪಾರಿತೋಷಕ ಲಭಿಸಿತೆಂಬುದು ಸೋವಿಯತ್ ನಾಯಕರ ಭಾವನೆ. ದುರುದ್ದೇಶಪೂರಿತವಾದ ಕ್ರಮ ಇದು—ಎಂಬುದು ಅವರ ಅಭಿಪ್ರಾಯ.

ಪಾಸ್ಟರ್ನಾಕ್ ಇಂದು ನಿನ್ನೆಯ ಲೇಖಕರಲ್ಲ. ಅವರು ಕೇವಲ ಕಾದಂಬರಿಕಾರರೂ ಅಲ್ಲ. ಅವರು ಮುಖ್ಯತಃ ಕವಿ. ಅವರು ಜನಿಸಿದ್ದು ೧೮೯೦ ರಲ್ಲಿ—ಯಹೂದಿ ವಂಶದಲ್ಲಿ.

ತಂದೆ ಚಿತ್ರಕಾರ. ತಾಯಿ ಪಿಯಾನೋ ಪ್ರಿಯೆ. ಮಗ ಬೋರಿಸ್‌ಗೂ ಹಾಡಲು ಆಸೆ. ಆದರೆ ಗಂಟಲು ಒಗ್ಗಲಿಲ್ಲ. ಬಿಟ್ಟುಕೊಟ್ಟ.

ಅನಂತರ ಮಾಸ್ಕೋದಲ್ಲಿ ವಿದ್ಯಾಭ್ಯಾಸ. ಜರ್ಮನಿಯ ಮಾರ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಅಧ್ಯಯನ. ಇಟಲಿಯಲ್ಲಿ ಪ್ರವಾಸ. ಕೊನೆಗೆ ಪದ್ಯ ಬರೆಯುವ ಅಭ್ಯಾಸ.

ಇವರ ಕಾವ್ಯ ಎಲ್ಲರ ಮನಸ್ಸನ್ನೂ ಸೆಳೆಯಿತು. ಅದರಲ್ಲಿದ್ದ ಹೊಸತನ ಆಕರ್ಷಕವಾಗಿತ್ತು.

ಕ್ರಾಂತಿ ಬಂತು. ಹೊಸವ್ಯವಸ್ಥೆಯಲ್ಲಿ ಸ್ವಚ್ಛಂದವಾಗಿ ಬರೆಯುವುದು ಅಸಾಧ್ಯವೆನಿಸಿತು ಪಾಸ್ಟರ್ನಾಕರಿಗೆ. ಸ್ವತಂತ್ರ ಕೃತಿ ರಚನೆಯನ್ನೆ ಇವರು ಬಿಟ್ಟುಕೊಟ್ಟರು. ಮನಸ್ಸಿಗೆ ಒಗ್ಗದುದನ್ನು ಬರೆಯುವ ಬದಲು ಬರೆಯುವುದನ್ನೇ ಬಿಟ್ಟೇನು—ಎಂದು ಶಪಥ ಮಾಡಿದರು ಇವರು. ಹೊಟ್ಟೆಪಾಡಿಗಾಗಿ ಭಾಷಾಂತರ ಕಾರ್ಯವೆಷ್ಟೋ ಅಷ್ಟೇ.

ಸ್ಟಾಲಿನ್ ನಿರ್ಗಮನ: ರಷ್ಯದಲ್ಲಿ ವಾತಾವರಣ ಬದಲಾಯಿತು. ಅಭಿಪ್ರಾಯ ಸ್ವಾತಂತ್ರ್ಯ ಮತ್ತೆ ಬಂದೀತೆಂದು ಎನಿಸಿತು. ಬೇಡದವರನ್ನು ಕೊಂದು ನಿವಾರಿಸುವ ಪದ್ಧತಿಯಂತೂ ಕೊನೆಗೊಂಡಿತು.

ಆಗ ಒಂದಿಷ್ಟು ಪದ್ಯ ಬರೆದರು ಪಾಸ್ಟರ್ನಾಕ್. ಒಂದು ಪದ್ಯದ ಧಾಟಿ ಈ ರೀತಿ ಇದೆ:

"ಜೀವನವೆಂಬುದು ಕೇವಲ ಕ್ಷಣಿಕ. ಇತರರಿಗೆ ನಾವು ನೀಡುವ ಕಾಣಿಕೆಯೆಂದರೆ ಇಷ್ಟೇ: ನಾವು ಅವರಲ್ಲಿ ಲೀನವಾಗುವುದು.

"ಜೀವನವೆಂಬುದು ಒಂದು ಸಂಲಗ್ನ: ಬೀದಿಯಿಂದ ಕಿಟಕಿಯ ಮೂಲಕ ನುಗ್ಗುವ ಒಂದು ಹಾಡು, ಒಂದು ಕನಸು, ಬೂದು ನೀಲಿಯ ಪಾರಿವಾಳ."

ಪಾಸ್ಟರ್ನಾಕರು ಹೀಗೆಯೇ ಬರೆಯುತ್ತಾ ಹೋಗುತ್ತಿದ್ದರೇನೋ. ಮಾನವನ ಸಾಹಸವನ್ನು ಕಡೆಗಣಿಸುವ ಈ ದೃಷ್ಟಿಯನ್ನು ಬೆಳೆಯಗೊಡಿಸುವುದು ಸರಿಯೆನಿಸಲಿಲ್ಲ. ಪ್ರಾವ್ಡಾ ಪತ್ರಿಕೆ ಈ ಪದ್ಯದ ಸಾಲುಗಳನ್ನು ಎತ್ತಿಕೊಂಡು ಟೀಕಿಸಿತು: 'ಜೀವನ ಬರಿ ಕನಸಲ್ಲ. ಅದು ಕ್ಷಣಿಕವಲ್ಲ. ಇಂಥ ಭಾವನೆ ನಮ್ಮಲ್ಲಿ ನಿರಾಶಾವಾದವನ್ನು ಹಬ್ಬಿಸುತ್ತದೆ. ನಾವು ಕಟ್ಟುತ್ತಿರುವ ಹೊಸ ವ್ಯವಸ್ಥೆಯಲ್ಲಿ ನಂಬಿಕೆಯನ್ನು ಕುಗ್ಗಿಸುತ್ತದೆ. ಇಂಥ ಮಾತೆಲ್ಲಾ ವ್ಯರ್ಥಾಲಾಪ.'

(ನಿರಾಶೆಯನ್ನೇ ಬೆಳಸುವ ಸಾಹಿತ್ಯದಿಂದ ಸಮಾಜಕ್ಕೆ ಒಳ್ಳೆಯದಲ್ಲವೆಂಬುದು ಅದರ ಅಭಿಪ್ರಾಯ.)

ಈ ಎರಡು ದೃಷ್ಟಿಗಳಲ್ಲಿ ಯಾವುದು ಸರಿ? ಮನಸ್ಸಿಗೆ ಸರಿಯೆನಿಸಿದುದನ್ನು ಅಡೆತಡೆಯಿಲ್ಲದೆ ಹೇಳುವ ಅವಕಾಶವೆ? ನವ ಸಮಾಜದ ನಿರ್ಮಾಣಕ್ಕಾಗಿ ವ್ಯಕ್ತಿಯ ಈ 'ಸ್ವಾತಂತ್ರ್ಯ' ಮೊಟಕಾಗುವುದು ಅಗತ್ಯ ಎಂಬುದೆ?

ವರ್ಗನಿರ್ಭೇದವೇ ಗುರಿಯಾಗಿ ಉಳ್ಳ ವ್ಯವಸ್ಥೆಯಲ್ಲಿ ಈ ಗುರಿಯನ್ನು ಮೊಟಕು ಮಾಡುವ ಸಾಹಿತ್ಯಕ್ಕೆ ಎಡೆಯಿಲ್ಲ.

ಕಾದಂಬರಿಯನ್ನು ಬರೆಯಬೇಕೆಂಬುದು ಪಾಸ್ಟರ್ನಾಕರ ಬಹುಕಾಲದ ಆಸೆ. ಇದೇ ವೇಳೆಗೆ ಈ ಆಸೆಯೂ ಫಲಿಸಿತು. 'ಡಾ|| ಜಿವಾಗೋ' ಬರೆದದ್ದು ಸುಮಾರು ಈ ಕಾಲಕ್ಕೆ.

ಈ ಕಾದಂಬರಿಗೆ ನೋಬೆಲ್ ಪಾರಿತೋಷಕ ನೀಡಿದ್ದು ಅನ್ಯಾಯ. ಇದು ಅಂಥ ಉತ್ಕೃಷ್ಟ ಕಾದಂಬರಿಯಲ್ಲ. ರಷ್ಯದ ವಿರುದ್ಧ ಪ್ರಚಾರ ಸಾಧನವಿದು. ಸಮಯ ಸಾಧಕರು ಈ ಪಾರಿತೋಷಕ ನೀಡುವುದರ ಮೂಲಕ ಈ ಪರಿಸ್ಥಿತಿಯ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದರ ಯೋಗ್ಯತೆಗಿಂತ ಹೆಚ್ಚಿನ ಪ್ರಶಸ್ತಿ ದೊರಕಿಸಿಕೊಡುವ ಈ ಯತ್ನ ಕೇವಲ ಕುಚೋದ್ಯ. ಇದು ರಷ್ಯದ ಇತರ ಸಾಹಿತಿಗಳ ಪ್ರತಿಕ್ರಿಯೆ.

ಈ ಹುಯಿಲು ಏಳದಿದ್ದರೆ, ಪಾಸ್ಟರ್ನಾಕರು ನೋಬಲ್ ಬಹುಮಾನವನ್ನು

ತಿರಸ್ಕರಿಸದಿದ್ದರೆ, ಇದು ಇಷ್ಟೊಂದು ಪ್ರಚಾರದ ನೆರವು ಪಡೆಯುತ್ತಿರಲಿಲ್ಲ ವೇನೋ.

ಒಂದು ಕೃತಿಯ ಸಾಹಿತ್ಯ ಮೌಲ್ಯಕ್ಕಿಂತ, ಸಾಹಿತ್ಯೇತರ ಕಾರಣಕ್ಕಾಗಿಯೇ ಅದರ ಮಹತ್ವವನ್ನು ಎತ್ತಿ ಹಿಡಿಯುವುದಾಗಲಿ, ಅದನ್ನು ತೆಗಳುವುದಾಗಲಿ ಒಳ್ಳೆಯ ಮಾರ್ಗವಲ್ಲ. ಒಂದು ಕೃತಿಯ ಮೌಲ್ಯವನ್ನು ಅಳೆಯಲು ಅದರ ಎಲ್ಲ ಅಂಶಗಳನ್ನೂ ಪರಿಗಣಿಸದಿರುವುದೂ ಸರಿಯಲ್ಲ.

ಇಷ್ಟೆಲ್ಲಾ ಗಲಾಟೆಯಾದದ್ದು ಆಗ ರಷ್ಯದ ಪ್ರಧಾನಿಯಾಗಿದ್ದ ಕ್ರುಶ್ಚೇವ ರಿಗೂ ಇಷ್ಟವಾಗಲಿಲ್ಲವಂತೆ. ಪಾಸ್ಟರ್‌ನಾಕರ ಈ ಕಾದಂಬರಿಯ ಪ್ರಕಟನೆಗೆ ರಷ್ಯದಲ್ಲಿ ಅವಕಾಶಕೊಟ್ಟದ್ದರೆ, ಅವರು ನೋಬಲ್ ಪಾರಿತೋಷಕವನ್ನು ಸ್ವೀಕರಿಸಲು ಬಿಟ್ಟದ್ದರೆ, ಈ ವಾದವೆಲ್ಲಾ ತಾನಾಗಿಯೇ ಅಡಗಿ ಹೋಗುತ್ತಿತ್ತು —ಎಂಬುದು ಅವರ ಭಾವನೆಯಾಗಿತ್ತಂತೆ.

ಅಂತೂ ಒಂದು ಮಾತು ನಿಜ: ಸ್ಟಾಲಿನ್ನರ ಕಾಲದಲ್ಲಿ ಇಂಥ ಒಂದು ಕಾದಂಬರಿ ಇದೇ ಸನ್ನಿವೇಶದಲ್ಲಿ ಪ್ರಕಟವಾಗಿದ್ದಿದ್ದರೆ, ಅದರ ಲೇಖಕ ತನ್ನ ತಲೆ ಯನ್ನು ತನ್ನ ಹೆಗಲ ಮೇಲೆ ಹೊತ್ತು ತಿರುಗುವುದು ಸಾಧ್ಯವಾಗುತ್ತಿರಲಿಲ್ಲ. ಈಗ ಅಂಥ ಕುತ್ತು ಒದಗಲಿಲ್ಲ. ಅಷ್ಟರ ಮಟ್ಟಿಗೆ ಸೋವಿಯತ್ ವ್ಯವಸ್ಥೆ ಭದ್ರವಾಗಿದೆ ಯೆನ್ನಬಹುದು. ಎಲ್ಲ ಬಗೆಯ ಅಭಿಪ್ರಾಯ ಸ್ವಾತಂತ್ರ್ಯಕ್ಕೂ ಅಲ್ಲಿ ಎಡೆ ದೊರ ಕುವ ಕಾಲ ಬರಬಹುದೋ ಏನೋ. ತಮ್ಮ ಸಮಾಜಕ್ಕೆ ಇನ್ನು ಅಪಾಯ ವಿಲ್ಲವೆಂಬುದು ಸಿದ್ಧವಾದಾಗ ಆ ಪರಿಸ್ಥಿತಿ ಏರ್ಪಡಬಹುದು.

'ಡಾ|| ಜಿವಾಗೋ'ವಿನ ದೃಷ್ಟಿಯ ವಿಚಾರವಾಗಿ ಭಿನ್ನಾಭಿಪ್ರಾಯ ಇರ ಬಹುದು. ಆದರೆ ಪಾಸ್ಟರ್ನಾಕ್ ಹಿರಿಯ ಜೀವವೆಂಬುದರಲ್ಲಿ ಸಂಶಯವಿಲ್ಲ. ಅವರ ಕವಿತೆಗಳು ಜಗತ್ತಿನ ಉತ್ಕೃಷ್ಟ ಕವಿತೆಗಳ ಸಾಲಿನಲ್ಲಿ ನಿಲ್ಲಬಲ್ಲುವು. ಮಾಸ್ಕೋ ವಿದ್ಯಾರ್ಥಿಗಳು ಹಾಡಿಕೊಳ್ಳುವರೆಂದು ಪ್ರತೀತಿಯಿರುವ ಒಂದು ದ್ವಿಪದಿ ಈ ರೀತಿ ಇದೆ :

> 'ರಾಶಿಚಕ್ರದ ಗ್ರಹಗತಿ ಬದಲಾಗಬಹುದು.
> ಆದರೆ ಪಾಸ್ಟರ್ನಾಕ್ ಉಳಿಯುವನು ಪಾಸ್ಟರ್ನಾಕ್ ಆಗಿ.'*

---

* ೧೯೬೦.

## ಡಾ॥ ಆಲ್ಬರ್ಟ್ ಷ್ವೀಟ್ಜರ್



ತೊಂಬತ್ತು ವರ್ಷದ ಬಿಳಿಯ ತಪಸ್ವಿಯೊಬ್ಬ ಕೆಲವು ಕಾಲದ ಹಿಂದೆ ಕಾಲವಾದ. ಆಫ್ರಿಕದ 'ಕಾಡು ಜನರ' ನಡುವೆ ಅವಸಾನ ಹೊಂದಿದ. ಅಖಂಡ ಜೀವನಯಾತ್ರೆ ಪೂರೈಸಿದ. ಬಹುಮುಖ ಪ್ರತಿಭೆಯ ಸಂಪುಟದ ಬಾಯಿ ಬಿಗಿದ. ದುಡಿಮೆಯಿಂದ ರಜೆ ಪಡೆದ.

ಆ ವ್ಯಕ್ತಿಯ ಹೆಸರು ಡಾಕ್ಟರ್ ಆಲ್ಬರ್ಟ್ ಷ್ವೀಟ್ಜರ್.

ಆಲ್ಬರ್ಟ್ ಷ್ವೀಟ್ಜರ್ ದಾರ್ಶನಿಕ. ನೀತಿ ಪ್ರಚಾರಕ. ಜನಸೇವಕ. ಸಂಗೀತಗಾರ. ದೇವತಾ ಮನುಷ್ಯ.

ಷ್ವೀಟ್ಜರರದು ತುಂಬು ಬಾಳು, ಆದರ್ಶದ ಬಾಳು, ಸಾಹಸದ ಬಾಳು.

'ನಾನಿಲ್ಲೇ ಇದ್ದೇನು. ನಾನಿಲ್ಲೇ ಸತ್ತೇನು. ಈ ಕಾಡೇ ನನ್ನ ನಾಡು. ಇದು ನನ್ನ ಸ್ವರ್ಗ.' ಹೀಗೆಂದು ಹೇಳಿದರು ಈತ ಮೊನ್ನೆ ಮೊನ್ನೆ—ಸಾಯುವುದಕ್ಕೆ ಎಂಟು ತಿಂಗಳ ಹಿಂದೆ. (ತೊಂಬತ್ತು ತುಂಬಿದಾಗ.)

ಇಪ್ಪತ್ತನೆಯ ಶತಮಾನದ ಮಹಾಪುರುಷ ಷ್ವೀಟ್ಜರ್. ಹೀಗೆಂದು ಬಾಯಿ ತುಂಬಾ ಹೊಗಳಿದರು ಹಲವರು : ಈ ರೀತಿ ಇವರಿಗೆ ಮತ ನೀಡಿದರು ಹದಿನೇಳು

ರಾಷ್ಟ್ರಗಳ ಪ್ರಭೃತಿಗಳು—ಕಲೆಗಾರರು, ಲೇಖಕರು, ಸಂಗೀತಗಾರರು.

ನೋಬೆಲ್ ಪಾರಿತೋಷಕವೂ ಇವರನ್ನು ಅರಸಿ ಕಾಡಿಗೆ ಬಂದು ಹಾರ ಹಾಕಿತು.

(ಶಾಂತಿಗಾಗಿ ಈ ಸನ್ಮಾನ.)

ಇದು ಸಂದಾಗ ಷ್ವೀಟ್ಜರರಿಗೆ ಎಪ್ಪತ್ತೆಂಟು ವರ್ಷ.

ನಸು ಬಾಗಿದ ತೆಳು ದೇಹ. ತಿನೆ ತಿನೆಯ ಬೆಳ್ಳಿ ಕೂದಲು. ಪೊದೆ ಮೀಸೆ. ಹದಿನಾರಾಣೆ ಹಳ್ಳಿಯ ವೈದ್ಯ. ಅಸ್ಖಲಿತ ಆದರ್ಶಕ್ಕೆ ಅನುಗುಣವಾದ ಬಾಳು. ಈ ಜೀವನವೇ ಒಂದು ರಸಯಾತ್ರೆ. ರೋಮಾಂಚಕಾರಿ ಕಥೆ.

ಕ್ರೈಸ್ತ ಮತದಲ್ಲಿ ತೊಡಗಿ, ಹಿಂದೂ ಬೌದ್ಧ ಜೈನ ಧರ್ಮಗಳನ್ನು ಅಭ್ಯಾಸ ಮಾಡಿ, ಸಂಗೀತ ಜ್ಞಾನವನ್ನು ಸಂಪಾದಿಸಿ, ಜನಸೇವೆಯಲ್ಲಿ ಮುಕ್ತಿಯನ್ನು ಕಂಡ ಮಾನವತಾವಾದಿ—ಷ್ವೀಟ್ಜರ್

ಷ್ವೀಟ್ಜರ್ ಹೃದಯ—ಬಿಡಿಸಿದ ಹತ್ತಿ; ನೋವನ್ನು ಕಂಡರೆ ಕರಗುವ ಮುಲಾಮು. ಬಾಲ್ಯದಿಂದಲೂ ಬೆಳೆದು ಬಂದದ್ದು ಈ ಗುಣ.

ಹುಡುಗತನದಲ್ಲಿ ಹಕ್ಕಿಯ ಬೇಟೆಯ ಷೋಕಿಯಿದ್ದ ಗೆಳೆಯನೊಬ್ಬ ಗಂಟು ಬಿದ್ದ. ಕವಣೆ ಕಲ್ಲು ಹಿಡಿದು ಇಬ್ಬರೂ ಹೊರಟರು. ಒಲ್ಲೆನೆಂದರೆ ಪುಕ್ಕಲನೆಂದು ಗೆಳೆಯ ಜರೆದಾನೆಂದು ಷ್ವೀಟ್ಜರರಿಗೆ ಹೆದರಿಕೆ.

ಹಕ್ಕಿಯ ಬೇಟೆ ಆರಂಭವಾಗುವ ವೇಳೆಗೆ ಚರ್ಚಿನಿಂದ ಬಂತು ಘಂಟಾ ನಾದ: ‘ಕೊಲಬೇಡ! ಕೊಲಬೇಡ!’

ಷ್ವೀಟ್ಜರರಿಗೆ ಜ್ಞಾನೋದಯ. ಹಕ್ಕಿ ಇದ್ದಲ್ಲಿಗೆ ಈ ಹುಡುಗ ಓಡಿದ. ಅವನ್ನು ಚದುರಿಸಿದ. ಬೇಟೆ ಕೊನೆಗೊಂಡಿತು.

ಇನ್ನೊಮ್ಮೆ ಮೀನು ಹಿಡಿಯುವ ಸಾಹಸ. ಗಾಳಕ್ಕೆ ಸಿಕ್ಕಿಸಿದ ಎರೆಹುಳದ ವಿಲಿವಿಲಿ ಒದ್ದಾಟ. ಷ್ವೀಟ್ಜರ್ ಎದೆಯಲ್ಲಿ ತಲ್ಲಣ.

ಗಾಳಕ್ಕೆ ಬಿದ್ದಿತ್ತು ಹೊಳೆ ಹೊಳೆವ ಮೀನು. ಗಂಟಲು ಹರಿದು ಕೆಂಪಗೆ ಹರಿಯುವ ರಕ್ತ. ಗಾಳಿಯೊತ್ತುವ ತಿದಿ. ಷ್ವೀಟ್ಜರ್ ಎದೆ ಬಿರಿಯಿತು.

ಅಲ್ಲಿಂದಾಚೆಗೆ ಅವನು ಮೀನು ಹಿಡಿಯುವುದನ್ನು ಬಿಟ್ಟ.

ಓದಿನಲ್ಲೂ ಮೊದಮೊದಲು ಹಿಂದೆ ಬಿದ್ದಿದ್ದ. ಮನಸ್ಸು ಗೆಲ್ಲಬಲ್ಲ ಗುರುವಿಗಾಗಿ ಕಾಯುತ್ತಿದ್ದ. ಅಂಥ ಗುರುವೂ ಬಂದ. ಕೊರಡು ಕೊನರಿಸಿದ.

ಸಂಗೀತ ಕಲಿಯುವ ಆಸೆ. ಆದರೆ ಮೊದಮೊದಲು ರಸ ಜಿನುಗಲಿಲ್ಲ. ಭಾವವಿಲ್ಲದ ಭಕುತಿಯೆಂದು ಗುರುವೂ ಬೇಸರಗೊಂಡ.

ಯಾವುದೋ ರಸ ನಿಮಿಷ ಬಂತು. ತುಂಬಿಬಂತು. ಗಾನ ಭೋರ್ಗರೆಯಿತು. ಪ್ರತಿಭೆ ಚಿಗಿತಿತು. ಗುರುವಿನ ಒಲುಮೆ ದೊರಕಿತು.

ಆಮೇಲೆ ವಿಶ್ವವಿದ್ಯಾನಿಲಯದಲ್ಲಿ ಓದು ; ಇಂಗದ ಹಸಿವು. ಬಿರು ನೆಲದಲ್ಲಿ ಚೆಲ್ಲಿದ ನೀರು. ಇತಿಹಾಸ, ಸಾಹಿತ್ಯ, ವಿಜ್ಞಾನ, ಸಂಗೀತ, ದರ್ಶನಶಾಸ್ತ್ರ—ಎಲ್ಲವನ್ನೂ ಹೀರುವ ಚಪಲ.

ದರ್ಶನಶಾಸ್ತ್ರದಲ್ಲಿ ಪದವೀಧರ. ಧರ್ಮಬೋಧಕ. ಅಧ್ಯಾಪಕ. ಕ್ರಿಸ್ತನೊಡನೆ ದೇವನೆಡೆಗೆ ಯಾತ್ರಾರ್ಥಿ.

ನೆಮ್ಮದಿ ಸಿಗಲಿಲ್ಲ. ಬದುಕಿನ ಜೀವಾಳ ತಿಳಿಯಲಿಲ್ಲ. ನೆಲೆಬೆಲೆಗಳ ಹುಡುಕಾಟ ನಿಲ್ಲಲಿಲ್ಲ.

ಆಗ ಅವರಿಗೆ ವಯಸ್ಸು ಇಪ್ಪತ್ತೊಂಬತ್ತು. ಆಗ ಬಂತು ನಿಜವಾದ ತಿಳಿವು. ಅವರ ಬಾಳಿನ ತಿರುವು.

ಪ್ಯಾರಿಸಿನ ಪತ್ರಿಕೆಯೊಂದರಲ್ಲಿ ಆಫ್ರಿಕದ ವಿಚಾರ ಬಂದಿತ್ತು. ಅಲ್ಲಿನ ಜನರ ರೋಗ ರುಜಿನ ; ಕಷ್ಟಕಾರ್ಪಣ್ಯ. ಆಗ ಅಲ್ಲಿ ಅಗತ್ಯವಾಗಿತ್ತು—ವೈದ್ಯೋಪಚಾರ. ಇದೇ ಆಗಬೇಕು—ತಮ್ಮ ಬಾಳ ಬಟ್ಟೆ, ಪರಮಾಗಮ.

('ಕನಸೊಡೆಯಲೆದ್ದ ಮೇಲೆದ್ದ, ಜಗ್ಗನೆ ಎದ್ದ.
ಯಾರೊ ನಕ್ಕರು : ಬುದ್ಧ, ಬುದ್ಧ—
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ !')

ಜನರನ್ನು ಪ್ರೀತಿಸಬೇಕೆಂದು ಹೇಳುವುದು ಸುಲಭ. ತಲೆಯ ವಿಚಾರ ಕೈಗೆ ಹರಿಯುವುದು ಕಡು ಕಷ್ಟ.

ಇದಕ್ಕಾಗಿ ಬೋಧಿಸುವುದನ್ನು ಬಿಟ್ಟು ಆಫ್ರಿಕನರಿಗೆ ಸಲ್ಲಿಸಬೇಕು ಸೇವೆ. ವೈದ್ಯ ವಿದ್ಯೆಯ ಸಂಪಾದನೆ. ಏಳು ವರ್ಷ ಕಠಿಣತಮ ಸಾಧನೆ. ವಿದ್ಯೆ ಸುಲಭವಾಗಿ ಕರಗತವಾಗಲಿಲ್ಲ.

ಷ್ವೀಟ್ಜರ್ ಹೆಂಡತಿಯೊಡನೆ ಫ್ರೆಂಚ್ ಮಧ್ಯ ಆಫ್ರಿಕಕ್ಕೆ ಹೊರಟರು. ಮಿತ್ರರು ಕಳವಳಗೊಂಡರು. ಬೇಡ ಎಂದರು. ಓದು, ಸಂಗೀತ ಬಿಡಬೇಡಿ—ಎಂದರು. ಜೀವನದಿಂದ ಪಲಾಯನ ಮಾಡಬಾರದೆಂದು ಬೋಧಿಸಿದರು.

ಷ್ವೀಟ್ಜರ್ ದಂಪತಿಗಳು ತೀರ್ಮಾನ ಬದಲಿಸಲಿಲ್ಲ.

ಇಬ್ಬರೇ ಹೋರಾಡಿದರು. ಜಗ್ಗಲಿಲ್ಲ. ಆಸ್ಪತ್ರೆ ಬೆಳೆಯಿತು. ಕೆಲಸ ಹಬ್ಬಿತು.

ಮೊದಲ ಮಹಾ ಯುದ್ಧ ಬಂತು. ಷ್ವೀಟ್ಜರ್ ಜರ್ಮನ್ ಪ್ರಜೆಯಾಗಿದ್ದ ರಿಂದ ಫ್ರೆಂಚರು ಅವರನ್ನು ಸೆರೆಯಲ್ಲಿಟ್ಟರು.

ಯುದ್ಧ ಮುಗಿದಾಗ ಬಿಡುಗಡೆ. ಯೂರೋಪ್ ಪ್ರವಾಸ. ಭಾಷಣ. ಸಂಗೀತ ಕಚೇರಿ. ಹಣ ಸಂಪಾದನೆ. (ಎಲ್ಲವೂ ಆಫ್ರಿಕದ ಆಸ್ಪತ್ರೆಗಾಗಿ.)

ದ್ವಿತೀಯ ಮಹಾ ಯುದ್ಧದ ವೇಳೆಗೆ ಷ್ವೀಟ್ಜರ್ ಖ್ಯಾತಿ ಅವರ ರಾಷ್ಟ್ರೀಯತೆಯ ಗೆರೆಯನ್ನೂ ಮಸಕು ಮಾಡಿತ್ತು. ಆಗ ಫ್ರೆಂಚರು ಅವರನ್ನು ಸೆರೆಯಲ್ಲಿಡಲಿಲ್ಲ.

ಯುದ್ಧ ಕೊನೆಗೊಂಡಿತು. ಎತ್ತೆತ್ತಲಿಂದಲೋ ಬಂತು—ಧನ ಕನಕ ವಸ್ತ್ರ ವಾಹನ ಕೀರ್ತಿ ಗೌರವ.

ಕರ್ಮಯೋಗಿ ಷ್ವೀಟ್ಜರ್ ಜ್ಞಾನಯೋಗವನ್ನೂ ಬಿಡಲಿಲ್ಲ. ಧರ್ಮದರ್ಶನ ಗಳನ್ನು ಕುರಿತ ಹಲವು ಗ್ರಂಥ ಇವರಿಂದ ಹೊರಬಂದುವು.

ಆಲ್ಬರ್ಟ್ ಷ್ವೀಟ್ಜರರಿಗೆ ಸದಾಕಾಲಕ್ಕೂ ದಾರಿ ದೀಪವಾಗಿ ನಿಂತದ್ದು ಬಾಳಿನ ಬಗ್ಗೆ ಅವರಿಗಿದ್ದ ಪ್ರೇಮ. 'ಬದುಕ ಬಯಸುವ ಬಾಳಿನ ನಡುವೆ ಬದುಕ ಬಯಸುವ ಜೀವ ನಾನು.'

ಈ ಜಗದ ಜೀವಕೋಟಿಯ ನಡುವೆ ಸದಾ ಸ್ಪರ್ಧೆ—ಭೀಕರ ಸ್ಪರ್ಧೆ. ಒಂದನ್ನೊಂದು ಕೊಲ್ಲುವ ಕಸಬು. ಇದು ಈ ಜಗದ ದೊಡ್ಡ ವ್ಯಾಧಿ.

ದೈತ್ಯ ಸಂಸ್ಥೆಗಳ ಸಂಕೋಲೆಯಿಂದ ಮಾನವ ಬಿಡುಗಡೆ ಹೊಂದಬೇಕು. ಮಂದೆಯ ಮನೋಭಾವ ತ್ಯಜಿಸಬೇಕು. ಸ್ವತಂತ್ರ ಆಚಾರ-ವಿಚಾರ ಅಭ್ಯಾಸ ವಾಗಬೇಕು. ತನ್ನಂತೆ ಇತರರನ್ನು ಬಗೆಯಬೇಕು. ಆಗ ಕೈಲಾಸ ಬಿನ್ನಾಣ.

ಒಳ್ಳೆಯ ಸಂಘಟನೆ ಇದ್ದ ಮಾತ್ರಕ್ಕೆ ಒಂದು ಸಮಾಜ ಉದ್ಧಾರವಾಗು ವುದಿಲ್ಲ. ಅದರ ಭವಿಷ್ಯ ಭದ್ರವಾಗುವುದಿಲ್ಲ. ಒಬ್ಬೊಬ್ಬ ವ್ಯಕ್ತಿಯೂ ಎಷ್ಟೆಷ್ಟು ಯೋಗ್ಯನೋ, ಅಷ್ಟಷ್ಟು ಮಟ್ಟಿಗೆ ಆ ಸಮಾಜ ಸಾರ್ಥಕವಾಗುತ್ತದೆ.

ಇದು ಆಲ್ಬರ್ಟ್ ಷ್ವೀಟ್ಜರ್ ಸಿದ್ಧಾಂತ ವೈಭವ.*

---

* ೧೯೬೫.

## 'ಎಚ್ಚೆಸ್ಕೆ' ಅವರ ಇತರ ಕೃತಿಗಳು

ಕನ್ನಡದಲ್ಲಿ ವಿಡಂಬನ ಸಾಹಿತ್ಯ (ವಿಮರ್ಶೆ)
ಮುಕ್ತಿಮಾರ್ಗ (ಕಾದಂಬರಿ)
ಬಯಕೆಯ ಬೆಲೆ (ಕಾದಂಬರಿ)
ಕಳ್ಳ ಹೊಕ್ಕ ಮನೆ (ಪ್ರಬಂಧ ಸಂಗ್ರಹ)
ನಮ್ಮ ಶರೀರದ ರಚನೆ (ಅನುವಾದ) (ಶರೀರವಿಜ್ಞಾನ)
ಕುರುಕ್ಷೇತ್ರ (ಕಾದಂಬರಿ)
ವ್ಯಾವಹಾರಿಕ ಕನ್ನಡ (ವಾಣಿಜ್ಯಶಾಸ್ತ್ರ)
ನಮ್ಮ ಅಭಿವೃದ್ಧಿ ಯೋಜನೆಗಳು (ಅರ್ಥಶಾಸ್ತ್ರ)
ಜೇಡನ ಬಲೆ (ಪ್ರಬಂಧ ಸಂಗ್ರಹ)
ಮಾನವನ ಐಹಿಕಾಭ್ಯುದಯ (ಅನುವಾದ) (ಅರ್ಥಶಾಸ್ತ್ರ)
ಶ್ರೀ ರಾಮಾನುಜ (ಜೀವನ–ದರ್ಶನ)

**Vijaya Evening College Library**
**BANGALORE**

This book should be returned on or before the date last stamped. An overdue charge of 10 paise will be levied for each day, if the book is kept beyond that date.

27 OCT 1984

Call No
Author
Title
K. K.

ಇದೇ ಗ್ರಂಥಕರ್ತರ ಮತ್ತೊಂದು ಕೃತಿ
**'ವ್ಯಾವಹಾರಿಕ ಕನ್ನಡ'**
ವನ್ನು ಕುರಿತು

"…. ಲಲಿತವೂ ಆಡಂಬರ ರಹಿತವೂ ಆಗಿರುವ ಶಬ್ದ ಪ್ರಯೋಗ, ಅಚ್ಚುಕಟ್ಟಾದ ವಾಕ್ಯಗಳು, ಭ್ರಾಂತಿಗಾಗಲೀ ಸಂದೇಹಕ್ಕಾಗಲಿ ಅವಕಾಶ ವಿಲ್ಲದಿರುವಂತೆ ಸ್ಪಷ್ಟವಾಗಿಯೂ ಯಥಾರ್ಥವಾಗಿಯೂ ಇರುವ ಶೈಲಿ, ದಿನ ಬಳಕೆಯ ನಿದರ್ಶನಗಳು ಮತ್ತು ಉದಾಹರಣೆಗಳು, ಮಿತವೂ ಉಚಿತವೂ ಆಗಿರುವ ನಿರೂಪಣಾ ರೀತಿ— ಇವೆಲ್ಲ ಈ ಗ್ರಂಥವನ್ನು ಆಕರ್ಶಕವಾಗಿ ಮಾಡಿವೆ."

**ಪ್ರೊ. ಡಿ. ಎಲ್ ನರಸಿಂಹಾಚಾರ್**
(ಮುನ್ನುಡಿಯಿಂದ)

"….ವಾಣಿಜ್ಯ ಕಾಲೇಜಿನ ಅನುಭವಸ್ಥ ಪ್ರಾಧ್ಯಾಪಕರು ತಮ್ಮ ಅನುಭವ ಅಧ್ಯಯನಗಳನ್ನು ಎರಕ ಹೊಯ್ದು ರಚಿಸಿರುವ ಈ ಪುಸ್ತಕ ನನಗೆ ಸಂತೋಷವನ್ನುಂಟು ಮಾಡಿದೆ. ಇದು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಗ್ರಂಥವು ಸರ್ವ ಜನೋಪಯುಕ್ತವಾದೀತೆಂದು ನನಗೆ ನಂಬಿಕೆಯಿದೆ."

ಬಿ. ವಿ. ಬನುಮಯ್ಯ
(ಮೆಚ್ಚುನುಡಿಯಿಂದ)

Ac

# ಎತ್ತರದ ವ್ಯಕ್ತಿಗಳು

## ಎಚ್ಚೆಸ್ಕೆ

ಕನ್ನಡ ನಾಡಿನ ಒಳ ಹೊರಗಿನ ಇಪ್ಪತ್ತೆರಡು ವ್ಯಕ್ತಿಗಳ ಅಂತರಂಗ ಬಹಿರಂಗ ದರ್ಶನವೇ ಈಪುಸ್ತಕದ ವಸ್ತು.

ಈ ಪುಸ್ತಕದ ಕ್ಷೇತ್ರ ಬಹಳ ವಿಸ್ತಾರ: ಕನ್ನಡ ಸಾಹಿತ್ಯದ ಕಟ್ಟಡವನ್ನು ಕಟ್ಟಿದ ಬಹು ಹಿರಿಯ ಕೈಗಳೂ, ಭಾರತದ ಬಿಡುಗಡೆಗಾಗಿ ಹೋರಾಡಿದ ಕಲಿಗಳೂ, ಸಮಾಜದ ಉನ್ನತಿಗಾಗಿ ಶ್ರಮಿಸಿದ ಸೇವಾ ಧುರೀಣರೂ, ವಿಶ್ವರಂಗದಲ್ಲಿ ವಿಖ್ಯಾತರಾದ ಕವಿಗಳೂ ಕಲಾವಿದರೂ ರಾಜನೀತಿ ನಿಪುಣರೂ ಈ ಪುಸ್ತಕದಲ್ಲಿ ಒಂದೆಡೆಗೆ ಸೇರಿದ್ದಾರೆ. ಇದು ಒಂದು ಅಪೂರ್ವ ಸಂಯೋಗ.

ವಿಮರ್ಶೆ, ಕಾದಂಬರಿ, ಲಲಿತ ಪ್ರಬಂಧ, ಜೀವನ ಚರಿತ್ರೆ, ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ, ರಾಜ್ಯಶಾಸ್ತ್ರ ಮುಂತಾದ ನಾನಾ ವಿಭಾಗಗಳಲ್ಲಿ ಪುಸ್ತಕಗಳನ್ನೂ ಲೇಖನಗಳನ್ನೂ ಬರೆದು ಪರಿಚಿತರಾದ ಎಚ್ಚೆಸ್ಕೆ ಅವರ ಲೇಖನಿಯಿಂದ ಬಂದ ವ್ಯಕ್ತಿಪರಿಚಯಗಳ ಸಂಕಲನ ಇದು. ಕನ್ನಡದಲ್ಲಿ ಮೂವತ್ತೈದು ವರ್ಷಗಳ ಹಿಂದೆಯೇ ಆರಂಭವಾದರೂ ತೀರಾ ವಿರಳವಾಗಿ ಬೆಳೆದಿರುವ ಈ ಸಾಹಿತ್ಯ ವಿಭಾಗದಲ್ಲಿ ಇದು ಒಂದು ಹೊಸ ಕವಲು. 'ಎಚ್ಚೆಸ್ಕೆ' ಎಂಬ ಅಂಕಿತನಾಮದಿಂದ ಬರೆಯುವ ಇವರು ಬಸುಮ್ಮಯ್ಯನವರ ಸಂಜೆಯ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾರೆ.

---

ಸುರಚಿ ಪ್ರಕಾಶನ : ಸರಸ್ವತೀಪುರಂ : ಮೈಸೂರು